₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 01.09.2025 ಸಂಪುಟ: 10 ಸಂಚಿಕೆ: 229 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮೈಸೂರಿನಲ್ಲಿ ಪೆದ್ದಿ ಸಿನಿಮಾ ಚಿತ್ರೀಕರಣದಲ್ಲಿ ತೊಡಗಿರುವ ತೆಲುಗಿನ ಖ್ಯಾತ ನಟ ರಾಮ್‌ಚರಣ್ ಅವರು ಮೈಸೂರಿನಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಈ ವೇಳೆ ಸಿಎಂ ಸಿದ್ದರಾಮಯ್ಯ ಅವರು ರಾಮ್‌ಚರಣ್ ತಂದೆ ನಟ ಚಿರಂಜೀವಿ ಅವರ ಕುರಿತು ಕುಶಲೋಪರಿ ವಿಚಾರಿಸಿದರು.

280 ಕೋಟಿ ನಾಗರಿಕರ ಹಿತಾಸಕ್ತಿ ರಕ್ಷಣೆಗೆ ಬದ್ಧ: ಮೋದಿ-ಜಿನ್‌ಪಿಂಗ್ ಘೋಷಣೆ
ವಿಶ್ವದ ಗಮನ ಸೆಳೆದ ದ್ವಿಪಕ್ಷೀಯ ಮಾತುಕತೆ, ಅಮೆರಿಕ ಸುಂಕ ಸಮರಕ್ಕೆ ತಿರುಗೇಟು

ಭಾರತ-ಚೀನಾ ಮತ್ತೆ ಹೊಸ ಸ್ನೇಹ ಸಂಕಲ್ಪ

ಬೀಜಿಂಗ್: ಶಾಂಘೈ ಸಹಕಾರ ಸಂಸ್ಥೆ ಶೃಂಗಸಭೆ ಯಲ್ಲಿ ಪಾಲ್ಗೊಳ್ಳಲು ಚೀನಾಗೆ ತೆರಳಿರುವ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಮಹತ್ವದ ಮಾತುಕತೆ ನಡೆಸಿದ್ದು, ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಮುಂದಡಿ ಇಡಲು ಉಭಯ ನಾಯಕರೂ ಒಪ್ಪಿಕೊಂಡಿದ್ದಾರೆ.

ಭಾರತ ಮತ್ತು ಚೀನಾ ಅಭಿವೃದ್ಧಿಯ ಪಾಲುದಾರರು ಹೊರತು ಪ್ರತಿಸ್ಪರ್ಧಿಗಳಲ್ಲ. ವಿಶ್ವದ ಪ್ರಬಲ ಆರ್ಥಿಕ ಶಕ್ತಿಯಾಗಿರುವ ನಾವು 280 ಕೋಟಿ ಜನರ ಯೋಗಕ್ಷೇಮ ಕಾಪಾಡಲು ಬದ್ಧವಾಗಿದ್ದೇವೆ ಎಂದು ಹೇಳುವ ಮೂಲಕ ಪ್ರಧಾನಿ ಮೋದಿ ಹಾಗೂ ಅಧ್ಯಕ್ಷ ಜಿನ್‌ಪಿಂಗ್ ಪರೋಕ್ಷವಾಗಿ ಅಮೆರಿಕಕ್ಕೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

ಪರಸ್ಪರ ನಂಬಿಕೆ, ಗೌರವ ಮತ್ತು ಸಹಕಾರದ ಆಧಾರದ ಮೇಲೆ ಭಾರತ ಮತ್ತು ಚೀನಾ ತಮ್ಮ ಸಂಬಂಧಗಳನ್ನು ಮತ್ತಷ್ಟು ಗಟ್ಟಿಯಾಗಿಸಿ ಮುಂದೆ ಕೊಂಡೊಯ್ಯಲು ನಾವು ಬದ್ಧರಾಗಿದ್ದೇವೆ ಎಂದು ಮೋದಿ ಹೇಳಿದರು. ಚೀನಾ ಮತ್ತು ಭಾರತ ಎರಡೂ ಅತ್ಯಂತ ಪ್ರಬಲ ರಾಷ್ಟ್ರಗಳಾಗಿವೆ. ವಿಶ್ವದಲ್ಲೇ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ದೇಶಗಳಾಗಿವೆ. ಉತ್ತಮ ಸ್ನೇಹಿತರಾಗಿ, ನೆರೆಹೊರೆಯವರಾಗಿರಲು ಡ್ರ್ಯಾಗನ್ ಮತ್ತು ಆನೆ ಒಟ್ಟಿಗೆ ಸಾಗುವುದು ಅತ್ಯಗತ್ಯ ಎಂದು ಜಿನ್‌ಪಿಂಗ್ ಪ್ರತಿಪಾದಿಸಿದರು.

ಕಳೆದ ಬ್ರಿಕ್ಸ್ ಶೃಂಗಸಭೆ ಸಂದರ್ಭದಲ್ಲಿ ನಾನು ಚೀನಾ ಅಧ್ಯಕ್ಷರಲ್ಲಿ ಗಡಿಯಲ್ಲಿ ಶಾಂತಿಗಾಗಿ ಪ್ರಸ್ತಾಪಿಸಿದ್ದೆ. ಅದು ಫಲಪ್ರದವಾಗಿದೆ. ಇಂದು ಶಾಂತಿ-ಸ್ಥಿರತೆಗಾಗಿ ಎರಡೂ ದೇಶಗಳು ಒತ್ತು ನೀಡಿವೆ ಎಂದು ಮೋದಿ ಹೇಳಿದರು. ಭಯೋತ್ಪಾದನೆಯ ವಿಷಯವನ್ನು ಪ್ರಸ್ತಾಪಿಸಿದ ಪ್ರಧಾನಿ ಮೋದಿ, ಅದನ್ನು ಜಾಗತಿಕ ಪಿಡುಗು ಎಂದು ಬಣ್ಣಿಸಿದರು. ಭಾರತ ಮತ್ತು ಚೀನಾ ನಡುವಣ ಸಂಬಂಧಗಳನ್ನು ಯಾವುದೇ ಮೂರನೇ ದೇಶದ ದೃಷ್ಟಿಕೋನದಿಂದ ನೋಡಬಾರದು ಎಂದು ಸ್ಪಷ್ಟಪಡಿಸಿದರು.

ಭಾರತದೊಂದಿಗೆ ನಾವು ಉನ್ನತಮಟ್ಟದಲ್ಲಿ ಸ್ನೇಹ ಸಂಪಾದಿಸಲು ಬದ್ಧವಾಗಿದ್ದು, ಈ ನಿಟ್ಟಿನಲ್ಲಿ ವ್ಯಾಪಾರ, ಭಯೋತ್ಪಾದನೆ ನಿಗ್ರಹ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗಿದೆ ಎಂದು ಜಿನ್‌ಪಿಂಗ್ ನುಡಿದರು.

ಗಡಿ ಮಾತುಕತೆ: ಭಾರತ ಮತ್ತು ಚೀನಾ ನಡುವಿನ ಗಡಿ ಪ್ರದೇಶವನ್ನು ನಿರ್ಧರಿಸುವ ಮಹತ್ವದ ಮಾತುಕತೆಯೂ ಕೂಡ ನಡೆದಿದೆ. ಇದೇ ವೇಳೆ ಪ್ರಧಾನಿ ಮೋದಿ ಚೀನಾದ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸ್ಥಾಯಿ ಸಮಿತಿ ಸದಸ್ಯ, ಜಿನ್‌ಪಿಂಗ್ ಆಪ್ತ ಕೈ ಚಿ ಅವರನ್ನೂ ಭೇಟಿಯಾಗಿ ಮಾತುಕತೆ ನಡೆಸಿದರು.

ಮುಂದಿನ ವರ್ಷ ಜಿನ್‌ಪಿಂಗ್ ಭಾರತಕ್ಕೆ

ಪ್ರಧಾನಿ ಮೋದಿ, ಮುಂದಿನ ವರ್ಷ ಭಾರತದಲ್ಲಿ ನಡೆಯುವ ಬ್ರಿಕ್ಸ್ ಶೃಂಗಸಭೆಗೆ ಕ್ಸಿ ಜಿನ್‌ಪಿಂಗ್ ಅವರಿಗೆ ಆಹ್ವಾನ ನೀಡಿದರು. ಜಿನ್‌ಪಿಂಗ್ ಇದಕ್ಕೆ ಒಪ್ಪಿದ್ದು ಭಾರತದ ಬ್ರಿಕ್ಸ್ ಅಧ್ಯಕ್ಷತೆಗೆ ಬೆಂಬಲ ಸಾರಿದರು.

ಮಾನಸ ಸರೋವರ ಯಾತ್ರೆಗೆ ಚಾಲನೆ

ವೀಸಾ ಸೌಲಭ್ಯ ಹೆಚ್ಚಳ, ನೇರ ವಿಮಾನ ಮತ್ತು ಪೂರ್ಣ ಪ್ರಮಾಣದಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆಯ ಮರುಸ್ಥಾಪನೆಗೆ ಉಭಯ ರಾಷ್ಟ್ರಗಳು ಒಪ್ಪಿಗೆ ಸೂಚಿಸಿವೆ. ವ್ಯಾಪಾರ ಕೊರತೆಯನ್ನು ಕಡಿಮೆ ಮಾಡುವುದು ಮತ್ತು ಹೂಡಿಕೆಯನ್ನು ಹೆಚ್ಚಿಸುವ ಬಗ್ಗೆಯೂ ಸಹಮತಕ್ಕೆ ಬರಲಾಗಿದೆ.

ಮನ್‌ಕಿ ಬಾತ್‌ನಲ್ಲಿ ಸ್ವದೇಶಿ ಮಂತ್ರ

ದೆಹಲಿ: ಚೀನಾ ಪ್ರವಾಸದ ನಡುವೆಯೇ ಪ್ರಧಾನಿ ಮೋದಿ ತಮ್ಮ ಜನಪ್ರಿಯ ಮನ್ ಕಿ ಬಾತ್ ಕಾರ್ಯಕ್ರಮದ 125 ನೇ ಸಂಚಿಕೆಯಲ್ಲಿ ದೇಶವಾಸಿಗಳನ್ನುದ್ದೇಶಿಸಿ ಮಾತನಾಡಿದ್ದಾರೆ. ಮೊದಲೇ ರೆಕಾರ್ಡ್ ಮಾಡಲಾದ ಕಾರ್ಯಕ್ರಮ ದಲ್ಲಿ ಮೋದಿ, ಮುಂಬರುವ ಹಬ್ಬಗಳಲ್ಲಿ ಸ್ವದೇಶಿ ವಸ್ತುಗಳನ್ನೇ ಬಳಸಿ ಎಂದು ಕರೆ ನೀಡಿದ್ದಾರೆ. ನೀವು ಬಳಸುವ ಪ್ರತಿಯೊಂದು ವಸ್ತುವು ಸಹ ಭಾರತದಲ್ಲೇ ತಯಾರಾಗಿರಬೇಕು; ಅದು, ದೀಪವಿರಬಹುದು, ಹೂಮಾಲೆಯಿರಬಹುದು. ನಿಮ್ಮ ಪ್ರತಿಯೊಂದು ಅಗತ್ಯದಲ್ಲೂ ಬಳಸುವ ವಸ್ತುಗಳು ಸ್ವದೇಶಿಯಾಗಿರಬೇಕು ಎಂದು ಕರೆ ನೀಡಿದ್ದಾರೆ.ಈ ಮೂಲಕ ಪರೋಕ್ಷವಾಗಿ ಅಮೆರಿಕದ ಸುಂಕ ಸಮರ ಎದುರಿಸಲು ಸಜ್ಜಾಗುವಂತೆ ಕರೆ ನೀಡಿದ್ದಾರೆ. ಕಾರ್ಯಕ್ರಮದಲ್ಲಿ ವಿಶ್ವೇಶ್ವರಯ್ಯ ಅವರನ್ನು ಪ್ರಧಾನಿ ನೆನಪಿಸಿಕೊಂಡಿದ್ದಾರೆ. ಸೆ.15 ಭಾರತದ ಶ್ರೇಷ್ಠ ಎಂಜಿನಿಯರ್ ಸರ್. ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನ. ಅವರು ಕನಸುಗಳನ್ನು ವಾಸ್ತವಕ್ಕೆ ತಿರುಗಿಸಿದ ಕರ್ಮಯೋಗಿ ಎಂದು ಬಣ್ಣಿಸಿದರು.

ವಿದ್ಯಾರಣ್ಯಪುರದ ಅಪಾರ್ಟ್‌ಮೆಂಟ್‌ನಲ್ಲಿ ಎಸ್‌ಐಟಿ ಮಹಜರು | ಬೆಂಗಳೂರಲ್ಲಿ ಮಹಜರು ಪೂರ್ಣ
ಇಂದು ಚಿನ್ನಯ್ಯ ಬೆಳ್ತಂಗಡಿ ಕೋರ್ಟ್‌ಗೆ ಹಾಜರು

ಮಟ್ಟಣ್ಣನವರ್ ಕೈವಾಡಕ್ಕೆ ಪುಷ್ಟಿ

ಬೆಂಗಳೂರು/ಮಂಗಳೂರು

ಮಾಸ್ಕ್‌ಮ್ಯಾನ್ ಚಿನ್ನಯ್ಯ ಬುರುಡೆ ಹಿಡಿದು ಓಡಾಡಿರುವ ಕಡೆಯಲ್ಲಿ ದಾಖಲೆ ಸಂಗ್ರಹಿಸುತ್ತಿರುವ ಎಸ್‌ಐಟಿ ಅಧಿಕಾರಿಗಳು, ಬೆಂಗಳೂರಿನಲ್ಲಿ ಭಾನುವಾರ ಮಹಜರು ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದಾರೆ. ಚಿನ್ನಯ್ಯ ಎಸ್‌ಐಟಿ ಕಸ್ಟಡಿ ಸೋಮವಾರ ಮುಕ್ತಾಯವಾಗುವುದರಿಂದ ಎಸ್‌ಐಟಿ ಅಧಿಕಾರಿಗಳು ಚಿನ್ನಯ್ಯನನ್ನು ಮತ್ತೆ ಬೆಳ್ತಂಗಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಕಸ್ಟಡಿಯನ್ನು ವಿಸ್ತರಿಸುವಂತೆ ಮನವಿ ಮಾಡುವ ನಿರೀಕ್ಷೆ ಇದೆ.



ಮಾಸ್ಕ್‌ಮ್ಯಾನ್ ಬುರುಡೆ ಪ್ರಕರಣದಲ್ಲಿ ಹಲವು ಹಿರಿಯ ವಕೀಲರನ್ನು ಗಿರೀಶ್ ಮಟ್ಟಣ್ಣನವರ್ ಮನೆಯ ಸಮೀಪದಲ್ಲಿಯೇ ಇರುವ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿ ಭೇಟಿಯಾಗಿದ್ದ ಎನ್ನುವ ದಾಖಲೆಗಳು ಬಹಿರಂಗವಾಗಿವೆ. ಬೆಂಗಳೂರಿನ ವಿದ್ಯಾರಣ್ಯಪುರ ಸಮೀಪದ ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿಯೇ ದೆಹಲಿ ಪ್ರಯಾಣದ ಸಂಚು ರೂಪಿಸಲಾಗಿತ್ತು ಎನ್ನುವುದು ತನಿಖೆಯಿಂದ ಬಯಲಾಗಿದ್ದು, ಈ ವೇಳೆ ವಕೀಲರೊಂದಿಗೆ ಚರ್ಚಿಸಲು ಲಾಡ್ಜ್‌ನಲ್ಲಿ ಉಳಿದುಕೊಂಡಿದ್ದರು ಎನ್ನಲಾಗಿದೆ. ಈ ಲಾಡ್ಜ್ ಗಿರೀಶ್ ಮಟ್ಟಣ್ಣನವರ್ ನಿವಾಸದ ಸಮೀಪದಲ್ಲಿರುವುದು ಕುತೂಹಲಕ್ಕೆ ಕಾರಣವಾಗಿದೆ. ಈ ಸ್ಥಳದಲ್ಲಿಯೇ ಹಲವು ಬಾರಿ ಸಭೆ ಸೇರಿ ಸೂತ್ರಧಾರಿಗಳು ಹಾಗೂ ಪಾತ್ರಧಾರಿಗಳು ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬುರುಡೆಯನ್ನು ಜತೆಯಲ್ಲಿಟ್ಟುಕೊಂಡು ಚಿನ್ನಯ್ಯ ಹಾಗೂ ಜಯಂತ್ ಟಿ. ದೆಹಲಿಗೆ ಪ್ರಯಾಣಿಸಿದ್ದರು. ಉಳಿದ ಕೆಲವು ಪ್ರಮುಖರು ವಿಮಾನದಲ್ಲಿ ಪ್ರಯಾಣಿಸಿ, ದೆಹಲಿಯಲ್ಲಿ ಖ್ಯಾತ ವ್ಯಕ್ತಿಯೊಬ್ಬರನ್ನು ಭೇಟಿ ಮಾಡಿದ್ದರು.

ಧರ್ಮಸ್ಥಳದ ವಿಚಾರದಲ್ಲಿ ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ. ಎಸ್‌ಐಟಿ ತನಿಖೆಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೇ ಸ್ವಾಗತಿಸಿದ್ದಾರೆ. ಬಿಜೆಪಿಯೂ ಆರಂಭದಲ್ಲಿ ಸ್ವಾಗತಿಸಿದ್ದರು. ಈಗ ಜಾಥಾ ಮಾಡುತ್ತಿದ್ದಾರೆ. ಬಿಜೆಪಿಯವರಿಗೆ ಧರ್ಮವೂ ಗೊತ್ತಿಲ್ಲ, ಜಾತಿಯೂ ಗೊತ್ತಿಲ್ಲ. ರಾಜಕೀಯಕ್ಕಾಗಿ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಜನರಿಗೆ ಸತ್ಯ ಗೊತ್ತಾಗಬೇಕು. ಆರೋಪಗಳಿಗೆ ಉತ್ತರ ಸಿಗಬೇಕು. ಈ ಕಾರಣಕ್ಕಾಗಿ ಎಸ್‌ಐಟಿ ರಚನೆ ಮಾಡಿದ್ದೇವೆ. ಸರಕಾರ ಯಾವುದೇ ಹಂತದಲ್ಲೂ ಹಸ್ತಕ್ಷೇಪ ಮಾಡುವುದಿಲ್ಲ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಎಸ್‌ಐಟಿ ತನಿಖೆಯಿಂದ ಅನೇಕ ವಿಷಯಗಳು ಹೊರಗೆ ಬರುತ್ತಿದೆ. ಎಲ್ಲ ಸತ್ಯವೂ ಹೊರಬರಲಿ. ಮಂಜುನಾಥನ ಅನುಗ್ರಹ ಎಲ್ಲರ ಮೇಲಿರಲಿ. ಇನ್ನು ನಾವು ಈ ಕುಟುಂಬದಲ್ಲಿ ಹುಟ್ಟಿ, ಧರ್ಮಸ್ಥಳದಲ್ಲಿ ಹುಟ್ಟಿ ಪುಣ್ಯ ಮಾಡಿದ್ದೇವೆ.

-ವೀರೇಂದ್ರ ಹೆಗ್ಗಡೆ ಧರ್ಮಸ್ಥಳ ಧರ್ಮಾಧಿಕಾರಿ

ರೌಡಿ ಪಟ್ಟಿಯಲ್ಲಿದ್ದ ವ್ಯಕ್ತಿಯೊಬ್ಬರನ್ನು ಮಾನವ ಹಕ್ಕುಗಳ ಆಯೋಗದ ಅಧಿಕಾರಿ ಅಂತ ಪರಿಚಯಿಸಿ ಸುಳ್ಳು ಮಾಹಿತಿ ನೀಡಿದ ಆರೋಪದ ಮೇಲೆ ಗಿರೀಶ್ ಮಟ್ಟಣ್ಣನವರ್ ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

ನಾಡ ಹಬ್ಬ ಎಲ್ಲರ ಹಬ್ಬ: ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ

ಮುಗಿಯದ ದಸರಾ ಉದ್ಘಾಟನೆ ವಿವಾದ

ಬೆಂಗಳೂರು: ನಾಡಹಬ್ಬ ದಸರಾ ಉದ್ಘಾಟಕರನ್ನಾಗಿ ಬಾನು ಮುಸ್ತಾಕ್ ಅವರ ಆಯ್ಕೆಗೆ ಸಂಬಂಧಿಸಿದಂತೆ ವಾದ-ಪ್ರತಿವಾದದ ಹೊರತಾಗಿಯೂ ರಾಜ್ಯ ಸರಕಾರ ತನ್ನ ತೀರ್ಮಾನಕ್ಕೆ ಗಟ್ಟಿಯಾಗಿ ನಿಂತಿದೆ.

ಈ ನಡುವೆ ಬಾನು ಮುಸ್ತಾಕ್ ಅವರನ್ನು ಆಮಂತ್ರಿಸುವುದನ್ನು ವಿರೋಧಿಸುತ್ತಿರುವ ಬಿಜೆಪಿ ನಾಯಕರು, ಬಾನು ಮುಸ್ತಾಕ್ ಅವರ ಬಗ್ಗೆ ಗೌರವವಿದೆ. ಆದರೆ ಮುಸ್ಲಿಮರಲ್ಲಿ 'ಮೂರ್ತಿ ಪೂಜೆ' ಇಲ್ಲದಿರುವಾಗ ಬಾನು ಅವರು ತಮ್ಮ ಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳಲು ಸಾಧ್ಯವೇ? ಈ ಮೂಲಕ ಹಿಂದು-ಮುಸ್ಲಿಂ ಎರಡೂ ಧರ್ಮದವರ ಭಾವನೆ ಧಕ್ಕೆಯಾಗುವುದಿಲ್ಲವೇ ಎನ್ನುವ ವಾದವನ್ನು ಮುಂದುವರಿಸಿದ್ದಾರೆ. ಇದರೊಂದಿಗೆ ಬಿಜೆಪಿಗರು, ಬಾನು ಮುಸ್ತಾಕ್ ಅವರ ಬದಲಿಗೆ ಬುಕರ್ ಪ್ರಶಸ್ತಿ ಬರಲು ಕಾರಣವಾಗಿರುವ ದೀಪಾ ಬಾಸ್ತಿ ಅವರನ್ನು ಉದ್ಘಾಟಕರನ್ನಾಗಿ ಆಯ್ಕೆ ಮಾಡಬೇಕು ಎನ್ನುವ ಹೊಸ ವಾದವನ್ನು ಶುರು ಮಾಡಿದ್ದಾರೆ.

→ 4

ದಸರಾ ನಾಡಹಬ್ಬವನ್ನು ಎಲ್ಲರೂ ಆಚರಿಸುತ್ತಾರೆ. ಆದ್ದರಿಂದ ಇದನ್ನು ಸಾಹಿತಿ, ಹೋರಾಟಗಾರ್ತಿ ಬಾನು ಮುಷ್ತಾಕ್ ಉದ್ಘಾಟನೆ ಮಾಡುವುದು ಸೂಕ್ತವಾಗಿದೆ. ನಾಡ ಹಬ್ಬವನ್ನು ಇಂಥ ಧರ್ಮದವರೇ ಉದ್ಘಾಟಿಸಬೇಕೆಂದಿಲ್ಲ. ಇದು ಎಲ್ಲರಿಗೂ ಹಬ್ಬವೇ. ಬಾನು ಹೆಸರನ್ನು ವಿರೋಧಿಸುವವರು ಧರ್ಮಾಂಧರು. ಹೈದರಾಲಿ, ಟಿಪ್ಪು ಸುಲ್ತಾನ್ ಕೂಡ ದಸರಾ ಆಚರಿಸುತ್ತಿದ್ದರು. ಇದೊಂದು ಧರ್ಮಾತೀತ, ಜಾತ್ಯತೀತ ಹಬ್ಬ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

120ಕ್ಕೂ ಹೆಚ್ಚು ವೈದ್ಯರಿಂದ ನಿವೃತ್ತಿ ಚಿಂತನೆ

ವೈದ್ಯರ ವರ್ಗಾವಣೆ: ಇಲಾಖೆಗೆ ಅನಾರೋಗ್ಯ

ಶಿವಕುಮಾರ್ ಬೆಳ್ಳಿತಟ್ಟೆ

ರಾಜ್ಯ ಸರಕಾರದ ಆರೋಗ್ಯ ಇಲಾಖೆಯ ಆರೋಗ್ಯ ಇಲಾಖೆ ವ್ಯಾಪ್ತಿಯ ಹಿರಿಯ ತಜ್ಞ ವೈದ್ಯರಲ್ಲಿ ಸ್ವಯಂ ನಿವೃತ್ತಿ ವೈರಸ್ ಕಾಣಿಸಿಕೊಂಡಿದೆ. ಸರಕಾರದ ವರ್ಗಾವಣೆ ನೀತಿ ವಿರೋಧಿಸಿ ಸುಮಾರು 120 ಹಿರಿಯ ತಜ್ಞ ವೈದ್ಯರು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದಾರೆ. ಇವರಲ್ಲಿ ಬಹುತೇಕರು ಖಾಸಗಿ ಆಸ್ಪತ್ರೆ ಅಥವಾ ಮೆಡಿಕಲ್ ಕಾಲೇಜು ಸೇರಲು ಸಿದ್ಧತೆ ನಡೆಸಿದ್ದಾರೆ.

ಸರಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಇದ್ದು, ಇಷ್ಟೊಂದು ಸಂಖ್ಯೆ ಯಲ್ಲಿ ಸ್ವಯಂ ನಿವೃತ್ತಿ ಪಡೆದರೆ ಪರಿಣತ ವೈದ್ಯರ ಕೊರತೆ ಎದುರಾಗಬಹುದೆಂಬ ಆತಂಕ ವ್ಯಕ್ತವಾಗಿದೆ. ಆರೋಗ್ಯ ಸಚಿವರ ಮಧ್ಯಸ್ಥಿಕೆ ಬಳಿಕವೂ ಬಿಕ್ಕಟ್ಟು ಪರಿಹಾರವಾಗಿಲ್ಲ. ಇಲಾಖೆಯ ಹಿರಿಯ ಅಧಿಕಾರಿಗಳು ಹೊಸ ಆದೇಶವನ್ನು ಸಮರ್ಥಿಸಿಕೊಳ್ಳುತ್ತಿದ್ದು, ಸಚಿವರ ಅಸಹಾಯಕರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆರೋಗ್ಯ ಸಚಿವರು ಈ ವಿಷಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತಂದಿದ್ದಾರೆ. ಆದರೆ ಅಧಿಕಾರಿಗಳು ಮುಖ್ಯಮಂತ್ರಿಯವರಿಗೂ ಎಲ್ಲವೂ ಹಸನಾಗಿದೆ ಎಂಬ ಮಾಹಿತಿ ನೀಡಿದ್ದಾರೆನ್ನಲಾಗಿದೆ. ವೈದ್ಯಾಧಿಕಾರಿಗಳ ಸಂಘವೂ ಆದೇಶದ ಪರ ನಿಂತಿರುವುದು ವೈದ್ಯಕೀಯ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಇಲಾಖೆ ಆರೋಗ್ಯ ಹದಗೆಟ್ಟಿದ್ದು ಹೇಗೆ ?

ಇಲಾಖೆಯ 49 ಸಾವಿರ ಪೈಕಿ 21 ಸಾವಿರಕ್ಕೂ ಹೆಚ್ಚಿನ ಹುದ್ದೆಗಳು ಖಾಲಿ ಇವೆ. 15ಕ್ಕೂ ಹೆಚ್ಚು ಜಂಟಿ ನಿರ್ದೇಶಕರು ಹಾಗೂ 6ಕ್ಕೂ ಹೆಚ್ಚು ಹೆಚ್ಚುವರಿ ನಿರ್ದೇಶಕರ ಹುದ್ದೆಗಳೂ ಭರ್ತಿಯಾಗಿಲ್ಲ. ಹಾಲಿ ಇರುವ ಸುಮಾರು 28 ಸಾವಿರ ಹುದ್ದೆಗಳ ಪೈಕಿ ಶೇ.5ರಷ್ಟು ವರ್ಗಾವಣೆಗೆ ಅವಕಾಶವಿದೆ.

→ 4

ಧರ್ಮಸ್ಥಳ ಚಲೋ ಬಳಿಕ ಮೈಸೂರಿಗೆ ಜಾಥಾ

ಚಾಮುಂಡಿ ಚಲೋಗೆ ಬಿಜೆಪಿ ನಾಯಕರು ಸಜ್ಜು

ಬೆಂಗಳೂರು: ಧರ್ಮಸ್ಥಳ ವಿವಾದದ ಜತೆಗೆ ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿರುವ ದಸರಾ ಉದ್ಘಾಟನೆಗೆ ಬಾನು ಮುಸ್ತಾಕ್ ಅವರನ್ನು ಆಯ್ಕೆ ಮಾಡಿರುವುದನ್ನು ವಿರೋಧಿಸಿ ಚಾಮುಂಡಿ ಬೆಟ್ಟ ಚಲೋ ನಡೆಸಲು ಬಿಜೆಪಿ ಸಿದ್ಧತೆ ನಡೆಸಿಕೊಂಡಿದೆ.

ಸೋಮವಾರ ಧರ್ಮಸ್ಥಳ ಯಾತ್ರೆ ಮಾಡಲಿರುವ ಬಿಜೆಪಿ ನಾಯಕರು ದಸರಾ ಸಮಯದಲ್ಲಿ ಚಾಮುಂಡಿ ಚಲೋ ನಡೆಸುವ ಬಗ್ಗೆ ಚರ್ಚಿಸಿದ್ದಾರೆ. ಧರ್ಮಸ್ಥಳ ಯಾತ್ರೆಯ ಬಳಿಕ ಈ ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲಾ ಬಿಜೆಪಿ ನಾಯಕರು ಪ್ರಸ್ತಾವನೆಯನ್ನು ರಾಜ್ಯ ಬಿಜೆಪಿ ಘಟಕದ ಮುಂದಿಟ್ಟು, ಚಾಮುಂಡಿ ಚಲೋ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ. ಈಗಾಗಲೇ ಭಜರಂಗ ಸೇನೆ ಚಾಮುಂಡಿ ಚಲೋ ಹಮ್ಮಿಕೊಳ್ಳುವುದಾಗಿ ಘೋಷಿಸಿರುವುದರಿಂದ, ರಾಜ್ಯ ಬಿಜೆಪಿಯೂ ಚಾಮುಂಡಿ ಬೆಟ್ಟಕ್ಕೆ ಯಾತ್ರೆ ಹೋಗುವ ಬಗ್ಗೆ ಚರ್ಚೆ ಆರಂಭವಾಗಿದೆ ಎನ್ನಲಾಗಿದೆ.

ಕಾಂಗ್ರೆಸಿಗರಿಗೆ ಧೈರ್ಯವಿದ್ದರೆ ಮಸೀದಿ ಮುಂದೆ ನಿಂತು ಇದು ಮುಸ್ಲಿಮರದ್ದಲ್ಲ ಎಂದು ಹೇಳಲಿ. ಪದೇಪದೆ ಹಿಂದೂ ದೇವಾಲಯಗಳ ಟಾರ್ಗೆಟ್ ಏಕೆ? ಚುನಾವಣೆ ಬಂದಾಗ ವೋಟಿನ ರಾಜಕೀಯ ಮಾಡಿ. ಆದರೆ ಈಗ ಏಕೆ ವೋಟಿನ ಓಲೈಕೆ ರಾಜಕಾರಣ? ಚಾಮುಂಡಿ ಬೆಟ್ಟದ ಬಗ್ಗೆ ಕಾಂಗ್ರೆಸ್ ನಾಯಕರು ಪದೆ ಪದೇ ಮಾತನಾಡಿದರೆ ಚಾಮುಂಡೇಶ್ವರಿ ಚಲೋ ಮಾಡುತ್ತೇವೆ.

-ಆರ್. ಅಶೋಕ್, ಪ್ರತಿಪಕ್ಷ ನಾಯಕ

ನ್ಯಾಯಮೂರ್ತಿ ನಾಗರತ್ನ ಅಸಮ್ಮತಿಯ ಟಿಪ್ಪಣಿಯ ಹೊರತಾಗಿಯೂ ಸುಪ್ರೀಂಕೋರ್ಟ್‌ಗೆ ನೇಮಕ

ಚರ್ಚೆ ಹುಟ್ಟುಹಾಕಿದ ಕೊಲಿಜಿಯಂ ತೀರ್ಮಾನ

50ಕ್ಕೂ ಹೆಚ್ಚು ನ್ಯಾಯಮೂರ್ತಿಗಳ ಸೇವಾ ಹಿರಿತನವನ್ನು ಕಡೆಗಣಿಸಿ ಗುಜರಾತ್ ಮೂಲದ ನ್ಯಾಯಮೂರ್ತಿ ವಿಪುಲ್ ಪಾಂಚೋಲಿ ಅವರಿಗೆ ಸುಪ್ರೀಂಕೋರ್ಟ್‌ಗೆ ಬಡ್ತಿ ನೀಡುವ ಪ್ರಸ್ತಾಪವನ್ನು ಕೊಲಿಜಿಯಂ ಸದಸ್ಯೆ, ಕರ್ನಾಟಕ ಮೂಲದ ನ್ಯಾಯಮೂರ್ತಿ ಬಿ.ವಿ. ನಾಗರತ್ನ ವಿರೋಧಿಸಿದ್ದರು. ಅವರ ವಿರೋಧವನ್ನು ಲೆಕ್ಕಿಸದೆ ಪಾಂಚೋಲಿ ಅವರನ್ನು ನೇಮಿಸಲಾಗಿದೆ. ಭಾರತೀಯ ನ್ಯಾಯಾಂಗ ವ್ಯವಸ್ಥೆ ಪಾರದರ್ಶಕವಾಗಿಲ್ಲ, ನ್ಯಾಯಪೀಠಗಳಿಗೆ ಪ್ರಕರಣಗಳ ಹಂಚಿಕೆ ಸಮರ್ಥ ರೀತಿಯಲ್ಲಿ ನಡೆಯುವುದಿಲ್ಲ, ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ನೇಮಕವೂ ಕೆಲವೊಮ್ಮೆ ಸಂಶಯಗಳನ್ನು ಮೂಡಿಸುತ್ತವೆ ಎಂಬ ಚರ್ಚೆಗಳೀಗ ಮತ್ತೊಮ್ಮೆ ಮುನ್ನೆಲೆಗೆ ಬಂದಿವೆ.

ಮೈ ಲಾರ್ಡ್

ರಾಘವ ಶರ್ಮ ನಿಡ್ಲೆ

vveditoped@gmail.com

ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡುವ ಸುಪ್ರೀಂಕೋರ್ಟ್ ಕೊಲಿಜಿಯಂ ಕಾರ್ಯವೈಖರಿಗಳ ಬಗ್ಗೆ ಮತ್ತೊಮ್ಮೆ ಟೀಕೆಗಳು ಕೇಳಿಬರುತ್ತಿವೆ. ಇದಕ್ಕೆ ಕಾರಣ- ಪಟನಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ವಿಪುಲ್ ಮನುಭಾಯ್ ಪಾಂಚೋಲಿ ಅವರನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಮಾಡುವ ಸಿಜೆಐ ಬಿ.ಆರ್. ಗವಾಯಿ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ನಿರ್ಧಾರ. ಆ.27ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಬಾಂಬೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿದ್ದ ನ್ಯಾಯಮೂರ್ತಿ ಅಲೋಕ್ ಆರಾಧೆ ಜತೆಗೆ ನ್ಯಾ. ವಿಪುಲ್ ಪಾಂಚೋಲಿ ಅವರೂ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವೀಕರಿಸಿ ಕಾರ್ಯಾರಂಭ ಮಾಡಿದ್ದಾರೆ. ಆದರೆ, ನ್ಯಾ. ವಿಪುಲ್ ಪಾಂಚೋಲಿ ನೇಮಕ ಕಾನೂನು ವಲಯದಲ್ಲಿ ವ್ಯಾಪಕ ಚರ್ಚೆಗೀಡಾಗಿದ್ದು, ಕೊಲಿಜಿಯಂ ನಡೆ ಬಗ್ಗೆ ಅಸಮಾಧಾನದ ಧ್ವನಿಗಳೆದ್ದಿವೆ.

ನ್ಯಾ. ವಿಪುಲ್ ಪಾಂಚೋಲಿ ನೇಮಕ ಮಾಡಿ ಎಂದು ಕೊಲಿಜಿಯಂ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿತ್ತಾದರೂ, ಐವರು ಸದಸ್ಯರ ಕೊಲಿಜಿಯಂ ಸದಸ್ಯೆಯಾಗಿದ್ದ ನ್ಯಾ.ಬಿ.ವಿ. ನಾಗರತ್ನ ಅವರು ಮಾತ್ರ ಅಸಮ್ಮತಿ ವ್ಯಕ್ತಪಡಿಸಿದ್ದರು. ದೇಶದಲ್ಲಿ ನ್ಯಾ. ಪಾಂಚೋಲಿ ಅವರಿಗಿಂತ ಹೆಚ್ಚು ಸೇವಾ ಹಿರಿತನ ಹೊಂದಿದ ಅನೇಕ ನ್ಯಾಯಮೂರ್ತಿಗಳಿರುವಾಗ, ನ್ಯಾ. ಪಾಂಚೋಲಿಯವರನ್ನೇ ಆಯ್ಕೆ ಮಾಡುವುದಕ್ಕೆ ನನ್ನ ಸಹಮತಿಯಿಲ್ಲ ಎಂದಿದ್ದ ನ್ಯಾ.ಬಿ.ವಿ. ನಾಗರತ್ನ, ತಮ್ಮ ವಿರೋಧದ ಅಭಿಪ್ರಾಯಗಳನ್ನು ಸುಪ್ರೀಂಕೋರ್ಟ್ ವೆಬ್ ಸೈಟಿನಲ್ಲೂ ಪ್ರಕಟಿಸಬೇಕು ಎಂದು Dissent Note (ಅಸಮ್ಮತಿಯ ಟಿಪ್ಪಣಿ)ನಲ್ಲಿ ದಾಖಲಿಸಿದ್ದಾರೆ. ನ್ಯಾ. ಪಾಂಚೋಲಿ ನೇಮಕಕ್ಕೆ ನ್ಯಾ. ನಾಗರತ್ನ ಒಪ್ಪಿಗೆ ಏಕಿಲ್ಲ ಎಂಬ ಬಗೆಗಿನ ಮಾಹಿತಿ ಅಧಿಕೃತವಾಗಿ ಹೊರಬರದಿದ್ದರೂ, ಟಿಪ್ಪಣಿ ಯಲ್ಲಿದ್ದ ಅಂಶಗಳನ್ನು 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆ ಸವಿಸ್ತಾರವಾಗಿ ವರದಿ ಮಾಡಿದೆ. ನ್ಯಾ. ಪಾಂಚೋಲಿ ಅವ ರನ್ನು ನೇಮಕ ಮಾಡುವುದು ನ್ಯಾಯದಾನದ ಮೇಲೆ 'ಪ್ರತಿ ಕೂಲ' ಪರಿಣಾಮ ಬೀರಲಿದೆ. ಕೊಲಿಜಿಯಂ ವ್ಯವಸ್ಥೆಯ ವಿಶ್ವಾಸಾರ್ಹತೆಗೆ ಧಕ್ಕೆ ತರಲಿದೆ ಎನ್ನುವುದು ನ್ಯಾ. ನಾಗರತ್ನ ಅವರ ಆತಂಕ.

2023ರಲ್ಲಿ ನ್ಯಾ. ಪಾಂಚೋಲಿ ಅವರನ್ನು ಗುಜರಾತ್ ಹೈಕೋರ್ಟ್‌ನಿಂದ ಪಟನಾ ಹೈಕೋರ್ಟ್‌ಗೆ ವರ್ಗಾವಣೆ ಮಾಡಿದ್ದು ಏಕೆ ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ಏಕೆಂದರೆ ಇದು ಸಾಮಾನ್ಯ ವರ್ಗಾವಣೆಯಾಗಿರಲಿಲ್ಲ ಎಂದಿರುವ ನ್ಯಾ. ನಾಗರತ್ನ, ರಾಷ್ಟ್ರವ್ಯಾಪಿ ಇರುವ ಹೈಕೋರ್ಟ್ ನ್ಯಾಯಮೂರ್ತಿಗಳಲ್ಲಿ ನ್ಯಾ. ಪಾಂಚೋಲಿ 57ನೇ ಸ್ಥಾನದಲ್ಲಿದ್ದಾರೆ. ಅವರಿಗಿಂತ ಹೆಚ್ಚು ಸೇವಾ ಹಿರಿತನ ಮತ್ತು ಅರ್ಹ ನ್ಯಾಯಾಧೀಶರು ಬೇರೆ ಬೇರೆ ರಾಜ್ಯಗಳಲ್ಲಿರುವುದನ್ನು ಆದ್ಯತೆಗೆ ತೆಗೆದುಕೊಳ್ಳಲಾಗಿಲ್ಲ ಎಂಬ ಬೇಸರವನ್ನು ತಮ್ಮ ಅಸಮ್ಮತಿಯ ಟಿಪ್ಪಣಿಯಲ್ಲಿ ದಾಖಲು ಮಾಡಿರುವ ಬಗ್ಗೆ ಚರ್ಚೆಯಾಗಿದೆ. ಅವರ ಅಸಮ್ಮತಿಯ ಅಭಿಪ್ರಾಯಗಳು ಈಗ ಸಾರ್ವಜನಿಕ ಚರ್ಚೆಗೆ ಗ್ರಾಸವಾಗಿದ್ದು, ಈ ಅಂಶಗಳು ಆಧಾರರಹಿತ ಎಂದು ಕೊಲಿಜಿಯಂ ಅಥವಾ ಕೇಂದ್ರ ಸರಕಾರ ಇದುವರೆಗೆ ಅಲ್ಲಗಳೆದಿಲ್ಲ.

ಸುಪ್ರೀಂಕೋರ್ಟ್‌ನಲ್ಲಿ ಈಗಾಗಲೇ ಗುಜರಾತ್ ಮೂಲದ ಇಬ್ಬರು ನ್ಯಾಯ ಮೂರ್ತಿಗಳು (ನ್ಯಾ.ಜೆ.ಬಿ. ಪರ್ದಿ ವಾಲಾ ಮತ್ತು ನ್ಯಾ.ಎನ್.ವಿ. ಅಂಜಾ ರಿಯಾ) ಇರುವಾಗ ಅದೇ ರಾಜ್ಯದ ಮತ್ತೋರ್ವ ನ್ಯಾಯಮೂರ್ತಿಯನ್ನು ನೇಮಕ ಮಾಡುವ ಔಚಿತ್ಯವೇನು ಎಂದು ನ್ಯಾ. ನಾಗರತ್ನ ಅವರ ಪ್ರಶ್ನೆಗೆ ಸುಪ್ರೀಂ ಕೋರ್ಟಿನ ಮಹಾಲಕ್ಷ್ಮಿ ಪಾವನಿ, ಶೋಭಾ ಗುಪ್ತಾ, ಅಪರ್ಣಾ ಭಟ್, ಕವಿತಾ ವಾಡಿಯಾ ಎಂಬ ನಾಲ್ವರು ಹಿರಿಯ ಮಹಿಳಾ ವಕೀಲರೂ ದನಿಗೂಡಿಸಿದ್ದಾರೆ.

ಭಿನ್ನಾಭಿಪ್ರಾಯವೇ ಪ್ರಜಾಪ್ರಭುತ್ವದ ಆಧಾರಸ್ತಂಭ. ಭಿನ್ನಾಭಿಪ್ರಾಯವು ಚೈತನ್ಯಶೀಲ ಪ್ರಜಾಪ್ರಭುತ್ವದ ಸಂಕೇತ. ಜನಪ್ರಿಯವಲ್ಲದ ಉದ್ದೇಶಗಳನ್ನು ಕೈಗೆತ್ತಿಕೊಳ್ಳುವವರನ್ನು ಹಿಂಸಿಸುವ ಮೂಲಕ ವಿರೋಧದ ಧ್ವನಿಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ತನ್ನ ತೀರ್ಪೊಂದರಲ್ಲಿ ಹೇಳಿರುವುದನ್ನು ಉಲ್ಲೇಖಿಸಿರುವ ಈ ಮಹಿಳಾ ವಕೀಲರು, ನಿಮ್ಮ (ನ್ಯಾ.ನಾಗರತ್ನ) ಭಿನ್ನಾಭಿಪ್ರಾಯವನ್ನು ನಾವು ಬೆಂಬಲಿಸಿದ್ದೇವೆ. ನಿಮ್ಮ ಅಸಮ್ಮತಿಯ ಟಿಪ್ಪಣಿಯನ್ನು ಕಡೆಗಣಿಸಿದ್ದಕ್ಕಾಗಿ ನೋವಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಒಂದೇ ಒಂದು ಮಹಿಳಾ ನ್ಯಾಯಮೂರ್ತಿಯನ್ನು ಸುಪ್ರೀಂಕೋರ್ಟಿಗೆ ನೇಮಕ ಮಾಡಿಲ್ಲವೇಕೆ ಎಂದು ಕೊಲಿಜಿಯಂನ್ನು ಪ್ರಶ್ನಿಸಿದ್ದಾರೆ.

→ 4

ಸೊಂಪಾದ ಪುಟಗಳು

ಕಂಪ್ಲೇಂಟು ಪಟ್ಟಿ ರೆಡಿ ಮಾಡಿದ್ರು ರಾಜಣ್ಣ

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ

6

ಇಷ್ಟು ಮಾಡಿ ಅಮೆರಿಕ ಸಾಧಿಸಿದ್ದಾದರೂ ಏನು?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್

7

ದಾರಿದೀಪೋಕ್ತಿ

ನಮ್ಮ ಮುಂದೆ ಒಳ್ಳೆಯ ಅವಕಾಶಗಳು ಬಂದರೂ, ನಾವು ಎಷ್ಟೋ ಸಂದರ್ಭದಲ್ಲಿ ಧೈರ್ಯದಿಂದ ಅವನ್ನು ಸ್ವೀಕರಿಸಲು ಮುಂದೆ ಬರುವುದಿಲ್ಲ. ಅದಾದ ಬಳಿಕ ನಮಗೆ ಯಾವುದೇ ಅದೃಷ್ಟ ಒಲಿಯಲಿಲ್ಲ ಎಂದು ದೂರುತ್ತೇವೆ. ಧೈರ್ಯದಿಂದ ನುಗ್ಗುವವರಿಗೇ ಅದೃಷ್ಟ ಒಲಿಯುತ್ತದೆ ಎಂಬುದೂ ಗೊತ್ತಿರಬೇಕು.

ವಕ್ರತುಂಡೋಕ್ತಿ

ಉನ್ನತ ಶಿಕ್ಷಣ ಪಡೆದ ನಂತರವೂ, ಸ್ವತಂತ್ರ ಚಿಂತನೆಯನ್ನು ಯಾರು ಉಳಿಸಿಕೊಂಡಿರುತ್ತಾರೋ ಅವರಿಗೆ ನಿಜವಾದ ಸರ್ವೈವರ್ ಎಂದು ಕರೆಯಬಹುದು.

ರಾಷ್ಟ್ರಪತಿ ಮುರ್ಮು ಇಂದು ಮೈಸೂರಿಗೆ

ಮೈಸೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರದಿಂದ ಎರಡು ದಿನಗಳ ಕಾಲ ಮೈಸೂರು ಪ್ರವಾಸ ಹಮ್ಮಿಕೊಂಡಿದ್ದಾರೆ. ಸೆಪ್ಟೆಂಬರ್ 1ರಂದು ಸಂಜೆ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ವಜ್ರಮಹೋತ್ಸವ ಕಾರ್ಯಕ್ರಮ ದಲ್ಲಿ ಭಾಗವಹಿಸಿದ ಬಳಿಕ ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲಿನಲ್ಲಿ ತಂಗಲಿದ್ದಾರೆ. ಈ ನಡುವೆ ಚಾಮುಂಡಿ ಬೆಟ್ಟಕ್ಕೂ ಭೇಟಿ ನೀಡುವ ಸಾಧ್ಯತೆ ಇದೆ. ಸೆಪ್ಟೆಂಬರ್ 2ರಂದು ಬೆಳಗ್ಗೆ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಕುಟುಂಬದ ಜತೆ ಉಪಾಹಾರ ಸ್ವೀಕರಿಸಲಿದ್ದಾರೆ. ನಂತರ 10.20ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ದೆಹಲಿಗೆ ಹೊರಡಲಿದ್ದಾರೆ.

ನೆಲಮಂಗಲ-ಹಾಸನ ಟೋಲ್ ದರ ಏರಿಕೆ

ನೆಲಮಂಗಲ: ನೆಲಮಂಗಲ-ಹಾಸನ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಟೋಲ್ ದರ ಏರಿಕೆ ಮಾಡಿ, ವಾಹನ ಸವಾರರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಶಾಕ್ ನೀಡಿದೆ. ಶನಿವಾರ ಮಧ್ಯರಾತ್ರಿಯಿಂದ 5 ರೂ. ದರ ಏರಿಕೆಯಾಗಿದೆ. ನೆಲಮಂಗಲ ದೇವಿಹಳ್ಳಿ ಎಕ್ಸ್‌ಪ್ರೆಸ್ ಪ್ರೈವೇಟ್ ಲಿಮಿಟೆಡ್ ಟೋಲ್‌ಗಳಲ್ಲಿ ಏರಿಕೆಯಾಗಿದೆ. ದೊಡ್ಡಕರೇನಹಳ್ಳಿ ಟೋಲ್ ಹಾಗೂ ಕಾರಬೈಲು ಟೋಲ್ ಪ್ಲಾಜಾಗಳಲ್ಲೂ ದರ ಏರಿಕೆಯಾಗಿದೆ. ಏಕಮುಖ ಸಂಚಾರಕ್ಕೆ 5 ರು., ದ್ವಿಮುಖ ಸಂಚಾರಕ್ಕೆ 10 ರು. ದರ ಏರಿಕೆ ಮಾಡಲಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಷ್ಯಾ, ಭಾರತದ ತೈಲ ವ್ಯವಹಾರ – ಟ್ರಂಪ್ ಅಸಮಾಧಾನ ಸುದ್ದಿ



ಸಮಾಚಾರ ಸಣ್ಣದಲ್ಲ

ಕ್ವಾಂಟಂ ಮಿಷನ್ ರಾಜ್ಯಗಳ ಸಕ್ರಿಯ ಪಾತ್ರಕ್ಕೆ ಆಗ್ರಹ

ಬೆಂಗಳೂರು: ಕೇಂದ್ರದ ಮಹತ್ವಾಕಾಂಕ್ಷೆ ರಾಷ್ಟ್ರೀಯ ಕ್ವಾಂಟಂ ಮಿಷನ್‌ನಲ್ಲಿ ರಾಜ್ಯಗಳ ಪಾತ್ರ ಮಹತ್ವವಾಗಿದ್ದು, ದೇಶದ ಭವಿಷ್ಯದ ಆರ್ಥಿಕತೆ ಮತ್ತು ಭದ್ರತೆಯನ್ನು ರೂಪಿಸುವ ಕ್ವಾಂಟಂ ತಂತ್ರಜ್ಞಾನ ಅಭಿವೃದ್ಧಿಯಲ್ಲಿ ರಾಜ್ಯಗಳ ಪಾತ್ರವನ್ನು ಇನ್ನಷ್ಟು ಹೆಚ್ಚಿಸಬೇಕು ಎಂದು ಸಂಸದ ಕುಮಾರ ನಾಯಕ್ ಆಗ್ರಹಕ್ಕೆ ಕೇಂದ್ರ ಸರಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. 2025ರ ಆ.11ರಂದು ಲೋಕಸಭೆಯಲ್ಲಿ ನಿಯಮ 377 ಅಡಿಯಲ್ಲಿ ಅಡಿಯಲ್ಲಿ ಈ ವಿಷಯವನ್ನು ಸಂಸದರು ಪ್ರಸ್ತಾಪಿಸಿದ್ದರು. ಇದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯ ಕೇಂದ್ರ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್, ಮಿಷನ್ ವಿನ್ಯಾಸದಲ್ಲೇ ರಾಜ್ಯಗಳ ಪ್ರತಿನಿಧಿಗಳಿಗೆ ಅವಕಾಶ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಐಐಎಸ್‌ಸಿ ಬೆಂಗಳೂರು, ಐಐಟಿ ಮದ್ರಾಸ್, ಐಐಟಿ ಮುಂಬೈ ಮತ್ತು ಐಐಟಿ ದಿಲ್ಲಿ–ಈ ನಾಲ್ಕು ಥೀಮಾಟಿಕ್ ಹಬ್‌ಗಳ ಹಬ್ ಗವರ್ನಿಂಗ್ ಬೋರ್ಡ್‌ಗಳಲ್ಲಿ ಸಂಬಂಧಿತ ರಾಜ್ಯದ ಹಿರಿಯ ಅಧಿಕಾರಿಯೊಬ್ಬರನ್ನು ಸದಸ್ಯರಾಗಿ ಸೇರಿಸಲಾಗುತ್ತದೆ. ಬೆಂಗಳೂರು ಐಐಎಸ್ಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ವಾಂಟಂ ಕಂಪ್ಯೂಟಿಂಗ್ ಹಬ್‌ಗೆ ರಾಜ್ಯ ಸರಕಾರದಿಂದ ಹಿರಿಯ ಅಧಿಕಾರಿಯೊಬ್ಬರನ್ನು ನಾಮನಿರ್ದೇಶನ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಕರ್ನಾಟಕ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗೆ ಈ ಬಗ್ಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದ್ದಾರೆ.

ಮೆಟ್ರೋ ನಿಲ್ದಾಣದಲ್ಲಿ ಸೌಕರ್ಯ ಕೊರತೆ

ಬೆಂಗಳೂರು: ನಮ್ಮ ಮೆಟ್ರೋದ ಹಳದಿ ಮಾರ್ಗಕ್ಕೆ ಕೋಟಿ ಕೋಟಿ ಹಣವನ್ನು ಖರ್ಚು ಮಾಡಿ ನಿರ್ಮಿಸಿದ್ದರೂ ಕೂಡಾ ಒಂದಲ್ಲ ಒಂದು ಮೂಲಸೌಕರ್ಯದ ಕೊರತೆಯುಂಟಾಗುತ್ತಿದ್ದು, ಪ್ರಯಾಣಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಳದಿ ಮೆಟ್ರೋ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾದರೂ ಕೂಡಾ ಪ್ರಯಾಣಿಕರ ಸುರಕ್ಷತೆ, ಅನುಕೂಲತೆ ಹಾಗೂ ಆರಾಮಕ್ಕಾಗಿ ಬಿಎಂಆರ್‌ಸಿಎಲ್ ಒದಗಿಸಬೇಕಾದ ಸೇವೆಗಳು ಇನ್ನೂ ಅಪೂರ್ಣವಾಗಿವೆ. ನಿಲ್ದಾಣದಲ್ಲಿ ಕುಡಿಯಲು ನೀರು, ಕುಳಿತುಕೊಳ್ಳಲು ಸ್ಥಳ, ರೈಲುಗಳ ಕೊರತೆ ಜತೆಗೆ ಶೌಚಾಲಯದ ಸಮಸ್ಯೆಯೂ ಪ್ರಯಾಣಿಕರನ್ನು ಕಾಡುತ್ತಿದ್ದು, ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ಪ್ರಯಾಣಿಕರು ತೊಂದರೆ ಅನುಭವಿಸುವಂತಾಗಿದೆ.

ಹಳದಿ ಮಾರ್ಗದಲ್ಲಿ ರೈಲುಗಳ ಕೊರತೆ ತೀವ್ರವಾಗಿ ಕಾಣಿಸಿಕೊಂಡಿದ್ದು, ಒಂದು ರೈಲು ಮತ್ತೊಂದು ರೈಲಿನ ನಡುವೆ ಕನಿಷ್ಠ 25 ನಿಮಿಷಗಳ ಅಂತರವಿದ್ದು, ಇದರಿಂದ ಪ್ರಯಾಣಿಕರು ದೀರ್ಘಕಾಲ ನಿರೀಕ್ಷಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರೀ ಮೊತ್ತವನ್ನು ಹೂಡಿಕೆ ಮಾಡಿದ್ದರೂ ಕೂಡ ನಮ್ಮ ಮೆಟ್ರೋವು ಪ್ರಯಾಣಿಕರ ಬೇಡಿಕೆ ಹಾಗೂ ಅವಶ್ಯಕತೆಗಳನ್ನು ಪೂರೈಸುವಲ್ಲಿ ವಿಫಲವಾಗಿದೆ ಎಂಬ ಟೀಕೆಗಳು ಕೇಳಿಬರುತ್ತಿವೆ. ಹಳದಿ ಮಾರ್ಗದ 16 ಮೆಟ್ರೋ ನಿಲ್ದಾಣಗಳಲ್ಲಿ ಕುಳಿತುಕೊಳ್ಳಲು ಕುರ್ಚಿ ಅಥವಾ ಬೆಂಚ್ ವ್ಯವಸ್ಥೆಯೇ ಇಲ್ಲ. ವಯೋವೃದ್ಧರು, ಮಹಿಳೆಯರು, ಮಕ್ಕಳೊಂದಿಗೆ ಪ್ರಯಾಣಿಸುವ ಕುಟುಂಬಗಳು ಈ ಅವ್ಯವಸ್ಥೆಯಿಂದಾಗಿ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಅಧಿಕಾರಿಗಳ ದಾಳಿ: ಬಾಲ್ಯವಿವಾಹ ತಡೆ

ದೊಡ್ಡಬಳ್ಳಾಪುರ: ಹದಿನಾರು ವರ್ಷದ ಬಾಲಕಿಯ ಮದುವೆ ಮಾಡಿಸಲು ಸಿದ್ಧತೆ ಮಾಡಲಾಗಿತ್ತು. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಮಕ್ಕಳ ರಕ್ಷಣಾಧಿಕಾರಿ ನೇತೃತ್ವದ ತಂಡ ಬಾಲ್ಯ ವಿವಾಹ ತಡೆದು ಬಾಲಕಿಯನ್ನು ರಕ್ಷಣೆ ಮಾಡಿದ್ದಾರೆ. ದೊಡ್ಡಬಳ್ಳಾಪುರ ನಗರದ ಹೊರವಲಯದ ಗ್ರಾಮದಲ್ಲಿ ಬಾಲ್ಯ ವಿವಾಹಕ್ಕೆ ಸಿದ್ಧತೆ ನಡೆಸಲಾಗಿತ್ತು.

ಹವ್ಯಕ ಸಭಾಭವನದಲ್ಲಿ ನಡೆದ 'ಸಂಸ್ಕಾರೋತ್ಸವ' ಕಾರ್ಯಕ್ರಮದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆತಂಕ

ಸಮುದಾಯದ ಸಂಖ್ಯೆ ಕುಸಿಯುವುದು ಅಪಾಯದ ಸಂಕೇತ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹವ್ಯಕ ಸಭಾಭವನದಲ್ಲಿ ಹಮ್ಮಿಕೊಂಡಿದ್ದ 'ಸಂಸ್ಕಾರೋತ್ಸವ' ಕಾರ್ಯಕ್ರಮದಲ್ಲಿ ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಸ್ಮರಣಸಂಚಿಕೆ ಸಹಸ್ರಚಂದ್ರವನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೇರಿ ಹಲವರು ಬಿಡುಗಡೆಗೊಳಿಸಿದರು.

ಯಾವುದೇ ಒಂದು ಸಮುದಾಯದ ಸಂಖ್ಯೆ ಕುಸಿಯುವುದು ಅಪಾಯದ ಸಂಕೇತ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆತಂಕ ವ್ಯಕ್ತಪಡಿಸಿದರು.

ಹವ್ಯಕ ಸಭಾಭವನದಲ್ಲಿ ಹಮ್ಮಿಕೊಂಡಿದ್ದ 'ಸಂಸ್ಕಾರೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹರಿದು ಹಂಚಿಹೋಗಿದ್ದ ಪುಟ್ಟ ದೇಶ ಇಸ್ರೇಲ್ ಮತ್ತೆ ಒಂದಾಗಿ ಇಂದು ಸಂಘಟನೆಗೊಂಡು ಜಗತ್ತಿನಲ್ಲಿ ಶಕ್ತಿಶಾಲಿಯಾಗಿ ಪುಟಿದ್ದೆದಿದೆ. ಅದೇ ರೀತಿ ಹವ್ಯಕರು ಎಲ್ಲೇ ಇದ್ದರೂ ಸಂಘಟನೆಯನ್ನು ಬೆಳೆಸಬೇಕು. ಸಮಾಜದಲ್ಲಿ ಪ್ರಭಾವಿಯಾಗಿ ಗುರುತಿಸಿಕೊಳ್ಳಬೇಕು. ಜಗತ್ತು ಜ್ಞಾನಾಧಾರಿತವಾಗಿ ವೇಗವಾಗಿ ಬೆಳೆಯುತ್ತಿದೆ. ಹವ್ಯಕ ಸಮಾಜ ಜ್ಞಾನದ ಮೂಲಕವೇ ಸಮಾಜದಲ್ಲಿ ಗುರುತಿಸಿಕೊಂಡಿದ್ದು, ಈ ಸಮಾಜವು ಇನ್ನಷ್ಟು ಸಂಘಟನೆಯಾಗಬೇಕಿದೆ. ಒಂದು ಸಮಾಜದ ಸಂಖ್ಯೆ ಕುಸಿಯುತ್ತಿರುವುದು ಅಪಾಯದ ಸಂಕೇತವಾಗಿದೆ. ತಾಂತ್ರಿಕವಾಗಿ ಮುಂದುವರಿದ ಈ ಕಾಲಘಟ್ಟದಲ್ಲಿ ಸಂಘಟನೆಯನ್ನು ಸಂಸ್ಕಾರಯುತವಾಗಿ ಬೆಳೆಸುವುದು ಸವಾಲಿನಿಂದ ಕೂಡಿದೆ ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರದ ಉದ್ದಗಲಕ್ಕೆ ಸನಾತನ ಧರ್ಮ ಸಂಸ್ಕೃತಿಯನ್ನು ಘಾಸಿಗೊಳಿಸುವ ಶಕ್ತಿಗಳು ಹೆಚ್ಚುತ್ತಿವೆ. ಇದು ಹಿಂದಿನಿಂದಲೂ ಇದೆ. ಭಾರತಕ್ಕೆ ಇದು ಹೊಸತಲ್ಲವಾದರೂ, ಇದನ್ನು ತಡೆಯದಿದ್ದರೆ ಮುಂದಿನ ಪೀಳಿಗೆಯ ಮೇಲೆ ಇದು ಪರಿಣಾಮವನ್ನು ಬೀರುತ್ತದೆ. ಹವ್ಯಕ ಸಮಾಜದಲ್ಲಿ ಸಂಸ್ಕಾರಕ್ಕೆ ಕೊರತೆ ಇಲ್ಲ, ವೇದ, ಸಂಸ್ಕೃತದಿಂದ ಜ್ಞಾನ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಷೋಡಷ ಸಂಸ್ಕಾರ ನೀಡುವ ಸಂದರ್ಭದಲ್ಲಿ ವಿದ್ವಾಂಸರು ಶ್ಲೋಕ, ಮಂತ್ರದಲ್ಲಿನ ಸಾರವನ್ನು ತಿಳಿಸಿ ಹೇಳುವ ಕೆಲಸವನ್ನು ಮಾಡಬೇಕು. ಆಗ ಜನ ಸಾಮಾನ್ಯರು ಅಂಧಶ್ರದ್ಧೆಯ ಮೂಲಕ ಅನುಸರಿಸುವ ಪದ್ಧತಿ ತಪ್ಪುತ್ತದೆ. ಜನ ಸಾಮಾನ್ಯರು ಕೂಡ ವೇದ ಮಂತ್ರಗಳಲ್ಲಿನ ಜ್ಞಾನವನ್ನು ಪಡೆಯಲು ಸಾಧ್ಯ ಎಂದು ಹೇಳಿದರು.

ದೇಶದಲ್ಲಿ ಹಾಗೂ ರಾಜ್ಯದಲ್ಲಿ ಯಾವ ಸಮುದಾಯದ ಸಂಖ್ಯೆ ಎಷ್ಟು? ಎಂಬ ಚರ್ಚೆ ನಡೆದಿದೆ. ಹವ್ಯಕ ಸಮುದಾಯದ ಸಂಖ್ಯೆಯು ಕೆಲವೇ ಲಕ್ಷದಷ್ಟಿದೆ. ವನವಾಸಿ ಜನರಿಗಿಂತಲೂ ಕಡಿಮೆ ಜನಸಂಖ್ಯೆ ಹವ್ಯಕ ಸಮಾಜದ್ದು. ಹೀಗಾಗಿ ಅಲ್ಪಸಂಖ್ಯಾತರ ಸ್ಥಾನಮಾನ ನಿಜವಾಗಿಯೂ ಲಭಿಸಬೇಕಿರುವುದು ಹವ್ಯಕರಿಗೆ ಎಂದು ಪ್ರತಿಪಾದಿಸಿದರು.

ಇದಕ್ಕೂ ಮೊದಲು ಐತಿಹಾಸಿಕ ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಸ್ಮರಣಸಂಚಿಕೆ ಸಹಸ್ರಚಂದ್ರ ಲೋಕಾರ್ಪಿತವಾಯಿತು. ಕಲಾ ಸಂಸ್ಕಾರದ ಭಾಗವಾಗಿ ಯಕ್ಷ ಸಂಸ್ಕಾರ ಪ್ರದರ್ಶನ ಹಾಗೂ ವಿಶಿಷ್ಟವಾದ ಸಂಸ್ಕಾರ ಸ್ವರ ಚಿತ್ತಾರ ಕಾರ್ಯಕ್ರಮಗಳು ನಡೆದವು. ಇದಕ್ಕೂ ಪೂರ್ವದಲ್ಲಿ 108 ಮಾತೆಯರಿಂದ ಕುಂಕುಮಾರ್ಚನೆ, 108 ವೈದಿಕರಿಂದ ರುದ್ರಾಭಿಷೇಕ, ಶಂಕರ ಪಲ್ಲಕ್ಕಿ ಉತ್ಸವ, ಸಿದ್ಧಿವಿನಾಯಕ ದೇವರಿಗೆ ರಂಗಪೂಜೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳೂ ನಡೆದವು. ಮಹಾಸಭೆಯ ಅಧ್ಯಕ್ಷರಾದ ಡಾ. ಗಿರಿಧರ ಕಜೆ, ಪ್ರಧಾನ ಕಾರ್ಯದರ್ಶಿ ಸಿಎ. ವೇಣುವಿಘ್ನೇಶ ಸಂಪ, ಉಪಾಧ್ಯಕ್ಷರಾದ ಶ್ರೀಧರ್ ಭಟ್ ಕೆಕ್ಕಾರು, ಕಾರ್ಯದರ್ಶಿ ಪ್ರಶಾಂತ ಭಟ್, ಆದಿತ್ಯ ಕಲಗಾರು, ಕೋಶಾಧಿಕಾರಿ ಕೃಷ್ಣಮೂರ್ತಿ ಭಟ್, ಕಾರ್ಯಕ್ರಮದ ಸಂಚಾಲಕ ಡಾ. ನರಸಿಂಹ ಕುಮಾರ್ ಸೇರಿದಂತೆ ಮಹಾಸಭೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ನಮ್ಮ ಶ್ರದ್ಧಾಸ್ಥಾನಗಳ ಮೇಲೆ ಆಕ್ರಮಣಗಳು ನಡೆಯುತ್ತಿದ್ದು, ನಮ್ಮ ನಂಬಿಕನ್ನು ಅಳಿಸಿವ ಕೆಲಸಗಳು ನಡೆಯುತ್ತಿವೆ. ನಮ್ಮ ತಲೆಮಾರು, ನಮ್ಮ ತಂದೆಯ ತಲೆಮಾರಿನ ನಂಬಿಕೆಯನ್ನು ಅಳಿಸುವುದು ಸುಲಭವಲ್ಲ. ಆದರೆ ಮಕ್ಕಳ ಮನಸ್ಸಿನಲ್ಲಿ ನಮ್ಮ ಧರ್ಮದ ಶ್ರದ್ಧೆಯನ್ನು ದುರ್ಬಲಗೊಳಿಸುವ ಕೆಲಸ ನಡೆಯುತ್ತಿದ್ದು, ಈ ಬಗ್ಗೆ ಸಮಾಜ ಜಾಗೃತವಾಗಬೇಕು. ನಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಮಕ್ಕಳಿಗೆ ಎಳವೆಯಲ್ಲಿಯೇ ಕಲಿಸಬೇಕು.
> –ಚಕ್ರವರ್ತಿ ಸೂಲಿಬೆಲೆ, ವಾಗ್ಮಿ

ರಾಷ್ಟ್ರಭಕ್ತಿ ವಿಷಯದಲ್ಲಿ ಹವ್ಯಕರು ಮುಂದೆ

ಶತಾವಧಾನಿ ಡಾ.ಆರ್.ಗಣೇಶ್ ಅವರು ಮಾತನಾಡಿ, ಸನಾತನ ಧರ್ಮದ ಕುರಿತಾದ ಶ್ರದ್ಧೆ ಹಾಗೂ ರಾಷ್ಟ್ರಭಕ್ತಿಯ ವಿಚಾರದಲ್ಲಿ ಹವ್ಯಕ ಸಮುದಾಯ ಬೇರೆಲ್ಲರಿಗಿಂತ ದೊಡ್ಡಮಟ್ಟದಲ್ಲಿ ತೊಡಗಿಸಿಕೊಂಡಿದೆ. ಇದು ಅತಿಶಯೋಕ್ತಿಯಾಗಿರದೇ ವಾಸ್ತವವಾಗಿದೆ. ವೀಣೆಯನ್ನು ಎಷ್ಟೇ ಸರಿಯಾಗಿ ಶೃತಿಮಾಡಿದ್ದರೂ ಕಾಲ ಕಳೆದಂತೆ ಶೃತಿ ಬದಲಾಗುತ್ತದೆ. ಸಿಹಿ ಮೊಸರು ಕೆಲವು ಕಾಲದ ನಂತರ ಹುಳಿಯಾಗುತ್ತದೆ. ಕಾಲದ ಪ್ರಭಾವ ಎಲ್ಲರ ಮೇಲೂ ಇದ್ದು, ನಾವು ನಿಂತ ನೀರಾಗಿರದೇ ನಮ್ಮ ಸಂಸ್ಕೃತಿ ಸಂಸ್ಕಾರಗಳನ್ನು ಉಳಿಸಿಕೊಳ್ಳಬೇಕು ಎಂದರು.

ಚಪ್ಪಲಿಯಲ್ಲಿದ್ದ ಹಾವು ಕಚ್ಚಿ ಟೆಕ್ಕಿ ಸಾವು

ಆನೇಕಲ್: ಚಪ್ಪಲಿಯಲ್ಲಿ ಸೇರಿಕೊಂಡಿದ್ದ ಹಾವು ಕಡಿತದಿಂದ ಟೆಕ್ಕಿಯೋರ್ವ ಸಾವನ್ನಪ್ಪಿರುವ ಘಟನೆ ಬನ್ನೇರುಘಟ್ಟದಲ್ಲಿ ನಡೆದಿದೆ.

ಆನೇಕಲ್ ತಾಲೂಕಿನ ಬನ್ನೇರುಘಟ್ಟದ ರಂಗನಾಥ ಬಡಾವಣೆಯ 41 ವರ್ಷದ ಮಂಜು ಪ್ರಕಾಶ್ ದುರ್ದೈವಿ. ಟಿಸಿಎಸ್ ಕಂಪನಿಯಲ್ಲಿ ಟೆಕ್ಕಿಯಾಗಿರುವ ಮಂಜು ಪ್ರಕಾಶ್ ಮನೆಯಿಂದ ಹೊರ ಹೋಗುವ ಸಂದರ್ಭದಲ್ಲಿ ಕ್ರಾಕ್ಸ್ ಚಪ್ಪಲಿಯನ್ನು ಧರಿಸಿದ್ದರು. ಈ ವೇಳೆ ಅದರಲ್ಲಿ ಅಡಗಿದ್ದ ಕೊಳಕು ಮಂಡಲ ಹಾವು ಕಚ್ಚಿದೆ. ಮಂಜು ಪ್ರಕಾಶ್‌ಗೆ 2016ರಲ್ಲಿ ಸಂಭವಿಸಿದ ಅಪಘಾತದ ಪರಿಣಾಮ ಕಾಲಿನ ಸ್ಪರ್ಶ ಜ್ಞಾನ ಇಲ್ಲದಾಗಿತ್ತು. ಹೀಗಾಗಿ ಹಾವಿನ ಮರಿ ಕಚ್ಚಿದ ಅನುಭವ ಗಮನಕ್ಕೆ ಬಾರದ್ದರಿಂದ ಪ್ರಾಣ ಕಳೆದುಕೊಂಡಿದ್ದಾರೆ.

ಹಾವಿನ ಮರಿ ಕಾಲಿನ ಹೆಬ್ಬೆರಳಿಗೆ ಕಡಿದಿದೆ. ಸ್ಪರ್ಶ ಜ್ಞಾನ ಇಲ್ಲದಿದ್ದರಿಂದ ಮುಕ್ಕಾಲು ಗಂಟೆಗಳ ಕಾಲ ಅದೇ ಚಪ್ಪಲಿಯಲ್ಲಿ ಹಾವಿನೊಂದಿಗೆ ಓಡಾಡಿ ಮನೆಗೆ ಬಂದಿದ್ದಾರೆ. ಆಗಲೂ ಗೊತ್ತಾಗದೇ ಮನೆಗೆ ಬಂದು ಮಲಗಿದ್ದ ಪ್ರಕಾಶ್ ಸ್ವಲ್ಪ ಸಮಯದಲ್ಲಿ ಸಾವನ್ನಪ್ಪಿದ್ದಾರೆ. ಹಾಗೇ ಹಾವಿನ ಮರಿ ಕೂಡ ಚಪ್ಪಲಿಯಲ್ಲಿಯೇ ಕಾಲಿನ ಒತ್ತಡಕ್ಕೆ ಸಿಲುಕಿ ಸಾವನ್ನಪ್ಪಿದೆ.

ಸ್ವಲ್ಪ ಸಮಯದ ಬಳಿಕ ಕಾರ್ಮಿಕನೋರ್ವ ಇವರ ಮನೆಗೆ ಬಂದಾಗ ಮಂಜು ಪ್ರಕಾಶ್ ಚಪ್ಪಲಿಯಲ್ಲಿ ಹಾವಿರುವುದನ್ನು ಕಂಡು ಮಂಜು ಅವರ ತಾಯಿ–ತಂದೆಗೆ ತಿಳಿಸಿದ್ದಾನೆ. ತಕ್ಷಣ ಮಲಗಿದ್ದ ಮಗನನ್ನು ನೋಡಲು ಹೋದಾಗ ಮಂಜು ಪ್ರಕಾಶ್ ಅವರ ಬಾಯಲ್ಲಿ ನೊರೆ ಬಂದಿದ್ದು, ಸಾವನ್ನಪ್ಪಿದ್ದರು. ಕೂಡಲೇ ಎರಡು–ಮೂರು ಆಸ್ಪತ್ರೆಗಳಿಗೆ ಸಾಗಿಸಿ ಪ್ರಯತ್ನಿಸಲಾಗಿತ್ತು. ಆದರೆ ಮಂಜು ಅವರ ಸಾವು ಖಚಿತವಾಗಿತ್ತು. ಸದ್ಯ ಬನ್ನೇರುಘಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ ವಿರುದ್ಧ ಅವಹೇಳನಕಾರಿ ಹೇಳಿಕೆ; ಅರ್ಚಕ ಬಂಧನ

ಬೆಂಗಳೂರು: ನಾಡಹಬ್ಬ ದಸರಾ ಉದ್ಘಾಟನೆಗೆ ಬುಕರ್ ಪ್ರಶಸ್ತಿ ಪುರಸ್ಕೃತೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿತು ಅಶ್ಲೀಲ ಮಾತುಗಳನ್ನಾಡಿದ್ದ ಅರ್ಚಕ ಗುರುರಾಜ್ ಅವರನ್ನು ಕೆಂಗೇರಿ ಠಾಣೆ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕೆಂಗೇರಿ ಉಪನಗರದ ರಾಘವೇಂದ್ರ ಸ್ವಾಮಿ ಮಠದ ಪಕ್ಕದಲ್ಲಿರುವ ಗಣಪತಿ ದೇವಸ್ಥಾನದ ಸಹಾಯಕ ಅರ್ಚಕ ಗುರುರಾಜ್ ಅವರನ್ನು ಬಂಧಿಸಲಾಗಿದೆ. ದಸರಾ ಉದ್ಘಾಟನೆಗೆ ಬಾನು ಮುಸ್ತಾಕ್ ಆಯ್ಕೆ ವಿಚಾರದ ಬಗ್ಗೆ ಯುಟ್ಯೂಬ್ ಒಂದರಲ್ಲಿ ಮಾತನಾಡಿದ್ದ ಗುರುರಾಜ್, ಮುಖ್ಯಮಂತ್ರಿ ಅವರನ್ನು ಉದ್ದೇಶಿಸಿ ಕೀಳು ಮಟ್ಟದ ಪದ ಪ್ರಯೋಗಿಸಿ ನಿಂದಿಸಿದ್ದರು. ಈ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಸಮಾಜದ ಶಾಂತಿ ಕದಡಲು ಯತ್ನ ಹಾಗೂ ಕೋಮು ಸಾಮರಸ್ಯಕ್ಕೆ ಧಕ್ಕೆ ತರುವ ಆರೋಪದಡಿ ಗುರುರಾಜ್ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದಾರೆ. ಗುರುರಾಜ್ ನೀಡಿರುವ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಶ್ರೀರಾಘವೇಂದ್ರ ಸ್ವಾಮಿ ಸೇವಾ ಸಮಿತಿ ಟ್ರಸ್ಟ್ ಅವರನ್ನು ಅರ್ಚಕ ಸ್ಥಾನದಿಂದ ಅಮಾನತುಗೊಳಿಸಲಾಗಿದೆ ಎಂದು ತಿಳಿಸಿದೆ.

ಅಪಘಾತ; ವ್ಯಕ್ತಿ ಸಾವು

ಬೆಂಗಳೂರು: ತುಮಕೂರು ರಸ್ತೆಯ ಎಂಇಐ ಜಂಕ್ಷನ್‌ನಲ್ಲಿ ಶನಿವಾರ ರಾತ್ರಿ, ಬಸ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಏಜೆಂಟ್ ಮೃತಪಟ್ಟಿದ್ದಾರೆ. ಟಿ.ದಾಸರಹಳ್ಳಿ ನಿವಾಸಿಯಾದ ಸುರೇಶ್ (40) ಮೃತ ವ್ಯಕ್ತಿ. ವೈಯಕ್ತಿಕ ಕೆಲಸದ ನಿಮಿತ್ತ ಮಲ್ಲೇಶ್ವರಕ್ಕೆ ಬಂದಿದ್ದ ಅವರು ಬೈಕ್‌ನಲ್ಲಿ ರಾತ್ರಿ ಮನೆಗೆ ವಾಪಸ್ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಟ್ರಾವೆಲ್ಸ್ ಬಸ್, ಸುರೇಶ್ ಅವರ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಆಗ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಅವರ ಮೇಲೆ ಬಸ್ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಚಾಲಕನನ್ನು ಬಂಧಿಸಿ, ವಾಹನ ಜಪ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಯಶವಂತಪುರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾನುವಾರದಂದು ರಾಜರಾಜೇಶ್ವರಿ ನಗರದ ಗಣೇಶ ವಲ್ಲಭ ರೆಸಿಡೆನ್ಸಿಯಲ್ಲಿ ಗಣಪತಿ ವಿಗ್ರಹವನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಸಂಭ್ರಮದಿಂದ ಭಾಗವಹಿಸಿದ್ದರು.

ಸಾಂಸ್ಕೃತಿಕ ಚಟುವಟಿಕೆ ಹತ್ತಿಕ್ಕುವ ಕೆಲಸ

ಬೆಂಗಳೂರು: ಗಣೇಶೋತ್ಸವದಲ್ಲಿ ಡಿಜೆ ನಿರ್ಬಂಧಿಸಿರುವ ರಾಜ್ಯ ಸರಕಾರದ ತೀರ್ಮಾನಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ರಾಜ್ಯ ಸರಕಾರ ಸಾಂಸ್ಕೃತಿಕ ಚಟುವಟಿಕೆಗಳನ್ನು ಹತ್ತಿಕ್ಕುತ್ತಿದೆ ಎಂದು ದೂರಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆ ಸಂಪೂರ್ಣ ದಿಕ್ಕು ತಪ್ಪುತ್ತಿದೆ. ಹಿಂದೂ ಉತ್ಸವಗಳು, ಧಾರ್ಮಿಕ ಆಚರಣೆಗಳನ್ನು ಅಪಮಾನಿಸುತ್ತಿರುವ ಪ್ರಕರಣಗಳು ಮೇಲಿನಿಂದ ಮೇಲೆ ವರದಿಯಾಗುತ್ತಿವೆ. ಗಣೇಶೋತ್ಸವದ ಸಾಂಪ್ರದಾಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚುವರಿ ಅವಧಿಯನ್ನು ವಿಸ್ತರಿಸಬೇಕು ಎಂದು ಕಳೆದ ವಿಧಾನಸಭಾ ಅಧಿವೇಶನದಲ್ಲಿಯೇ ಚರ್ಚೆಯಾಗಿ ಸರಕಾರ ಸಮ್ಮತಿಯನ್ನೂ ವ್ಯಕ್ತಪಡಿಸಿದೆ. ಆದರೂ ಪೊಲೀಸರು ಗಣೇಶೋತ್ಸವದ ಮೇಲೆ ಕೆಂಗಣ್ಣು ಬೀರುತ್ತಿರುವುದು ಅತ್ಯಂತ ಖಂಡನೀಯ ಎಂದಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಪಾಣೆ ಮಂಗಳೂರಿನಲ್ಲಿ ನಿಗದಿತ ಸಮಯಕ್ಕೆ ಮುನ್ನವೇ ಪರಂಪರೆಯಿಂದ ನಡೆದು ಬಂದ ಯಕ್ಷಗಾನ ಪ್ರದರ್ಶನವನ್ನು ನಿಲ್ಲಿಸುವ ಮೂಲಕ ಹಿಂದೂ ಧಾರ್ಮಿಕ ಶ್ರದ್ಧೆ ಹಾಗೂ ಸಂಸ್ಕೃತಿಯ ಮೇಲೆ ದೌರ್ಜನ್ಯ ನಡೆಸಿದೆ. ಮತ್ತೊಂದು ಕಡೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನಾಡದೇವತೆ ಚಾಮುಂಡೇಶ್ವರಿ ದೇವಸ್ಥಾನ ಹಿಂದೂಗಳಿಗೆ ಸೇರಿದ್ದಲ್ಲ ಎಂದು ಉಪಮುಖ್ಯಮಂತ್ರಿ ಹೇಳುತ್ತಾರೆ.

ಜಿಬಿಎ, 5 ನಗರ ಪಾಲಿಕೆಗೆ ಹುದ್ದೆ ಮರು ಹಂಚಿಕೆ

ಬೆಂಗಳೂರು: ಜಿಬಿಎ ಹಾಗೂ ಹೊಸ 5 ನಗರ ಪಾಲಿಕೆಗಳಿಗೆ 15 ಐಎಎಸ್, 2 ಐಪಿಎಸ್ ಹುದ್ದೆ ಮರುಹಂಚಿಕೆ ಮಾಡಿ, ಪದನಾಮಗಳನ್ನು ಮರುವಿನ್ಯಾಸಗೊಳಿಸಿ ರಾಜ್ಯ ಸರಕಾರವು ಆದೇಶಿಸಿದೆ.

ಬಿಬಿಎಂಪಿಗೆ ಮಂಜೂರಾಗಿರುವ ಐಎಎಸ್, ಐಪಿಎಸ್ ಹುದ್ದೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಹೊಸದಾಗಿ ರಚನೆಯಾದ 5 ನಗರ ಪಾಲಿಕೆಗಳಿಗೆ ಮರುಹಂಚಿಕೆ ಮಾಡಿ, ಪದನಾಮಗಳನ್ನು ಮರುವಿನ್ಯಾಸಗೊಳಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ.

ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಬೃಹತ್ ಯೋಜನೆಗಳು ಹಾಗೂ ರಚನೆಯಾಗಲಿರುವ ಐದು ನಗರ ಪಾಲಿಕೆಗಳಿಗೆ ಹಣಕಾಸು ಹಂಚಿಕೆ ಮಾಡುವ ಅಧಿಕಾರವುಳ್ಳ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವನ್ನು ರಚಿಸಿ ನಗರಾಭಿವೃದ್ಧಿ ಇಲಾಖೆ ಮಂಗಳವಾರ ಅಧಿಸೂಚನೆ ಹೊರಡಿಸಿತ್ತು. ಅದರಂತೆ ಒಟ್ಟು 75 ಮಂದಿ ಸದಸ್ಯರ ನೇಮಿಸಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆ ಮಾಡಿತ್ತು. ಇದೀಗ ರಾಜ್ಯ ಸರಕಾರ ಬಿಬಿಎಂಪಿಗೆ ಮಂಜೂರಾಗಿರುವ 15 ಐಎಎಸ್ ಹಾಗೂ 2 ಐಪಿಎಸ್ ವೃಂದದ ಹುದ್ದೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು 5 ನಗರ ಪಾಲಿಕೆಗಳಿಗೆ ಮರು ಹಂಚಿಕೆ ಮಾಡಿ ಪದನಾಮಗಳನ್ನು ಮರುವಿನ್ಯಾಸಗೊಳಿಸಿ ಆದೇಶಿಸಿದೆ.

ಇದರನ್ವಯ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪ್ರಧಾನ ಕಾರ್ಯದರ್ಶಿ ಅಥವಾ ಅದಕ್ಕಿಂತ ಉನ್ನತ ಸ್ಥಾನದ ಐಎಎಸ್ ಅಧಿಕಾರಿಯನ್ನು ಮುಖ್ಯ ಆಯುಕ್ತರಾಗಿರಲಿದ್ದಾರೆ. ಐಎಎಸ್ ಶ್ರೇಣಿಯ ನಾಲ್ವರು ವಿಶೇಷ ಆಯುಕ್ತರನ್ನು ಪ್ರಾಧಿಕಾರಕ್ಕೆ ನೇಮಿಸಲಾಗಿದೆ. ಆಡಳಿತ, ಕಂದಾಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗ, ಆರೋಗ್ಯ ಮತ್ತು ಶಿಕ್ಷಣ ವಿಭಾಗ, ಎಫ್‌ಇಸಿಸಿ, ಚುನಾವಣೆ, ವಿಪತ್ತು ನಿರ್ವಹಣೆ, ಸಾರ್ವಜನಿಕ ಸಂಪರ್ಕ ಮತ್ತು ಸಮನ್ವಯ ವಿಭಾಗ ಮತ್ತು (ಹಣಕಾಸು) ಹಾಗೂ ಮುಖ್ಯ ಹಣಕಾಸು ಅಧಿಕಾರಿಯಾಗಿ ನಾಲ್ಕು ವಿಶೇಷ ಆಯುಕ್ತರನ್ನು ಮರುಹಂಚಿಕೆ ಮಾಡಲಾಗಿದೆ. ಇನ್ನು ಐದು ನಗರ ಪಾಲಿಕೆಗಳಿಗೆ ಪ್ರತ್ಯೇಕ ಐವರು ಆಯುಕ್ತರನ್ನು ಮರುಹಂಚಿಕೆ ಮಾಡಲಾಗಿದೆ. ಜೊತೆಗೆ ಐದು ನಗರ ಪಾಲಿಕೆಗಳಿಗೆ ತಲಾ ಒಬ್ಬರಂತೆ ಅಪರ ಆಯುಕ್ತ (ಅಭಿವೃದ್ಧಿ) ಹುದ್ದೆಯನ್ನು ಹಂಚಿಕೆ ಮಾಡಲಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಬಿಎಂಟಿಎಫ್ ವಿಭಾಗಕ್ಕೆ ಎಡಿಜಿಪಿ ಹಾಗೂ ಎಸ್‌ಪಿ ಹುದ್ದೆಯನ್ನು ಹಂಚಲಾಗಿದೆ.

198 ವಾರ್ಡ್‌ಗಳ ಆಧಾರದಲ್ಲಿಯೇ ನಿರ್ವಹಣೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಘೋಷಣೆಯಾಗುತ್ತಿದ್ದಂತೆ ಹಲವು ಗೊಂದಲಗಳು ಸೃಷ್ಟಿಯಾಗಿತ್ತು. ಆದ್ದರಿಂದ ಇದೀಗ ಇದಕ್ಕೆ ಸ್ಪಷ್ಟನೆ ನೀಡಿರುವ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ 198 ವಾರ್ಡ್‌ಗಳ ಆಧಾರದಲ್ಲಿಯೇ ಕಾರ್ಯನಿರ್ವಹಿಸುತ್ತಿವೆ. ಮುಂದಿನ ದಿನಗಳಲ್ಲಿ ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಹೊಸ 5 ನಗರ ಪಾಲಿಕೆಗಳನ್ನು ಸರಕಾರ ಅಧಿಸೂಚಿಸಿದರೂ, ಹಾಲಿಯಿರುವ ವಾರ್ಡ್‌ಗಳೇ ಮುಂದುವರೆಯಲಿವೆ. ಪ್ರಸ್ತುತ, ಬಿಬಿಎಂಪಿ ಹೊಸ ನಗರ ಪಾಲಿಕೆಗಳ ಕಾರ್ಯಾಚರಣೆಗೆ ಅಗತ್ಯವಿರುವ ಸಿಬ್ಬಂದಿ ಹಾಗೂ ಆಡಳಿತ ವೆಚ್ಚವನ್ನು ಗುರುತಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಾಯ್ದೆಯಡಿಯಲ್ಲಿ, 5 ನಗರ ಪಾಲಿಕೆಗಳ ಅಧಿಸೂಚನೆಯ ನಂತರ ಸರಕಾರವು ವಾರ್ಡ್ ಮರುವಿಂಗಡನಾ ಆಯೋಗವನ್ನು ನೇಮಕ ಮಾಡಲಿದೆ. ಆ ಆಯೋಗವು ಪ್ರತಿ ನಗರ ಪಾಲಿಕೆಯ ವಾರ್ಡ್‌ಗಳ ಸಂಖ್ಯೆ, ಗಡಿಗಳು ಹಾಗೂ ಇತರೆ ವಿವರಗಳನ್ನು ನಿರ್ಧರಿಸಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಾರ್ಮಿಕರ ಆರೋಗ್ಯ, ಆರ್ಥಿಕ ಸ್ವಾತಂತ್ರ್ಯ ಉತ್ತೇಜನಕ್ಕೆ ಕ್ರಮ

ಸ್ವಚ್ಛತಾ ಕಾರ್ಮಿಕರಿಗೆ ಜಲಮಂಡಳಿ ಅನ್ನಪೂರ್ಣ

ಬೆಂಗಳೂರು: ನಗರವನ್ನು ಸ್ವಚ್ಛವಾಗಿಡಲು ಹಗಲು–ರಾತ್ರಿ ಶ್ರಮಿಸುತ್ತಿರುವ ಬೆಂಗಳೂರು ಜಲಮಂಡಳಿ ನೈರ್ಮಲ್ಯೀಕರಣ ಕಾರ್ಮಿಕರ ಆರೋಗ್ಯ, ಗೌರವ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಜಲಮಂಡಳಿ ಅನ್ನಪೂರ್ಣ ಯೋಜನೆಯನ್ನು ರೂಪಿಸಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ ತಿಳಿಸಿದರು.

ಈ ಯೋಜನೆಯ ಅಡಿಯಲ್ಲಿ ಬೆಂಗಳೂರು ಜಲಮಂಡಳಿಯ 700 ಕ್ಕೂ ಹೆಚ್ಚು ನೈರ್ಮಲ್ಯೀಕರಣ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು. ಆಕ್ಸಿಸ್ ಬ್ಯಾಂಕಿನ ಜತೆಗೂಡಿ ಹೊರತಂದಿರುವ ಈ ಕಾರ್ಡ್‌ಗೆ ಪ್ರತಿತಿಂಗಳು ನೇರವಾಗಿ ಪಾವತಿಸಲಾಗುವುದು. ದೇಶದ ಇನ್ನಿತರ ಪಾಲಿಕೆಗಳಲ್ಲಿ ಸ್ವಚ್ಛತಾ ಕಾರ್ಮಿಕರಿಗೆ ಆಹಾರ ನೀಡುವ ವ್ಯವಸ್ಥೆಯಿದೆ. ಹಲವಾರು ಸ್ವಯಂ ಸೇವಾ ಸಂಸ್ಥೆಗಳ ಜತೆ ಜತೆಗೂಡಿ ಕಾರ್ಮಿಕರಿಗಾಗಿ ಉಪಹಾರ ವ್ಯವಸ್ಥೆಯನ್ನು ಮಾಡಲಾಗಿದೆ ಎಂದರು.

ದೇಶದ ಇತರೇ ಮೆಟ್ರೋಪಾಲಿಟನ್ ಸಿಟಿಗಳಲ್ಲಿ ಉಪಹಾರದ ವ್ಯವಸ್ಥೆ ಮಾಡಲಾಗಿದೆ. ನಮ್ಮ ಮಂಡಳಿ ವತಿಯಿಂದ ನಮ್ಮ ಕಾರ್ಮಿಕರು ತಮಗೆ ಇಷ್ಟವಾದಂತಹ ಉಪಹಾರವನ್ನು ಪಡೆದುಕೊಳ್ಳಲಿ ಎನ್ನುವ ಉದ್ದೇಶ ಹೊಂದಿದ್ದೇವೆ. ಇವರು ನಮ್ಮ ನಗರವನ್ನು ಸ್ವಚ್ಛವಾಗಿ ಇಡಲು ಹಗಲು–ರಾತ್ರಿ ಶ್ರಮಿಸುತ್ತಿದ್ದಾರೆ. ಈ ಯೋಜನೆಯ ಮೂಲಕ ನಾವು ಅವರ ಶ್ರಮವನ್ನು ಗೌರವಿಸುತ್ತಿದ್ದೇವೆ ಮತ್ತು ಅವರ ದಿನದ ಆರಂಭ ಆರೋಗ್ಯಪೂರ್ಣವಾಗಿರಲಿ ಎಂಬ ಆಶಯ ಹೊಂದಿದ್ದೇವೆ ಎಂದು ತಿಳಿಸಿದ್ದಾರೆ.

> ಬೆಂಗಳೂರು ಜಲಮಂಡಳಿಯು ದೇಶದಲ್ಲೆ ಮೊದಲ ಬಾರಿಗೆ ತಂತ್ರಜ್ಞಾನ ಆಧಾರಿತವಾಗಿ ಹಾಗೂ ಪ್ರತಿ ತಿಂಗಳೂ ನೇರವಾಗಿ ಕಾರ್ಮಿಕರಿಗೆ ಹಣ ವರ್ಗಾವಣೆ ಮಾಡುವ ಜಲಮಂಡಳಿ ಅನ್ನಪೂರ್ಣ ಯೋಜನೆ ಯನ್ನು ಜಾರಿಗೊಳಿಸುತ್ತಿದೆ.
> –ಡಾ.ರಾಮ್ ಪ್ರಸಾತ್ ಮನೋಹರ, ಜಲಮಂಡಳಿ ಅಧ್ಯಕ್ಷ

- ಸ್ಮಾರ್ಟ್ ಕಾರ್ಡ್ ಮೂಲಕ ನೇರ ಹಣ ವರ್ಗಾವಣೆ
- ಪ್ರತಿದಿನದ ಉಪಾಹಾರಕ್ಕಾಗಿ ತಿಂಗಳಿಗೆ 1500 ಭತ್ಯೆ
- 700ಕ್ಕೂ ಹೆಚ್ಚು ಕಾರ್ಮಿಕರಿಗೆ ಲಾಭ,
- ಆರೋಗ್ಯ, ಪೌಷ್ಟಿಕತೆಗೆ ಆದ್ಯತೆ ನೀಡಲು ಕ್ರಮ

ಕುರುಹಿನಶೆಟ್ಟಿ ಕೇಂದ್ರ ಸಂಘದ ಅಧ್ಯಕ್ಷರಾದ ಬಿ.ಲಿಂಗೇಶ್ವರ್ ಅವರ ಪದಗ್ರಹಣ ಸಮಾರಂಭದಲ್ಲಿ ಕೇಂದ್ರ ಜಲಶಕ್ತಿ ಮತ್ತು ರೈಲ್ವೆ ಸಚಿವರಾದ ವಿ.ಸೋಮಣ್ಣ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಿಧಾನಪರಿಷತ್ ಸದಸ್ಯ ಕೇಶವಪ್ರಸಾದ್, ನಿಕಟಪೂರ್ವ ಬಿಬಿಎಂಪಿ ಸದಸ್ಯೆ ರೂಪಲಿಂಗೇಶ್ವರ್ ಉಪಸ್ಥಿತರಿದ್ದರು.

ಆರೋಗ್ಯ ಇಲಾಖೆಯಿಂದ ಹಣಕಾಸು ಇಲಾಖೆಗೆ ಪ್ರಸ್ತಾವನೆ | ಆ್ಯಪ್ ಆಧಾರಿತ ಸೇವೆ ಒದಗಿಸಲು ಚಿಂತನೆ

ಓಲಾ, ಉಬರ್ ಮಾದರಿ ಆಂಬ್ಯುಲೆನ್ಸ್ ಸೇವೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಆರೋಗ್ಯ ಇಲಾಖೆಯು ತುರ್ತು ಸಂದರ್ಭಗಳಲ್ಲಿ ಸುಲಭ ಸೇವೆ ನೀಡುವ ಸಲುವಾಗಿ ಓಲಾ, ಉಬರ್ ಮಾದರಿಯಲ್ಲಿ ಆಂಬ್ಯುಲೆನ್ಸ್ ಸೇವೆಯನ್ನು ಜಾರಿಗೆ ತರಲು ಮುಂದಾಗಿದೆ.

ಆ್ಯಪ್ ಮೂಲಕ ಹತ್ತಿರದ ಆಸ್ಪತ್ರೆಗೆ ಆಂಬ್ಯುಲೆನ್ಸ್ ಬುಕ್ ಮಾಡಿ ಸೇವೆ ಪಡೆದುಕೊಳ್ಳಲು ಈ ವ್ಯವಸ್ಥೆಯು ಸಹಕಾರಿಯಾಗಲಿದ್ದು, ಹಣಕಾಸು ಇಲಾಖೆಗೆ ಈ ಕುರಿತು ಆರೋಗ್ಯ ಇಲಾಖೆಯು ಪ್ರಸ್ತಾವನೆ ಸಲ್ಲಿಸಿದೆ. ಕರ್ನಾಟಕದಲ್ಲಿರುವ 108 ಆಂಬ್ಯುಲೆನ್ಸ್ ಅಥವಾ ಬೇರೆ ಖಾಸಗಿ ಆಂಬ್ಯುಲೆನ್ಸ್‌ಗಳ ಸೇವೆ ತುರ್ತಾಗಿ ಸಿಗುವುದು ಕಷ್ಟವಾಗಿದ್ದು, ಆಂಬ್ಯುಲೆನ್ಸ್‌ನ ಕಂಟ್ರೋಲ್ ರೂಂಗೆ ಕಾಲ್ ಮಾಡಿ, ಅದು ಸ್ಥಳದಲ್ಲಿ ಇದೆಯಾ ಎಂದು ಪರಿಶೀಲಿಸಿ ಅದು ಬರುವಷ್ಟರಲ್ಲಿ ರೋಗಿಗಳ ಗೋಲ್ಡನ್ ಅವರ್ ಕಡಿಮೆಯಾಗಿರುತ್ತದೆ. ಇಂತಹ ಸಮಸ್ಯೆಗಳನ್ನು ನಿಯಂತ್ರಿಸುವ ಸಲುವಾಗಿ ಆರೋಗ್ಯ ಇಲಾಖೆ ಆ್ಯಪ್ ಆಧಾರಿತ ಸೇವೆ ಒದಗಿಸಲು ಮುಂದಾಗಿದ್ದು, ಆಂಬ್ಯುಲೆನ್ಸ್ ಸೇವೆ ಮತ್ತಷ್ಟು ಸರಳವಾಗಲಿದೆ. ಆಂಬ್ಯುಲೆನ್ಸ್ ಸೇವೆ ಪಡೆಯುವ ಸಲುವಾಗು ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದ್ದು, ತುರ್ತಾಗಿ ಆಸ್ಪತ್ರೆಗೆ ಹೋಗುವುದು ಸಾಧ್ಯವಿಲ್ಲದಂತಾಗಿದೆ. ಅನೇಕ ಸಮಸ್ಯೆಗಳು ಉಂಟಾಗಿ, ಅದೆಷ್ಟೋ ರೋಗಿಗಳು ಜೀವ ಕಳೆದುಕೊಂಡಿರುವ ಉದಾಹರಣೆಗಳಿವೆ. ಇಂತಹ ಸಮಸ್ಯೆ ಬಾರದಂತೆ ಎಚ್ಚರಿಕೆ ವಹಿಸುವು ದಕ್ಕೆ ಆರೋಗ್ಯ ಇಲಾಖೆ ಹೊಸ ಯೋಜನೆ ಜಾರಿಗೆ ತರುತ್ತಿದೆ.

> ಈಗಾಗಲೇ ಇಲಾಖೆಯಿಂದ ಹಣಕಾಸು ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಿದ್ದು, ಇದರ ದುರುಪಯೋಗವಾಗುವ ಅವಕಾಶಗಳು ಇದೆಯಾ ಎಂದು ವರದಿ ನೀಡಲು ಹೇಳಿದೆ. ಈ ಹಿನ್ನೆಲೆ ಇದರ ಆಗುಹೋಗುಗಳ ಚರ್ಚೆ ಬಳಿಕ ಯೋಜನೆ ಜಾರಿಯಾಗಲಿದೆ
> –ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಖಾಸಗಿ ಆಂಬ್ಯುಲೆನ್ಸ್‌ಗಳ ಸೇರ್ಪಡೆ

ಓಲಾ, ಉಬರ್, ರ್‍ಯಾಪಿಡೋ, ಆಟೋ, ಕ್ಯಾಬ್‌ಗಳನ್ನು ಬುಕ್ ಮಾಡುವ ಮಾದರಿಯಲ್ಲಿ ಆಂಬ್ಯುಲೆನ್ಸ್ ಸೇವೆಯನ್ನು ಒದಗಿಸಲು ಆರೋಗ್ಯ ಇಲಾಖೆ ಮುಂದಾಗಿದ್ದು, ಈಗಾಗಲೇ 108 ಆಂಬ್ಯುಲೆನ್ಸ್ ಜವಾಬ್ದಾರಿಯನ್ನು ಸಂಪೂರ್ಣವಾಗಿ ಸರಕಾರವೇ ನೋಡಿಕೊಳ್ಳುತ್ತಿದ್ದು, ಇದೀಗ ಆಂಬ್ಯುಲೆನ್ಸ್ ಸೇವೆಯನ್ನು ಮತ್ತಷ್ಟು ಸುಲಭವಾಗಿಸಲು ಮುಂದಾಗಿದೆ. ಆ್ಯಪ್‌ನಲ್ಲಿ ಯಾವ ಸ್ಥಳದಿಂದ ಯಾವ ಆಸ್ಪತ್ರೆ ಅಥವಾ ಪಿಎಚ್‌ಸಿ ಸೆಂಟರ್‌ಗೆ ಹೋಗಬೇಕು ಎಂಬುದನ್ನು ಆಯ್ಕೆ ಮಾಡಿಕೊಂಡರೆ ಹತ್ತಿರವಿರುವ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಆಂಬ್ಯುಲೆನ್ಸ್ ಬರಲಿದೆ. ಈಗಿರುವಂತೆ 108 ನಲ್ಲಿ ಉಚಿತ ಸೇವೆ ಸಿಗಲಿದ್ದು, ಇದರಲ್ಲಿ ಖಾಸಗಿ ಆಂಬ್ಯುಲೆನ್ಸ್‌ಗಳನ್ನು ಕೂಡ ಸೇರಿಸಿಕೊಳ್ಳಲಾಗುತ್ತಿದೆ. ಎಲ್ಲಾ ಖಾಸಗಿ ಆಂಬ್ಯುಲೆನ್ಸ್‌ಗಳಿಗೆ ಏಕರೂಪದ ಮೊತ್ತವನ್ನ ಇಲಾಖೆಯಿಂದಲೇ ನಿಗದಿ ಮಾಡಲಿದ್ದು, ಹೆಚ್ಚು ಹಣ ಪಡೆಯಲು ಇಲ್ಲಿ ಅವಕಾಶವಿರುವುದಿಲ್ಲ. ಆರೋಗ್ಯ ಇಲಾಖೆಯ ಈ ಆನ್‌ಲೈನ್ ಆಂಬ್ಯುಲೆನ್ಸ್ ಸೇವೆಯನ್ನು ಜನರು ಕೂಡ ಸ್ವಾಗತಿಸಿದ್ದಾರೆ. ಹೆಚ್ಚು ಹಣ ವಸೂಲಿ ಮಾಡುವುದಕ್ಕೆ ಕಡಿವಾಣ ಹಾಕಲು ಸಹಕಾರಿಯಾಗಲಿದೆ. ಇದು ಸರಕಾರದಿಂದ ಒಳ್ಳೆಯ ಪ್ರಯತ್ನವಾಗಿದೆ ಎಂದೂ ಹೇಳಲಾಗುತ್ತಿದೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ವಿನಂತಿ, **ಸೈಯದ್ ಶಾ ಸಲಾಹುದ್ದೀನ್ ಬಿನ್ ಶಾ ಮಹಮದ್ ರುಖಿ**, ವಿಳಾಸ: 91/08, ಹಳೆಯ ಎಸ್.ಬಿ.ಎಮ್ ರಸ್ತೆ, ನೆಲಮಂಗಲ ಟೌನ್, ಬೆಂಗಳೂರು ಜಿಲ್ಲೆ, ಕರ್ನಾಟಕ, ಆದ ನಾನು ಈ ಕೆಳಗೆ ನಮೂದಿಸಿರುವ ಮೂಲ ಕ್ರಯ ಪತ್ರವನ್ನು ಕಳೆದುಕೊಂಡಿರುತ್ತೇನೆ, ಕ್ರಯ ಪತ್ರದ ದಿನಾಂಕ: 13.11.2006, ದಸ್ತಾವೇಜು ನಂ.NMG-1-07983-2006-07, ಸಿ.ಡಿ.ನಂ. NMGD75, ಪುಸ್ತಕ–1, ನೆಲಮಂಗಲ, ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಲಾದ ಅಸಲಿ ಪತ್ರವನ್ನು ಕಳೆದು ಕೊಂಡಿರುತ್ತೇನೆ, ಈ ವಿಷಯವಾಗಿ ಪೊಲೀಸ್ ಠಾಣೆಯಲ್ಲಿ ದಿನಾಂಕ: 16–07–2025 ರಂದು ಅರ್ಜಿ ಸಂಖ್ಯೆ 865/271/2025 ರಂತೆ ದೂರು ಸಲ್ಲಿಸಲಾಗಿದೆ. ಈ ಮೇಲ್ಕಂಡ ಮೂಲ ದಾಖಲೆ ಸಿಕ್ಕಿದಲ್ಲಿ/ ದೊರೆತಲ್ಲಿ ಏಳು ದಿನದೊಳಗೆ ಮರಳಿಸಬೇಕಾಗಿ ವಿನಂತಿ, ಅಥವಾ ಪೊಲೀಸ್ ಠಾಣೆ ಅಥವಾ, ಈ ಕೆಳಕಂಡ ದೂರವಾಣಿ ನಂಬರಿಗೆ ಸಂಪರ್ಕಿಸಲು ಕೋರಿದೆ. 9740012604.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಲ್ಲಿ ವಿನಂತಿ, **ಭಾಗ್ಯಮ್ಮ ಕೊಂ ರಾಜು, ವಿಳಾಸ: 1433, 2ನೇ ಕ್ರಾಸ್, 2ನೇ ಮೈನ್, ಕೆ.ಹೆಚ್.ಬಿ ಕಾಲೋನಿ, ಗೋವಿಂದರಾಜ ನಗರ, ಬೆಂಗಳೂರು**, ಆದ ನಾನು ಈ ಕೆಳಗೆ ನಮೂದಿಸಿರುವ ಮೂಲ ಕ್ರಯ ಮತ್ತು ಜಿ.ಪಿ.ಎ ಪತ್ರವನ್ನು ಕಳೆದುಕೊಂಡಿರುತ್ತೇನೆ, ಕ್ರಯ ಪತ್ರದ ದಿನಾಂಕ: 27.11.2007, ದಸ್ತಾವೇಜು ನಂ.DSP-1-05355-2007-08, ಸಿ.ಡಿ.ನಂ. DSPD13, ದಾಸನಪುರ, ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿತವಾಗಿರುವ ಮತ್ತು ನೋಟರೈಸ್ಡ್ ಜಿಪಿಎ ಪತ್ರದ ದಿನಾಂಕ: 12.12.1996, ಶ್ರೀ ಡಿ ಎಸ್ ಧರ್ಮಪ್ಪ ಅವರು ಶ್ರೀಮತಿ ಅಕ್ಕಯಮ್ಮ ಮತ್ತು ಶ್ರೀ ಲೋಕೇಶ್ ಅವರ ಹೆಸರಿಗೆ ಬರೆದಿದ್ದಾರೆ. ಈ ವಿಷಯವಾಗಿ ಪೊಲೀಸ್ ಠಾಣೆಯಲ್ಲಿ ದಿನಾಂಕ: 08–01–2021 ರಂದು ರಿಪೋರ್ಟ್ ನಂ. 004316/2021 ರಂತೆ ದೂರು ಸಲ್ಲಿಸಲಾಗಿದೆ. ಈ ಮೇಲ್ಕಂಡ ಮೂಲ ದಾಖಲೆ ಸಿಕ್ಕಿದಲ್ಲಿ/ ದೊರೆತಲ್ಲಿ ಏಳು ದಿನದೊಳಗೆ ಮರಳಿಸಬೇಕಾಗಿ ವಿನಂತಿ, ಅಥವಾ ಪೊಲೀಸ್ ಠಾಣೆ ಅಥವಾ, ಈ ಕೆಳಕಂಡ ದೂರವಾಣಿ ನಂಬರಿಗೆ ಸಂಪರ್ಕಿಸಲು ಕೋರಿದೆ. 8123403315.

ಸಾರ್ವಜನಿಕ ಪ್ರಕಟಣೆ

ಜಮೀನು ಮಾರಾಟ ಒಪ್ಪಂದ ಪತ್ರ ಕಳೆದುಹೋಗಿರುವ ಕುರಿತು

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ದಿನಾಂಕ 30.11.2015 ರಂದು ಮೊದಲಪಕ್ಷಗಾರರಾದ ಶ್ರೀಮತಿ ಎಚ್. ಎಸ್. ಮಮತಾ ಮತ್ತು ಸರಸ್ವತಿ (ಖರೀದಿದಾರರು) ಹಾಗೂ ಎರಡನೇ ಪಕ್ಷಗಾರರಾದ ಆರ್. ಶ್ರೀನಿವಾಸ್ ಬಿನ್ ರಂಗಪ್ಪ (ಮಾಲೀಕ), ಇವರಿಬ್ಬರ ಮಧ್ಯೆ ನಡೆದಿದ್ದ ಜಮೀನು ಮಾರಾಟದ ಒಪ್ಪಂದ ಪತ್ರವು ಕಳೆದುಹೋಗಿರುತ್ತದೆ / ಕಾಣೆಯಾಗಿರುತ್ತದೆ.
ಈ ಮಾರಾಟ ಒಪ್ಪಂದವು ಕೆಳಕಂಡ ಆಸ್ತಿಗಳಿಗೆ ಸಂಬಂಧಿಸಿದೆ:
ಸರ್ವೇ ನಂ. 49ರಲ್ಲಿ 0–13 ಗುಂಟೆಗಳು,
ಸರ್ವೇ ನಂ. 49ರಲ್ಲಿ 0–28.08 ಗುಂಟೆಗಳು,
ಸರ್ವೇ ನಂ. 49ರಲ್ಲಿ 1–00 ಎಕರೆ 0–32.08 ಗುಂಟೆಗಳು,
ಸರ್ವೇ ನಂ. 120ರಲ್ಲಿ 0–36.8 ಗುಂಟೆಗಳು,
ಸರ್ವೇ ನಂ. 120ರಲ್ಲಿ 0–23 ಗುಂಟೆಗಳು,
ಸರ್ವೇ ನಂ. 149ರಲ್ಲಿ 2–00 ಎಕರೆ
ಸರ್ವೇ ನಂ. 150ರಲ್ಲಿ 2–00 ಎಕರೆ 0–38 ಗುಂಟೆಗಳು,
ಒಟ್ಟು 10 ಎಕರೆ 0–16 ಗುಂಟೆಗಳ ಜಮೀನು, ಕೆ.ಬೇವಿನಹಳ್ಳಿ ಗ್ರಾಮ, ದಬ್ಬೇಘಟ್ಟ ಹೋಬಳಿ, ತುರುವೇಕೆರ ತಾಲ್ಲೂಕು, ತುಮಕೂರು ಜಿಲ್ಲೆಯಲ್ಲಿರುತ್ತದೆ.
ಮೇಲ್ಕಂಡ ಮೂಲ ಮಾರಾಟ ಒಪ್ಪಂದ ಪತ್ರ ಕಳೆದುಹೋಗಿರುವುದರಿಂದ, ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತಿದೆ ಯಾರೂ ಕೂಡ ಆ ಕಳೆದುಹೋದ ಪತ್ರವನ್ನು ಆಧರಿಸಿ ಯಾವುದೇ ವ್ಯವಹಾರ ಮಾಡಬಾರದು. ಯಾರಾದರೂ ಈಗಾಗಲೇ ಯಾವುದೇ ವ್ಯವಹಾರ ಮಾಡಿಕೊಂಡಿದ್ದರೆ ಅಥವಾ ಮಾಡುತ್ತಿರುವುದಾದರೆ, ದಯವಿಟ್ಟು 7 ದಿನಗಳ ಒಳಗಾಗಿ ಕೆಳಗಿನ ವಿಳಾಸಕ್ಕೆ ಲಿಖಿತವಾಗಿ ತಿಳಿಸಲು ವಿನಂತಿ.

ಇವರಿಂದ
ಎಚ್. ಎಸ್. ಮಮತಾ
ಕೋಂ. ಶ್ರೀ ಎಸ್. ಎಂ. ಶ್ರೀನಿವಾಸ
ವಯಸ್ಸು: ಸುಮಾರು 63 ವರ್ಷ
ವಿಳಾಸ: ನಂ.72, ಪಿ.ಎಫ್. ಲೇಔಟ್, ವಿಜಯನಗರ, ಬೆಂಗಳೂರು – 560040 ದೂರವಾಣಿ: 7259552215
ನರಸಿಂಹಮೂರ್ತಿ ವಿ. ವಕೀಲರು
ವಿಳಾಸ: ನಂ.41/7, 2ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಪಟ್ಟೆಗಾರ ಪಾಳ್ಯ, ವಿಜಯನಗರ, ಬೆಂಗಳೂರು – 560072
ದೂರವಾಣಿ: 9845976317

ಸೌತ್ ಬೆಂಗಳೂರು ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್
#31, 2ನೇ ಮಹಡಿ, 14ನೇ ಕ್ರಾಸ್, 10ನೇ ಮುಖ್ಯರಸ್ತೆ, ಲಕ್ಕಸಂದ್ರ ಎಕ್ಸ್‌ಟೆನ್ಷನ್, ವಿಲ್ಸನ್ ಗಾರ್ಡನ್, ಬೆಂಗಳೂರು–560030. ದೂರವಾಣಿ: 080–41218955, ಇ–ಮೇಲ್: southbangalorecredit@gmail.com

2024–25ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯ ಸೂಚನಾ ಪತ್ರ

ಈ ಮೂಲಕ ಸಹಕಾರಿಯ ಸದಸ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ 2024–25ನೇ ಸಾಲಿನ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ. ಎಸ್. ನಾಗರಾಜ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ : **20.09.2025ರ ಶನಿವಾರ ಬೆಳಗ್ಗೆ 10.30 ರಿಂದ 11.30 ಘಂಟೆಯವರೆಗೆ** ಸರಿಯಾಗಿ ಜೆ.ಪಿ.ನಗರ, ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್ ನಂ.146, 15ನೇ ಮುಖ್ಯರಸ್ತೆ, 5ನೇ ಫೇಸ್, ನಂಜುಂಡೇಶ್ವರ ಲೇಔಟ್, ಜೆ.ಪಿ. ನಗರ, ಬೆಂಗಳೂರು–560078, ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರೆಲ್ಲರೂ ಸಮಯಕ್ಕೆ ಸರಿಯಾಗಿ ಹಾಜರಾಗಿ, ಸಾಮಾನ್ಯ ಸಭೆಯ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಬೇಕೆಂದು ಈ ಮೂಲಕ ಕೋರಲಾಗಿದೆ.

ಈ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಸದಸ್ಯರು ತಮ್ಮ ಹೆಸರು, ಸದಸ್ಯತ್ವ ಸಂಖ್ಯೆ, ವಾಟ್ಸಪ್ ಇರುವ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ದಯಮಾಡಿ ಮಾನ್ಯ ಸದಸ್ಯರು ಮೇಲೆ ತಿಳಿಸಿರುವ ವಿವರಗಳನ್ನು ದಿನಾಂಕ: **04.09.2025** ಒಳಗಾಗಿ ಕಚೇರಿಗೆ ಖುದ್ದಾಗಿ ಸಲ್ಲಿಸಬಹುದು ಅಥವಾ ಸಂಘದ ಇ–ಮೇಲ್: **southbangalorecredit.ceo@yahoo.com** ವಿಳಾಸಕ್ಕೆ ಕಳುಹಿಸಿಕೊಡಲು ವಿನಂತಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ **080–41218955/080–42350955** ಸಂಖ್ಯೆಯನ್ನು ಸಂಪರ್ಕಿಸಿ.

ಸಹಿ/–
ಆಡಳಿತ ಮಂಡಳಿ ತೀರ್ಮಾನದ ಮೇರೆಗೆ
ಶ್ರೀಮತಿ ಹೇಮಾವತಿ ಎಸ್.
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ದಿನಾಂಕ: 01.09.2025
ಸ್ಥಳ : ಬೆಂಗಳೂರು

ಸಮಾಚಾರ ಸಣ್ಣದಲ್ಲ

ಇಂದಿನಿಂದ ನೂತನ ಮಾರ್ಗ ಆರಂಭ

ಬೆಂಗಳೂರು: ಬಿಎಂಟಿಸಿಯು ಪ್ರಯಾಣಿಕರ ಅನುಕೂಲಕ್ಕಾಗಿ ನೂತನ ಮಾರ್ಗ ಎಂಎಫ್-22ಡಿ ಬೊಮ್ಮಸಂದ್ರ ಮೆಟ್ರೋ ನಿಲ್ದಾಣದಿಂದ ಅನೇಕಲ್‌ಗೆ ಬೊಮ್ಮಸಂದ್ರ, ಚಂದಾಪುರ, ಇಗ್ಗಲೂರು, ಮರಸೂರು ಕ್ರಾಸ್, ಕರ್ಪೂರ ಗೇಟ್, ಅನೇಕಲ್ ಮಾರ್ಗದಲ್ಲಿ ಸೆ.1ರಿಂದ ಸಂಚಾರವನ್ನು ಆರಂಭಿಸಿದೆ ಎಂದು ಪ್ರಕಟಣೆ ತಿಳಿಸಿದೆ.

54 ಸಾವಿರ ಗಣೇಶ ಮೂರ್ತಿ ವಿಸರ್ಜನೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆ.30 ರಂದು ಸಂಚಾರಿ/ಮೊಬೈಲ್ ಟ್ಯಾಂಕರ್ ಹಾಗೂ ಕೆರೆ ಅಂಗಳದ ಶಾಶ್ವತ/ತಾತ್ಕಾಲಿಕ ಕಲ್ಯಾಣಿಗಳಲ್ಲಿ ಒಟ್ಟು 54 ಸಾವಿರ ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿರುತ್ತದೆ. ಪೂರ್ವ ವಲಯದಲ್ಲಿ 10,355, ಪಶ್ಚಿಮ ವಲಯದಲ್ಲಿ 2,974, ದಕ್ಷಿಣ ವಲಯದಲ್ಲಿ 32,742, ಬೊಮ್ಮನಹಳ್ಳಿ ವಲಯದಲ್ಲಿ 1,984, ದಾಸರಹಳ್ಳಿ ವಲಯದಲ್ಲಿ 156, ಮಹದೇವಪುರ ವಲಯದಲ್ಲಿ 955, ಆರ್‌ಆರ್.ನಗರ ವಲಯದಲ್ಲಿ 2,871, ಯಲಹಂಕ ವಲಯದಲ್ಲಿ 2,616 ಸೇರಿದಂತೆ ಒಟ್ಟು 54,653 ಮೂರ್ತಿಗಳ ವಿಸರ್ಜನೆಯಾಗಿದೆ ಎಂದು ಬಿಬಿಎಂಪಿ ಪ್ರಕಟಣೆಯಲ್ಲಿ ತಿಳಿಸಿದೆ.

ಗಾಂಧಿ ಸೇವಾ ಪ್ರಶಸ್ತಿ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಸರಕಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸ್ಥಾಪಿಸಿರುವ 5 ಲಕ್ಷ ರು. ನಗದನ್ನು ಒಳಗೊಂಡ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ-ಕರ್ನಾಟಕಗೆ ಪ್ರಸಕ್ತ ಸಾಲಿಗೆ ಅರ್ಹ ಸಾಧಕರನ್ನು ಅಥವಾ ಸಂಘ ಸಂಸ್ಥೆಗಳನ್ನು ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಿದೆ. ಸಾರ್ವಜನಿಕ ಜೀವನದಲ್ಲಿ ಮಹಾತ್ಮಗಾಂಧಿ ಆದರ್ಶಗಳನ್ನು ಅಳವಡಿಸಿಕೊಂಡು ಜೀವನ ನಡೆಸುತ್ತಿರುವ ಕನಿಷ್ಠ 60 ವರ್ಷಗಳಾಗಿರುವ ವ್ಯಕ್ತಿಗಳು ಅಥವಾ 25 ವರ್ಷಗಳು ತುಂಬಿರುವ ಸೇವಾ ಸಂಸ್ಥೆಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದು. ಮಹಾತ್ಮಗಾಂಧಿಯವರು ಪ್ರಚುರುಪಡಿಸಿದ ಜನಪರ ಕಾರ್ಯಕ್ರಮಗಳಾದ ಅಸ್ಪೃಶ್ಯತೆ ನಿವಾರಣೆ, ಅಹಿಂಸೆ, ಮಹಿಳಾ ಸಬಲೀಕರಣ, ಗ್ರಾಮೀಣ ನೈರ್ಮಲ್ಯ, ಮದ್ಯಪಾನ ವಿರೋಧಿ ನೀತಿ, ಖಾದಿ ಮತ್ತು ಸ್ವದೇಶಿವಸ್ತು ಬಳಕೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆ, ಈ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದು. ಸಂಘ ಸಂಸ್ಥೆಗಳು ಅಥವಾ ವ್ಯಕ್ತಿಗಳು ಶಿಫಾರಸನ್ನು ಕೂಡ ಮಾಡಬಹುದಾಗಿದೆ. ಅರ್ಜಿಗಳನ್ನು ಸೆ.19 ರೊಳಗಾಗಿ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ನಂ. 17. ಭಗವಾನ್ ಮಹಾವೀರ ರಸ್ತೆ (ಇನ್ಫೆಂಟ್ರಿ ರಸ್ತೆ), ಬೆಂಗಳೂರು -560 001 ಅಥವಾ ಇ - ಮೇಲ್ ವಿಳಾಸ informationdiprawardsgmail.comಗೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮುಂದಿನ ಐದು ದಿನ ರಾಜ್ಯದಲ್ಲಿ ಭಾರೀ ಮಳೆ

ಬೆಂಗಳೂರು: ರಾಜ್ಯ ಹಲವು ಭಾಗಗಳಲ್ಲಿ ಮಳೆಯ ಅಬ್ಬರ ಜೋರಾಗಿದ್ದು, ಮಲೆನಾಡು, ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ, ಮುಂದಿನ 5 ದಿನಗಳ ಕಾಲ ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆ ಆಗುವ ಸಾಧ್ಯತೆ ಸಹ ಇದೆ. ಮಾತ್ರವಲ್ಲದೇ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಹ ಮುಂದಿನ ಐದು ದಿನಗಳ ಕಾಲ ಮಳೆ ಆಗುವ ಸಾಧ್ಯತೆ ಇದೆ. ಈ ಹಿನ್ನೆಲೆ ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಕರಾವಳಿ ಜಿಲ್ಲೆಗಳಲ್ಲಿ ಸೆ.1ರಿಂದ 3ರವರೆಗೆ ಭಾರೀ ಮಳೆ ಆಗುವ ಸಂಭವ ಇದ್ದು, ರೆಡ್ ಅಲರ್ಟ್ ಘೋಷಿಸಲಾಗಿದೆ. ಸೆಪ್ಟೆಂಬರ್ 6ರ ವರೆಗೆ ಕರಾವಳಿ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಆಗುವ ಸಾಧ್ಯತೆ ಇದೆ ಎನ್ನಲಾಗಿದೆ. ಬೆಂಗಳೂರಿನ ಅನೇಕ ಪ್ರದೇಶಗಳಲ್ಲಿ ಮಳೆಯಾಗುತ್ತಿದ್ದು, ಭಾನುವಾರವೂ ಕೋರಮಂಗಲ, ಕಾರ್ಪೊರೇಷನ್ ಸರ್ಕಲ್, ಶಾಂತಿನಗರ, ರಿಚ್‌ಮಂಡ್ ಸರ್ಕಲ್, ಕೋರಮಂಗಲ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ಮಳೆಯಾಗಿದೆ. ಭಾರಿ ಮಳೆಯಿಂದಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ ಕಾಲೇಜಿಗೆ ಅನೇಕ ದಿನಗಳಿಂದ ರಜೆ ಘೋಷಣೆ ಮಾಡಲಾಗುತ್ತಿದೆ.

ಸೆ.3ಕ್ಕೆ ವಿಚಾರ ಸಂಕಿರಣ

ಬೆಂಗಳೂರು: ಬೆಂಗಳೂರು ನಗರ ವಿವಿಯ ಜಾಗತಿಕ ಭಾಷೆಗಳ ಕೇಂದ್ರವು ಜ್ಞಾನಜ್ಯೋತಿ ಸಭಾಂಗಣದಲ್ಲಿ ಸೆ.3ರ ಬೆಳಗ್ಗೆ 10.30ಕ್ಕೆ ವಿಕ್ಟರ್ ಹುಗೋ ಕುರಿತ ವಿಚಾರ ಸಂಕಿರಣ ಮತ್ತು ಸಾಹಿತ್ಯೋತ್ಸವವನ್ನು ಹಳೆಯ ವಿದ್ಯಾರ್ಥಿಗಳ ಸಮ್ಮೇಳನ ಕಾರ್ಯಕ್ರಮವನ್ನು ಆಯೋಜಿಸಿದೆ. ಫ್ರಾನ್ಸ್‌ನ ಕೌನ್ಸಲ್ ಜನರಲ್ ಮಾರ್ಕ್ ಲಾಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಪ್ರಭಾರ ಕುಲಪತಿ ಪ್ರೊ.ಕೆ.ಆರ್ ಜಲಜ್ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಡಾ. ಸುಮನ್ ವೆಂಕಟೇಶ್ ತಮ್ಮ ಕೃತಿ ವಿಕ್ಟರ್ ಹುಗೋ ಮತ್ತು ಹಿಂದೂ ತತ್ವಶಾಸ್ತ್ರ ಕುರಿತು ಮಾತನಾಡಲಿದ್ದಾರೆ. ಜತೆಗೆ ವಿಕ್ಟರ್ ಹುಗೋರ ಕವನಗಳ ಆಧಾರದ ಮೇಲೆ ವೀಡಿಯೊ ಮತ್ತು ಪೋಸ್ಟರ್ ಸ್ಪರ್ಧೆಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಅರಸು ಅಸೋಸಿಯೇಷನ್‌ನ ಸುವರ್ಣ ಮಹೋತ್ಸವ | ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಮತ

ಜಾತಿ, ಧರ್ಮ ಮೀರಿದ ರಾಜ್ಯ ಕಟ್ಟಿದ್ದು ಅರಸರು

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಮನುಷ್ಯ ಧರ್ಮವನ್ನು ಮೂಲವಾಗಿಟ್ಟುಕೊಂಡು ಮೈಸೂರು ಅರಸರು ಹಾಗೂ ಅವರ ವಂಶಸ್ಥರು ಈ ರಾಜ್ಯದ ಜನರ ಸೇವೆ ಮಾಡಿದ್ದಾರೆ. ಜಾತ್ಯಾತೀತ, ಧರ್ಮಾತೀತವಾಗಿ ಕರ್ನಾಟಕವನ್ನು ಕಟ್ಟಿದ ಇತಿಹಾಸ ಅರಸು ಸಮುದಾಯಕ್ಕಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಅರಸು ಅಸೋಸಿಯೇಷನ್‌ನ ಸುವರ್ಣ ಮಹೋತ್ಸವದಲ್ಲಿ ಮಾತನಾಡಿ, ಅರಸು ಸಮುದಾಯ ಗಾತ್ರದಲ್ಲಿ ಚಿಕ್ಕದಿರಬಹುದು. ಆದರೆ ಈ ರಾಜ್ಯಕ್ಕೆ ಅವರು ನೀಡಿರುವ ಕೊಡುಗೆ ಬಹು ದೊಡ್ಡದು. ನಾಲ್ವಡಿ ಕೃಷ್ಣರಾಜ ಒಡೆಯರ್, ಕೆಂಪರಾಜಮ್ಮಣ್ಣಿ, ಜಯಚಾಮರಾಜೇಂದ್ರ ಒಡೆಯರ್ ಅವರು ಹೀಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಕನ್ನಂಬಾಡಿ ಕಟ್ಟೆ, ವಾಣಿವಿಲಾಸ ಸಾಗರ ಅಣೆಕಟ್ಟು, ಜೆ.ಸಿ. ಎಂಜಿನಿಯರ್ ಕಾಲೇಜು, ವಿಕ್ಟೋರಿಯಾ ಆಸ್ಪತ್ರೆ ಹೀಗೆ ಹಲವಾರು ಜನೋಪಕಾರಿ ಕೆಲಸಗಳಿಗೆ ಅಡಿಪಾಯ ಹಾಕಿಕೊಟ್ಟವರು ಮೈಸೂರು ಅರಸರು ಎಂದು ನೆನಪಿಸಿಕೊಂಡರು.

ಅರಸು ಸಮುದಾಯಕ್ಕೆ ಮೀಸಲಾತಿ ಸೇರಿದಂತೆ ಇತರೇ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಎಂದು ಮುಖಂಡರುಗಳು ಮನವಿ ಸಲ್ಲಿಸಿದ್ದಾರೆ. ಇದರ ಬಗ್ಗೆ ಸರಕಾರದ ಮಟ್ಟದಲ್ಲಿ ಚರ್ಚೆ ನಡೆಸಲಾಗುವುದು. ಸಂಘಕ್ಕೆ ನಿವೇಶನ ಬೇಕು ಎಂದು ಮನವಿ ಸಲ್ಲಿಸಿದ್ದೀರಿ. ನಾನು ಬೆಂಗಳೂರು ಅಭಿವೃದ್ಧಿಯ ಜವಾಬ್ದಾರಿ ಹೊತ್ತಿದ್ದೇನೆ. ಆದ ಕಾರಣ ಸಂಘದ ಪ್ರಮುಖರು ಹಾಗೂ ರಾಜ ವಂಶಸ್ಥರೊಂದಿಗೆ ಚರ್ಚಿಸಿ, ನಿಮ್ಮ ಬೇಡಿಕೆ ಈಡೇರಿಸುವ ಬಗ್ಗೆ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಅರಸು ಅಸೋಸಿಯೇಷನ್‌ನ ಸುವರ್ಣ ಮಹೋತ್ಸವದಲ್ಲಿ ಮೀಸಲು, ಬೆಂಗಳೂರಿನಲ್ಲಿ ನಿವೇಶನ ಸೇರಿದಂತೆ ವಿವಿಧ ಬೇಡಿಕೆವುಳ್ಳ ಮನವಿ ಪತ್ರವನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅರಸು ಸಮುದಾಯದ ಪ್ರಮುಖರು ಸಲ್ಲಿಸಿದರು.

ಮೈಸೂರು ಮಹಾರಾಜರು ಯಾವ ಧರ್ಮದಲ್ಲಿ ನಡೆಯಬೇಕು. ಯಾವ ಧರ್ಮವನ್ನು ಉಳಿಸಿಕೊಳ್ಳಬೇಕು ಎಂದು ಯಾವತ್ತೂ ಮಾತನಾಡಲಿಲ್ಲ. ಏಕೆಂದರೆ ಧರ್ಮ ಯಾವುದಾದರೂ ಇರಲಿ, ತತ್ವ, ನಾಮ ನೂರಾರೂ ಇದ್ದರೂ ದೈವವೊಂದೇ. ಪೂಜೆ ಹಲವಾದರೂ ಭಕ್ತಿಯೊಂದೇ, ದೇವನೊಬ್ಬ ನಾಮ ಹಲವು. ನಾವುಗಳು ಹುಟ್ಟುವಾಗ ಇದೇ ಜಾತಿಯಲ್ಲಿ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡು ಹುಟ್ಟಲಿಲ್ಲ. ಅರಸು ಸಮುದಾಯಕ್ಕೆ ನಾವೆಲ್ಲರೂ ಋಣಿಗಳಾಗಿರಬೇಕು. ಕರ್ನಾಟಕ ಸರಕಾರದ ಪರವಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ನನ್ನ ಕ್ಷೇತ್ರದಲ್ಲಿ ಹಲವಾರು ಅರಸು ಕುಟುಂಬದವರನ್ನು ಹತ್ತಿರದಿಂದ ನೋಡಿದ್ದೇನೆ. ಬಹಳ ಸ್ವಾಭಿಮಾನದಿಂದ ಬದುಕು ನಡೆಸುತ್ತಿರುವ ಸಮುದಾಯ. ನೀವು ಸರಕಾರದ ಜತೆ ನಿಂತು, ಬೆಂಬಲವಾಗಿರಬೇಕು ಎಂದು ಮನವಿ ಮಾಡಿದರು.

ದೇವರಾಜ ಅರಸರ ಕೊಡುಗೆ ಅಪಾರ

ದೇವರಾಜ ಅರಸು ಅವರು ಉಳುವವನೇ ಭೂಮಿಯ ಒಡೆಯ ಕಾನೂನು ಜಾರಿಗೆ ತಂದು ಲಕ್ಷಾಂತರ ಭೂರಹಿತ ಬಡವರ ಪರವಾಗಿ ನಿಂತರು. ಈ ತೀರ್ಮಾನ ಇತಿಹಾಸ ದಲ್ಲಿ ಶಾಶ್ವತವಾಗಿ ಉಳಿದುಕೊಂಡಿದೆ. ಒಬ್ಬ ಮನುಷ್ಯ ಯಾವಾಗ ಸಾಹುಕಾರನಾಗುತ್ತಾನೆ. ಯಾವಾಗ ಬಡವನಾಗು ತ್ತಾನೆ ಎಂಬುದು ತಿಳಿಯಿವುದಿಲ್ಲ. ಅದಲು-ಬದಲು ಪ್ರಕ್ರಿಯೆ ಅನಿರೀಕ್ಷಿತ. ದೇವರಾಜ ಅರಸು ಅವರಿಗೆ ಜಾತಿ ಇರಲಿಲ್ಲ. ಆದರೆ ನಾಯಕತ್ವದ ಗುಣವಿತ್ತು. ಆ ಗುಣ ಅವರನ್ನು ದೊಡ್ಡ ಮಟ್ಟಕ್ಕೆ ಬೆಳೆಸಿತು. ಹಿಂದುಳಿದ ಹಾಗೂ ಮೇಲ್ವರ್ಗದ ಎಲ್ಲ ರಾಜಕಾರಣಿಗಳನ್ನು ಬೆಳೆಸಿ ಭದ್ರ ಅಡಿಪಾಯ ಕೊಟ್ಟವರು ದೇವರಾಜ ಅರಸು. ಹಣ, ಐಶ್ವರ್ಯ ಎಷ್ಟೇ ಇದ್ದರೂ ಸರಳತೆ ಯನ್ನು ಕಾಪಾಡಿಕೊಂಡವರು ಅರಸು ಸಮುದಾಯ ದವರು. ಸಂಪತ್ತಿಗೆ ಬೆಲೆಕಟ್ಟಬಹುದು ಆದರೆ ಸರಳತೆಗೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಇನ್ನೊಬ್ಬರಿಗೆ ಅನ್ಯಾಯವಾಗದ ರೀತಿಯಲ್ಲಿ ನಾವು ಬದುಕಬೇಕು. ಅದೇ ನಿಜವಾದ ಸರಳ ಧರ್ಮ ಎಂದು ಡಿಸಿಎಂ ಡಿಕೆಶಿ ಹೇಳಿದರು.

ರಾಜ್ಯದ ಪಾಲಿನ ಹಣ ಕೊಡಿಸಲಿ

ಇನ್ನು ಕಾರ್ಯಕ್ರಮಕ್ಕೂ ಮೊದಲು ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಜೆಪಿಯವರಿಗೆ ರಾಜಕೀಯ ಇಚ್ಛಾಶಕ್ತಿಯಿದ್ದರೆ ಭದ್ರಾ, ಮೇಲ್ದಂಡೆಗೆ, ಬೆಂಗಳೂರು ಅಭಿವೃದ್ಧಿಗೆ ಹಣ ಕೊಡಿಸಲಿ. ಮೇಕೆದಾಟು, ಮಹದಾಯಿಗೆ ಅನುಮತಿ ಕೊಡಿಸಲಿ. ಬಿಜೆಪಿಯವರು ಧರ್ಮಸ್ಥಳಕ್ಕೆ ಹೋಗಿ ತಮ್ಮ ವೈಯಕ್ತಿಕ ಲಾಭಕ್ಕೆ ಪ್ರಾರ್ಥನೆ ಮಾಡಿಕೊಂಡು ಬರುತ್ತಾರೆಯೇ ಹೊರತು ಬೇರೇನೂ ಇಲ್ಲ. ಇವರ ಹೋರಾಟ ಧರ್ಮಸ್ಥಳದಲ್ಲಿ ಅಲ್ಲ, ಎಲ್ಲಾ ಸಂಸದರು, ಶಾಸಕರನ್ನು ಕರೆದುಕೊಂಡು ಹೋಗಿ ದೆಹಲಿಯಲ್ಲಿ ಹೋರಾಟ ಮಾಡಬೇಕು. ರಾಜ್ಯಕ್ಕೆ ಅನುದಾನ ತರಬೇಕು ಎಂದು ಛೇಡಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರಿನ ಕನಕಶ್ರೀಲೇಔಟ್‌ನ ಬಲಮುರಿ ಸಿದ್ಧಿ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ಆಯೋಜಿಸಿದ್ದ ಗಣೇಶ ಚತುರ್ಥಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರನ್ನು ಕಣ್ಣೂರು ಪಂಚಾಯಿತಿ ಅಧ್ಯಕ್ಷ ಅಶೋಕ್ ಸನ್ಮಾನಿಸಿದರು. ಗ್ರಾಮಾಂತರ ಮಂಡಲ ಅಧ್ಯಕ್ಷ ಪಿಳ್ಳಪ್ಪ, ವಾರ್ಡ್ ಅಧ್ಯಕ್ಷ ಮಹೇಶ್ ಮತ್ತಿತರರಿದ್ದರು.

ಶ್ರದ್ಧಾ ಭಕ್ತಿಯಿಂದ ಗಣೇಶ ಹಬ್ಬ ಆಚರಿಸಿ: ಲಿಂಬಾವಳಿ

ವಿಶ್ವವಾಣಿ ಸುದ್ದಿಮನೆ ಮಹದೇವಪುರ

ವಿಘ್ನ ನಿವಾರಣೆ ಮಾಡುವ ವಿನಾಯಕನಿಗೆ ಶ್ರದ್ಧಾ ಭಕ್ತಿಯಿಂದ ಪೂಜೆಗಳು ನಡೆಸಬೇಕು ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಕಣ್ಣೂರಿನ ಕನಕಶ್ರೀ ಲೇಔಟ್‌ನ ಬಲಮುರಿ ಸಿದ್ಧಿವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ಗಣೇಶ ಚತುರ್ಥಿ ಕಾರ್ಯ ಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಯುವಕರನ್ನು ಒಗ್ಗೂಡಿಸುವ ಹಬ್ಬವಾದ ಗಣೇಶ ಉತ್ಸವ ಯಾವುದೇ ಅಡೆತಡೆಗಳಿಲ್ಲದೆ ನಡೆಯಲಿ. ರಾಷ್ಟ್ರಾದ್ಯಂತ ವಿಜೃಂಭಣೆಯಿಂದ ಆಚರಿಸುವ ಹಬ್ಬ ಗಣೇಶ ಹಬ್ಬವಾಗಿದ್ದು, ಗಲ್ಲಿಗಳಿಂದ ಹಿಡಿದು ದಿಲ್ಲಿಯ ವರೆಗೂ ಅದ್ದೂರಿಯಾಗಿ ಆಚರಿಸುತ್ತೇವೆ. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರೆಲ್ಲಾ ಒಗ್ಗೂಡಿ ಸಂಭ್ರಮದಿಂದ ಗಣೇಶ ಉತ್ಸವ ಆಚರಿಸಲಾಗುತ್ತದೆ. ಕ್ಷೇತ್ರದ ಮೂಲೆ ಮೂಲೆಯಲ್ಲೂ ಯುವಕರು ಗಣೇಶ ಮೂರ್ತಿ ಯನ್ನು ಪ್ರತಿಷ್ಠಾಪಿಸಿದ್ದು ಹಬ್ಬದ ಸಡಗರ ಮುಗಿಲು ಮುಟ್ಟಿದೆ. ಉತ್ಸವದ ವೇಳೆ ಯಾವುದೇ ಅಹಿತಕರ ಘಟನೆ ಆಗದಂತೆ ನಮ್ಮ ಮುಖಂಡರು ನೋಡಿ ಕೊಳ್ಳಬೇಕು. ಗಣೇಶನ ಆಶೀರ್ವಾದವೆಂದರೆ ಪ್ರತಿ ಸಂಕಟದ ಬಳಿಕ ಸಂತೋಷದ ಬೆಳಕು ಎಂದು ಹೇಳಿದರು.

ಕಣ್ಣೂರು ಪಂಚಾಯಿತಿ ಅಧ್ಯಕ್ಷ ಅಶೋಕ್ ಮಾತನಾಡಿ, ಕಣ್ಣೂರು ಭಾಗ ಸೇರಿದಂತೆ ಎಲ್ಲಾ ಕಡೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಇಲ್ಲದೆ ಯಾವುದೇ ಹಬ್ಬಗಳು ಆಚರಿಸುವುದಿಲ್ಲ ಅವರು ನಮ್ಮ ಮನೆಯವರಂತೆ ಕಾರ್ಯಕ್ರಮ ಗಳಲ್ಲಿ ಭಾಗವಹಿಸುತ್ತಾರೆ ಎಂದು ಹೇಳಿದರು.

ಈ ವೇಳೆ ಗ್ರಾಮಾಂತರ ಮಂಡಲದ ಅಧ್ಯಕ್ಷ ಎಚ್.ಎಸ್. ಪಿಳ್ಳಪ್ಪ ,ಕಣ್ಣೂರು ಪಂಚಾಯಿತಿ ಅಧ್ಯಕ್ಷ ಅಶೋಕ್, ವಾರ್ಡ್ ಅಧ್ಯಕ್ಷ ಮಹೇಶ್, ಮೋಹನ್ ರೆಡ್ಡಿ, ರಾಘವೇಂದ್ರ, ಚಂದ್ರಶೇಖರ್ ಇದ್ದರು.

ಪಿಇಎಸ್ ವಿವಿ 10ನೇ ಘಟಿಕೋತ್ಸವದಲ್ಲಿ ರಾಜ್‌ಕುಮಾರ್ ಬುಯ್ಯಾ ಅಭಿಮತ

ಶಿಕ್ಷಣ, ಸಂಪತ್ತನ್ನು ಸುಧಾರಣೆಗಾಗಿ ಸಂಯೋಜಿಸಿ

ಬೆಂಗಳೂರು: ನಮ್ಮ ಸಮಾಜಗಳ ಸುಧಾರಣೆಗಾಗಿ ಶಿಕ್ಷಣ ಮತ್ತು ಸಂಪತ್ತನ್ನು ಸಂಯೋಜಿಸಬೇಕು ಎಂದು ಆಸ್ಟ್ರೇಲಿಯಾದ ಮೆಲ್ಬೋರ್ನ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಕಂಪ್ಯೂಟಿಂಗ್ ಮತ್ತು ಇನ್ಫರ್ಮೇಷನ್ ಸಿಸ್ಟಮ್ಸ್‌ನ ಪ್ರಾಧ್ಯಾಪಕ ಪ್ರೊ. ರಾಜ್‌ಕುಮಾರ್ ಬುಯ್ಯಾ ಸಲಹೆ ನೀಡಿದರು.

ಪಿಇಎಸ್ ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಉನ್ನತ ಗುರಿಯೊಂದಿಗೆ ಕಠಿಣ ಪರಿಶ್ರಮ ಪಟ್ಟರೆ ಆ ಗುರಿ ಮುಟ್ಟಲು ಸಾಧ್ಯ. ಯುವ ಪೀಳಿಗೆ ಸ್ಥಿರ ಮನಸ್ಸನ್ನು ಕಾಪಾಡಿಕೊಳ್ಳುವ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಬೇಕು. ಭಗವದ್ಗೀತೆಯಂತಹ ಆಧ್ಯಾತ್ಮಿಕ ಪುಸ್ತಕಗಳ ಮೂಲಕ ಇದನ್ನು ಸಾಧಿಸಬಹುದು ಎಂದು ಹೇಳಿದರು.

ಪಿಇಎಸ್ ವಿಶ್ವವಿದ್ಯಾಲಯದ 10ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಮಾತನಾಡಿ, ಪಿಇಎಸ್‌ನ ಮೌಲ್ಯಗಳು ನಮ್ಮ ಸಂಸ್ಥಾಪಕ ಡಾ. ದೊರೆಸ್ವಾಮಿ ಅವರ ಪರಂಪರೆಯಾಗಿದೆ. ಡಾ. ದೊರೆಸ್ವಾಮಿ ತಮ್ಮ ಜೀವನವನ್ನು ಮೂರು ಮೌಲ್ಯಗಳೊಂದಿಗೆ ಬದುಕಿದರು. ವಿದ್ಯಾರ್ಥಿಗಳಿಗೆ ಪರಿಶ್ರಮವು ಆಧಾರಸ್ತಂಭವಾಗಿರುತ್ತದೆ, ಶ್ರೇಷ್ಠತೆಯು ಅವರ ದಿಕ್ಸೂಚಿಯಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ 9 ಪಿಎಚ್‌ಡಿ ಪ್ರಶಸ್ತಿ ಪುರಸ್ಕೃತರು, 1 ಎಂ.ಟೆಕ್ ಸಂಶೋಧನಾ ಪ್ರಶಸ್ತಿ ಪುರಸ್ಕೃತರು ಮತ್ತು 1128 ಸ್ನಾತಕೋತ್ತರ ಪದವಿ ಸೇರಿದಂತೆ ಒಟ್ಟು 4607 ವಿದ್ಯಾರ್ಥಿಗಳು ಪದವಿ ಪಡೆದರು. 1907 ಮಂದಿ ಅತ್ಯುತ್ತಮ ಪದವಿ, 238 ಮಂದಿ ಸ್ನಾತಕ ಪದವಿಯೊಂದಿಗೆ ಕಿರಿಯ ಪದವಿಯನ್ನೂ ಸಹ ಪೂರ್ಣಗೊಳಿಸಿದರು. ಈ ವೇಳೆ ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಡಾ. ಜೆ. ಸೂರ್ಯ ಪ್ರಸಾದ್ , ಕುಲಸಚಿವ ಡಾ. ಕೆ.ಎಸ್. ಶ್ರೀಧರ್, ಸಿಇಒ ಪ್ರೊ. ಅಜಯ್ ಕುಮಾರ್ ಸೇರಿ ಅನೇಕರಿದ್ದರು.

ಬಸವನಗುಡಿ ವಿಧಾನಸಭಾ ಕ್ಷೇತ್ರ, ಬ್ರಾಹ್ಮಣ ಸಂಘದ ವತಿಯಿಂದ ಶಿಕ್ಷಣ ತಜ್ಞ ರಾಮಣ್ಣ ಅವರಿಗೆ ಸನ್ಮಾನ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಮಾಡಲಾಯಿತು. ಈ ವೇಳೆ ಸಂಘದ ಅಧ್ಯಕ್ಷೆ ಶಾರದಾ ಸುಬ್ರಹ್ಮಣ್ಯ, ಆಡೆನ್ ಶಾಲೆಯ ಅಧ್ಯಕ್ಷ ರಾಮಣ್ಣ, ಶಾಸಕ ರವಿಸುಬ್ರಹ್ಮಣ್ಯ, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮಾಜಿ ನಿರ್ದೇಶಕ ರಾಘವೇಂದ್ರಭಟ್, ಅರುಣ್ ಅಡಿಗ, ರವಿಶಂಕರ್ ಇದ್ದರು.

ಪಿಜಿಯಲ್ಲಿ ಯುವತಿಗೆ ಲೈಂಗಿಕ ಕಿರುಕುಳ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಪದೇ ಪದೇ ಸಂಭವಿಸುತ್ತಿರುವ ಲೈಂಗಿಕ ಕಿರುಕುಳ, ದೌರ್ಜನ್ಯ ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಪಿಜಿಯಲ್ಲಿ ತಂಗಿದ್ದ ಯುವತಿಗೆ ಲೈಂಗಿಕ ಕಿರುಕುಳ ಕೊಟ್ಟಿರುವ ಘಟನೆ ಸುದ್ದಗುಂಟೆ ಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಲೇಡೀಸ್ ಪಿಜಿಗೆ ನುಗ್ಗಿದ ಕಾಮುಕನೊಬ್ಬ, ಅಲ್ಲಿದ್ದ ಯುವತಿಗೆ ಲೈಂಗಿಕ ಕಿರುಕುಳ ನೀಡಿರುವುದು ಬೆಳಕಿಗೆ ಬಂದಿದೆ. ಇತ್ತೀಚೆಗೆ ಇದೇ ಸುದ್ದಗುಂಟೆಪಾಳ್ಯದಲ್ಲಿ ನಡುರಸ್ತೆಯಲ್ಲೇ ಮಧ್ಯರಾತ್ರಿ ಯುವಕನೊಬ್ಬ ಯುವತಿಗೆ ಲೈಂಗಿಕ ಕಿರುಕುಳ ನೀಡಿ ಪರಾರಿಯಾಗಿದ್ದು, ಆರೋಪಿಗೆ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ಆರ್‌ವಿ ವಿಶ್ವವಿದ್ಯಾಲಯದ 3ನೇ ವಾರ್ಷಿಕ ಘಟಿಕೋತ್ಸವದಲ್ಲಿ ಕೈಲಾಶ್ ಸತ್ಯಾರ್ಥಿ ಅಭಿಮತ

ಶಿಕ್ಷಣವನ್ನು ಉತ್ತಮ ಸಮಾಜ ನಿರ್ಮಾಣಕ್ಕೆ ಬಳಸಿ

ಬೆಂಗಳೂರು: ಶಿಕ್ಷಣವನ್ನು ನಿಮ್ಮ ಸ್ವಂತ ಯಶಸ್ಸಿಗೆ ಬಳಸುವುದರ ಜತೆಗೆ ಉತ್ತಮ ಸಮಾಜ ನಿರ್ಮಾಣ ಮಾಡಲು ಕೂಡಾ ಬಳಸಿ ಎಂದು ನೊಬೆಲ್ ಪಾರಿತೋಷಕ ಪುರಸ್ಕೃತ ಕೈಲಾಶ್ ಸತ್ಯಾರ್ಥಿ ಹೇಳಿದ್ದಾರೆ.

ಆರ್‌ವಿ ವಿಶ್ವವಿದ್ಯಾಲಯದ 3ನೇ ವಾರ್ಷಿಕ ಘಟಿಕೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಸಮಾಜದಲ್ಲಿ ಹೋರಾಡಿದವರೇ ಇತಿಹಾಸವನ್ನು ನಿರ್ಮಿಸಿದ್ದಾರೆ. ಇಂದಿನ ಯುವಕರು ಕೂಡಾ ದಾರಿಯಲ್ಲಿ ಮುನ್ನಡೆಯುತ್ತೀರಿ ಎಂಬ ವಿಶ್ವಾಸವಿದೆ. ಸಮಾಜದ ಬಗ್ಗೆ ಸಹಾನುಭೂತಿ ಇದ್ದರೆ, ಎಲ್ಲ ಸಮಸ್ಯೆಗಳನ್ನೂ ನಾವು ಪರಿಹರಿಸಬಹುದು ಎಂದು ತಿಳಿಸಿದರು.

- ಆರು ವಿಭಾಗಗಳಲ್ಲಿ 259 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ
- ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ 9 ವಿದ್ಯಾರ್ಥಿಗಳಿಗೆ ವಿಶೇಷ ಗೌರವ

ಆರ್‌ವಿ ವಿಶ್ವವಿದ್ಯಾಲಯದ ಡಾ. ಎವಿಎಸ್ ಮೂರ್ತಿ ಮಾತನಾಡಿ, ಸಮಾಜದಲ್ಲಿ ಮಹತ್ವದ ಪ್ರಭಾವ ಬೀರುವುದಕ್ಕಾಗಿ ಕೌಶಲ ಮತ್ತು ಜ್ಞಾನವನ್ನು ಪಡೆದುಕೊಂಡು ನಮ್ಮ ವಿಶ್ವವಿದ್ಯಾಲಯದಿಂದ ಹೊರಕ್ಕೆ ಕಾಲಿಡುತ್ತಿರುವ ನಮ್ಮ ಪದವೀಧರರ ಬಗ್ಗೆ ನಮಗೆ ಹೆಮ್ಮೆಯಿದೆ. ನಮ್ಮ ವಿದ್ಯಾರ್ಥಿಗಳು ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು ಎಂಬ ತತ್ವವನ್ನು ಮೈಗೂಡಿಸಿಕೊಂಡಿದ್ದಾರೆ. ಅವರು ಇಲ್ಲಿ ಕಲಿತ ಜ್ಞಾನ ಮತ್ತು ಪರಿಣಿತಿ ಬಳಸಿಕೊಂಡು ಜೀವನದಲ್ಲಿ ಯಶಸ್ವಿಯಾಗುತ್ತಾರೆ ಮತ್ತು ದೇಶಕ್ಕೆ ಉತ್ತಮ ಕೊಡುಗೆ ನೀಡುತ್ತಾರೆ ಎಂಬ ವಿಶ್ವಾಸವನ್ನು ನಾವು ಹೊಂದಿದ್ದೇವೆ ಎಂದರು. ಉಪ ಕುಲಪತಿ ಪ್ರೊ. ದ್ವಾರಿಕಾ ಪ್ರಸಾದ್ ಉನಿಯಾಲ್‌ಮಾತನಾಡಿ, ಸಮಗ್ರ ಶಿಕ್ಷಣವು ಕೇವಲ ತರಗತಿಗೆ ಸೀಮಿತವಾಗಿರುವುದಿಲ್ಲ. ಇಡೀ ಜೀವನ ಪದ್ಧತಿಯಾಗಿರುತ್ತದೆ ಎಂಬ ತತ್ವ ನಮ್ಮ ಶಿಕ್ಷಣ ಸಂಸ್ಥೆಯು ಅಳವಡಿಸಿಕೊಂಡಿದೆ. ಈ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಾಗೂ ಶೈಕ್ಷಣಿಕೇತರ ಚಟುವಟಿಕೆಗಳಲ್ಲಿ ಅತ್ಯಂತ ಸಕ್ರಿಯವಾಗಿದ್ದಾರೆ ಮತ್ತು ಉತ್ತಮ ಕೌಶಲ ಅಳವಡಿಸಿಕೊಂಡಿದ್ದಾರೆ ಎಂದರು.

ಆರ್‌ವಿ ವಿಶ್ವವಿದ್ಯಾಲಯದ 3ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ರಾಜೀವ್ ಗಾಂಧಿ ಆರೋಗ್ಯ ವಿವಿಯಿಂದ ಕಾರ್ಯಕ್ರಮ | ಆನ್‌ಲೈನ್ ಮೂಲಕ ನೋಂದಣಿ

ಅಂಗಾಂಗ ದಾನ ಪ್ರತಿಜ್ಞಾ ಅಭಿಯಾನ ಆರಂಭ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಒಂದು ತಿಂಗಳ ಅಭಿಯಾನವನ್ನು ಹಮ್ಮಿಕೊಂಡಿದೆ.

ಆ.29ರಿಂದ ಸೆ.30ರವರೆಗೆ ಧಾತ್ರ ಅಂಗಾಂಗ ದಾನ ಪ್ರತಿಜ್ಞಾ ಅಭಿಯಾನ ನಡೆಯಲಿದೆ. ಈ ಒಂದು ತಿಂಗಳ ಅವಧಿಯಲ್ಲಿ ವಿಶ್ವವಿದ್ಯಾಲಯದ 336 ಸಿಬ್ಬಂದಿ ಹಾಗೂ ಅದರ ಎಲ್ಲಾ ಸಂಯೋಜಿತ ಕಾಲೇಜುಗಳ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸ್ವ-ಇಚ್ಛೆಯಿಂದ ಅಂಗಾಂಗ ದಾನ ಪ್ರತಿಜ್ಞೆ ಕೈಗೊಳ್ಳಲಿದ್ದಾರೆ. ಈಗಾಗಲೇ ಕುಲಪತಿ ಡಾ. ಭಗವಾನ್ ಅವರು ಜಯನಗರದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸುಮಾರು 150 ಸಿಬ್ಬಂದಿ ಹಾಗೂ ಅಧಿಕಾರಿ ವರ್ಗದವರೊಂದಿಗೆ ಸ್ವತಃ ಅಂಗಾಂಗ ದಾನ ಪ್ರತಿಜ್ಞೆ ಕೈಗೊಳ್ಳುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ವೈದ್ಯಕೀಯ ವೃತ್ತಿಯಲ್ಲಿರುವ ನಾವು ಜೀವಗಳನ್ನು ಉಳಿಸುವುದರ ಮೌಲ್ಯ ಹಾಗೂ ಸಾರ್ಥಕತೆಯನ್ನು ಅರ್ಥೈಸಿಕೊಂಡಿದ್ದೇವೆ ಎಂದು ಭಾವಿಸುತ್ತೇನೆ. ಈ ಕರ್ತವ್ಯ ಪ್ರಜ್ಞೆಯನ್ನು ನಿಮಗೂ ನೆನಪಿಸಲು ಬಯಸುತ್ತೇನೆ. ಈ ಉದ್ದೇಶದ ಭಾಗವಾಗಿ ಪ್ರತಿಯೊಬ್ಬರೂ ಸ್ವ-ಇಚ್ಛೆಯಿಂದ ಅಂಗಾಂಗ ದಾನ ಪ್ರತಿಜ್ಞೆ ಕೈಗೊಳ್ಳುವ ಮೂಲಕ ವೈದ್ಯಕೀಯ ಘನತೆಯನ್ನು ಎತ್ತಿ ಹಿಡಿಯಬೇಕು. ವೈದ್ಯಕೀಯ ವೃತ್ತಿಯಲ್ಲಿರುವ ನಾವೆಲ್ಲಾ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಹಾಗೂ ಮಾನವ ಕುಲಕ್ಕೆ ಮಾದರಿಯಾಗುವ ದೃಢ ನಿರ್ಧಾರ ಕೈಗೊಳ್ಳಬೇಕು. ನಿಮ್ಮೆಲ್ಲರ ಬೆಂಬಲದಿಂದ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಈ ಉಪಕ್ರಮ ಯಶಸ್ವಿಯಾಗಲು ಸಾಧ್ಯ. ಒಬ್ಬ ಅಂಗಾಂಗ ದಾನಿ ಎಂಟು ಜನರ ಜೀವ ಉಳಿಸಬಲ್ಲ. ಈ ಸದ್ಭಾವನೆಯನ್ನು ವಾಸ್ತವಕ್ಕೆ ತರಲು ಪ್ರತಿಯೊಬ್ಬರೂ ಪಣ ತೊಡಬೇಕಿದೆ ಎಂದು ತಿಳಿಸಿದರು.

ಅಂಗಾಂಗ ದಾನದ ಬಗ್ಗೆ ಬೇಕಿದೆ ಜಾಗೃತಿ

ದೇಶದಲ್ಲಿ ಕಳೆದ ವರ್ಷ ಸುಮಾರು 17ರಿಂದ 18 ಸಾವಿರ ಅಂಗಾಂಗ ಕಸಿ ಮಾಡಲಾಗಿದೆ. ಆದರೆ, ಅಂಗಾಂಗ ಕಸಿಗಾಗಿ ಕಾಯುತ್ತಿರುವ ರೋಗಿಗಳ ಸಂಖ್ಯೆ 2ಲಕ್ಷಕ್ಕೂ ಅಧಿಕ. ಅಂಗಾಂಗ ದಾನದಲ್ಲಿ ಅಮೆರಿಕ ಮತ್ತು ಚೀನಾ ನಂತರ ಭಾರತ 3ನೇ ಸ್ಥಾನದಲ್ಲಿದೆ. ಭಾರತದಲ್ಲಿ ಕರ್ನಾಟಕ 3ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಧಾರವಾಡ ಮೊದಲ ಸ್ಥಾನದಲ್ಲಿದೆ. 160 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ನಮ್ಮಲ್ಲಿ ಅಂಗಾಂಗ ದಾನ ಪ್ರತಿಜ್ಞೆ ಕೈಗೊಂಡವರ ಸಂಖ್ಯೆ ಕೇವಲ ಸುಮಾರು 4 ಲಕ್ಷದಷ್ಟು. ಹೆಚ್ಚು ಹೆಚ್ಚು ಜನರು ಅಂಗಾಂಗ ದಾನ ಮಾಡಲು ಮುಂದೆ ಬರಬೇಕು. ಅದಕ್ಕೆ ನಾವು ಪ್ರೇರಣೆಯಾಗಬೇಕು ಎನ್ನುವುದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆಶಯವಾಗಿದೆ. ಎಲ್ಲರೂ https://notto.abdm.gov.in/register ನೋಟೊ ವೆಬ್ ಸೈಟ್ ಮೂಲಕ ಅಂಗಾಂಗ ದಾನ ಪ್ರತಿಜ್ಞೆ ಕೈಗೊಳ್ಳಬಹುದು ಎಂದು ಹೇಳಿದರು.

ಮತ್ತೆ ಕಸ ವಿಲೇವಾರಿ ಸಮಸ್ಯೆ

ಬೆಂಗಳೂರು: ನಗರದಲ್ಲಿ ಮತ್ತೆ ಕಸ ವಿಲೇವಾರಿ ಸಮಸ್ಯೆ ಕಾಡುತ್ತಿದ್ದು, ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಮತ್ತೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ನಗರದಲ್ಲಿ ಸುರಿಯುತ್ತಿರುವ ಭಾರಿ ಮಳೆಯ ನಡುವೆಯೇ ಕಸವನ್ನು ವಿಲೇವಾರಿ ಮಾಡಲು ಹೋಗಿದ್ದ ಲಾರಿಗಳು ಗುಂಡಿಗಳಲ್ಲಿ ಹೂತು ಹೋಗಿದ್ದು, ನಾಲ್ಕೈದು ದಿನಗಳಿಂದಲೂ ಕಸದ ಲಾರಿಗಳು ನಗರಕ್ಕೆ ವಾಪಾಸಾಗಿಲ್ಲ. ಈ ಹಿನ್ನೆಲೆ ನಗರದೆಲ್ಲೆಡೆ ಕಸದ ವಿಲೇವಾರಿ ಸಮಸ್ಯೆಯುಂಟಾಗಿದೆ.

ಈ ನಡುವೆ ಕಸದ ಲಾರಿ ಮತ್ತು ಆಟೋ ಟಿಪ್ಪರ್ ಚಾಲಕರು ಹಾಗೂ ಸಹಾಯಕರು ತಮ್ಮ ಕೆಲಸವನ್ನು ಕಾಯಂ ಗೊಳಿಸುವಂತೆ ಒತ್ತಾಯಿಸಿ ಬಂದ್ ಮಾಡಲು ಮುಂದಾಗಿದ್ದಾರೆ. ಸೆಪ್ಟೆಂಬರ್ 15ರಿಂದ ಕೆಲಸವನ್ನು ಕಾಯಂಗೊಳಿಸುವಂತೆ ಒತ್ತಾಯಿಸಿ ಫ್ರೀಡಂ ಪಾರ್ಕ್ ನಲ್ಲಿ ಸತ್ಯಾಗ್ರಹ ಮಾಡಲು ಸಿದ್ಧತೆ ನಡೆಸಿದ್ದಾರೆ. ಕಸ ವಿಲೇವಾರಿ ಮಾಡುವ ಕಾರ್ಮಿಕರ ಈ ಪ್ರತಿಭಟನೆಯಿಂದ ಸುಮಾರು 4,000 ಕಸದ ಆಟೋ ಟಿಪ್ಪರ್‌ಗಳು ಮತ್ತು 700 ಕಸದ ಲಾರಿಗಳ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಳ್ಳಲಿದೆ ಎನ್ನುವ ಆತಂಕ ಶುರುವಾಗಿದೆ. ಈಗಾಗಲೇ ಈ ವಿಷಯದಲ್ಲಿ ಕಳೆದ ಬಾರಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದರು. ಆದರೆ, ಈ ಭರವಸೆಗಳು ಕೇವಲ ಮಾತಿನಲ್ಲೇ ಉಳಿದಿವೆ ಎಂದು ಕಾರ್ಮಿಕರ ಸಂಘಟನೆ ಆಕ್ರೋಶ ವ್ಯಕ್ತಪಡಿಸಿದ್ದು, ಬಿಬಿಎಂಪಿ ನಮ್ಮ ಆಗ್ರಹಗಳನ್ನು ಗಂಭೀರವಾಗಿ ಪರಿಗಣಿಸಿಲ್ಲ. ಖಾಯಂ ಕೆಲಸದ ಬೇಡಿಕೆಯನ್ನು ಈಡೇರಿಸದಿದ್ದರೆ, ನಾವು ಕಸದ ಸಂಗ್ರಹಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಗಣೇಶ ಹಬ್ಬಕ್ಕೆ ಡ್ಯಾನ್ಸ್ ಕುಸಿದು ಬಿದ್ದು ಸಾವು

ಚಿಕ್ಕಬಳ್ಳಾಪುರ: ಗಣೇಶ ವಿಸರ್ಜನೆ ವೇಳೆ ಡ್ಯಾನ್ಸ್ ಮಾಡುತ್ತಿದ್ದ ವ್ಯಕ್ತಿಯೊಬ್ಬ ಕುಸಿದು ಬಿದ್ದು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಬೋಧಗೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ 40 ವರ್ಷದ ಲಕ್ಷ್ಮಿಪತಿ ಮೃತ ವ್ಯಕ್ತಿ. ಅಂದಹಾಗೆ ಗ್ರಾಮದಲ್ಲಿ ಗಣೇಶ ವಿಸರ್ಜನೆ ವೇಳೆ ನಾಗವಲ್ಲಿ ಹಾಡಿಗೆ ನೃತ್ಯ ಮಾಡುತ್ತಿದ್ದ ಲಕ್ಷ್ಮಿಪತಿ ಏಕಾಏಕಿ ಕುಸಿದುಬಿದ್ದು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಕೃಷಿ ಕೆಲಸ ಮಾಡಿಕೊಂಡಿದ್ದ ಲಕ್ಷ್ಮಿಪತಿ ಹೆಂಡತಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮುಗಿಯದ ದಸರಾ ಉದ್ಘಾಟನೆ ವಿವಾದ

← ಮೊದಲಪುಟದಿಂದ

ಬಿಜೆಪಿಯವರದ್ದು ಡೋಂಗಿ ಮಾತು: ಈ ನಡುವೆ ಬಿಜೆಪಿ ನಾಯಕರ ಹೇಳಿಕೆಗೆ ಮೈಸೂರಿನಲ್ಲಿ ತಿರುಗೇಟು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿಯವರದ್ದು ಡೋಂಗಿ ಮಾತು. ಎಲ್ಲದರಲ್ಲಿಯೂ ರಾಜಕೀಯ ಹುಡುಕುತ್ತಾರೆ. ಅವರ ಮಾತಿಗೆಲ್ಲ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಬಿಜೆಪಿಯವರು ರಾಜಕೀಯವಾಗಿ ಮಾತನಾಡುತ್ತಾರೆಯೇ ಹೊರತಾಗಿ ಜಾತ್ಯತೀತವಾಗಿ ಮಾತನಾಡುವುದಿಲ್ಲ. ಜನ ಸಾಹಿತ್ಯ ಸಮ್ಮೇಳನದಲ್ಲಿ ಬಾನು ಮುಷ್ತಾಕ್ ಅವರು ಕನ್ನಡ ತಾಯಿಯ ಬಗ್ಗೆ ಗೌರವವಿಲ್ಲದೆ ಮಾತನಾಡಿದ್ದಾರೆ ಎಂದು ಬಿಜೆಪಿಯವರು ಹೇಳುತ್ತಾರೆ. ಆದರೆ ಬಾನು ಅವರಿಗೆ ಕನ್ನಡ ತಾಯಿಯ ಬಗ್ಗೆ ಗೌರವ, ಅಭಿಮಾನ, ಪ್ರೀತಿಯಿಲ್ಲದಿದ್ದರೆ ಕನ್ನಡದಲ್ಲಿ ಬರೆಯುತ್ತಿದ್ದರೇ? ಬಿಜೆಪಿಯವರು ಕುಂಟು ನೆಪವನ್ನು ಹುಡುಕುತ್ತಿದ್ದಾರೆ ಎಂದು ಟೀಕಿಸಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವೈದ್ಯರ ವರ್ಗ: ಆರೋಗ್ಯ ಇಲಾಖೆಗೆ ಅನಾರೋಗ್ಯ

← ಮೊದಲಪುಟದಿಂದ

ಆದರೆ ಈ ಬಾರಿ ಕೌನ್ಸೆಲಿಂಗ್ ಮೂಲಕ ಶೇ.15ರಷ್ಟು ವೈದ್ಯರ ವರ್ಗಾವಣೆಗೆ ಇಲಾಖೆ ಸರಕಾರದ ಅನುಮತಿ ಪಡೆದಿದೆ. ಕೌನ್ಸೆಲಿಂಗ್ ಮೂಲಕ ವರ್ಗಾವಣೆಯಿಂದ ದೀರ್ಘ ಕಾಲದಿಂದ ಒಂದೇ ಕಡೆ ಸೇವೆ ಸಲ್ಲಿಸಿದ ವೈದ್ಯರ ವರ್ಗಾವಣೆ ಮಾಡಲು ಅನುಕೂಲವಾದರೂ ಕೌಶಲ್ಯ ಮತ್ತು ತಜ್ಞತೆ ಅವಕಾಶ ಇಲ್ಲದ ಅನಗತ್ಯ ಸ್ಥಳಗಳಿಗೆ ವರ್ಗಾವಣೆ ನಡೆದಿದ್ದು, ಇಡೀ ವರ್ಗಾವಣೆ ಪ್ರಕ್ರಿಯೆ ವ್ಯರ್ಥವಾಗಿದೆ ಎನ್ನುವುದು ಹಿರಿಯ ವೈದ್ಯರ ಆರೋಪ. ಇಲಾಖೆ ಖಾಲಿ ಇರುವ ಹುದ್ದೆಗಳ ಭರ್ತಿಗೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳಬೇಕಿತ್ತು. ಮುಖ್ಯವಾಗಿ 30 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಸಿ ಅಂಡ್ ಆರ್ ನಿಯಮಗಳನ್ನು ರೂಪಿಸಬೇಕಿತ್ತು. ಬಾಕಿ ಉಳಿದಿರುವ ಬಡ್ತಿಯನ್ನು ನೀಡಲು ಸೇವಾ ಜೇಷ್ಠತಾ ಪಟ್ಟಿ ಸಿದ್ಧಪಡಿಸಬೇಕಿತ್ತು. ಆದರೆ ಇದಾವುದನ್ನೂ ಮಾಡದೇ ವರ್ಗಾವಣೆಗೆ ಹೆಚ್ಚು ಆಸಕ್ತಿ ವಹಿಸಿರುವುದು ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

ಏನೆಲ್ಲಾ ಎಡವಟ್ಟುಗಳಾಗಿವೆ ಗೊತ್ತಾ ?

ವರ್ಗಾವಣೆಯಿಂದ ತಾಂತ್ರಿಕವಾಗಿ ಸಮಸ್ಯೆ ಬಗೆಹರಿದಂತೆ ಕಂಡರೂ ವಾಸ್ತವದಲ್ಲಿ ಅನೇಕ ವೈದ್ಯರು, ಸಿಬ್ಬಂದಿ ತಮ್ಮ ಸೇವೆಗೆ ಸೂಕ್ತವಲ್ಲದ (ಹುದ್ದೆಗಳೇ ಇಲ್ಲದ, ತಜ್ಞತೆಗೆ ಕೆಲಸವಿಲ್ಲದ ಹಾಗೂ ತಜ್ಞತೆಯ ಸೇವೆ ಅಗತ್ಯವಿಲ್ಲದ ಕಡೆ ಗೆ) ಜಾಗಗಳಿಗೆ ವರ್ಗಾವಣೆಯಾಗಿದ್ದಾರೆ. ಅನೇಕ ಕಡೆ ವೈದ್ಯರ ತಜ್ಞತೆ ಇರುವುದೇ ಬೇರ. ಅವರಿಗೆ ನೀಡಿರುವ ಹುದ್ದೆಗಳೇ ಬೇರೆಯಾಗಿದೆ. ಇನ್ನು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ವರ್ಗಾವಣೆ ವೇಳೆ ಅವರ ಪೋಷಕರ ಆರೋಗ್ಯ ವಿಚಾರವನ್ನು ಪರಿಗಣಿಸದೆ ಅನೇಕ ಮಂದಿ ಕಲಸ ತ್ಯಜಿಸುವಂತಾಗಿದೆ. ಅನೇಕರು ವರ್ಗಾವಣೆಯಾಗಿರುವ ಜಾಗಕ್ಕೆ ಹೋಗಿ ವರದಿ ಮಾಡಿಕೊಂಡಿಲ್ಲ. ಕೆಲವೆಡೆ ವರದಿ ಮಾಡಿಕೊಂಡಿದ್ದರೂ ಸೇವೆಗೆ ಹೋಗದೆ ಕೋರ್ಟ್ ಗಳಲ್ಲಿ ತಡೆಯಾಜ್ಞೆ ತರಲು ಅಲೆಯುತ್ತಿದ್ದಾರೆ. ಅಚ್ಚರಿ ಎಂದರೆ ಕೌನ್ಸಿಲಿಂಗ್ ಹಾಜರಾಗಿದ್ದವರ ಪೈಕಿ ಸುಮಾರು 120 ಮಂದಿ ಹಿರಿಯ ತಜ್ಞ ವೈದ್ಯರು ಸ್ವಯಂ ನಿವೃತ್ತಿ ಕೇಳಿದ್ದು ಅವರು ಖಾಸಗಿ ಆಸ್ಪತ್ರೆಗಳತ್ತು ಮುಖ ಮಾಡಿದ್ದಾರೆ. ಕಾರಣ ಅವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ 5ಲಕ್ಷ ರು. ವರೆಗೂ ವೇತನ ಲಭಿಸುವ ಸಾಧ್ಯತೆ ಇದೆ. ಹೀಗಾಗಿ ಸರಕಾರ ಹೊರಗುತ್ತಿಗೆ ವೈದ್ಯರನ್ನು ಹುಡುಕುತ್ತಿದ್ದು, ಇದಕ್ಕೆ ಸೂಕ್ತ ಸ್ಪಂದನೆ ಸಿಗುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಒಂದು ಕಡೆ ತಜ್ಞ ವೈದ್ಯರು ಸಿಗುತ್ತಿಲ್ಲ ಎನ್ನುವ ಕಾರಣಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಇರುವ ತಜ್ಞರನ್ನೇ ಬಳಸಿಕೊಳ್ಳಲು ನಿವೃತ್ತಿ ವಯೋಮಿತಿಯನ್ನು 60 ವರ್ಷದಿಂದ 65 ವರ್ಷಕ್ಕೆ ಏರಿಸಿದೆ. ಆದರೆ ಆರೋಗ್ಯ ಇಲಾಖೆಯಲ್ಲಿ ತಜ್ಞರು ಸೇವೆಗೂ ಮುನ್ನ ಬಿಡುವಂತೆ ಮಾಡುವಂತಾಗಿದೆ ಎಂದು ವೈದ್ಯರು ಹೇಳುತ್ತಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂ. ಕಾನಿಇಂ/ಸ.ಕಾ.ಇಂ(ಕ)/ಯೋ.ವಿ.ಕೋ/ಎಫ್-25/25-26/1490 ದಿನಾಂಕ : 30.08.2025

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ತಿಳುವಳಿಕೆಗೆ, ಈ ಮೂಲಕ ಪ್ರಕಟಿಸುವುದೇನೆಂದರೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸಾರ್ವಜನಿಕ ವಿದ್ಯುತ್ ಬಳಕೆದಾರರ, ವಿಶೇಷವಾಗಿ ರೈತರ ಹಿತದೃಷ್ಟಿಯಿಂದ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ನೂತನ 66/11ಕೆವಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಈಗಾಗಲೇ ಮಾಲೂರು ತಾಲ್ಲೂಕಿನಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿದ್ದು, ಈ ಎಲ್ಲಾ ಹೆಚ್ಚುವರಿ ವಿದ್ಯುತ್ ಹೊರೆಯನ್ನು ಹಾಲಿ ಇರುವ ವಿದ್ಯುತ್ ಉಪಕೇಂದ್ರಗಳು ಪೂರೈಸಲು ಹಾಗೂ ಸಮರ್ಪಕವಾದ ರೀತಿಯಲ್ಲಿ ವಿದ್ಯುತ್ ವಿತರಣೆ ಮಾಡಲು ಕಷ್ಟಕರವಾಗುತ್ತಿದೆ. ಆದುದರಿಂದ ನೂತನವಾಗಿ ಬರುವ ಗೃಹಬಳಕೆದಾರರಿಗೆ ಹಾಗೂ ರೈತರಿಗೆ ಸಮರ್ಪಕ ರೀತಿಯ ಉತ್ತಮ ಗುಣಮಟ್ಟದ ವಿದ್ಯುತ್‌ನ್ನು ನೀಡಲು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಉನ್ನತೀಕರಿಸಲು 66/11ಕೆವಿ ವಿದ್ಯುತ್ ಉಪಕೇಂದ್ರದ ಸ್ಥಾಪನೆಯು ಅತ್ಯವಶ್ಯಕವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಉಪಕೇಂದ್ರವನ್ನು ಸ್ಥಾಪಿಸುವ ಪ್ರಯುಕ್ತ ನಿಗಮವು ಸುಮಾರು 2.5 ಎಕರೆ ಸೂಕ್ತ ಜಮೀನನ್ನು ಖರೀದಿ ಮಾಡಲು ಉದ್ದೇಶಿಸಿದೆ. ಸದರಿ ಜಮೀನು ಕನಿಷ್ಠ 60 ಮೀ (180 ಅಡಿ) ಅಗಲವಿದ್ದು ಮುಖ್ಯ ರಸ್ತೆಯಿಂದ ಸಂಪರ್ಕವಿದ್ದು, ಬೆಟ್ಟ ಬಂಡೆಗಳಿಂದ ಹಾಗೂ ಯಾವುದೇ ವ್ಯಾಜ್ಯ/ದಾವೆಗಳಿಂದ ಮುಕ್ತವಾಗಿರಬೇಕು.

ಸದರಿ ಜಮೀನಿಗೆ ನಿಯಮಗಳಂತೆ ಪಾವತಿಸಬೇಕಾದ ಜಮೀನಿನ ಹಣವನ್ನು ಮಾನ್ಯ ಜಿಲ್ಲಾಧಿಕಾರಿಗಳು ಕೋಲಾರರವರು ಸದರಿ ಜಮೀನಿಗೆ ದರವನ್ನು ನಿಗದಿಪಡಿಸಿದ ನಂತರ ಸದರಿ ಭೂ ಮಾಲೀಕರಿಗೆ ನಿಗಮದಿಂದ ಪಾವತಿಸಲಾಗುವುದು ಎಂದು ತಿಳಿಸುತ್ತಾ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಜಮೀನನ್ನು ಮಾರಾಟ/ ವಿಕ್ರಯ ಮಾಡಲು ಆಸಕ್ತಿಯಿದ್ದಲ್ಲಿ, ಈ ಕೆಳಕಂಡ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಕಛೇರಿಯ ವಿಳಾಸ : ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಯೋಜನೆ ವಿಭಾಗ, ಕವಿಪ್ರನಿನಿ, ಕೋಲಾರ. ದೂರವಾಣಿ ಸಂಖ್ಯೆ:9448365224

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಯೋಜನೆ ವಿಭಾಗ, ಕವಿಪ್ರನಿನಿ, ಕೋಲಾರ

ಧರ್ಮಾಂಧರು ಮಾತ್ರ ಬಾನು ಮುಷ್ತಾಕ್‌ಗೆ ವಿರೋಧಿಸುತ್ತಾರೆ: ಸಿಎಂ ಸಿದ್ದರಾಮಯ್ಯ

ದಸರಾಗೆ ಧರ್ಮದ ಲೇಪನ ಬೇಡ

ಮೈಸೂರು: ದಸರಾ ಉದ್ಘಾಟಿಸಲು ಬೂಕರ್ ವಿಜೇತೆ ಬಾನು ಮುಷ್ತಾಕ್ ಆಯ್ಕೆಗೆ ಬಿಜೆಪಿ ನಾಯಕರು ವಿರೋಧ ಮಾಡುತ್ತಿರುವುದಕ್ಕೆ ಸಿಎಂ ಸಿದ್ದರಾಮಯ್ಯ ಕಿಡಿಕಾರಿದರು.

ಈ ಕುರಿತು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ದಸರಾ ಸಾಂಸ್ಕೃತಿಕ ಹಬ್ಬ. ಇದು ಧರ್ಮಾತೀತವಾದ ಹಬ್ಬ. ಇದು ಎಲ್ಲಾ ಜಾತಿ ಧರ್ಮಕ್ಕೆ ಸೇರಿದ್ದು. ನಿಸಾರ್ ಅಹಮದ್ ಕೂಡ ದಸರಾ ಉದ್ಘಾಟನೆ ಮಾಡಿದ್ದಾರೆ. ಟಿಪ್ಪು ಹೈದರಾಲಿ ಕೂಡ ದಸರಾ ನಡೆಸಿದ್ದಾರೆ. ದಿವಾನ್ ಮಿರ್ಜಾ ಇಸ್ಮಾಯಿಲ್ ಕೂಡ ದಸರಾ ನಡೆಸಿದ್ದಾರೆ. ಇದಕ್ಕೆ ಧರ್ಮದ ಲೇಪನ ಬಳಿಯುವುದು ಸರಿಯಲ್ಲ ಎಂದರು.

ಧರ್ಮಾಂಧರು ಮಾತ್ರ ಬಾನು ಮುಷ್ತಾಕ್ ಅವರನ್ನು ಹೆಸರನ್ನು ವಿರೋಧಿಸುತ್ತಾರೆ. ಕನ್ನಡಾಂಬೆಯ ಬಗ್ಗೆ ಬಾನು ಮುಷ್ತಾಕ್ ನೀಡಿರುವ ಹಳೆಯ ಹೇಳಿಕೆಗೂ ಇದಕ್ಕೂ ಏನು ಸಂಬಂಧ. ಬಿಜೆಪಿಯವರು ಕುಂಟ ನೆಪ ಹುಡುಕುತ್ತಿದ್ದಾರೆ ಅಷ್ಟೇ. ಯಾವತ್ತೊ ಏನೋ ಹೇಳಿದ್ದಾರೆ ಎಂದು ಅದನ್ನು ಇಲ್ಲಿಗೆ ಲಿಂಕ್ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಧರ್ಮಸ್ಥಳ ಪ್ರಕರಣ ತನಿಖಾ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಈ ಕುರಿತು ಉನ್ನತಮಟ್ಟದ ತನಿಖೆಯ ಅಗತ್ಯತೆ ಇಲ್ಲ. ಧರ್ಮಸ್ಥಳದ ಮೇಲೆ ಅನುಮಾನದ ತೂಗುಕತ್ತಿ ಇದೆ. ಅದನ್ನು ನಿವಾರಿಸಲು ತನಿಖೆ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಎಸ್‌ಐಟಿ ತನಿಖೆಯನ್ನು ಧರ್ಮಾಧಿಕಾರಿಗಳೇ ಸ್ವಾಗತ ಮಾಡಿದ್ದಾರೆ. ಬಿಜೆಪಿ ಕೂಡ ಸ್ವಾಗತ ಮಾಡಿತ್ತು. ತನಿಖೆ ನಡೆಯುವ ಈ ಹಂತದಲ್ಲಿ ಧರ್ಮದ ರ‍್ಯಾಲಿ ಮಾಡಿದರೆ ಅದರಲ್ಲಿ ಅರ್ಥ ಇದೆಯಾ?. ಬಿಜೆಪಿ ರಾಜಕೀಯಕ್ಕೆ ಈ ರ‍್ಯಾಲಿ ಮಾಡುತ್ತಿದೆ. ಬಿಜೆಪಿಯವರು ಡೋಂಗಿಗಳು. ಡೋಂಗಿಗಳು ಮಾತ್ರ ತಮಗೆ ಬೇಕಾದಾಗ ಬೇಕಾದ ರೀತಿ ಮಾತನಾಡುತ್ತಾರೆ ಎಂದು ಟೀಕಿಸಿದರು.

ಬೆರಳೆಣಿಕೆ ಮಂದಿಗೆ ಮಾತ್ರ ಬೂಕರ್ ಪ್ರಶಸ್ತಿ ಬಂದಿದೆ. ನಾನೇ ಬಾನು ಮುಷ್ತಾಕ್ ಅವರ ಹೆಸರನ್ನು ಆಯ್ಕೆ ಮಾಡಿದ್ದೇನೆ. ಉದ್ಘಾಟಕರು ದನ ತಿನ್ನುವುದನ್ನ ಬಿಜೆಪಿಯವರು ನೋಡಿದ್ದಾರಾ? ಅವರು ವಿರೋಧಿಸಲೇಬೇಕೆಂದು ವಿರೋಧ ಮಾಡುತ್ತಿದ್ದಾರೆ.

-ಸಿಎಂ ಸಿದ್ದರಾಮಯ್ಯ

ಸಂವಿಧಾನದಲ್ಲಿ ಉಲ್ಲೇಖಿಸಿಲ್ಲ

ದಸರಾ ಉದ್ಘಾಟಕರ ಪರ ವಿರೋಧದ ಚರ್ಚೆ ವಿಚಾರ ಕುರಿತು ಮೈಸೂರಿನಲ್ಲಿ ಮಾತನಾಡಿದ ಸಚಿವ ಸಂತೋಷ್ ಲಾಡ್, ಬಾನು ಮುಷ್ತಾಕ್ ಅವರನ್ನು ಕರೆಯಬಾರದು ಎಂದು ಸಂವಿಧಾನದಲ್ಲಿ ಇಲ್ಲ. ಇವರು ರಾಮಮಂದಿರ ಉದ್ಘಾಟಿಸಿದಾಗ ಮಾಡಿದಾಗ ಪೂಜೆ ಮಾಡಿದ್ದು ಯಾರು? ರಾಮಮಂದಿರ ಓಪನ್ ವೇಳೆ ಪ್ರೊಟೋಕಾಲ್ ಉಲ್ಲಂಘನೆ ಆಗಿಲ್ವಾ?. ಬ್ರಾಹ್ಮಣ ವ್ಯವಸ್ಥೆ ಬಿಟ್ಟು ನಾವೇ ಮಾಡಲಿಕ್ಕೆ ಆಗುತ್ತದಾ? ನಾನು ಕೂಡ ಹಿಂದೂ. ನಮ್ಮ ಮನೆಗಳಲ್ಲಿ ಯಾವುದೇ ಪೂಜೆ ಮಾಡಿದರೆ ಯಾರು ಮಾಡುತ್ತಾರೆ ಎಂದು ಪ್ರಶ್ನಿಸಿದರು.

ತನಿಖೆಯಲ್ಲಿ ಮಧ್ಯ ಪ್ರವೇಶ ಇಲ್ಲ

ಎಸ್‌ಐಟಿ ನಾವು ತನಿಖೆಯಲ್ಲಿ ಮಧ್ಯ ಪ್ರವೇಶ ಮಾಡುವುದಿಲ್ಲ. ಯಾವ ಒತ್ತಡವನ್ನು ಸಹ ನಾವು ತನಿಖೆ ಮೇಲೆ ಹೇರಿಲ್ಲ, ತನಿಖೆಗೆ ಸಮಯ ನಿಗದಿ ಮಾಡಿಲ್ಲ. ಯಾರು ಏನು ಬೇಕಾದರೂ ರ‍್ಯಾಲಿ ಮಾಡಿಕೊಳ್ಳಲಿ. ನಮಗೂ ಅದಕ್ಕೂ ಸಂಬಂಧ ಇಲ್ಲ. ಬಿಜೆಪಿಯವರಿಗೆ ಧರ್ಮವೂ ಗೊತ್ತಿಲ್ಲ, ಜಾತಿಯೂ ಗೊತ್ತಿಲ್ಲ. ಬರೀ ರಾಜಕಾರಣ ಮಾಡುತ್ತಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ಆರೋಪಿಸಿದರು.

ಗದಗ ಎಸ್ಪಿ ರೋಹನ್ ಜಗದೀಶ್, ನರಗುಂದ ಡಿವೈಎಸ್ಪಿ ಪ್ರಭು ಭೇಟಿ ನೀಡಿ ಮೆಚ್ಚುಗೆ ವ್ಯಕ್ತ

ಮಸೀದಿಯಲ್ಲಿ ಗಣೇಶ ಪ್ರತಿಷ್ಠಾಪನೆ ಯುವಕರಿಂದ ಭಾವೈಕ್ಯತೆ ಸಂದೇಶ



ಗದಗ ಜಿಲ್ಲೆಯ ರೋಣ ತಾಲೂಕಿನ ನಂದಿವಾಡ ಗ್ರಾಮದಲ್ಲಿ ಮುಸ್ಲಿಮ್ ಯುವಕರು ಮಸೀದಿಯಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿರುವುದು.

ಗದಗ: ಮಸೀದಿಯೊಳಗೆ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸುವ ಮೂಲಕ ಭಾವೈಕ್ಯತೆ ಮೆರೆದ ಘಟನೆ ಜಿಲ್ಲೆಯ ರೋಣ ತಾಲೂಕಿನ ಸಂದಿಗವಾಡ ಗ್ರಾಮದಲ್ಲಿ ಕಂಡುಬಂದಿದೆ. ಜಾತಿ, ಧರ್ಮಗಳ ಹೆಸರಿನಲ್ಲಿ ಕಿತ್ತಾಟ ಮಾಡುವವರಿಗೆ ಸಂದಿಗವಾಡ ಗ್ರಾಮಸ್ಥರು ಮಾದರಿಯಾಗಿದೆ. ಕಳೆದ 3 ವರ್ಷಗಳಿಂದ ಸಂದಿಗವಾಡದ ಮಸೀದಿಯಲ್ಲಿ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುತ್ತಾ ಬಂದಿದ್ದಾರೆ. ಸ್ವತಃ ಮುಸ್ಲಿಮ್ ಯುವಕರೇ ಸೇರಿ ಗಣೇಶ ಮೂರ್ತಿಯನ್ನು ತಂದು ಮಸೀದಿಯಲ್ಲಿ ಪ್ರತಿಷ್ಠಾಪಿಸಿದ್ದು ಗಮನಾರ್ಹವಾಗಿದೆ. ಮುಸ್ಲಿಮ್ ಯುವಕರ ಜತೆಗೆ ಹಿಂದುಗಳು ಸೇರಿ ಒಟ್ಟಾಗಿ ಗಣೇಶನ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಳ್ಳುವ ಮೂಲಕ ಸಾಮರಸ್ಯ, ಭಾವೈಕ್ಯತೆಯಿಂದ ಗಣೇಶ ಹಬ್ಬವನ್ನು ಆಚರಿಸಿದ್ದಾರೆ. ಮಸೀದಿಯಲ್ಲಿನ ವಿನಾಯಕನಿಗೆ ಮುಸ್ಲಿಂ ಯುವಕರೇ ಮೊದಲ ಪೂಜೆಯನ್ನು ಸಲ್ಲಿಸಿದ್ದಾರೆ. ಮಸೀದಿಯ ವಿಘ್ನೇಶ್ವರನನ್ನು ನೋಡಲು ಗದಗ ಎಸ್ಪಿ ರೋಹನ್ ಜಗದೀಶ್, ನರಗುಂದ ಡಿವೈಎಸ್ಪಿ ಪ್ರಭು, ರೋಣ ಸಿಪಿಐ ಸೇರಿದಂತೆ ಅನೇಕರು ಆಗಮಿಸಿದ್ದರು.

ಅಪ್ರಾಪ್ತೆ ಜತೆ ಗ್ರಾ.ಪಂಚಾಯಿತಿ ಅಧ್ಯಕ್ಷ ಮದುವೆ: ಎಫ್‌ಐಆರ್

ಬೆಳಗಾವಿ: ಅಪ್ರಾಪ್ತೆಯನ್ನು ಗ್ರಾಮ ಪಂಚಾಯತ ಅಧ್ಯಕ್ಷ ವಿವಾಹವಾದ ಘಟನೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಬಸಾಪುರ ಗ್ರಾಮದಲ್ಲಿ ನಡೆದಿದ್ದು, ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ.

- ಬೆಳಗಾವಿಯ ಹುಕ್ಕೇರಿ ತಾಲೂಕಿನಲ್ಲಿ ಘಟನೆ
- ಆರೋಪಿ ವಿರುದ್ಧ ಪ್ರಕರಣ ದಾಖಲು

ಬಸಾಪುರ ಗ್ರಾಪಂ ಅಧ್ಯಕ್ಷ ಭೀಮಶಿ ಕಾಲಿಮಣಿ ಎಂಬಾತನಿಂದ ಈ ಕೃತ್ಯ ನಡೆದಿದೆ. ಹುಕ್ಕೇರಿ ತಾಲೂಕಿನ ಯಮಕನಮರಡಿ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ. 2023 ನವೆಂಬರ್ 5 ರಂದು ಅಪ್ರಾಪ್ತೆ ಜತೆಗೆ ಭೀಮಶಿ ಕಾಲಿಮಣಿ ವಿವಾಹವಾಗಿದ್ದ. ಬಂಧನದ ಭೀತಿಯಿಂದ ತಪ್ಪಿಸಿಕೊಳ್ಳಲು ಗ್ರಾಪಂ ಅಧ್ಯಕ್ಷ ಭೀಮಶಿ ಕಳ್ಳಾಟ ನಡೆಸುತ್ತಿದ್ದ. ಬಂಧನದ ಭೀತಿಯಿಂದ ಪತ್ನಿಯ ನಕಲಿ ಜನನ ಪ್ರಮಾಣ ಪತ್ರ ವೈರಲ್ ಮಾಡಿದ್ದ. ಶಾಲಾ ದಾಖಲಾತಿ ಪತ್ರದ ಜೊತೆಗೆ ಹೊಸ ಜನನ ಪ್ರಮಾಣದ ದಾಖಲೆ ಹೋಲಿಕೆ ಮಾಡಿದ ಅಧಿಕಾರಿಗಳು ಈ ವೇಳೆ ಗ್ರಾಪಂ ಅಧ್ಯಕ್ಷ ಭೀಮಶಿ ಕಾಲಿಮಣಿ ಬಾಲ್ಯ ವಿವಾಹ ಆಗಿರುವುದು ದೃಢವಾಗಿದೆ. ಕೃತ್ಯ ಎಸಗಿರುವುದು ದೃಢವಾದ ಹಿನ್ನೆಲೆಯಲ್ಲಿ ಗ್ರಾಪಂ ಅಧ್ಯಕ್ಷನ ವಿರುದ್ಧ ಪೋಕ್ಸೋ ಕೇಸ್ ದಾಖಲಾಗಿದೆ.

ಹುಕ್ಕೇರಿ ತಾಲೂಕಿನ ಬಸಾಪುರ ಗ್ರಾಮ ಪಂಚಾಯತಿ ಅಧ್ಯಕ್ಷ ಅಪ್ರಾಪ್ತೆಯನ್ನು ವಿವಾಹವಾಗಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮೂಲಕ ಈಗಾಗಲೆ ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಕಾನೂನು ಕ್ರಮ ಮುಂದುವರಿಯಲಿದೆ.

- ಲಕ್ಷ್ಮೀ ಹೆಬ್ಬಾಳಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ದೊಡ್ಡಮ್ಮದೇವಿಯ ಸ್ಥಿರಬಿಂಬ ಪ್ರತಿಷ್ಠಾಪನೆ | ವಿವಿಧ ಮಠಾಧೀಶರು ಭಾಗಿ | ನಿಲೇಶ್ ಕಾಯಕಲ್ಪ

ಯುವ ಜನತೆ ಧಾರ್ಮಿಕ ಪದ್ಧತಿ ಉಳಿಸಬೇಕಿದೆ

ತುಮಕೂರು: ಧಾರ್ಮಿಕತೆಯನ್ನು ಉಳಿಸುವಲ್ಲಿ ಯುವ ಜನತೆ ಶ್ರಮವಹಿಸಬೇಕು ಎಂದು ಶ್ರೀರಂಗ ಪಟ್ಟಣದ ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ತಿಳಿಸಿದರು.

ಕೊರಟಗೆರೆ ತಾಲೂಕಿನ ಕೋಳಾಲ ಹೋಬಳಿ ಕರಿದುಗ್ಗನಹಳ್ಳಿ ಮತ್ತು ಹನುಮಂತಯ್ಯನಪಾಳ್ಯ ಗ್ರಾಮದೇವತೆ ಶ್ರೀದೊಡ್ಡಮ್ಮ ದೇವಿ ದೇವಾಲಯದ ಆವರಣದಲ್ಲಿ ಭಾನುವಾರ ನಡೆದ ದೊಡ್ಡಮ್ಮದೇವಿಯ ಸ್ಥಿರಬಿಂಬ ಪ್ರತಿಷ್ಠಾಪನಾ ಕುಂಭಾಭಿಷೇಕ ಮಹೋತ್ಸವ ಮತ್ತು ಚಂಡಿಕಾ ಹೋಮ ಧಾರ್ಮಿಕ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು. ನಾವು ದೇವರಿಗೆ ವಸ್ತುರೂಪದಲ್ಲಿ ಏನನ್ನು ಕೊಡಲು ಸಾಧ್ಯವಿಲ್ಲ. ನಿರ್ಮಲ ಭಕ್ತಿಯ ರೂಪದಲ್ಲಿ ಭಗವಂತನ ಸೇವೆ ಮಾಡಬೇಕು. ಈ ನಿಟ್ಟಿನಲ್ಲಿ ಯುವ ಮುಖಂಡ ನೀಲೇಶ್ ಅವರ ಸೇವೆ ಶ್ಲಾಘನೀಯ ಎಂದರು. ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ದೊಡ್ಡಮ್ಮ ದೇವಿ ದೇವಸ್ಥಾನವು ಧಾರ್ಮಿಕ ಕೇಂದ್ರವಾಗಿದ್ದು, ಜನರ ನಂಬಿಕೆ-ಭಕ್ತಿ, ಸಂಸ್ಕೃತಿ-ಸಂಪ್ರದಾಯಗಳನ್ನು ಬಲಪಡಿಸುವ ಕಾರ್ಯದಲ್ಲಿ ಮುಂಚೂಣಿಯಲ್ಲಿರುತ್ತದೆ ಎಂದರು. ಬೆಳ್ಳಾವಿಯ ಕಾರದ ಮಠದ ವೀರಬಸವಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿಯೇ ಹನುಮಂತನಯ್ಯನಪಾಳ್ಯ ಒಂದು ಅದೃಷ್ಟದ ಗ್ರಾಮ. ನಿರ್ಮಾಣವಾದಂತಹ ಶಕ್ತಿದೇವತೆ ಕಾವಲಮ್ಮ ದೇವಾಲಯ ನೂರಾರು ಸ್ವಾಮೀಜಿಗಳ ಸಾನಿಧ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಕನ್ನಡ ಪ್ರಭ ಸಂಪಾದಕ ರವಿ ಹೆಗಡೆ ಮಾತನಾಡಿ, ಕುಗ್ರಾಮದಿಂದ ದುಬೈವರೆಗೆ ಉದ್ಯಮಿ ಎಚ್.ಪಿ.ನೀಲೇಶ್ ಪಯಣ ಪ್ರಶಂಸನೀಯ. ನಾವು ಎಷ್ಟೆತ್ತರ ಬೆಳೆದರೂ ಹುಟ್ಟೂರನ್ನು ಮರೆಯಬಾರದು ಎನ್ನುವುದಕ್ಕೆ ದೇವಾಲಯ ನಿರ್ಮಾಣವೇ ಒಂದು ಸಾಕ್ಷಿ. ಈ ದೇವಾಲಯ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ ಬೆಳಗಬೇಕು ಎಂದರು. ಪತ್ರಕರ್ತೆ ಭಾವನಾ ಬೆಳಗೆರೆ ಮಾತನಾಡಿ, ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ದೇವರು ಇರುತ್ತಾನೆ ನಾವು ನಮ್ಮ ಮನಸ್ಸನ್ನು ತೆರೆದು ನೋಡಿದರೆ ದೇವರು ಕಾಣಿಸುತ್ತಾನೆ. ನಮಗಿಂತ ದೇವರಿಗೆ ಶಕ್ತಿಯಿದೆ ಎನ್ನುವುದನ್ನು ನಾವು ಮರೆಯಬಾರದು. ಗ್ರಾಮದಲ್ಲಿ ಧಾರ್ಮಿಕತೆಯನ್ನು ಉಳಿಸುವಲ್ಲಿ ಉದ್ಯಮಿ ನೀಲೇಶ್ ಅವರ ಶ್ರಮ ಸಾಕಷ್ಟಿದೆ ಎಂದರು. ಕಾರ್ಯಕ್ರಮದಲ್ಲಿ ಸಿದ್ದರಬೆಟ್ಟದ ಶ್ರೀವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಎಲೆರಾಂಪುರ ಡಾ.ಹನುಮಂತನಾಥ ಸ್ವಾಮೀಜಿ,ನರಸೀಪುರ ವಿರಕ್ತಮಠದ ಶ್ರೀಗೌರಿಶಂಕರ ಸ್ವಾಮೀಜಿ, ಅಟವಿ ಮಠದ ಚೆನ್ನಬಸವೇಶ್ವರ ಸ್ವಾಮೀಜಿ, ಬಸವ ರಮಾನಂದ ಸ್ವಾಮೀಜಿ, ಕುಣಿಗಲ್ ಹರಿಶಂಕರ ಮಠದ ಸಿದ್ದರಾಮ ಚೈತನ್ಯ ಸ್ವಾಮೀಜಿ, ಶಾಸಕರಾದ ಜ್ಯೋತಿ ಗಣೇಶ್, ಸುರೇಶ ಗೌಡ ಸೇರಿ ಹಲವರಿದ್ದರು.

ಕಳಸ ಪ್ರತಿಷ್ಠಾಪನೆ ಮಹೋತ್ಸವ ಉದ್ಘಾಟನೆಯನ್ನು ಡಾ.ಹನುಮಂತನಾಥ ಸ್ವಾಮೀಜಿ, ಸಿದ್ದರಬೆಟ್ಟದ ಶ್ರೀ ವೀರಭದ್ರಶಿವಾಚಾರ್ಯ ಸ್ವಾಮೀಜಿ, ಕನ್ನಡ ಪ್ರಭ ಸಂಪಾದಕ ರವಿ ಹೆಗಡೆ, ಉದ್ಯಮಿ ಎಚ್.ಪಿ.ನಿಲೇಶ್ ಇದ್ದರು.

ಹಣ ಮತ್ತು ಸೌಲಭ್ಯ ಇದ್ದ ಮಾತ್ರಕ್ಕೆ ದೇವಾಲಯ ನಿರ್ಮಿಸಲು ಸಾಧ್ಯವಿಲ್ಲ, ಅದಕ್ಕೆ ದೇವಿಯ ಅನುಗ್ರಹ ಕೂಡ ಬೇಕಿದೆ. ಉದ್ಯಮಿ ನೀಲೇಶ್ ಮತ್ತು ಶಶಿಧರ್ ದುಬೈನಲ್ಲಿದ್ದರೂ ಉದ್ಯಮದ ಜತೆಗೆ ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸಹಕಾರ ನೀಡುತ್ತಾ ಸಂಸ್ಕೃತಿ, ಆಚರಣೆ ಮರೆಯದಿರುವುದು ಖುಷಿಯ ವಿಚಾರ.

-ಪರಮೇಶ್ವರ್, ಗೃಹ ಸಚಿವ

ನಮ್ಮ ಗ್ರಾಮದಲ್ಲಿ ಕಲ್ಲುಗಳಿಗೆ ದೇವರ ರೂಪವನ್ನು ಕೊಟ್ಟಿದ್ದೇವೆ. ಈಗ ಇದರ ಶಕ್ತಿಪೀಠವಾಗಿದೆ, ದೇವಾಲಯದ ಪ್ರತಿಯೊಂದು ವಸ್ತುವೂ ಸಹ ಒಂದೊಂದರ ಪ್ರತೀತಿಯಾಗಿದ್ದು ಗ್ರಾಮವಸ್ಥರೆಲ್ಲರೂ ಧಾರ್ಮಿಕ ಸಂಸ್ಕೃತಿಯನ್ನು ಕಾಪಾಡಬೇಕು.

- ಎಚ್.ಪಿ ನಿಲೇಶ್, ಉದ್ಯಮಿ

ವಿವಿಧ ಧಾರ್ಮಿಕ ಕಾರ್ಯಕ್ರಮ

ನೇತ್ರೋಲನ, ಪ್ರಾಣ ಪ್ರತಿಷ್ಠಾಪನೆ, ಕಲಶ ಪೂಜೆ, ಮಹಾ ಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ, ಚಂಡಿಕಾಹೋಮ, ತೀರ್ಥ ಪ್ರಸಾದ ವಿನಿಯೋಗ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ಸಾವಿರಾರು ಭಕ್ತರ ಸಮಕ್ಷಮದಲ್ಲಿ ನಡೆದವು.

ಚರ್ಚೆ ಹುಟ್ಟುಹಾಕಿದ ಕೊಲಿಜಿಯಂ ತೀರ್ಮಾನ

← ಮೊದಲಪುಟದಿಂದ

ತಪ್ಪಲ್ಲ, ಆದರೆ ಉದ್ದೇಶ ಬಹಿರಂಗವಾಗಬೇಕು: ಆಗಸ್ಟ್ 30ರಂದು ಹಿರಿಯ ವಕೀಲ ವಿಕಾಸ್ ಸಿಂಗ್ ಅಧ್ಯಕ್ಷರಾಗಿರುವ ಸುಪ್ರೀಂಕೋರ್ಟ್ ಬಾರ್ ಅಸೋಸಿ ಯೇಷನ್ ಕೂಡ ಈಚಿನ ನೇಮಕಾತಿಗಳು ನಮಗೆ ಸಮಾಧಾನ ತಂದಿಲ್ಲ ಎಂದು ಸಿಜೆಐ ಬಿ.ಆರ್. ಗವಾಯಿ ಅವರಿಗೆ ಪತ್ರ ಬರೆದಿದ್ದು, ಸುಪ್ರೀಂಕೋರ್ಟ್‌ನಲ್ಲಿ ಸಮಾನ ಮಹಿಳಾ ಪ್ರಾತಿನಿಧ್ಯತೆಗೆ ಒತ್ತು ನೀಡಲಾಗಿಲ್ಲ. ನ್ಯಾಯಾಂಗದ ಮೇಲಿನ ವಿಶ್ವಾಸಾರ್ಹತೆ ಉಳಿಸಿಕೊಳ್ಳಲು ಲಿಂಗ ಸಮಾನತೆ ಅತ್ಯಗತ್ಯ ಎಂದು ಹೇಳಿದೆ. ಆದರೆ, ನ್ಯಾ. ಪಾಂಚೋಲಿ ನೇಮಕದ ಬಗ್ಗೆ ಪತ್ರದಲ್ಲಿ ಯಾವುದೇ ಉಲ್ಲೇಖ ಇಲ್ಲ.

1998ರ Third Judges case ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಪ್ರಕಾರ, ಕೊಲಿಜಿಯಂನ ಇಬ್ಬರು ನ್ಯಾಯಮೂರ್ತಿಗಳು ನಿರ್ದಿಷ್ಟ ವ್ಯಕ್ತಿಯ ನೇಮಕದ ವಿರುದ್ಧ ಬಲವಾದ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದರೆ, ಅಂತಹ ನೇಮಕವನ್ನು ಮುಂದುವರಿಸಲು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಮುಂದಾಗಬಾರದು. ಆದರೆ, ನ್ಯಾ. ಪಾಂಚೋಲಿ ವಿಚಾರದಲ್ಲಿ ಕೊಲಿಜಿಯಂ 4:1ರ ಆಧಾರದಲ್ಲಿ ನಿರ್ಧಾರ ಮಾಡಿರುವುದರಿಂದ ಈ ನಿರ್ಣಯಕ್ಕೆ ಕಾನೂನಾತ್ಮಕವಾದ ಅನುಮೋದನೆ ಇರುತ್ತದೆ. ವಾಸ್ತವದಲ್ಲಿ, ನ್ಯಾಯಮೂರ್ತಿ/ನ್ಯಾಯಾಧೀಶರ ನೇಮಕಕ್ಕೆ ಸೇವಾ ಹಿರಿತನ ಮಾನದಂಡವೇನಲ್ಲ ಮತ್ತು ಹಿರಿಯರನ್ನು ಬಿಟ್ಟು ಕಿರಿಯರನ್ನೇಕೆ ನೇಮಕ ಮಾಡಿದ್ದೀರಿ ಎಂದು ಪ್ರಶ್ನಿಸುವುದು ಸೂಕ್ತವೂ ಅಲ್ಲ. ಆದರೆ, 57 ಉಳಿದ ಹಿರಿಯ ನ್ಯಾಯಾಧೀಶರನ್ನು ಬಿಟ್ಟು ನ್ಯಾ. ಪಾಂಚೋಲಿಯವರನ್ನೇ ಸುಪ್ರೀಂಕೋರ್ಟಿಗೆ ತರಬೇಕು ಎಂಬುದರ ಹಿಂದಿನ ಉದ್ದೇಶವೇನು ಎಂಬುದನ್ನು ಕೊಲಿಜಿಯಂ ಬಹಿರಂಗಪಡಿಸಬೇಕಲ್ಲವೇ?

ಸಾಮಾನ್ಯವಾಗಿ ಹೊಸ ನ್ಯಾಯಮೂರ್ತಿಗಳನ್ನು ಸುಪ್ರೀಂಕೋರ್ಟಿಗೆ ನೇಮಕ ಮಾಡುವಾಗ ಇಂತಿಂಥಾ ಕಾರಣಗಳಿಗಾಗಿ ನೇಮಕ ಮಾಡುತ್ತಿದ್ದೇವೆ ಎಂಬ ಸಂಕ್ಷಿಪ್ತ ಮಾಹಿತಿಯನ್ನು ಕೋರ್ಟ್ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುತ್ತಿತ್ತು. ಆದರೆ, ಇತ್ತೀಚಿನ ನೇಮಕಾತಿ ಬಗ್ಗೆ ಆ ವಿವರಣೆ ಇಲ್ಲ. ನ್ಯಾಯಾಧೀಶರ ಪಟ್ಟಿಯಲ್ಲಿ 57ನೇ ಸ್ಥಾನದಲ್ಲಿದ್ದ ನ್ಯಾ. ಪಾಂಚೋಲಿ ಅವರನ್ನು, ಉಳಿದ 56 ಅರ್ಹ ನ್ಯಾಯಾಧೀಶರ ಹೆಸರನ್ನು ಬದಿಗೆ ಸರಿಸಿ ನೇಮಕ ಮಾಡಿದ್ದು ಏಕೆ ಎಂಬುದಕ್ಕೆ ಸಮರ್ಥ ವಿವರಣೆಯನ್ನು ನೀಡುವುದು ಕೊಲಿಜಿಯಂ ಕರ್ತವ್ಯವಲ್ಲವೇ? ಅಥವಾ 'ಈ 56 ನ್ಯಾಯಾಧೀಶರು ಕರ್ತವ್ಯಲೋಪ ಎಸಗಿದ್ದಾರೆ. ಹಾಗಾಗಿ ಸುಪ್ರೀಂಕೋರ್ಟ್‌ಗೆ ಬಡ್ತಿ ಸಿಕ್ಕಿಲ್ಲ' ಎಂದು ಭಾವಿಸಬೇಕೆ?

ಇಲ್ಲಿ ಕೊಲಿಜಿಯಂ ವಿಶ್ವಾಸಾರ್ಹತೆಯನ್ನು ಯಾರೂ ಪ್ರಶ್ನಿಸುತ್ತಿಲ್ಲ, ಆದರೆ, ಕೊಲಿಜಿಯಂ ಕೈಗೊಂಡ ತೀರ್ಮಾನಗಳಿಗೆ ಸೂಕ್ತ ಸಮರ್ಥನೆ ಬೇಕು ಎಂದಷ್ಟೇ ಕೇಳಲಾಗುತ್ತಿದೆ. ಯಾವಾಗ ನೇಮಕಾತಿಗಳು ಊಹಾಪೋಹ, ಅನುಮಾನಗಳಿಗೆ ಎಡೆಮಾಡಿಕೊಡುತ್ತವೋ ಆಗ ದೇಶದ ಸರ್ವೋಚ್ಚ ನ್ಯಾಯವ್ಯವಸ್ಥೆ ತನ್ನ ನಡಾವಳಿಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವುದು ಮುಖ್ಯವಾಗುತ್ತದೆ. ಇಲ್ಲದಿದ್ದಾಗ, ಸಹಜವಾಗಿಯೇ ಇಂತಹಾ ಬೆಳವಣಿಗೆಗಳನ್ನು ಜನರು ಅನುಮಾನದಿಂದಲೇ ನೋಡುತ್ತಾರೆ. ನ್ಯಾ. ನಾಗರತ್ನ ಅವರು ನ್ಯಾ. ಪಾಂಚೋಲಿ ಅವರನ್ನು ಗುಜರಾತ್ ಹೈಕೋರ್ಟಿನಿಂದ ಪಟನಾ ಹೈಕೋರ್ಟಿಗೆ ವರ್ಗಾವಣೆ ಮಾಡಿದ್ದರ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ. ಬಹುಶಃ ಅವರ ವರ್ಗಾವಣೆ ಆಗಿದ್ದು ಏಕೆ ಎಂಬ ಮಾಹಿತಿ ಬಹಿರಂಗವಾಗುತ್ತಿದ್ದರೆ, ಬಹುಶಃ ಇಷ್ಟೊಂದು ಅನುಮಾನಗಳು ಮೂಡುತ್ತಿರಲಿಲ್ಲವೇನೋ. ಮೇಲಾಗಿ, ನನ್ನ ಅಸಮ್ಮತಿಯ ಟಿಪ್ಪಣಿಯನ್ನು ಸಾರ್ವಜನಿಕಗೊಳಿಸಿ (ಕೋರ್ಟ್ ವೆಬ್ ಸೈಟಿನಲ್ಲಿ ಪ್ರಕಟಿಸಿ) ಎಂಬ ನ್ಯಾ. ನಾಗರತ್ನ ಅವರ ಕೋರಿಕೆಯನ್ನು ಕೊಲಿಜಿಯಂ ಈವರೆಗೆ ಪರಿಗಣಿಸಿಲ್ಲ. ಹೀಗಾಗಿ, ಈ ವಿಚಾರ ಕಾನೂನು ವಲಯದಲ್ಲಿ ಮತ್ತಷ್ಟು ಪರ/ವಿರೋಧದ ಚರ್ಚೆಗೆ ಎಡೆಮಾಡಿದೆ.

2022ರಲ್ಲಿ ನ್ಯಾ. ಪಾಂಚೋಲಿ ಅವರನ್ನು ಪಟನಾ ಹೈಕೋರ್ಟಿಗೆ ವರ್ಗಾವಣೆ ಮಾಡಿ ಎಂದು ಅಂದಿನ ಸಿಜೆಐ ನೇತೃತ್ವದ ಕೊಲಿಜಿಯಂ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಿತ್ತಾದರೂ, ಕೇಂದ್ರ ತನ್ನ ಅಂತಿಮ ಒಪ್ಪಿಗೆ ನೀಡಲು ಬರೋಬ್ಬರಿ 9 ತಿಂಗಳುಗಳನ್ನು ತೆಗೆದುಕೊಂಡಿತ್ತು. ಗುಜರಾತ್ ಮೂಲದ ನ್ಯಾಯಾಧೀಶರ ವರ್ಗಾವಣೆ ವಿಷಯದಲ್ಲಿ ಹಾಲಿ ಕೇಂದ್ರ ಸರಕಾರದ ಇಷ್ಟೊಂದು ವಿಳಂಬ ಮಾಡಿದ್ದೇಕೆ ಎನ್ನುವುದೂ ಅಂದು ಚರ್ಚೆಗೆ ಗ್ರಾಸವಾಗಿತ್ತು.

ನ್ಯಾ. ಪಾಂಚೋಲಿ 2014ರ ಅ.1ರಂದು ಗುಜರಾತ್ ಹೈಕೋರ್ಟ್ ನ್ಯಾಯಾಧೀಶರನ್ನಾಗಿ ನೇಮಕಗೊಂಡಿದ್ದರು. 2023ರ ಜುಲೈ 14ರಂದು ಪಟನಾ ಹೈಕೋರ್ಟಿಗೆ ಅವರನ್ನು ವರ್ಗಾವಣೆ ಮಾಡಲಾಯಿತು. ನಂತರ, 2025ರ ಜುಲೈ 21ರಂದು ಅಲ್ಲಿನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಯಿತು. ಈಗ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿರುವ ಅವರು, ಹಿರಿತನದ ಆಧಾರದಲ್ಲಿ 2031ರ ಅಕ್ಟೋಬರ್ 3ರಿಂದ 2033ರ ಮೇ 27ರ ತನಕ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಬಹುದು. ಪ್ರಸ್ತುತ, ಸುಪ್ರೀಂಕೋರ್ಟಿನಲ್ಲಿ ಜಾರ್ಖಂಡ್, ಒಡಿಶಾ, ಜಮ್ಮು-ಕಾಶ್ಮೀರ, ಲಡಾಖ್, ಉತ್ತರಾಖಂಡ್, ಮೇಘಾಲಯ, ಸಿಕ್ಕಿಂ ಅಥವಾ ತ್ರಿಪುರ ರಾಜ್ಯಗಳನ್ನು ಪ್ರತಿನಿಧಿಸುವ ನ್ಯಾಯಮೂರ್ತಿಗಳಿಲ್ಲ. ಬಾಂಬೆ, ಪಂಜಾಬ್ ಮತ್ತು ಹರಿಯಾಣ, ಅಲಹಾಬಾದ್ ಹೈಕೋರ್ಟ್‌ಗಳ ತಲಾ ಮೂವರು ನ್ಯಾಯಮೂರ್ತಿಗಳು ಸುಪ್ರೀಂಕೋರ್ಟಿನಲ್ಲಿದ್ದಾರೆ. ನ್ಯಾ. ಅಲೋಕ್ ಆರಾಧೆ ಮತ್ತು ನ್ಯಾ. ವಿಪುಲ್ ಪಾಂಚೋಲಿ ನೇಮಕದಿಂದಾಗಿ ಮಧ್ಯಪ್ರದೇಶ ಮತ್ತು ಗುಜರಾತ್ ಹೈಕೋರ್ಟ್ ಮೂಲದ ತಲಾ ಮೂವರು ನ್ಯಾಯಮೂರ್ತಿಗಳು ಸುಪ್ರೀಂಕೋರ್ಟಿಗೆ ಬಂದಂತಾಗಿದೆ. ಕರ್ನಾಟಕ, ಮದ್ರಾಸ್, ಕಲ್ಕತ್ತಾ, ರಾಜಸ್ಥಾನ ಹೈಕೋರ್ಟ್ ಮೂಲದ ಇಬ್ಬರು ನ್ಯಾಯಮೂರ್ತಿಗಳು ಸುಪ್ರೀಂಕೋರ್ಟಿನಲ್ಲಿದ್ದರೆ, ಹಿಮಾಚಲ ಪ್ರದೇಶ, ತೆಲಂಗಾಣ, ಪಟನಾ, ಛತ್ತೀಸ್‌ಗಢ, ಗುವಾಹಟಿ, ಆಂಧ್ರ ಪ್ರದೇಶ, ಮಣಿಪುರ, ದೆಹಲಿ ಮತ್ತು ಕೇರಳ ಹೈಕೋರ್ಟ್ ಮೂಲದ ಒಬ್ಬೊಬ್ಬ ನ್ಯಾಯಮೂರ್ತಿಗಳಿದ್ದಾರೆ.

ಸದ್ಯ ಸುಪ್ರೀಂಕೋರ್ಟಿನಲ್ಲಿ ನ್ಯಾ. ಬಿ.ವಿ.ನಾಗರತ್ನ ಬಿಟ್ಟರೆ ಬೇರೆ ಮಹಿಳಾ ನ್ಯಾಯಮೂರ್ತಿಗಳಿಲ್ಲ. 2021ರಲ್ಲಿ ಅಂದಿನ ಕೊಲಿಜಿಯಂ ಮೂವರು ಮಹಿಳಾ ನ್ಯಾಯಮೂರ್ತಿಗಳ ನೇಮಕಕ್ಕೆ ಶಿಫಾರಸು ಮಾಡಿದ್ದು ಬಿಟ್ಟರೆ, ನಂತರದಲ್ಲಿ ಯಾವುದೇ ಶಿಫಾರಸು ಹೊರಬಿದ್ದಿಲ್ಲ. ಹಾಗೆ ನೋಡಿದರೆ, ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿರುವ ನ್ಯಾ. ಸುನೀತಾ ಅಗರ್ವಾಲ್ ಅವರು 2011ರಲ್ಲೇ ಹೈಕೋರ್ಟ್ ನ್ಯಾಯಾಧೀಶೆಯಾಗಿ ನೇಮಕಗೊಂಡಿದ್ದರು. ಅವರು ಕೂಡ ನ್ಯಾ.ಪಾಂಚೋಲಿ ಅವರಿಗಿಂತ ಹಿರಿಯರಾಗಿದ್ದಾರೆ. ಅದೇ ರೀತಿ, ಬೇರೆ ರಾಜ್ಯಗಳಲ್ಲಿರುವ ಕೆಲ ಹಿರಿಯ ಮಹಿಳಾ ನ್ಯಾಯಾಧೀಶರು ಸುಪ್ರೀಂ ಕೋರ್ಟಿಗೆ ಬಡ್ತಿ ಹೊಂದಲು ಅರ್ಹರಿದ್ದರು. ಆದರೆ, ಅವರನ್ನೆಲ್ಲಾ ನೇಮಕಾತಿಗೆ ಪರಿಗಣಿಸದೆ, ನ್ಯಾ. ಪಾಂಚೋಲಿ ಹೆಸರನ್ನೇ ಆಯ್ಕೆ ಮಾಡಿದ್ದೇಕೆ ಎನ್ನುವ ಪ್ರಶ್ನೆ ಮಾತ್ರ ಹಾಗೆಯೇ ಉಳಿದುಕೊಂಡಿದೆ.

ಬುರುಡೆ ಪ್ರಕರಣ: ಗಿರೀಶ್ ಕೈವಾಡಕ್ಕೆ ಪುಷ್ಟಿ

← ಮೊದಲಪುಟದಿಂದ

ಜತೆಗೆ ಸುಪ್ರಿಂ ಕೋರ್ಟ್‌ನ ವಕೀಲರೊಬ್ಬರ ಜೊತೆಯೂ ಚರ್ಚೆ ಮಾಡಿದರು ಎಂದು ಮೂಲಗಳು ತಿಳಿಸಿವೆ. ಬೆಂಗಳೂರಿನಲ್ಲಿ ಮಹಜರು ಪ್ರಕ್ರಿಯೆ ನಡೆಸಿರುವ ಪೊಲೀಸರು, ಚಿನ್ನಯ್ಯ ಉಳಿದುಕೊಂಡಿದ್ದ ಸರ್ವೀಸ್ ಅಪಾರ್ಟ್‌ಮೆಂಟ್ ಯಾರ ಹೆಸರಿನಲ್ಲಿ ರೂಮ್ ಬುಕ್ ಆಗಿತ್ತು, ಹಣ ಪಾವತಿಸಿದವರು ಯಾರು? ಎನ್ನುವ ವಿವರಗಳನ್ನು ಕಲೆಹಾಕಿದ್ದಾರೆ.

ಸುಪ್ರೀಂ ಮುಂದೆ ಸೆಲ್ಫಿ: ಇನ್ನು ಈಗಾಗಲೇ ಚಿನ್ನಯ್ಯ ಬುರುಡೆ ಸಮೇತ ದೆಹಲಿಗೆ ತೆರಳಿರುವು ದನ್ನು ಈಗಾಗಲೇ ಚಿನ್ನಯ್ಯ, ಜಯಂತ ಹಾಗೂ ಸುಜಾತ ಭಟ್ ಒಪ್ಪಿಕೊಂಡಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿಯೇ ಬುರುಡೆ ಪ್ರಕರಣವನ್ನು ದಾಖಲಿಸುವ ಲೆಕ್ಕಾಚಾರದಲ್ಲಿ ಗ್ಯಾಂಗ್ ದೆಹಲಿಗೆ ತೆರಳಿತ್ತು. ಆದರೆ ಸುಪ್ರೀಂಕೋರ್ಟ್ ಸ್ಥಳೀಯ ಠಾಣೆಯಲ್ಲಿ ದೂರು ದಾಖಲಿಸಲು ಸೂಚಿಸಿದ್ದರಿಂದ ಬರಿಗೈನಲ್ಲಿ ವಾಪಾಸಾಗಿದ್ದರು. ಇದೀಗ ಜಯಂತ್ ಸುಪ್ರೀಂ ಕೋರ್ಟ್ ಮುಂದೆ ತೆಗೆಸಿಕೊಂಡಿರುವ ಫೋಟೋ ವೈರಲ್ ಆಗುತ್ತಿದೆ. ಈ ಬಗ್ಗೆ ಮಾತನಾಡಿರುವ ಜಯಂತ್, ಏಪ್ರಿಲ್ ತಿಂಗಳಿನಲ್ಲಿ ನನಗೆ ಭೀಮ ಎಂದು ಗುರುತಿಸಲಾಗಿದ್ದ ಚಿನ್ನಯ್ಯನ ಪರಿಚಯವಾಗಿತ್ತು. ಆತ ಮೊದಲ ಬಾರಿ ಬಂದಾಗ ನಮ್ಮ ಮನೆಯಲ್ಲಿಯೇ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದ್ದೆ. ಎರಡನೇ ಬಾರಿ ಬಂದಾಗ ಆತ ಬ್ಯಾಗ್‌ನಲ್ಲಿ ಬುರುಡೆ ತಂದಿದ್ದ. ಇದಕ್ಕೆ ಸಂಬಂಧಪಟ್ಟಂತೆ ಸುಪ್ರಿಂಕೋರ್ಟ್‌ಗೆ ಸಲ್ಲಿಸಲು ಕೆಲ ದಾಖಲೆಗಳನ್ನು ಸಲ್ಲಿಸಬೇಕಿತ್ತು. ಅದಕ್ಕಾಗಿ ವಕೀಲರನ್ನು ಸಂಪರ್ಕಿಸಲು ಚಿನ್ನಯ್ಯ ಪದೇ ಪದೇ ಬರುತ್ತಿದ್ದ. ನಮ್ಮ ಮನೆಯಲ್ಲಿ ಎರಡು ಬಾರಿ ಉಳಿದುಕೊಂಡಿದ್ದ ಎಂದು ಹೇಳಿದ್ದಾರೆ.

ಬುರುಡೆಯನ್ನು ಸುಪ್ರಿಂಕೋರ್ಟ್‌ಗೆ ಹಾಜರುಪಡಿಸಲು ನಾನು ದೆಹಲಿಗೆ ತೆಗೆದುಕೊಂಡು ಹೋಗಿದ್ದೆ, ಅಲ್ಲಿಂದ ದಕ್ಷಿಣ ಕನ್ನಡದ ಎಸ್ಪಿ ಅವರ ಮುಂದೆ ಹಾಜರು ಪಡಿಸಲು ಮಂಗಳೂರಿಗೆ ತೆಗೆದುಕೊಂಡು ಹೋಗಿದ್ದೆ. ಈ ಕಾರಣಕ್ಕಾಗಿ ಎಸ್‌ಐಟಿ ಅಧಿಕಾರಿಗಳು ನನ್ನಿಂದ ಮಾಹಿತಿ ಕಲೆ ಹಾಕಿದ್ದಾರೆ. ವಿಚಾರಣೆಗೆ ಕರೆದರೆ ನಾನು ಸಂತೋಷದಿಂದಲೇ ಹೋಗುತ್ತೇನೆ. ನಾವು ದೇವಸ್ಥಾನದ ವಿರುದ್ಧವಾಗಲೀ, ಯಾವುದೇ ವ್ಯಕ್ತಿಯ ವಿರುದ್ಧವಾಗಲಿ ಹೋರಾಟ ನಡೆಸಿಲ್ಲ. ಸತ್ಯ ಹಾಗೂ ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಜಯಂತ್ ಪತ್ನಿ ಶೈಮಾ ಮಾತನಾಡಿದ್ದು, 'ಪತಿ ಯಾವುದೇ ತಪ್ಪು ಮಾಡಿಲ್ಲ, ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಎಸ್‌ಐಟಿ ಅಧಿಕಾರಿಗಳು ನಮ್ಮ ಕುಟುಂಬದ ಎಲ್ಲರನ್ನೂ ವಿಚಾರಣೆ ನಡೆಸಿದ್ದಾರೆ. ಆದರೆ ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಲ್ಲ. ಚಿನ್ನಯ್ಯ ನಮ್ಮ ಮನೆಗೆ ಮೂರ್ನಾಲ್ಕು ತಿಂಗಳ ಹಿಂದೆ ಎರಡು ಬಾರಿ ಬಂದಿದ್ದ. ಜಯಂತ್ ಅವರ ಜತೆ ಸುತ್ತಾಡುತ್ತಿದ್ದ. ನಮ್ಮ ಮನೆಗೆ ಬಂದಾಗ ನಾನು ಊಟ ಹಾಕಿದ್ದೇನೆ' ಎಂದು ಹೇಳಿದ್ದಾರೆ.

ಯಾವ ಸಹವಾಸವೂ ಬೇಡವೆಂದ ಅಜ್ಜಿ

ದಿನಕ್ಕೊಂದು ಹೇಳಿಕೆ ನೀಡಿ ಇಡೀ ಪ್ರಕರಣವನ್ನೇ ಗೊಂದಲಮಯಗೊಳಿಸಿದ ಅಜ್ಜಿ ಸುಜಾತ ಭಟ್‌ರಿಂದ ತಿಮರೋಡಿ ಗ್ಯಾಂಗ್ ಅಂತರ ಕಾಯ್ದುಕೊಂಡ ಬೆನ್ನಲ್ಲೇ, ಸುಜಾತ ಭಟ್ ಇದೀಗ 'ನನಗೆ ಯಾರ ಸಹವಾಸವೂ ಬೇಡ' ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿರುವ ಆಕೆ, ಎಸ್‌ಐಟಿಯ ಮುಂದೆ ನನಗೆ ತಿಳಿದಿರುವ ಎಲ್ಲಾ ಅಂಶಗಳನ್ನು ಹೇಳಿ ಬಂದಿದ್ದೇನೆ. ಇನ್ನು ಮುಂದೆ ನಾನು ಈ ಕೂಪದಲ್ಲಿ ಇರುವುದಿಲ್ಲ. ಯಾರ‍್ಯಾರು ಏನೇನು ಮಾಡಿದ್ದಾರೋ ಅದಕ್ಕೆ ತಕ್ಕಂತೆ ಅವರು ಅನುಭವಿಸುತ್ತಾರೆ. ನಾನು ಏಕಾಂಗಿಯಾಗಿಯೇ ಎಸ್‌ಐಟಿ ತನಿಖೆಯನ್ನು ಎದುರಿಸಿ ಬಂದಿದ್ದೇನೆ. ಇನ್ನು ನನಗೆ ಯಾರ ಸಹವಾಸವೂ ಬೇಡ ಎಂದಿದ್ದಾರೆ.

ಬಿಜೆಪಿ-ಜೆಡಿಎಸ್ ಬಲಪ್ರದರ್ಶನ

ಧರ್ಮಸ್ಥಳ ಪರವಾಗಿ ಜೆಡಿಎಸ್ ಭಾನುವಾರ ಶಕ್ತಿ ಪ್ರದರ್ಶನ ಮಾಡಿದ್ದು, ಬಿಜೆಪಿ ನಾಯಕರು ಸೋಮವಾರ ಬೃಹತ್ ರ‍್ಯಾಲಿ ನಡೆಸಲು ತೀರ್ಮಾನಿಸಿದ್ದಾರೆ. ಹಾಸನ ದಿಂದ ಜೆಡಿಎಸ್ ನಾಯಕರು ಭಾನುವಾರ ಬೆಳಗ್ಗೆ ತೆರಳಿ ಮಧ್ಯಾಹ್ನ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಧರ್ಮಸ್ಥಳದಲ್ಲಿ ಸಮಾವೇಶ ನಡೆಸಿದರು. ಇನ್ನು ಬಿಜೆಪಿ ನಾಯಕರು ಸೋಮವಾರ ನೇತ್ರಾವತಿ ನದಿದಂಡೆಯಿಂದ ದೇವಾಲಯದವರೆಗೆ ಪಾದಯಾತ್ರೆ ನಡೆಸಲಿದ್ದಾರೆ. ಈಗಾಗಲೇ ರಾಜ್ಯದ ವಿವಿಧ ಭಾಗಗಳಿಂದ ನಾಯಕರು, ಕಾರ್ಯಕರ್ತರು ಧರ್ಮಸ್ಥಳಕ್ಕೆ ಆಗಮಿಸಿದ್ದಾರೆ. ಈಗಾಗಲೇ ಜೆಡಿಎಸ್ ನಾಯಕರು ಆಗ್ರಹಿಸಿರುವಂತೆ ಬಿಜೆಪಿ ನಾಯಕರು ಇಡೀ ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸಬೇಕು ಎಂದು ಆಗ್ರಹಿಸುವ ಸಾಧ್ಯತೆಯಿದೆ. ಈ ಎಲ್ಲದರ ನಡುವೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಷಡ್ಯಂತ್ರದ ರೂವಾರಿ ಯಾರೆನ್ನುವುದನ್ನು ಸೋಮವಾರ ಬಹಿರಂಗಪಡಿಸುವುದಾಗಿ ಹೇಳಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಜೆಡಿಎಸ್ ಶಕ್ತಿ ಪ್ರದರ್ಶನ: ಬಿಜೆಪಿ ರ‍್ಯಾಲಿ ಇಂದು

ಬುರುಡೆ ಬಗ್ಗೆ ಸ್ಫೋಟಕ ಮಾಹಿತಿ ಇಂದು ಹೇಳುವುದಾಗಿ ಎಚ್‌ಡಿಕೆ ಹೇಳಿಕೆ | ಧರ್ಮಸ್ಥಳದಲ್ಲಿ ನಿಖಿಲ್ ಸಮಾವೇಶ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬುರುಡೆ ಪ್ರಕರಣದಲ್ಲಿ ಮಾಸ್ಕ್‌ಮ್ಯಾನ್‌ನ 'ಸರಣಿ ಸುಳ್ಳು'ಗಳ ದರ್ಶನದ ಬೆನ್ನಲ್ಲೇ, ದಿನದಿಂದ ದಿನಕ್ಕೆ ಧರ್ಮಸ್ಥಳ ಪರವಾಗಿ ಸಾರ್ವಜನಿಕರ ಮಾತುಗಳು ಕೇಳಿಬರುತ್ತಿದೆ. ಇದರ ಬೆನ್ನಲ್ಲೇ, ಇಡೀ ಪ್ರಕರಣವನ್ನು ಕಾಂಗ್ರೆಸ್ ಸಿಲುಕಿಸಲು ಸಜ್ಜಾಗಿರುವ ಪ್ರತಿಪಕ್ಷಗಳು ತಮ್ಮ ಬಲಪ್ರದರ್ಶನಕ್ಕೆ ಧರ್ಮಸ್ಥಳವನ್ನು ವೇದಿಕೆಯಾಗಿಸಿಕೊಂಡಿವೆ.

ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ವಿರೋಧಿಸಿ ಧರ್ಮಸ್ಥಳ ಪ್ರಕರಣದ ಎನ್‌ಐಎ ತನಿಖೆಗೆ ಆಗ್ರಹಿಸಿ ಪ್ರತಿಪಕ್ಷಗಳಾದ ಬಿಜೆಪಿ-ಜೆಡಿಎಸ್ ಪ್ರತ್ಯೇಕ ಹೋರಾಟ ನಡೆಸಿದ್ದು, ಜೆಡಿಎಸ್ ಭಾನುವಾರ ಧರ್ಮಸ್ಥಳಕ್ಕೆ ಸತ್ಯಯಾತ್ರೆ ನಡೆಸಿದ್ದರೆ, ಇಂದು ಬಿಜೆಪಿ ಧರ್ಮಸ್ಥಳ ಚಲೋ ಹಾಗೂ ಧರ್ಮ ಸಮಾವೇಶವನ್ನು ಹಮ್ಮಿಕೊಂಡಿದೆ. ಈ ಸಮಾವೇಶದಲ್ಲಿ ಜೆಡಿಎಸ್ ಸಹ ಭಾಗಿಯಾಗಲಿದೆ. ಭಾನುವಾರ ಬೆಳಗ್ಗೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ನೇತೃತ್ವದಲ್ಲಿ ಹಾಸನದಿಂದ ಜೆಡಿಎಸ್‌ನ ಸತ್ಯಯಾತ್ರೆ ನಡೆಯಿತು. ಹಾಸನದ ಯಗಚಿ ಬಳಿಯಿರುವ ಕಂದಲಿಯಿಂದ ನೂರಾರು ವಾಹನಗಳಲ್ಲಿ ಹೊರಟ ಜೆಡಿಎಸ್ ನಾಯಕರು, ನೇತ್ರಾವತಿ ನದಿ ಬಳಿ ಎಲ್ಲರೂ ಸಮಾವೇಶ ಗೊಂಡು ಅಲ್ಲಿಂದ 1 ಕಿ.ಮೀ ಪಾದ ಯಾತ್ರೆ ಮೂಲಕ ಧರ್ಮಸ್ಥಳ ತಲುಪಿದರು. ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ದರ್ಶನ ಪಡೆದು ನಂತರ ಧರ್ಮಾ ಧಿಕಾರಿ ವೀರೇಂದ್ರ ಹೆಗ್ಗಡೆಯವರನ್ನು ಜೆಡಿಎಸ್‌ನ ಶಾಸಕರುಗಳು ಹಾಗೂ ನಾಯಕರುಗಳು ಭೇಟಿ ಮಾಡಿದರು.

ಷಡ್ಯಂತ್ರದ ರುವಾರಿ ಮಾಹಿತಿ ಬಹಿರಂಗ?

ಪ್ರಕರಣಕ್ಕೆ ಸಂಬಂಧಿಸಿದ ಮಹತ್ವ ದಾಖಲೆಗಳನ್ನು ದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಬಹಿರಂಗಗೊಳಿಸಲಿದ್ದಾರೆ ಎನ್ನಲಾಗಿದೆ. ತಮಿಳುನಾಡಿನಲ್ಲಿದ್ದ ಚಿನ್ನಯ್ಯ ಅವರನ್ನು ಸಂಪರ್ಕಿಸಿದ ಕೆಲವರು ಆತನನ್ನು ವಾಪಸ್ ಕರೆತಂದು ತಯಾರು ಮಾಡಿದ್ದರು ಎನ್ನಲಾಗಿದೆ. ಜತೆಗೆ ಸುಜಾತಾ ಭಟ್ ಅವರನ್ನು ಒಟ್ಟುಸೇರಿಸಿಕೊಂಡು ಯೋಜನೆ ರೂಪಿಸಲಾಗಿತ್ತು. ಈ ಎಲ್ಲದರ ಹಿಂದೆ ಕೆಲ 'ವ್ಯಕ್ತಿ'ಗಳಿದ್ದಾರೆ ಎನ್ನುವುದನ್ನು ಆರಂಭಿಕ ದಿನದಿಂದಲೂ ಆರೋಪಿಸಲಾ ಗಿತ್ತು. ಇದಕ್ಕೆ ಸಂಬಂಧಿಸಿ ಕುಮಾರಸ್ವಾಮಿ ದಾಖಲೆ ಬಿಡುಗಡೆಗೊಳಿಸಲಿದ್ದಾರೆ ಎನ್ನಲಾಗಿದೆ.

- ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಸಮಾವೇಶ
- 1 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರು ಭಾಗಿಯಾಗುವ ನಿರೀಕ್ಷೆ

ಬೃಹತ್ ಸಮಾವೇಶ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ವಿರೋಧಿಸಿ ಹಾಗೂ ಧರ್ಮಸ್ಥಳ ಪ್ರಕರಣವನ್ನು ಎನ್‌ಐಎ ತನಿಖೆಗೆ ಆಗ್ರಹಿಸಿ ಬಿಜೆಪಿ ಧರ್ಮಸ್ಥಳ ಚಲೋ ಹಾಗೂ ಬೃಹತ್ ಸಮಾವೇಶವನ್ನು ಧರ್ಮಸ್ಥಳದಲ್ಲಿ ನಡೆಸುತ್ತಿದೆ. ರಾಜ್ಯದ ವಿವಿಧೆಡೆಯಿಂದ ಬಿಜೆಪಿಯ ಸಾವಿರಾರು ಕಾರ್ಯಕರ್ತರು ಧರ್ಮಸ್ಥಳ ಚಲೋದಲ್ಲಿ ಭಾಗಿಯಾಗಲಿದ್ದು, ಸೋಮವಾರ ಮಧ್ಯಾಹ್ನ ಧರ್ಮಸ್ಥಳದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ನೇತೃತ್ವದಲ್ಲಿ ಬೃಹತ್ ಸಮಾವೇಶ ನಡೆಯಲಿದೆ.

ಧರ್ಮಸ್ಥಳದ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ ಅಭಿಮಾನಿಗಳ ಸಮಾವೇಶದಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಬುರುಡೆ ಪ್ರಕರಣ: ಎನ್‌ಐಎಗೆ ವಹಿಸಲಿ

ಉಜಿರೆ: ನಾಡಿನ ಪವಿತ್ರಕ್ಷೇತ್ರ ಧರ್ಮಸ್ಥಳದ ಬಗ್ಗೆ ಮಾಧ್ಯಮಗಳಲ್ಲಿ ನಿರಂತರ ಪ್ರಕಟವಾಗುತ್ತಿರುವ ಅಪಪ್ರಚಾರ ಹಾಗೂ ಸುಳ್ಳು ವದಂತಿಗಳಿಂದ ದೇಶ-ವಿದೇಶಗಳಲ್ಲಿರುವ ಕೋಟ್ಯಂತರ ಭಕ್ತಾದಿಗಳಿಗೆ ತೀವ್ರ ನೋವಾಗಿದೆ. ಭಯ ಮತ್ತು ಗೊಂದಲದ ವಾತಾ ವರಣ ಉಂಟಾಗಿದೆ. ಆದುದ್ದರಿಂದ ಪಾರದರ್ಶಕವಾಗಿ ತನಿಖೆ ನಡೆಸಿ ನ್ಯಾಯ ಒದಗಿಸಲು ಬುರುಡೆ ಪ್ರಕರಣವನ್ನು ಕೇಂದ್ರ ತನಿಖಾ ತಂಡಕ್ಕೆ ವಹಿಸಬೇಕು ಎಂದು ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದರು. ಅವರು ಭಾನುವಾರ ತಮ್ಮ ಸಾವಿರಾರು ಅಭಿಮಾನಿಗಳೊಂದಿಗೆ ಧರ್ಮಸ್ಥಳಕ್ಕೆ ಬಂದು ದೇವರ ದರ್ಶನ ಮಾಡಿ, ಅಮೃತವರ್ಷಿಣಿ ಸಭಾಭವನದಲ್ಲಿ ಮಾತನಾಡಿದರು.

ಅನಾಮಧೇಯ ವ್ಯಕ್ತಿ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿ ನ್ಯಾಯ ದೊರಕಿಸುವ ಬದಲು ಸರಕಾರ ಷಡ್ಯಂತ್ರ ರೂಪಿಸಿದೆ. ತಾನು ಹಾಗೂ ಕುಟುಂಬದವರೆಲ್ಲರೂ ಧರ್ಮಸ್ಥಳದ ಪರಮಭಕ್ತರಾಗಿದ್ದು, ಪ್ರಕರಣದಲ್ಲಿ ಸತ್ಯವನ್ನು ಹೊರಗೆಳೆಯಲು ನೈತಿಕ ಬೆಂಬಲ ನೀಡುವುದಾಗಿ ಭರವಸೆ ನೀಡಿದರು. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ತಾಳ್ಮೆ, ಸಂಯಮ, ಸಮಾಧಾನ ಮತ್ತು ಮೌನವನ್ನು ಶ್ಲಾಘಿಸಿದ ನಿಖಿಲ್ ಕುಮಾರಸ್ವಾಮಿ, ಯಾವುದೇ ನಿರೀಕ್ಷೆ ಹಾಗೂ ಪ್ರತಿಫಲಾಪೇಕ್ಷೆ ಬಯಸದೆ, ಲೋಕಕಲ್ಯಾಣಕ್ಕಾಗಿ ಹೆಗ್ಗಡೆಯವರು ಮಾಡುತ್ತಿರುವ ಚತುರ್ವಿಧ ದಾನ ಪರಂಪರೆಯೊಂದಿಗೆ ಗ್ರಾಮಾಭಿವೃದ್ಧಿ, ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ ಮೊದಲಾದ ಸಮಾಜಮುಖಿ ಸೇವಾಕಾರ್ಯಗಳಿಗೆ ಅಭಿನಂದಿಸಿದರು.

ಭಕ್ತರೇ ಸಂಪತ್ತು



ದೇಶ-ವಿದೇಶಗಳಲ್ಲಿರುವ ಕೋಟ್ಯಾಂತರ ಭಕ್ತಾದಿ ಗಳೇ ಧರ್ಮಸ್ಥಳದ ಅಪಾರ ಹಾಗೂ ಅಮೂಲ್ಯ ಸಂಪತ್ತು ಮತ್ತು ಶ್ರೀರಕ್ಷೆಯಾಗಿದೆ ಎಂದು ವೀರೇಂದ್ರ ಹೆಗ್ಗಡೆಯವರು ಹೇಳಿದರು. ಅಪಾರ ಸಂಖ್ಯೆಯ ಭಕ್ತರ ಪ್ರೀತಿ-ವಿಶ್ವಾಸ, ನಂಬಿಕೆ, ಗೌರವ ಅಮೂಲ್ಯ ಸಂಪತ್ತಾಗಿದ್ದು ಇದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಇದರ ತೂಕ, ಘನತೆ, ಗೌರವವೇ ಅತಿ ಮಹತ್ವ ಪೂರ್ಣವಾಗಿದೆ. ಆದುದರಿಂದಲೇ ನಂಬಿದವರಿಗೆ ಇಂಬು ಕೊಡುವ ಧರ್ಮಸ್ಥಳದಲ್ಲಿ 'ಮಾತು ಬಿಡ ಮಂಜುನಾಥ' ಎಂಬ ಮಾತು ಚಿರಪರಿಚಿತವಾಗಿದೆ. ಸತ್ಯ, ಧರ್ಮ, ನ್ಯಾಯ, ನೀತಿ ನಿತ್ಯವೂ ನೆಲೆನಿಂತಿ ರುವ ಪವಿತ್ರ ಕ್ಷೇತ್ರ ಧರ್ಮಸ್ಥಳ. ಧರ್ಮಸ್ಥಳದಲ್ಲಿ ಯಾವುದೇ ತಪ್ಪು ಅಥವಾ ಅಹಿತಕರ ಘಟನೆ ನಡೆಯದಂತೆ ಸದಾ ಎಚ್ಚರಿಕೆ ಹಾಗೂ ಮುಂಜಾಗರೂಕತೆ ವಹಿಸುತ್ತಿರುವುದಾಗಿ ಸ್ಪಷ್ಟಪಡಿಸಿದರು. ಡಿ. ಸುರೇಂದ್ರ ಕುಮಾರ್ ಮತ್ತು ಶಾಸಕರಾದ ಜಿ.ಡಿ. ಹರೀಶ್ ಗೌಡ, ಮಂಜು ಅರಕಲಗೂಡು, ಸ್ವರೂಪ್ ಹಾಸನ, ಕೋಲಾರ ಸಂಸದ ಮಲ್ಲೇಶ್ ಬಾಬು, ವಿಧಾನಪರಿಷತ್ ಸದಸ್ಯ ಭೋಜೇಗೌಡ ಮತ್ತು ಮಾಜಿ ಶಾಸಕ ಕೆ. ಮಹಾದೇವ ಉಪಸ್ಥಿತರಿದ್ದರು.

ಧರ್ಮಸ್ಥಳ ವಿಚಾರದಲ್ಲಿ ಬಿಜೆಪಿ ರಾಜಕೀಯ: ಸಚಿವ ದಿನೇಶ್

ಮಂಗಳೂರು: ಧರ್ಮಸ್ಥಳ ವಿಚಾರವಾಗಿ ಬಿಜೆಪಿ ರಾಜಕೀಯ ಲಾಭಕ್ಕಾಗಿ ಹೋರಾಟ ಮಾಡುತ್ತಿದೆ. ಅವರದ್ದು ಸ್ವಾರ್ಥ ರಾಜಕಾರಣ ಅದರ ಬದಲು ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದ ಹಣ ಕೊಡಿಸಲು ಹೋರಾಟ ಮಾಡಲಿ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿರು. ಭಾನುವಾರ ನಗರದಲ್ಲಿ ಮಾತನಾಡಿದ ಅವರು, ಬಿಜೆಪಿಯವರ ಉದ್ದೇಶವೇನೆಂದು ಎಲ್ಲರಿಗೂ ಗೊತ್ತು. ಅವರು ಧರ್ಮ ಇಟ್ಟುಕೊಂಡು ರಾಜಕಾರಣ ಮಾಡಲು ಹೊರಟಿದ್ದಾರೆ. ಇಂತಹ ಸಮಾವೇಶ ಮಂಜುನಾಥ ಸ್ವಾಮಿಗೆ ಅಗತ್ಯವಿಲ್ಲ ಧರ್ಮಸ್ಥಳ ರಕ್ಷಣೆಗೆ ಸರಕಾರವಿದೆ ಎಂದರು.

ಎಸ್‌ಐಟಿ ನಿಜಾಂಶ ಹೊರಗೆ ತರುವ ಕೆಲಸ ಮಾಡುತ್ತಿದೆ. ಬಿಜೆಪಿಯವರಿಗೆ ಬೇರೆ ವಿಷಯವಿಲ್ಲ. ಸರಕಾರಕ್ಕೆ ಕೆಟ್ಟ ಹೆಸರು ತರಲು ಇದನ್ನೆಲ್ಲ ಮಾಡುತ್ತಿದ್ದಾರೆ. ಎಸ್ ಐ ಟಿ ಯಾವುದೇ ಹಸ್ತಕ್ಷೇಪವಿಲ್ಲದೆ ಕೆಲಸ ಮಾಡುತ್ತಿದೆ. ಸೌಜನ್ಯ ಪ್ರಕರಣವಾಗಿದ್ದಾಗ ಅವರದ್ದೆ ಸರಕಾರ, ಪೊಲೀಸ್ ಇತ್ತು. ಅವರೇನು ಮಾಡಿದ್ದಾರೆ? ಎಸ್‌ಐಟಿ ತನಿಖೆ ಬೇಕಾಗಿಲ್ಲ. ಬಿಜೆಪಿಯ ಬೆಂಬಲವೂ ಬೇಕಾಗಿಲ್ಲ ಎಂದರು.

ಪೆದ್ದಿ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಿರುವ ತೆಲುಗು ಚಿತ್ರರಂಗದ ಖ್ಯಾತ ನಟ ರಾಮ್‌ಚರಣ್ ಅವರು ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭಾನುವಾರ ಭೇಟಿಯಾಗಿ ಗೌರವಿಸಿದರು. ಸಚಿವರಾದ ಸಂತೋಷ್ ಲಾಡ್, ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು ಹಾಜರಿದ್ದರು.

ಸಿಎಂಗೆ ಅವಹೇಳನ: ಪಿಡಿಒ ಸೆರೆ

ಕಲಬುರಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವ ಹೇಳನ ಮಾಡುವ ರೀತಿಯಲ್ಲಿ ಸಾಮಾ ಜಿಕ ಜಾಲತಾಣದಲ್ಲಿ ಸ್ಟೇಟಸ್ ಹಾಕಿದ ಪ್ರಕರಣದಲ್ಲಿ ಆಳಂದ ತಾಲೂಕಿನ ಸುಂಟನೂರ

ಗ್ರಾಮ ಪಂಚಾಯಿತಿ ಪಿಡಿಒ ಪ್ರವೀಣಕುಮಾರ್ ಉಡಗಿ ಯನ್ನು ಪೊಲೀಸರು ಬಂಧಿಸಿದ್ದಾರೆ. ಪಿಡಿಒ ಪ್ರವೀಣಕುಮಾರ್ ತಮ್ಮ ಮೊಬೈಲ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರ ಫೋಟೊಗೆ ಎಡಿಟ್ ಮಾಡಲಾದ ಚಿತ್ರವನ್ನು ಸೇರಿಸಿ, 'ಸಿದ್ರಾಮುಲ್ಲಾ' ಎಂಬ ಶೀರ್ಷಿಕೆಯೊಂದಿಗೆ ಸ್ಟೇಟಸ್ ಹಾಕಿದ್ದರು. ಜತೆಗೆ, 'ಸಿದ್ರಾಮುಲ್ಲಾನ ಬಜೆಟ್‌ನಲ್ಲಿ ಕೃಷಿಕರಿಗೆ ಬೆಲೆನೇ ಇಲ್ಲ, ರೈತರ ಕಷ್ಟಕ್ಕಿಂತ ಮುಸ್ಲಿಂ ಕಾಂಟ್ರಾ ಕ್ಟರ್‌ಗಳಿಗೆ ಆದ್ಯತೆ' ಎಂಬ ಸಂದೇಶವನ್ನೂ ಹಾಕಿದರು. ಈ ವಿಷಯಕ್ಕೆ ಸಂಬಂಧಿಸಿ ಸುಂಟನೂರ ಗ್ರಾಮದ ಮುಖಂಡ ಮಲ್ಲಿಕಾರ್ಜುನ ದಣ್ಣೂರ ಅವರು ನೀಡಿದ ದೂರಿನ ಮೇರೆಗೆ ನಿಂಬರ್ಗಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಬಿಜೆಪಿಯೊಂದಿಗೆ ರಹಸ್ಯ ಒಪ್ಪಂದಕ್ಕೆ ಮುಂದಾಗಿದ್ದ ಡಿಕೆಶಿ | ಶಾಸಕ ಯತ್ನಾಳ್ ಸ್ಫೋಟಕ ಹೇಳಿಕೆ

ಬಿವೈವಿ-ಡಿಕೆಶಿ ದಿಲ್ಲಿಯಲ್ಲಿ ಭೇಟಿ, ಚರ್ಚೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ರಾಜಕೀಯದಲ್ಲಿ ಮತ್ತೊಮ್ಮೆ ತೀವ್ರ ಚರ್ಚೆಗೆ ಗ್ರಾಸವಾಗುವಂತಹ ಹೇಳಿಕೆಯೊಂದನ್ನು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೀಡಿದ್ದು, ಕಾಂಗ್ರೆಸ್ ಅಧ್ಯಕ್ಷ ಡಿ.ಕೆ ಶಿವಕುಮಾರ್ ಬಿಜೆಪಿಯೊಂದಿಗೆ ರಹಸ್ಯ ಒಪ್ಪಂದಕ್ಕೆ ಮುಂದಾಗಿದ್ದರು ಎಂಬ ಸ್ಫೋಟಕ ಹೇಳಿಕೆಯೊಂದನ್ನು ನೀಡಿದ್ದಾರೆ.

> ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಹೋಗುವ ಪ್ರಶ್ನೆಯೇ ಇಲ್ಲ. ಹೀಗಿರುವಾಗಿ ನಾನು ಒಂದು ಕಾಲು ಬಿಜೆಪಿಯ ಲ್ಲಿಟ್ಟಿದ್ದೇನೆ ಎನ್ನುವ ಯತ್ನಾಳ್ ಹೇಳಿಕೆ ಅರ್ಥಹೀನ. ನಾನು ಸಗಣಿ ಮೇಲೆ ಕಲ್ಲನ್ನು ಎಸೆಯುವುದಿಲ್ಲ.
>
> -**ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ಬಾನು ಮುಸ್ತಾಕ್ ಆಯ್ಕೆಗೆ ಆಕ್ರೋಶ

ಮೈಸೂರು ದಸರಾ ಹಬ್ಬದ ಉದ್ಘಾಟನೆಗೆ ಬಾನು ಮುಸ್ತಾಕ್ ಅವರನ್ನು ನೇಮಿಸಿರುವ ರಾಜ್ಯ ಸರಕಾರದ ನಿರ್ಧಾರವನ್ನು ಶಾಸಕ ಬಸವನಗೌಡ ಪಾಟೀಲ್ ಯತ್ನಾಳ ಅವರು ಆಕ್ರೋಶ ವ್ಯಕ್ತಪಡಿಸಿದರು. ಚಾಮುಂಡಿ ದೇವಿಯ ಪೂಜೆ ಸನಾತನ ಧಾರ್ಮಿಕ ಪರಂಪರೆಯ ಅಂಗ ವಾಗಿದ್ದು, ಅದನ್ನು ಗೌರವಿಸುವವರಿಂದಲೇ ಮಾಡಿಸಬೇಕು. ಕನ್ನಡ ಧ್ವಜ ಹಾಗೂ ಭುವನೇಶ್ವರಿ ವಿರೋಧಿಸಿದವರ ಕೈಯಲ್ಲಿ ದೇವಿಯ ಆರಾಧನೆ ನಡೆಸುವುದು ಧಾರ್ಮಿಕ ಭಾವನೆಗಳಿಗೆ ಅವಮಾನವಾಗಿದೆ ಎಂದು ಶಾಸಕ ಯತ್ನಾಳ್ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಸಿಎಂ ಡಿ.ಕೆ ಶಿವಕುಮಾರ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಇಬ್ಬರು ದೆಹಲಿಯಲ್ಲಿ ಸಭೆ ನಡೆಸಿ ರಾಜ್ಯ ದಲ್ಲಿ ಸಿಎಂ, ಡಿಸಿಎಂ ಆಗುವ ಕುರಿತು ಚರ್ಚೆ ನಡೆಸಿ ದ್ದಾರೆ. ಡಿ.ಕೆ. ಶಿವಕುಮಾರ್ ಒಂದು ಕಾಲು ಬಿಜೆಪಿ ಯಲ್ಲಿದೆ. ಅವರ ಹಿಂದೆ ಶಾಸಕರ ಬೆಂಬಲ ಇಲ್ಲ ಎನ್ನುವ ಕಾರಣಕ್ಕೆ ಸುಮ್ಮನಾಗಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರ ಜತೆ ದೆಹಲಿಯಲ್ಲಿ ಸಭೆ ನಡೆಸಿ ಪಕ್ಷ ಸೇರ್ಪಡೆ ಕುರಿತು ಚರ್ಚೆ ನಡೆಸಿದ್ದಾರೆ ಹೇಳಿದರು. ದೆಹಲಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. 69-70 ಕಾಂಗ್ರೆಸ್ ಶಾಸಕರ ಬೆಂಬಲವಿದೆ ಎಂದು ಹೇಳಿದರೂ, 'ನಮಸ್ತೆ ಸದಾ ವತ್ಸಲೇ' ಎಂಬ ಹಾಡನ್ನು ಹೇಳಿ ಶಾಸಕರಿಗೆ ಭರವಸೆ ನೀಡಿದ್ದರು. ಆದರೆ, ಆಂತರಿಕ ವರದಿ ಪ್ರಕಾರ ಕೇವಲ 58 ಶಾಸಕರೇ ಅವರೊಂದಿಗೆ ನಿಂತಿದರು. ಅಲ್ಲದೇ, ಶಿವಕುಮಾರ್ ಜತೆಗಿದ್ದ 10-12 ಶಾಸಕರು ಕೈಜಾರಿ ಹೋಗಿದ್ದಾರೆ. ಹೀಗಾಗಿ, ಬಿಜೆಪಿ ಸರಕಾರ ರಚನೆಗೆ ಮುಂದಾಗಲಿಲ್ಲ ಎಂದರು.

ನಶೆಯಲ್ಲಿ ಪಿಡಿಒಗಳ ಪರಸ್ಪರ ಹೊಡೆದಾಟ

ಹಾಸನ: ಕುಡಿದ ಅಮಲಿನಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಬ್ಬರು ಪರಸ್ಪರ ಹೊಡೆದಾಡಿಕೊಂಡಿರುವ ಘಟನೆ ಚನ್ನರಾಯಪಟ್ಟಣ ತಾಲೂಕಿನ ಗೋವಿನಕೆರೆ ಗ್ರಾಮದ ಗ್ರಾಪಂ ಸದಸ್ಯರೊಬ್ಬರ ಮನೆಯಲ್ಲಿ ನಡೆದಿದೆ. ಹಿರೀಸಾವೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಸತೀಶ ಹಾಗೂ ಎಂ. ಶಿವರ ಗ್ರಾ.ಪಂ. ಪಿಡಿಒ ರಾಮಸ್ವಾಮಿ ನಡುವೆ ಜಗಳ ನಡೆದಿದೆ. ಸತೀಶ ಅವರ ತಲೆಗೆ ಮದ್ಯದ ಬಾಟಲಿಯಿಂದ ರಾಮಸ್ವಾಮಿ ಹೊಡೆದಿದ್ದಾರೆ ಎಂದು ಆರೋಪಿಸ ಲಾಗಿದ್ದು, ಸತೀಶ ಅವರಿಗೆ ಗಂಭೀರ ಪೆಟ್ಟಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಎಂ. ಶಿವರ ಗ್ರಾ.ಪಂ. ಸದಸ್ಯ ರಾಮು ಅವರ ಮನೆಗೆ ಗಣೇಶ ಹಬ್ಬದ ನಿಮಿತ್ತ ಊಟಕ್ಕೆ ಬಂದಿದ್ದ ವೇಳೆ ಗಲಾಟೆ ನಡೆದಿದೆ.

ವರದಾ ನದಿ ಅಳವಡಿಕೆಯ ಗೇಟ್

ಬ್ರಿಡ್ಜ್ ಕಂ ಬ್ಯಾರೇಜ್‌ನ 98 ಗೇಟ್‌ಗಳ ಕಳವು

ಹಾವೇರಿ: ವರದಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಸುಮಾರು 14ಕ್ಕೂ ಅಧಿಕ ಬ್ರಿಡ್ಜ್ ಕಂ ಬ್ಯಾರೇಜ್‌ನ 98 ಗೇಟ್‌ಗಳನ್ನು ಕಳ್ಳರು ಕಳ್ಳತನ ಮಾಡಿರುವ ಘಟನೆ ಹಾವೇರಿ ತಾಲೂಕಿನ ಕೋಳೂರು ಗ್ರಾಮದಲ್ಲಿ ನಡೆದಿದೆ.

ವರದಾ ನದಿಗೆ ಅಡ್ಡಲಾಗಿ ಸುಮಾರು 14ಕ್ಕೂ ಅಧಿಕ ಬ್ರಿಡ್ಜ್ ಕಂ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಲಾಗಿತ್ತು. ಕಳೆದ 6 ತಿಂಗಳಿನಿಂದ ನಿರಂತರವಾಗಿ ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್‌ಗಳನ್ನು ಖದೀಮರು ಕಳ್ಳತನ ಮಾಡುತ್ತಿದ್ದಾರೆ. ಈ ಬಾರಿ ಸುಮಾರು ಒಂದುವರೆ ಲಕ್ಷ ಮೌಲ್ಯದ ಗೇಟ್‌ಗಳನ್ನ ಕಳ್ಳತನ ಮಾಡಿದ್ದಾರೆ. ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಅಳವಡಿಸಿದ್ದ ಗೇಟ್‌ಗಳನ್ನ ಗೋದಾಮಿನಲ್ಲಿ ಇಡುತ್ತಿದ್ದರು. ಈ ಬಾರಿಯೂ ಇದೇ ರೀತಿ ಇಟ್ಟಿದ್ದರು. ಆದರೆ ಈಗ ಖದೀಮರ ಗ್ಯಾಂಗೊಂದು ರಾತ್ರೋರಾತ್ರಿ ಗೋದಾಮಿನಲ್ಲಿದ್ದ ಒಂದುವರೆ ಲಕ್ಷ ಮೌಲ್ಯದ 98 ಗೇಟ್‌ಗಳನ್ನು ಕದ್ದು ಪರಾರಿಯಾಗಿದೆ.

ಇಲಾಖೆ ನಿರ್ಲಕ್ಷ್ಯಕ್ಕೆ ಆಕ್ರೋಶ

ಕಳೆದ ಆರೇಳು ತಿಂಗಳಿನಲ್ಲಿ ಹಾವೇರಿ ಜಿಲ್ಲೆಯಲ್ಲಿಯೇ ಮೂರು ಕಡೆ ಬ್ಯಾರೇಜ್ ಗೇಟ್ ಕಳ್ಳತನ ಆಗಿವೆ. ಕೂಸನೂರು, ಶೇಷಗಿರಿ ಸೇರಿದಂತೆ ಹಲವು ಕಡೆಯ ಬ್ರಿಡ್ಜ್ ಕಂ ಬ್ಯಾರೇಜ್ ಗೇಟ್‌ಗಳನ್ನ ಖದೀಮರು ಕಳ್ಳತನ ಮಾಡಿದ್ದಾರೆ. ಸಣ್ಣನೀರಾವರಿ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಗೋದಾಮನ್ನು ಕಾಯುಲು ಯಾರನ್ನಾದರು ನೇಮಕ ಮಾಡಬೇಕು. ಅಲ್ಲದೇ ಕೂಡಲೇ ಪೊಲೀಸರು ಖದೀಮರನ್ನ ಪತ್ತೆ ಹಚ್ಚಬೇಕು. ಇಲ್ಲಾವಾದರೆ ಬೇಸಿಗೆಯಲ್ಲಿ ರೈತರಿಗೆ ಸಮಸ್ಯೆಯಾಗುತ್ತದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ಪತ್ರಿಕೆ ನಡೆಸುವುದು ಸವಾಲಿನ ಕೆಲಸ | ತತ್ವನಿಷ್ಠ ದಿನಪತ್ರಿಕೆ, ಟೆಕ್ ವೈದ್ಯ ವಾರಪತ್ರಿಕೆ ಶಿರಸಿಯಲ್ಲಿ ಬಿಡುಗಡೆ

ಪತ್ರಿಕೆಗಳು ಸಮಾಜಕ್ಕೆ ಹೊರೆಯಲ್ಲ: ವಿಶ್ವೇಶ್ವರ ಭಟ್

ಶಿರಸಿ: ಉತ್ತರಕನ್ನಡದಲ್ಲಿ ತತ್ವನಿಷ್ಠ ದಿನ ಪತ್ರಿಕೆ ಹಾಗೂ ಟೆಕ್ ವೈದ್ಯ ವಾರ ಪತ್ರಿಕೆ ಬಿಡುಗಡೆಗೊಂಡಿರುವುದು ಹರ್ಷವಾಗಿದೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು.

ನಗರದ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಭಾನುವಾರ ತತ್ವನಿಷ್ಠ ಪತ್ರಿಕೆ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಪತ್ರಿಕೆಗೂ, ಪ್ರಭಾವಕ್ಕೂ, ಪ್ರಸಾರಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ನಾವು ಕೊಡುವ ಗುಣಮಟ್ಟದ ಪತ್ರಿಕೆಯನ್ನು ಎತ್ತರಕ್ಕೇರಿಸುತ್ತದೆ. ಪತ್ರಿಕೆಗಳು ಸಮಾಜಕ್ಕೆ ಹೊರೆಯಲ್ಲ. ಪತ್ರಿಕೆಗಳು ಅಧಿಕವಾದಂತೆ ಓದುಗರ ಸಂಖ್ಯೆಯೂ ಹೆಚ್ಚಾಗುತ್ತದೆ. ಒಬ್ಬ ಲೇಖಕ ಬರೆಯಲು ಆರಂಭಿಸಿದರೆ 100 ಜನ ಅಕ್ಷರವಂತರು ಹುಟ್ಟುತ್ತಾರೆ. ಒಂದು ಪುಸ್ತಕ ಬಿಡುಗಡೆಯಾದರೆ ಸಾವಿರ ಜನ ಅಕ್ಷರಸ್ಥರು ಹುಟ್ಟುತ್ತಾರೆ. ಒಂದು ಪತ್ರಿಕೆಯಿಂದ 10 ರಿಂದ 15 ಸಾವಿರ ಓದುಗರು ಹುಟ್ಟುತ್ತಾರೆ. ಹೊಸ ಪತ್ರಿಕೆ ಹುಟ್ಟಿಕೊಂಡರೆ ಆ ಜಿಲ್ಲೆಯಲ್ಲಿ ಒಂದು ಸಂತೋಷದ ಸಂದೇಶ ಸಿಗುತ್ತದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಅಕ್ಷರವಂತರಿದ್ದರಿಂದ ಒಂದಿಷ್ಟು ಪ್ರಯತ್ನ ನಡೆಯುತ್ತಿದ್ದು, ಪ್ರವೀಣ ಹೆಗಡೆ ಕರ್ಜಗಿ ಹಾಗೂ ನಾಗರಾಜ ವೈದ್ಯ ಪ್ರಯತ್ನವನ್ನು ಮನಸಾರೆ ಶ್ಲಾಘಿಸುತ್ತೇನೆ ಎಂದರು.

ಪತ್ರಿಕೆ ನಡೆಸುವುದು ಇಂದಿನ ದಿನದಲ್ಲಿ ಸವಾಲಿನ ಕೆಲಸ. ಸಾರಿಗೆ ಸಂಸ್ಥೆ ನಡೆಸುವುದು ಹಾಗೂ ಪತ್ರಿಕೆ ನಡೆಸುವುದು ಒಂದೇ ಸಮ. ಖಾಲಿ ಬಸ್ಸು ಇದ್ದರೂ ಓಡಿಸಬೇಕು. ಅದರಂತೆ ಪತ್ರಿಕೆಯೂ ಜಾಹೀರಾತು ಇಲ್ಲದೆಯೂ ಮುದ್ರಣ ಮಾಡಬೇಕು. ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ದರದಲ್ಲಿ ಮಾರಾಟ ಆಗುವುದು ಪತ್ರಿಕೆ ಮಾತ್ರ. ಪತ್ರಿಕೆಗಳಿಗೆ ಜಾಹೀರಾತು ಬಂದರೆ ಮಾತ್ರ ಲಾಭ. ನಮ್ಮ ಪತ್ರಿಕೆ ಓದುಗರು ಯಾರು, ಅವರಿಗೆ ಏನು ಬೇಕು ಎಂಬುದನ್ನು ತಿಳಿದುಕೊಂಡು ಲೇಖನ ನೀಡಿದರೆ ಪತ್ರಿಕೋದ್ಯಮದಲ್ಲಿ ಖಂಡಿತ ಯಶಸ್ಸು ಲಭಿಸುತ್ತದೆ. ಪತ್ರಿಕೆಯನ್ನು ಯಶಸ್ವಿ ಉದ್ಯಮವನ್ನಾಗಿ ಮಾಡಬೇಕು ಎಂದರು.

ಟೆಕ್ ವೈದ್ಯ ವಾರಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಹೊಸದಿಗಂತ ಸಂಪಾದಕ ವಿನಾಯಕ ಭಟ್ಟ, ತತ್ವ ಎಲ್ಲರಿಗೂ ಇರುತ್ತದೆ. ಆದರೆ ನಿಷ್ಠೆ ಕಡಿಮೆ. ಪತ್ರಿಕೆ ದರ ಏರಿಕೆ ಮಾಡಿದರೆ ಖರೀದಿಸುವವರ ಸಂಖ್ಯೆ ಕಡಿಮೆಯಾಗುತ್ತದೆ. ಆದ್ದರಿಂದ ಪತ್ರಿಕೆಗಳು ಜಾಹೀರಾತುದಾರರ ಹಿಡಿತದಲ್ಲಿದೆ. ಒಳ್ಳೆಯ ಸಂಗತಿಗೆ ನಾವು ಬೆಂಬಲ ನೀಡಿದರೆ ಒಳ್ಳೆಯ ಸಂಗತಿ ಹೆಚ್ಚಾಗುತ್ತದೆ. ನಾವು ವಿಮರ್ಶೆ ಮಾಡಿಕೊಂಡರೆ ಉಳಿದವರಿಂದ ಒಳ್ಳೆಯದನ್ನು ನಿರೀಕ್ಷಿಸಲು ಸಾಧ್ಯ. ಇಂದಿನ ದಿನಗಳಲ್ಲಿ ಡಿಜಿಟಲ್ ಸಾಕ್ಷರತೆ ಅಗತ್ಯ. ಅದು ಟೆಕ್ ವೈದ್ಯ ನೀಡುತ್ತಿದೆ ಎಂದರು. ಇದೇ ವೇಳೆ ಜಲತಜ್ಞ ಹಾಗೂ ಪರಿಸರ ಬರಹಗಾರ ಶಿವಾನಂದ ಹೆಗಡೆ ಕಳವೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಟಿ.ಎಸ್.ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ, ಶ್ರೀನಿವಾಸ ಹೆಬ್ಬಾರ, ಉಪೇಂದ್ರ ಪೈ, ಪಂಚಾಯತ್ ರಾಜ್ ವಿಕೇಂದ್ರೀಕರಣದ ರಾಜ್ಯ ಉಪಾಧ್ಯಕ್ಷ ಪ್ರಮೋದ ಹೆಗಡೆ, ವಿಧಾನಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ, ಜನಮಾಧ್ಯಮ ಸಂಪಾದಕ ಶ್ರೀಧರ ಮಂಗಳೂರ, ವಿಶ್ವಂಭರ ಪತ್ರಿಕೆ ಪ್ರಧಾನ ಸಂಪಾದಕ ಅನಂತಮೂರ್ತಿ ಹೆಗಡೆ, ಕೆನರಾ ಎಕ್ಸಲೆನ್ಸ್ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಜಿ.ಹೆಗಡೆ ಕುಮಟಾ, ಟೆಕ್ ವೈದ್ಯ ಪ್ರಧಾನ ಸಂಪಾದಕ ನಾಗರಾಜ ವೈದ್ಯ, ತತ್ವನಿಷ್ಠ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಮಹೇಶ್ ಹೆಗಡೆ ಯಲಗೋಡಮನೆ ಮತ್ತಿತರರು ಉಪಸ್ಥಿತರಿದ್ದರು.

ಉತ್ತರಕನ್ನಡ ಜಿಲ್ಲೆಯ ಶಿರಸಿಯಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಭಾನುವಾರ ತತ್ವನಿಷ್ಠ ದಿನಪತ್ರಿಕೆ ಹಾಗೂ ಟೆಕ್ ವೈದ್ಯ ವಾರಪತ್ರಿಕೆ ಬಿಡುಗಡೆ ಮಾಡಿದರು. ಹೊಸದಿಗಂತ ಸಂಪಾದಕ ವಿನಾಯಕ ಭಟ್ಟ, ಪತ್ರಕರ್ತ ಹರೀಶ್ ಕೋಣೆಮನೆ, ಟಿ.ಎಸ್.ಎಸ್ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಸೇರಿ ಹಲವರಿದ್ದರು.

> ಪತ್ರಿಕೆಗಳು ಬಂದೂಕಿಗಿಂತ ಅಪಾಯಕಾರಿ. ಬಂದೂಕಿಗೆ ಮದ್ದು-ಗುಂಡು ಹಾಕಿ ಹಾರಿಸಬೇಕು. ಆದರೆ ಪತ್ರಿಕೆಯು ಹಾಗಲ್ಲ. ಸದ್ದು ಮಾಡಿದರೂ ಸಾಕು.
>
> - **ವಿಶ್ವೇಶ್ವರ ಭಟ್**, ವಿಶ್ವವಾಣಿ ಪ್ರಧಾನ ಸಂಪಾದಕ

ಪತ್ರಿಕೆಗೆ ಭವಿಷ್ಯ: ನಿರಂತರ ಚರ್ಚೆ

ಪತ್ರಕರ್ತ ಹರಿಪ್ರಕಾಶ ಕೋಣೆಮನೆ ಮಾತನಾಡಿ, ಟಿವಿ ಮಾಧ್ಯಮ ನಾಡಿನ ಉದ್ದಗಲಕ್ಕೂ ವ್ಯಾಪಿಸುತ್ತಿರುವ ಈ ಸಂದರ್ಭದಲ್ಲಿ ಪತ್ರಿಕೆಗೆ ಭವಿಷ್ಯ ಇದೆಯೇ ಎಂಬ ಚರ್ಚೆ ನಿರಂತವಾಗಿ ನಡೆಯುತ್ತಿದೆ. ದೂರದರ್ಶನ ಬಂದ ಮೇಲೆ ಅನೇಕ ಪತ್ರಿಕೆ ಹುಟ್ಟಿವೆ. ಅನೇಕ ಪತ್ರಿಕೆ ನಶಿಸಿವೆ. ಹುಟ್ಟಿದ ಮಗು ಎಲ್ಲವೂ ಬದುಕಲು ಸಾಧ್ಯವಿಲ್ಲ. ಬದುಕಿದರೂ ಯಶಸ್ಸು ಲಭಿಸುವುದಿಲ್ಲ. ಪತ್ರಿಕಾ ರಂಗದಲ್ಲಿಯೂ ಕಾಲ ಕಾಲಕ್ಕೆ ಹೊಸ ಸಾಹಸಕ್ಕೆ ಕೈ ಹಾಕಬೇಕಿದೆ. ಸೋಲಿಗೆ ಗೆಲುವಿನಷ್ಟು ಬೆಲೆ ಇದೆ. ಯಾವ ಪ್ರಯತ್ನವೂ ನಿಷ್ಪ್ರಯೋಜಕವಲ್ಲ ಎಂದರು.

ಸಮಾಚಾರ ಸಣ್ಣದಲ್ಲ

ಕೃಷಿ ಹೊಂಡದಲ್ಲಿ ಇಬ್ಬರ ಶವ ಪತ್ತೆ

ಚಾಮರಾಜನಗರ: ಹನೂರು ತಾಲೂಕಿನ ಗುಳ್ಯದ ಬಯಲು ಬಳಿಯ ಕೃಷಿ ಜಮೀನಿನ ನೀರಿನ ಹೊಂಡದಲ್ಲಿ ಪುರುಷ ಹಾಗೂ ಮಹಿಳೆಯ ಶವ ಪತ್ತೆಯಾಗಿದೆ. ಮೃತರನ್ನು ಮೀನಾಕ್ಷಿ (38) ಹಾಗೂ ರವಿ (40) ಎಂದು ಗುರುತಿಸಲಾಗಿದೆ. ಇವರನ್ನು ಕೊಲೆ ಮಾಡಲಾಗಿದೆಯೇ ಅಥವಾ ಆತಹತ್ಯೆ ಮಾಡಿಕೊಂಡಿದ್ದಾರೆಯೇ ಎಂಬ ಬಗ್ಗೆ ಸದ್ಯಕ್ಕೆ ತಿಳಿದುಬಂದಿಲ್ಲ ಎಂದು ಹನೂರು ಠಾಣೆ ಪೊಲೀಸರು ತಿಳಿಸಿದ್ದಾರೆ. ಭಾನುವಾರ ಬೆಳಗ್ಗೆ ರೈತರೊಬ್ಬರು ತಮ ಜಮೀನಿಗೆ ಬಂದು ನೋಡಿದಾಗ ಇಬ್ಬರ ಶವಗಳು ತೇಲುತ್ತಿದ್ದವು. ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದಾಗ ಸ್ಥಳಕ್ಕೆ ಬಂದ ಅವರು ಶವಗಳನ್ನು ಮೇಲೆತ್ತಿದ್ದಾಗ ಇವರಿಬ್ಬರು ಇದೇ ಗ್ರಾಮದ ನಿವಾಸಿಗಳು ಎಂಬುದು ತಿಳಿದುಬಂದಿದೆ. ಶವದ ಮೇಲೆ ಗಾಯದ ಗುರುತುಗಳಿದ್ದು, ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಮಹಿಳೆಗೆ ವಿವಾಹ ವಾಗಿದ್ದು, ಪುರುಷ ಅವಿವಾಹಿತ ಇಬ್ಬರ ನಡುವೆ ಅನೈತಿಕ ಸಂಬಂಧವಿತ್ತು ಎನ್ನಲಾಗಿದೆ. ಸ್ಥಳಕ್ಕೆ ಹನೂರು ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಗಣೇಶ ವಿಸರ್ಜನೆ ವೇಳೆ ಯುವಕ ಸಾವು

ರಾಯಚೂರು: ಗಣೇಶಮೂರ್ತಿ ಮೆರವಣಿಗೆ ವೇಳೆ ವಿದ್ಯುತ್ ತಂತಿ ತಾಗಿ ಯುವಕನೊಬ್ಬ ಮೃತಪಟ್ಟಿರುವ ಘಟನೆ ತಾಲೂಕಿನ ಗಟ್ಟು ಬಿಚ್ಚಾಲಿಯಲ್ಲಿ ನಡೆದಿದೆ. ನರಸಿಂಹ (22) ಮೃತ ದುರ್ದೈವಿ. ಬೊಲೆರೋ ವಾಹನದಲ್ಲಿ ಗಣೇಶಮೂರ್ತಿಯ ನ್ನಿಟ್ಟುಕೊಂಡು ವಿಸರ್ಜನೆಗಾಗಿ ಹನುಮಾಪುರ ಬಳಿಯ ಜೋಳಿ ಬಂಡಾದಲ್ಲಿ ತೆರಳುವಾಗ ರಸ್ತೆ ಮಧ್ಯೆ ಹಾದುಹೋಗಿದ್ದ ವಿದ್ಯುತ್ ತಂತಿ ನರಸಿಂಹನಿಗೆ ತಾಗಿದೆ. ವಿದ್ಯುತ್ ಸ್ಪರ್ಶಿಸುತ್ತಿದ್ದಂತೆ ನರಸಿಂಹನ ಪಕ್ಕದಲ್ಲಿದ್ದ ಕೆಲವರು ವಾಹನದಿಂದ ಕೆಳಗೆ ಬಿದ್ದು ಗಾಯಗೊಂಡಿದ್ದಾರೆ. ಆದರೆ, ನರ ಸಿಂಹ ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಯರಗೇರಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು: 50ಕ್ಕೂ ಹೆಚ್ಚು ಅಂಗಡಿಗಳ ತೆರವಿಗೆ ಕಿಡಿ

ಮೈಸೂರು: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ರಾಷ್ಟ್ರಪತಿಗಳಿಗೆ ಪತ್ರ ಬರೆಯುವ ಮೂಲಕ ಮೈಸೂರು ಅರಮನೆಗೆ ಭೇಟಿ ನೀಡುವಂತೆ ಕೋರಿದ್ದರು. ಅವರ ಆಹ್ವಾನದ ಬೆನ್ನಲ್ಲೇ ಸೆಪ್ಟೆಂಬರ್ 1 ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಮಿಸುತ್ತಿದ್ದಾರೆ. ಆ ಹಿನ್ನಲೆ ಇತ್ತ ನಗರದಲ್ಲಿ ಪಾಲಿಕೆ ಸಿಬ್ಬಂದಿ ಜೆಸಿಬಿ ಮೂಲಕ ಅಂಗಡಿಗಳನ್ನು ತೆರವುಗೊಳಿಸುತ್ತಿದ್ದಾರೆ. ಏಕಾಏಕಿ ತೆರವು ಹಿನ್ನಲೆ ವ್ಯಾಪಾರಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
01.09.2025
ಸೋಮವಾರದ ಅತಿಥಿ



ಶ್ರೀಮತಿ ಸುಮತಿ
ವಿಷಯ
ಆಕಾಶವಾಣಿ @ 90
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ: ವಿವೇಕಾನಂದ ನಗರ, ಮೈಸೂರು

ಸಮಸ್ಯೆಯೇನು..?

- ಸಮರ್ಪಕವಾಗಿ ಕಸ ವಿಲೇವಾರಿಯಾಗದೆ ಸೊಳ್ಳೆಗಳ ಕಾಟ ಹೆಚ್ಚಾಗಿರುವ ಬಗ್ಗೆ
- **ಪರಿಹಾರ:** ಮೈಸೂರು ನಗರದ ವಿವೇಕಾನಂದ ನಗರ ವಿಶ್ವಧಾತ್ರಿ ರಸ್ತೆಯಲ್ಲಿ ಸಮರ್ಪಕವಾಗಿ ಕಸ ತೆರವು ಮಾಡದೆ ಇರುವುದರಿಂದ ಸೊಳ್ಳೆ ಕಾಟ ವಿಪರೀತವಾಗಿದೆ. ಗಾಳಿಗೆ ಕಸವೆಲ್ಲ ರಸ್ತೆಗೆ ಹರಡುತ್ತಿದೆ ಎಂದು ಸಾರ್ವಜನಿಕರೊಬ್ಬರು ಪೋಸ್ಟ್ ಮಾಡಿದ್ದು, ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ರಸ್ತೆ ಬದಿ ಚೆಲ್ಲಾಪಿಲ್ಲಿಯಾಗಿದ್ದ ಕಸ ವಿಲೇವಾರಿ ಮಾಡಿಸಿದ್ದಾರೆ. ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆಯದಂತೆ ಪಾಲಿಕೆ ಕ್ರಮ ವಹಿಸಿದೆ.

ವಿಶ್ವವಾಣಿ

ಸಂಪಾದಕೀಯ

ಟ್ರಂಪ್ ನಡೆದದ್ದೇ ದಾರಿಯಲ್ಲ!

ಎಲ್ಲವೂ ತಾವು ಅಂದುಕೊಂಡಂತೆಯೇ ನಡೆಯುತ್ತದೆ, ಒಂದಿಡೀ ಜಗತ್ತೇ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುತ್ತದೆ ಎಂಬ ಭ್ರಮೆಯಲ್ಲಿದ್ದರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್. ಆದರೀಗ ಆ ಭ್ರಮೆಯ ಪೊರೆ ಕಳಚುತ್ತಿರುವುದು ನಿಧಾನವಾಗಿ ಅವರ ಅರಿವಿಗೆ ಬರುತ್ತಿರುವಂತಿದೆ. ಟ್ರಂಪ್ ನೇತೃತ್ವದ ಅಮೆರಿಕ ಸರಕಾರವು ವಿವಿಧ ದೇಶಗಳಿಂದ ಆಮದಾದ ಉತ್ಪನ್ನಗಳ ಮೇಲೆ ಅತಿರೇಕದ ಪ್ರತಿಸುಂಕ ಹೇರಿ ಬೊಕ್ಕಸವನ್ನು ತುಂಬಿಸಿಕೊಳ್ಳುವ ಹವಣಿಕೆಯಲ್ಲಿತ್ತು. ಈ ವಿಲಕ್ಷಣ ನಡೆಗೆ ವಿಶ್ವದ ವಿವಿಧ ದೇಶಗಳಿಂದ ಅಸಮಾಧಾನವೂ ವ್ಯಕ್ತವಾಗಿತ್ತು. ಆದರೆ ಇದ್ಯಾವುದಕ್ಕೂ ಜಗ್ಗದ ಟ್ರಂಪ್, ತಾವು ನಡೆದದ್ದೇ ದಾರಿ ಎಂಬ ಅಹಮಿಕೆಯನ್ನೇ ಮುಂದು ವರಿಸಿದ್ದರು. ಆದರೆ ಈಗ ಅಮೆರಿಕದ ಫೆಡರಲ್ ಮೇಲ್ಮನವಿ ನ್ಯಾಯಾಲಯವೇ ಟ್ರಂಪ್ ಸರಕಾರದ ಈ ಕ್ರಮವನ್ನು ತೀವ್ರವಾಗಿ ಖಂಡಿಸಿ, 'ಅತಿರೇಕದ ಪ್ರತಿಸುಂಕದ ಹೇರಿಕೆ ಕಾನೂನುಬಾಹಿರ' ಎಂದು ತೀರ್ಪು ನೀಡಿದೆ. ಪ್ರಾಯಶಃ ಟ್ರಂಪ್ ಮಹಾಶಯರಿಗೆ ಇದಕ್ಕಿಂತ ಮಿಗಿಲಾದ ಛೀಮಾರಿಯ ಅಗತ್ಯವಿಲ್ಲ ಎನಿಸುತ್ತದೆ. ಅನ್ಯದೇಶಗಳು ಟ್ರಂಪ್‌ರೆಡೆಗೆ ಅಸಮಾಧಾನವನ್ನು ತೋರುವುದು ಒತ್ತಟ್ಟಿಗಿರಲಿ, ಸ್ವದೇಶದಲ್ಲಿಯೇ ಅವರೆಡೆಗೆ ಹೀಗೆ ಅಪಸ್ವರ ಹೊಮ್ಮಿರುವುದು ಗಮನಾರ್ಹ. ಟ್ರಂಪ್ ಇನ್ನಾದರೂ ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರಾ ಎಂಬುದನ್ನು ಕಾದುನೋಡಬೇಕು. ಮತ್ತೊಂದೆಡೆ, ಭಾರತ, ರಷ್ಯಾ, ಚೀನಾ ದೇಶಗಳು ಪರಸ್ಪರ ಕೈಜೋಡಿಸಿ ಮಹಾವ್ಯೂಹವನ್ನು ರಚಿಸಿಕೊಂಡಿರುವುದು ಟ್ರಂಪ್‌ರ ನಿದ್ರೆಗೆಡಿಸಿದೆ ಎಂಬು ದರಲ್ಲಿ ಸಂಶಯವಿಲ್ಲ. ಏಕೆಂದರೆ, ಈ ಮೂರೂ ರಾಷ್ಟ್ರಗಳು ಅಮೆರಿಕದ ಏಕಪಕ್ಷೀಯ ನೀತಿಯ ವಿರುದ್ಧ ಮತ್ತೇನಾದರೂ ರಣತಂತ್ರವನ್ನು ಹೆಣೆದರೆ ಅದನ್ನು ಎದುರಿಸುವುದು ಹೇಗೆ ಎಂಬ ಲೆಕ್ಕಾಚಾರದಲ್ಲೇ ಅವರು ತಮ್ಮ ಹೆಚ್ಚಿನ ಸಮಯವನ್ನು ವ್ಯಯಿಸಬೇಕಾಗಿ ಬಂದಿದೆ. ಅಮೆರಿಕದ ಜನರು ಎರಡನೇ ಬಾರಿಗೆ ಹರಿವಾಣದಲ್ಲಿ ಇಟ್ಟುಕೊಟ್ಟಿರುವ ಅಧಿಕಾರವನ್ನು ಸದುಪಯೋಗ ಮಾಡಿಕೊಳ್ಳದೆ, ಅನವಶ್ಯಕ ಚೇಷ್ಟೆಗಳಿಗೆ ಮುಂದಾಗುತ್ತಿರುವ ಟ್ರಂಪ್ ಪ್ರಾಯಶಃ ಅದಕ್ಕಾಗಿ ದುಬಾರಿ ಬೆಲೆಯನ್ನೇ ತೆರಲಿದ್ದಾರೆ ಎನಿಸುತ್ತದೆ. ಕಾದು ನೋಡೋಣ...

ಸೊಂಪಾದಕೀಯ

ಟ್ರಂಪ್‌ಗೆ ಶಾಂತಿ?

ಮೊನ್ನೆ ಸೋಷಿಯಲ್ ಮೀಡಿಯಾಗಳಲ್ಲಿ ಹರಡಿದ ದೊಡ್ಡ ವದಂತಿ ಅಂದ್ರೆ- ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇನ್ನಿಲ್ಲ ಅನ್ನೋದು. ಸೆಲೆಬ್ರಿಟಿಗಳು ನಿಧನರಾಗಿದ್ದಾರೆ ಅಂತ ಸುಳ್ಳು ಸುದ್ದಿ ಹರಡೋದು ಈಗ ಕಾಮನ್ ಆಗಿದೆ. ಜನ ಲೈಕ್ಸ್, ಕಾಮೆಂಟ್‌ಗಳಿಗಾಗಿ ಯಾರನ್ನು ಬೇಕಾದರೂ ಸಾಯಿಸಿಬಿಡ್ತಾರೆ. ಈ ಬಾರಿಯ ವಿಕ್ಟಿಮ್ ಟ್ರಂಪ್. ಇನ್ನು ಈ ಸುದ್ದಿ ಹರಡಿದ ಟೈಮಿಂಗ್ ಕೂಡಾ ವಿಚಿತ್ರವಾಗಿತ್ತು. ಭಾರತ ಮತ್ತು ಚೀನಾ ನಡುವಿನ ಸಂಬಂಧ ಸರಿ ಇಲ್ಲ ಅನ್ನೋದು ಎಲ್ಲರಿಗೂ ಗೊತ್ತು. ಆದರೆ ಈಗ ಸದ್ಯಕ್ಕೆ ಭಾರತದ ಪ್ರಧಾನಿ ಮೋದಿ ಚೀನಾಗೆ ಭೇಟಿ ಕೊಟ್ಟಿದ್ದಾರೆ. ಅಲ್ಲದೆ 'ಇಂಡಿಯಾ-ಚೀನಾ ಭಾಯಿ ಭಾಯಿ' ಅಂತ ಕೈ ಜೋಡಿಸಿದ್ದಾರೆ. ಸದ್ಯದಲ್ಲೇ 'ಟಿಕ್ ಟಾಕ್' ಸೇರಿದಂತೆ ಇಂಡಿಯಾ ಈ ಮೊದಲು ಬ್ಯಾನ್ ಮಾಡಿದ್ದ ಚೀನಾದ ಹಲವು ಆ್ಯಪ್‌ಗಳಿಗೆ ಮತ್ತೆ ಜೀವ ಬಂದರೆ ಅಚ್ಚರಿ ಏನೂ ಇಲ್ಲ. ಇದು ಅಮೆರಿಕಕ್ಕಂತೂ ಆತಂಕ ತರುವ ವಿಷಯವೇ. ಹೇಳಿ ಕೇಳಿ ಭಾರತಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ಕೊಕ್ಕೆ ಹಾಕುವ ಕೆಲಸ ಮಾಡುತ್ತಿದ್ದ ಟ್ರಂಪ್, ಭಾರತವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಇದೇ ಹೊತ್ತಿನಲ್ಲಿ ಭಾರತವು ಚೀನಾದ ಜತೆ ಕೈಜೋಡಿಸಿರೋದು ಟ್ರಂಪ್‌ಗೆ ನುಂಗಲಾರದ ತುತ್ತೇ ಸರಿ. ಇದು ಹೀಗೇ ಮುಂದುವರಿದರೆ ನಾಳೆ ಮೋದಿ ಪಾಕಿಸ್ತಾನದ ಜತೆಯೇ ಕೈ ಜೋಡಿಸಿದರೂ ಆಶ್ಚರ್ಯ ಇಲ್ಲ ಅಂತ ಗಾಬರಿಯಾದ ಟ್ರಂಪ್‌ಗೆ ಈ ಸುದ್ದಿಯಿಂದ ಹೃದಯಾಘಾತ ಆಗಿರಬಹುದು ಅಂತ ಅನೇಕರು ನಂಬಿಯೇ ಬಿಟ್ಟಿದ್ದರೂ ಅದರಲ್ಲಿ ಆಶ್ಚರ್ಯ ಇಲ್ಲ. ಹಾಗೆ, ಈ ನಂಬಿದವರು, ಭಾರತ-ಪಾಕಿಸ್ತಾನದ ಯುದ್ಧ ನಿಲ್ಲಿಸಿದ ನನಗೆ ನೊಬೆಲ್ ಶಾಂತಿ ಪ್ರಶಸ್ತಿ ಕೊಡಬೇಕು ಅಂತ ಬಡ್ಕೊತಾ ಇದ್ದ ಟ್ರಂಪ್‌ಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಗದೇ ಇದ್ರೂ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಅಂತ ಪ್ರಾರ್ಥಿಸಿದ್ದು ಮಾತ್ರ ಸುಳ್ಳು ಸುದ್ದಿ.

ಸಂಪಾದಕರ ಸದ್ಯಶೋಧನೆ

ನಾಯಿಗಳಿಗೂ ವಿಮಾನಯೋಗ

ಮುಂದಿನ ಬಾರಿ ನೀವು ರೋಮ್‌ಗೆ ವಿಮಾನ ಹತ್ತುವಾಗ, ಕಿಟಕಿಯ ಬಳಿ ಗೋಲ್ಡನ್ ರಿಟ್ರೈವರ್ ಅಥವಾ ಇನ್ನಾವುದೇ ದೊಡ್ಡ ನಾಯಿಯನ್ನು ಕಂಡರೆ ಆಶ್ಚರ್ಯಪಡಬೇಡಿ. ಇತ್ತೀಚೆಗೆ ಇಟಲಿ ತನ್ನ ವಿಮಾನಯಾನ ನೀತಿಯಲ್ಲಿ ಮಹತ್ವದ ಬದಲಾವಣೆ ಮಾಡಿದೆ. ಇನ್ನು ಮುಂದೆ ಚಿಕ್ಕ ನಾಯಿಗಳು ಮಾತ್ರವಲ್ಲ, ಮಧ್ಯಮ ಮತ್ತು ದೊಡ್ಡ ಗಾತ್ರದ ನಾಯಿಗಳೂ ಅವುಗಳ ಮಾಲೀಕರೊಂದಿಗೆ ವಿಮಾನದ ಕ್ಯಾಬಿನ್‌ನಲ್ಲಿ ಪ್ರಯಾಣಿಸಬಹುದು. ಇದು ಪ್ರಾಣಿಪ್ರಿಯರಿಗೆ ನಿಜಕ್ಕೂ ಸಂತೋಷದ ಸುದ್ದಿಯೇ. ಈ ತನಕ ದೊಡ್ಡ ನಾಯಿಗಳನ್ನು ವಿಮಾನದಲ್ಲಿ ಕರೆದೊಯ್ಯಬೇಕಾದರೆ, ಅವುಗಳನ್ನು ಸಾಮಾನು ಸಾಗಿಸುವ ಜಾಗದಲ್ಲಿ (cargo hold) ಇರಿಸಬೇಕಿತ್ತು. ಇದು ನಾಯಿಗಳಿಗೆ ಹಾಗೂ ಅವುಗಳ ಮಾಲೀಕರಿಗೆ ತೀವ್ರ ಕಿರಿಕಿರಿಯನ್ನುಂಟುಮಾಡುತ್ತಿತ್ತು. ಕೆಲವು ಸಲ ಕಾರ್ಗೋದಲ್ಲಿಟ್ಟ ನಾಯಿಗಳು ಉಸಿರುಗಟ್ಟಿ ಸತ್ತುಹೋಗಿದ್ದವು. ತಮ್ಮ ಪ್ರೀತಿಯ ಸಾಕುಪ್ರಾಣಿಗಳನ್ನು ಸಾಮಾನುಗಳ ಜತೆ ಕಳುಹಿಸುವುದು ಅನೇಕರಿಗೆ ತೀವ್ರ ಹಿಂಸೆಯ ಅನುಭವವಾಗಿತ್ತು. ಆದರೆ, ಇಟಲಿ ಈ ಸಮಸ್ಯೆಯನ್ನು ಈಗ ಸಂಪೂರ್ಣವಾಗಿ ನಿವಾರಿಸಿದೆ. ಈ ಹೊಸ ನಿಯಮದ ಪ್ರಕಾರ, ನಿಮ್ಮ ನಾಯಿ ಸುಮ್ಮನಿದ್ದು, ಸರಿಯಾಗಿ ವರ್ತಿಸಬೇಕು ಮತ್ತು ಅದಕ್ಕೆ ಸರಪಣಿ (ಲೀಶ್) ಯನ್ನು ಕಡ್ಡಾಯವಾಗಿ ಹಾಕಬೇಕು. ಈ ಷರತ್ತುಗಳನ್ನು ಪೂರೈಸಿದರೆ, ನಿಮ್ಮ ನಾಯಿ ನಿಮ್ಮ ಪಕ್ಕದಲ್ಲೇ ಕುಳಿತುಕೊಂಡು ವಿಮಾನ ಪ್ರಯಾಣವನ್ನು ಆನಂದಿಸಬಹುದು. ITA Airways ಮತ್ತು Neosನಂಥ ಕೆಲವು ಪ್ರಮುಖ ಏರ್‌ಲೈನ್ಸ್‌ಗಳು ಈಗಾಗಲೇ ಈ ನೀತಿಯನ್ನು ಅನುಸರಿಸಲು ಪ್ರಾರಂಭಿಸಿವೆ. ಅವು ಪ್ರಾಣಿಗಳನ್ನು ಕೇವಲ ಸಾಮಾನುಗಳಂತೆ ನೋಡದೇ, ಪ್ರಯಾಣಿಕರಂತೆ ಪರಿಗಣಿಸಿ ಸೀಟುಗಳನ್ನು ಒದಗಿಸುತ್ತಿವೆ. ಇದು ಪ್ರಾಣಿಗಳ ಕಲ್ಯಾಣಕ್ಕೆ ಒಂದು ದೊಡ್ಡ ಹೆಜ್ಜೆಯಾಗಿದೆ. ಅವುಗಳಿಗೆ ಪ್ರಯಾಣದ ಸಮಯದಲ್ಲಿ ಸುರಕ್ಷತೆ ಮತ್ತು ಸೌಕರ್ಯ ದೊರಕುತ್ತದೆ. ಮಾಲೀಕರು ತಮ್ಮ ನಾಯಿಯ ಪಕ್ಕದಲ್ಲಿ ನಿಶ್ಚಿಂತರಾಗಿ ಪ್ರಯಾಣಿಸಬಹುದು. ಈ ಕ್ರಮವು ವಿಮಾನ ಪ್ರಯಾಣವನ್ನು ಹೆಚ್ಚು ಆಪ್ತ ಹಾಗೂ ಪ್ರೀತಿಯಿಂದ ಕೂಡಿದ ಅನುಭವವನ್ನಾಗಿಸಿದೆ. ಈ ಬದಲಾವಣೆಯಿಂದಾಗಿ ಇಟಲಿ ಯುರೋಪಿನಲ್ಲಿ ಅತಿ ಹೆಚ್ಚು ನಾಯಿ ಸ್ನೇಹಿ ವಾಯುಪ್ರದೇಶವೆಂದು ಪರಿಗಣಿಸಲ್ಪಟ್ಟಿದೆ. ಇಟಲಿಯ ವಿಮಾನಯಾನ ಸಂಸ್ಥೆಗಳು ಈ ಹೊಸ ನೀತಿಯನ್ನು ಅಳವಡಿಸಿಕೊಂಡಿರುವುದರಿಂದ, ದೊಡ್ಡ ನಾಯಿಗಳ ಪ್ರಯಾಣಕ್ಕೆ ಇನ್ನೂ ಕೆಲವು ನಿರ್ದಿಷ್ಟ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಸಾಮಾನ್ಯವಾಗಿ, ವಿಮಾನಯಾನ ಸಂಸ್ಥೆಗಳು ನಾಯಿಯ ಗರಿಷ್ಠ ತೂಕದ ಮಿತಿಯನ್ನು ನಿಗದಿಪಡಿಸುತ್ತವೆ. ಇದು ನಾಯಿ ಮತ್ತು ಅದರ ವಾಹಕದ (carrier) ಒಟ್ಟು ತೂಕವಾಗಿರುತ್ತದೆ. ಉದಾಹರಣೆಗೆ, ಕೆಲವು ಏರ್‌ಲೈನ್‌ಗಳು 75 ಕೆ.ಜಿ.ವರೆಗಿನ ನಾಯಿಗಳಿಗೆ ಅವಕಾಶ ನೀಡುತ್ತವೆ. ವಿಮಾನದಲ್ಲಿ ನಾಯಿಯನ್ನು ನೆಲದ ಮೇಲೆ ಇರಿಸಲು, ಅದು ಸಾಕಷ್ಟು ದೊಡ್ಡದಾದ ಮತ್ತು ದೃಢವಾದ ವಾಹಕದಲ್ಲಿ ಇರಬೇಕು. ಕೆಲವು ಸಂದರ್ಭಗಳಲ್ಲಿ, ದೊಡ್ಡ ನಾಯಿಗಳು ಲೀಶ್ (leash) ಹಾಕಿ ಕುಳಿತುಕೊಳ್ಳಲು ಅನುಮತಿ ನೀಡಲಾಗುತ್ತದೆ, ಆದರೆ ಅವುಗಳಿಗೆ ವಿಶೇಷವಾಗಿ ಗೊತ್ತುಪಡಿಸಿದ ಜಾಗದಲ್ಲಿ ಇರಬೇಕು. ದೊಡ್ಡ ನಾಯಿಗಳನ್ನು ಕ್ಯಾಬಿನ್‌ನಲ್ಲಿ ಕರೆದೊಯ್ಯಲು ಮಾಲೀಕರು ಹೆಚ್ಚುವರಿ ಶುಲ್ಕವನ್ನು ಪಾವತಿಸಬೇಕಾಗಬಹುದು. ಈ ಶುಲ್ಕವು ನಾಯಿಯ ತೂಕ ಮತ್ತು ಪ್ರಯಾಣಿಸುವ ದೂರದ ಮೇಲೆ ಆಧಾರಿತವಾಗಿರುತ್ತದೆ. ಈ ನೀತಿಯು ಕೇವಲ ಪ್ರಯಾಣದ ಅನುಕೂಲಕ್ಕಾಗಿ ಮಾತ್ರವಲ್ಲ, ನಾಯಿಗಳ ಮಾನಸಿಕ ಮತ್ತು ದೈಹಿಕ ಆರೋಗ್ಯದ ದೃಷ್ಟಿಯಿಂದಲೂ ಬಹಳ ಮುಖ್ಯವಾಗಿದೆ. ಕಾರ್ಗೋ ವಿಭಾಗವು ತಂಪು, ಕತ್ತಲು ಮತ್ತು ಕರ್ಕಶ ಶಬ್ದಗಳಿಂದ ಕೂಡಿರುತ್ತದೆ. ಅಲ್ಲಿ ಪ್ರಯಾಣಿಸುವುದು ನಾಯಿಗಳಿಗೆ ಭಯ ಮತ್ತು ಆತಂಕವನ್ನು ಉಂಟುಮಾಡಬಹುದು. ಕ್ಯಾಬಿನ್‌ನಲ್ಲಿ ಮಾಲೀಕರ ಜತೆ ಇರುವುದರಿಂದ, ನಾಯಿಗಳು ಸುರಕ್ಷಿತ ಮತ್ತು ಶಾಂತವಾಗಿರುತ್ತವೆ. ಕಾರ್ಗೋ ವಿಭಾಗದಲ್ಲಿ ವಾಯು ಒತ್ತಡ ಮತ್ತು ಉಷ್ಣಾಂಶವು ನಿಯಂತ್ರಣದಲ್ಲಿ ಇರುವುದಿಲ್ಲ. ಇದು ನಾಯಿಗಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಬಹುದು. ಆದರೆ ಕ್ಯಾಬಿನ್‌ನಲ್ಲಿ ಹವಾಮಾನವು ಯಾವಾಗಲೂ ನಿಯಂತ್ರಿತವಾಗಿರುತ್ತದೆ. ಕಾರ್ಗೋ ವಿಭಾಗದಲ್ಲಿ ಸಾಮಾನುಗಳ ಮಧ್ಯೆ ನಾಯಿಯ ವಾಹಕವು ಹಾನಿಗೊಳಗಾಗುವ ಸಾಧ್ಯತೆ ಇರುತ್ತದೆ. ಕ್ಯಾಬಿನ್‌ನಲ್ಲಿ ಈ ಅಪಾಯ ಇರುವುದಿಲ್ಲ. ಇಟಲಿಯ ಈ ಕ್ರಮವು ಪ್ರಪಂಚದ ಇತರ ದೇಶಗಳಿಗಿಂತ ಭಿನ್ನವಾಗಿದೆ. ಅನೇಕ ದೇಶಗಳು ಮತ್ತು ಏರ್‌ಲೈನ್ಸ್‌ಗಳು ಕೇವಲ ಸಣ್ಣ ತಳಿಗಳ ನಾಯಿಗಳನ್ನು (ಉದಾಹರಣೆಗೆ 8-10 ಕೆ.ಜಿ. ಗಿಂತ ಕಡಿಮೆ ತೂಕದವು) ಮಾತ್ರ ಕ್ಯಾಬಿನ್‌ಗೆ ಅನುಮತಿಸುತ್ತವೆ. ದೊಡ್ಡ ನಾಯಿಗಳಿಗೆ ಇನ್ನೂ ಕಾರ್ಗೋ ವಿಭಾಗವೇ ಏಕೈಕ ಆಯ್ಕೆ. ಇದು ಇತರ ದೇಶಗಳಿಗೂ ಒಂದು ಉತ್ತಮ ಮಾದರಿ.

ಕಂಪ್ಲೇಂಟು ಪಟ್ಟಿ ರೆಡಿ ಮಾಡಿದ್ರು ರಾಜಣ್ಣ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಮಾಜಿ ಸಚಿವ, ಹಿರಿಯ ನಾಯಕ ಕೆ.ಎನ್.ರಾಜಣ್ಣ ದಿಲ್ಲಿ ದಂಡಯಾತ್ರೆಗೆ ಸಜ್ಜಾಗಿದ್ದಾರೆ. ಮಂತ್ರಿಗಿರಿ ಕಳೆದುಕೊಂಡ ನಂತರ ಮೌನವಾಗಿದ್ದ ಅವರೀಗ ಕಂಪ್ಲೇಂಟುಗಳ ಪಟ್ಟಿಯೊಂದಿಗೆ ಅಬ್ಬರಿಸಲು ನಿರ್ಧರಿಸಿದ್ದಾರೆ.

ಅಂದ ಹಾಗೆ, ಬಿಜೆಪಿಯ ಮತಗಳ್ಳತನದ ಬಗ್ಗೆ ರಾಹುಲ್ ಗಾಂಧಿ ಆರೋಪ ಮಾಡಿದಾಗ ವಿಸ್ಮಯ ವ್ಯಕ್ತಪಡಿಸಿದ್ದ ರಾಜಣ್ಣ ಇದೇ ಕಾರಣಕ್ಕಾಗಿ ಸಂಪುಟದಿಂದ ವಜಾ ಆಗಿದ್ದರು. ಹೀಗೆ ತಾವು ವಜಾ ಆಗುವುದರ ಹಿಂದೆ ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಪಕ್ಷದ ಉಸ್ತುವಾರಿ ಸುರ್ಜೇವಾಲಾ ಇದ್ದಾರೆ ಎಂಬ ತೀರ್ಮಾನಕ್ಕೆ ಬಂದ ರಾಜಣ್ಣ ಅವರು ತ್ವರಿತವಾಗಿ ದಿಲ್ಲಿಗೆ ಹೋಗಲು, ರಾಹುಲ್ ಗಾಂಧಿ ಅವರಿಗೆ ವಿವರ ನೀಡಲು ಬಯಸಿದ್ದರು.

ಆದರೆ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ರಾಜಣ್ಣ ಎಷ್ಟೇ ಪ್ರಯತ್ನಿಸಿದರೂ ದಿಲ್ಲಿಯಿಂದ ಸಕಾರಾತ್ಮಕ ಸಂದೇಶ ಬರುತ್ತಿಲ್ಲ. ಅರ್ಥಾತ್, ರಾಹುಲ್ ಗಾಂಧಿ ಅವರ ಭೇಟಿ ಮಾಡಲು ರಾಜಣ್ಣ ಅವರಿಗೆ ದಿಲ್ಲಿಯಲ್ಲಿರುವ ಮಧ್ಯವರ್ತಿಗಳು ಅವಕಾಶ ಕೊಡುತ್ತಿಲ್ಲ. ಈ ಹಿನ್ನೆಲೆಯಲ್ಲಿ ಕೆರಳಿರುವ ರಾಜಣ್ಣ ಅವರೀಗ ತಮ್ಮ ಹೇಳಿಕೆಯನ್ನು ಹೇಗೆ ತಿರುಚಲಾಗಿದೆ ಎಂಬುದರಿಂದ ಹಿಡಿದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಕಂಪ್ಲೇಂಟುಗಳಿರುವ ಪಟ್ಟಿಯನ್ನು ಸಿದ್ಧಗೊಳಿಸಿದ್ದಾರೆ. ಅವರ ಆಪ್ತರ ಪ್ರಕಾರ, ಕೆಲವೇ ದಿನಗಳಲ್ಲಿ ಈ ಪಟ್ಟಿ ರಾಹುಲ್ ಗಾಂಧಿ ಅವರ ಕೈ ತಲುಪಲಿದೆ. ಇ-ಮೇಲ್ ಮೂಲಕ ತಲುಪಲಿರುವ ಈ ಪಟ್ಟಿ ಸಹಜವಾಗಿ ರಾಹುಲ್ ಗಾಂಧಿ ಅವರ ಯೋಚನೆಗೆ ಕಾರಣವಾಗಲಿದೆ ಮತ್ತು ರಾಜಣ್ಣ ಅವರನ್ನು ಭೇಟಿ ಮಾಡಲು ಹಾತೊರೆಯುವಂತೆ ಮಾಡಲಿದೆ.

ಇವೇ ಮೂಲಗಳ ಪ್ರಕಾರ, ರಾಜಣ್ಣ ಅವರು ರೆಡಿ ಮಾಡಿರುವ ಕಂಪ್ಲೇಂಟುಗಳ ಪಟ್ಟಿಯಲ್ಲಿ, ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿದಿರುವ ಬಗ್ಗೆಯೇ ರಾಜಣ್ಣ ಅಚ್ಚರಿ ವ್ಯಕ್ತಪಡಿಸಿದ್ದಾರೆ. '2024ರ ಲೋಕಸಭಾ ಚುನಾವಣೆ ಮುಗಿದ ತಕ್ಷಣ ಕೆಪಿಸಿಸಿ ಅಧ್ಯಕ್ಷ ಸ್ಥಾನದಿಂದ ಡಿ.ಕೆ.ಶಿವಕುಮಾರ್ ಅವರನ್ನು ಬದಲಾಯಿಸುವುದಾಗಿ ನೀವೇ (ವರಿಷ್ಠರು) ಹೇಳಿದ್ದಿರಿ. ಆದರೆ ಚುನಾವಣೆ ಮುಗಿದು ಒಂದು ವರ್ಷ ಕಳೆದರೂ ಅವರನ್ನೇಕೆ ಬದಲಿಸಿಲ್ಲ?' ಎಂಬುದು ರಾಜಣ್ಣ ಅವರ ಮೊದಲ ಕಂಪ್ಲೇಂಟು. ಇನ್ನು ಎರಡನೆಯ ಕಂಪ್ಲೇಂಟು ಎಂದರೆ ಡಿ.ಕೆ.ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು ಎಂಬುದು.

ಅಂದ ಹಾಗೆ, ಉದ್ಯಮಿ ಮುಖೇಶ್ ಅಂಬಾನಿ ಅವರ ಪುತ್ರನ ಮದುವೆ ಮುಂಬೈನಲ್ಲಿ ನಡೆಯಿತಲ್ಲ? ಈ ಸಂದರ್ಭದಲ್ಲಿ ಅಂಬಾನಿ ಅವರು ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸುತ್ತಾರೆ ಮತ್ತು ಅವರ ಆಹ್ವಾನದ ಮೇರೆಗೆ ಸಮಾರಂಭದಲ್ಲಿ ಪಾಲ್ಗೊಂಡ ಡಿ.ಕೆ.ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದಾರೆ. ಇವತ್ತು ನರೇಂದ್ರ ಮೋದಿ ಅವರು ಕಾಂಗ್ರೆಸ್ಸನ್ನು ಎಷ್ಟು ದ್ವೇಷಿಸುತ್ತಾರೆ ಎಂದರೆ, ಅವಕಾಶ ಸಿಕ್ಕಾಗಲೆಲ್ಲ 'ಕಾಂಗ್ರೆಸ್ ಮುಕ್ತ ಭಾರತ'ದ ಬಗ್ಗೆ ಮಾತನಾಡುತ್ತಾರೆ. ಅಂಥ ನರೇಂದ್ರ ಮೋದಿಯವರ ಜತೆ ಮಾತನಾಡಲು ಡಿ.ಕೆ.ಶಿವಕುಮಾರ್ ಅವರಿಗೆ ಇರುವ ವಿಷಯವೇನು? ಎಂಬುದು ರಾಹುಲ್ ಗಾಂಧಿಯವರ ಮುಂದೆ ರಾಜಣ್ಣ ಇಡಲಿರುವ ಅನುಮಾನ ಮತ್ತು ಕಂಪ್ಲೇಂಟು. ಇನ್ನು ಕೊಯಮತ್ತೂರಿನಲ್ಲಿ ಸದ್ಗುರು ಜಗ್ಗಿ ವಾಸುದೇವ್ ಅವರು ನಡೆಸಿದ ಕಾರ್ಯಕ್ರಮದಲ್ಲಿ ಕೇಂದ್ರದ ಗೃಹ ಸಚಿವ ಅಮಿತ್ ಶಾ ಪಾಲ್ಗೊಂಡಿದ್ದರಲ್ಲ? ಅದೇ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಅವರೂ ಪಾಲ್ಗೊಂಡಿದ್ದರು. ಹೀಗೆ ಒಂದೇ ವೇದಿಕೆಯಲ್ಲಿ ಅಮಿತ್ ಶಾ ಮತ್ತು ಡಿ.ಕೆ.ಶಿವಕುಮಾರ್ ಪಾಲ್ಗೊಳ್ಳುವುದು ಕಾಕತಾಳೀಯವಲ್ಲ, ಉದ್ದೇಶಪೂರ್ವಕ ಎಂಬುದು ರಾಜಣ್ಣ ಅವರ ಮೂರನೇ ಕಂಪ್ಲೇಂಟು.

ಈ ಮಧ್ಯೆ ತುಂಬಿದ ವಿಧಾನಸಭೆಯಲ್ಲಿ ನಿಂತು 'ನಮಸ್ತೆ ಸದಾ ವತ್ಸಲೆ' ಅಂತ ಆರೆಸ್ಸೆಸ್ ಗೀತೆಯನ್ನು ಡಿ.ಕೆ. ಶಿವಕುಮಾರ್ ಹೇಳುತ್ತಾರೆ. ಇದರ ಬೆನ್ನಲ್ಲೇ 'ಮೈಸೂರಿನ ಚಾಮುಂಡಿ ಬೆಟ್ಟ ಹಿಂದೂಗಳಿಗೆ ಸೇರಿದ್ದಲ್ಲ' ಎನ್ನುವ ಮೂಲಕ ಹಿಂದೂ ಮತಬ್ಯಾಂಕನ್ನು ಕ್ರೋಡೀಕರಿಸಿಕೊಳ್ಳಲು ಬಿಜೆಪಿಗೆ ಅವಕಾಶ ಮಾಡಿಕೊಡುತ್ತಾರೆ. ಹೀಗೆ ನೋಡುತ್ತಾ ಹೋದರೆ ಅವರ ಒಂದೊಂದು ನಡೆಯೂ ಬಿಜೆಪಿಗೆ ಪ್ಲಸ್ ಆಗುವಂತಿದೆ. ಇಷ್ಟಾಗಿಯೂ ಡಿ.ಕೆ.ಶಿವಕುಮಾರ್ ಅವರ ಇಂಥ ಹೆಜ್ಜೆಗಳ ವಿರುದ್ಧ ಕ್ರಮ ಕೈಗೊಳ್ಳುವ ಕೆಲಸವಾಗುವುದಿಲ್ಲ. ಆದರೆ ಮತಗಳ್ಳತನದ ಬಗ್ಗೆ ತಾವು ಆಡಿದ ಪೂರ್ತಿ ಮಾತುಗಳನ್ನು ಕೇಳದೆ ತಿರುಚಿರುವ ಒಂದು ವಿಡಿಯೋವನ್ನು ಮುಂದಿಟ್ಟುಕೊಂಡು ತಮ್ಮನ್ನು ಸಂಪುಟದಿಂದ ವಜಾ ಮಾಡಲಾಗಿದೆ. ಆದರೆ ವರಿಷ್ಠರು ಗಮನಿಸಬೇಕಿರುವ ಬಹುಮುಖ್ಯ ಸಂಗತಿ ಎಂದರೆ, ಮುಂದಿನ ದಿನಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ನಡೆದರೆ ಕಾಂಗ್ರೆಸ್ ಪಕ್ಷ ಗೆದ್ದು ಅಧಿಕಾರ ಹಿಡಿಯುವುದಿರಲಿ, ಹೀನಾಯವಾಗಿ ಸೋಲುತ್ತದೆ. ಇದಕ್ಕೆ 'ಗ್ರೇಟರ್ ಬೆಂಗಳೂರು' ಎಪಿಸೋಡೇ ಬಹುಮುಖ್ಯ ಕಾರಣ. ಯಾಕೆಂದರೆ ಅದರ ಹೆಸರಿನಲ್ಲಿ ಆಗಿರುವ ಅಲ್ಲೋಲ ಕಲ್ಲೋಲಗಳಿಂದ ಬಿಲ್ಡರುಗಳು ಸೇರಿದಂತೆ ಬಹುತೇಕ ಉದ್ಯಮ ವಲಯವೇ ಸಿಟ್ಟಿಗೆದ್ದಿದೆ ಎಂಬುದು ರಾಜಣ್ಣ ಅವರ ಕಂಪ್ಲೇಂಟು ಪಟ್ಟಿಯಲ್ಲಿರುವ ಮತ್ತೊಂದು ಅಂಶ.

ಹೀಗೆ ಹಲವು ವಿವರಗಳಿರುವ ಕಂಪ್ಲೇಂಟು ಪಟ್ಟಿಯನ್ನು ಈ ವಾರ ರಾಹುಲ್ ಗಾಂಧಿಯವರಿಗೆ ಕಳಿಸಲಿರುವ ರಾಜಣ್ಣ ಅವರು, ಇದರ ಆಧಾರದ ಮೇಲೆ ದಿಲ್ಲಿಗೆ ಬರುವಂತೆ ಕರೆ ಬಂದರೆ ದೌಡಾಯಿಸಲು ಸಜ್ಜಾಗಿದ್ದಾರೆ.

ರಾಜ್ಯ ಬಿಜೆಪಿಯಲ್ಲಿ 'ಭಾಗವತ'

ಈ ಮಧ್ಯೆ, ರಾಜ್ಯ ಬಿಜೆಪಿಯಲ್ಲಿ ಪುನಃ ಸಂಚಲನ ಶುರುವಾಗಿದೆ. ಆರೆಸ್ಸೆಸ್ ವರಿಷ್ಠರಾದ ಮೋಹನ್ ಭಾಗವತ್ ಅವರ ಹೇಳಿಕೆಯೇ ಇದಕ್ಕೆ ಕಾರಣ. ಕೆಲ ದಿನಗಳ ಹಿಂದೆ ಮೋಹನ್ ಭಾಗವತ್ ಅವರು, ''ಎಪ್ಪತ್ತೈದು ವರ್ಷಗಳಾದ ನಂತರ ತಾವು ಗೌರವಯುತವಾಗಿ ನಿವೃತ್ತಿಯಾಗಬೇಕು'' ಎನ್ನುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪರೋಕ್ಷವಾಗಿ ಚುಚ್ಚಿದ್ದರು. ಅರ್ಥಾತ್, ಎಪ್ಪತ್ತೈದು ವರ್ಷಗಳಾದ ನಂತರ ಪ್ರಧಾನಿ ಹುದ್ದೆಯಿಂದ ನರೇಂದ್ರ ಮೋದಿ ಕೆಳಗಿಳಿಯಲಿ ಎಂಬುದು ಅವರ ಇಂಗಿತವಾಗಿತ್ತು.

ಯಾವಾಗ ಅವರು ಈ ಸಿಗ್ನಲ್ಲು ನೀಡಿದರೋ, ನಂತರದಲ್ಲಿ ಬಿಜೆಪಿ ಪಾಳಯದಲ್ಲಿ ವಿವಿಧ ಬಗೆಯ ಚರ್ಚೆಗಳು ಶುರುವಾಗಿದ್ದವು. ಮೋದಿಯವರ ನಂತರ ಯೋಗಿ ಆದಿತ್ಯನಾಥ್ ಇಲ್ಲವೇ ನಿತಿನ್ ಗಡ್ಕರಿ ಅವರನ್ನು ಪ್ರಧಾನಿ ಗದ್ದುಗೆಯ ಮೇಲೆ ಕೂರಿಸಲು ಆರೆಸ್ಸೆಸ್ ಉತ್ಸುಕವಾಗಿದೆ ಎಂಬ ಮಾತುಗಳು ಕೇಳಿಬಂದಿದ್ದವು. ಆದರೆ ಕಳೆದ ವಾರ ಇದ್ದಕ್ಕಿದ್ದಂತೆ ಧ್ವನಿ ಬದಲಿಸಿದ ಮೋಹನ್ ಭಾಗವತ್ ಅವರು, ''ಎಪ್ಪತ್ತೈದು ವರ್ಷಗಳಾದ ತಕ್ಷಣ ನಾನು ನಿವೃತ್ತಿಯಾಗಬೇಕು ಎಂದೇನಿಲ್ಲ. ಸಂಘ ಎಲ್ಲಿಯವರೆಗೆ ಇರಲು ಹೇಳುತ್ತದೋ, ಅಲ್ಲಿಯವರೆಗೆ ನಾನು ಮುಂದುವರಿಯಬೇಕು'' ಅಂತ ಹೇಳಿದ್ದರು. ಯಾವಾಗ ಅವರು ಈ ಮಾತನಾಡಿದರೋ, ನಂತರ ಬಿಜೆಪಿ ಪಾಳಯದಲ್ಲಿ, ''ಮೋದಿ ಮತ್ತು ಆರೆಸ್ಸೆಸ್ ಮಧ್ಯೆ ಸಂಧಾನವಾಗಿದೆ. ಅದರ ಫಲವಾಗಿ ಮೋದಿ ಪ್ರಧಾನಿ ಹುದ್ದೆಯಲ್ಲಿ ಮುಂದುವರಿಯಲು ಭಾಗವತ್ ಗ್ರೀನ್ ಸಿಗ್ನಲ್ ನೀಡಿದ್ದಾರೆ'' ಎಂಬ ಮಾತು ಶುರುವಾಗಿದೆ.

ಅಂದ ಹಾಗೆ, ಮೋದಿ ಮತ್ತು ಆರೆಸ್ಸೆಸ್ ನಡುವೆ ಸಂಘರ್ಷ ನಡೆಯುತ್ತಿದ್ದ ಕಾಲದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ವಿಷಯ ಉತ್ತುಂಗದಲ್ಲಿತ್ತು. ಅದರ ಪ್ರಕಾರ, ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಧರ್ಮೇಂದ್ರ ಪ್ರಧಾನ್ ಇಲ್ಲವೇ ಭೂಪೇಂದ್ರ ಯಾದವ್ ಅವರಿಗೆ ಪಟ್ಟ ಕಟ್ಟಲು ಮೋದಿ-ಅಮಿತ್ ಶಾ ಜೋಡಿ ಬಯಸಿತ್ತು. ಇದೇ ರೀತಿ, ಸಂಘನಿಷ್ಠ ಶಿವರಾಜ್‌ಸಿಂಗ್ ಚೌಹಾಣ್ ಅವರಿಗೆ ಪಟ್ಟ ಕಟ್ಟಲು ಆರೆಸ್ಸೆಸ್ ಬಯಸಿತ್ತು. ಆರೆಸ್ಸೆಸ್ಸಿನ ಈ ನಿರ್ಧಾರಕ್ಕೆ ದೇಶ ಮತ್ತು ವಿಶ್ವದ ರಾಜಕೀಯ ಚಿತ್ರಣ ಬದಲಾಗುತ್ತಿರುವ ವೇಗ ಕಾರಣವಾಗಿತ್ತಲ್ಲದೆ, ಇಂಥ ಕಾಲಘಟ್ಟದಲ್ಲಿ ಸಂಘನಿಷ್ಠರೊಬ್ಬರು ಪಕ್ಷದ ಸಾರಥ್ಯ ವಹಿಸಬೇಕು ಎಂಬ ಲೆಕ್ಕಾಚಾರ ಮುಖ್ಯವಾಗಿತ್ತು.

ಆದರೆ ಮೋದಿ ಪ್ರಧಾನಿ ಹುದ್ದೆಯಿಂದ ಕೆಳಗಿಳಿದರೆ, ಆ ಜಾಗಕ್ಕೆ ತಾವು ಬರಲು ಪೂರಕವಾಗುವಂತೆ ಧರ್ಮೇಂದ್ರ ಪ್ರಧಾನ್ ಇಲ್ಲವೇ ಭೂಪೇಂದ್ರ ಯಾದವ್ ಬರಲಿ ಎಂಬ ಇಚ್ಛೆ ಅಮಿತ್ ಶಾ ಅವರಲ್ಲಿತ್ತು ಮತ್ತು ಅಮಿತ್ ಶಾ ಬಯಕೆಗೆ ಪೂರಕವಾಗಿ ಮೋದಿ ವರ್ತಿಸುತ್ತಿದ್ದರು. ಯಾವಾಗ ಈ ಪೈಪೋಟಿ ಅತಿಯಾಯಿತೋ, ಆಗ ಆರೆಸ್ಸೆಸ್ ವರಿಷ್ಠ ಮೋಹನ್ ಭಾಗವತ್ ಅವರು, 'ಮೋದಿ ಕೆಳಗಿಳಿಯಲಿ' ಎಂದು ಪರೋಕ್ಷ ಸಂದೇಶ ರವಾನಿಸಿದ್ದರು. ಆದರೆ ಈಗ ಇದ್ದಕ್ಕಿದ್ದಂತೆ ಅವರು 'ಯು-ಟರ್ನ್' ಹೊಡೆದಿದ್ದಾರೆ ಎಂದರೆ ಮೋದಿಯವರು ಆರೆಸ್ಸೆಸ್ ಜತೆ ಹೊಂದಿಕೊಂಡು ಹೋಗಲು ಬಯಸಿದ್ದಾರೆ. ಅರ್ಥಾತ್, ಅದರ ಇಚ್ಛೆಯಂತೆ ಶಿವರಾಜ್‌ಸಿಂಗ್ ಚೌಹಾಣ್ ಅವರಿಗೆ ಪಟ್ಟ ಕಟ್ಟಲು ಒಲವು ತೋರಿದ್ದಾರೆ ಎಂಬುದು ಬಿಜೆಪಿ ಮೂಲಗಳ ಮಾತು. ಪರಿಣಾಮ? ಶಿವರಾಜ್‌ಸಿಂಗ್ ಚೌಹಾಣ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದರೆ ಕರ್ನಾಟಕದಲ್ಲೂ ಸಂಘಪರಿವಾರದ ಪವರ್ರು ಜಾಸ್ತಿಯಾಗುತ್ತದೆ. ಮತ್ತದು ಯಾವ ಕಾರಣಕ್ಕೂ ವಿಜಯೇಂದ್ರ ಪಕ್ಷಾಧ್ಯಕ್ಷರಾಗಿರುವುದನ್ನು ಬಯಸುವುದಿಲ್ಲ ಎಂಬುದು ಅದರ ಮಾತು. ಸಹಜವಾಗಿಯೇ ಈ ಮಾತು ರಾಜ್ಯ ಬಿಜೆಪಿಯಲ್ಲಿರುವ ವಿಜಯೇಂದ್ರ ವಿರೋಧಿಗಳು ಖುಷಿಯಾಗುವಂತೆ ಮಾಡಿದೆ. ಆದರೆ ಈ ಖುಷಿ ಎಷ್ಟು ದಿನ ಉಳಿಯುತ್ತದೋ ಗೊತ್ತಿಲ್ಲ.

ಪಪ್ಪಿಗೆ ಸಂಕಟ ತಂದವರು ಯಾರು?

ಈ ಮಧ್ಯೆ, ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ಶಾಸಕ ಪಪ್ಪಿ ಅರೆಸ್ಟ್ ಬಗ್ಗೆ ಗಂಭೀರ ಚರ್ಚೆಯಾಗುತ್ತಿದೆ. ಅಂದ ಹಾಗೆ, ಕೆಲ ದಿನಗಳ ಹಿಂದೆ ಶಾಸಕ ವೀರೇಂದ್ರ ಪಪ್ಪಿ ಅವರನ್ನು ಕೇಂದ್ರದ ಜಾರಿ ನಿರ್ದೇಶನಾಲಯ (ಇ.ಡಿ.) ಬಂಧಿಸಿತಲ್ಲ? ಇದಕ್ಕೇನು ಕಾರಣ ಎಂಬುದೇ ಕೈ ಪಾಳಯದ ಲೇಟೆಸ್ಟು ಚರ್ಚೆ. ಅದರ ಪ್ರಕಾರ, ರಾಜ್ಯ ಕಾಂಗ್ರೆಸ್ಸಿನ ಪವರ್‌ಫುಲ್ ನಾಯಕರೊಬ್ಬರು ವೀರೇಂದ್ರ ಪಪ್ಪಿ ಅವರಿಗೆ ಮಂತ್ರಿಗಿರಿಯ ಆಸೆ ತೋರಿಸಿದ್ದರಂತೆ. ''ಹೇಗಿದ್ದರೂ ಡಿಸೆಂಬರ್ ವೇಳೆಗೆ ಮಂತ್ರಿಮಂಡಲ ಪುನರ್‌ರಚನೆ ಆಗಲಿದೆ. ಈ ಸಂದರ್ಭದಲ್ಲಿ ನೀವು ಮಂತ್ರಿ ಆಗುವಿರಂತೆ. ಆದರೆ ಅದಕ್ಕಾಗಿ ಬಿಹಾರ ವಿಧಾನಸಭೆ ಚುನಾವಣೆಗೆ ನೀವು ನೆರವು ಕೊಡಬೇಕು'' ಅಂತ ಅವರು ಹೇಳಿದ್ದರಂತೆ.

ಇದು ಎಷ್ಟರ ಮಟ್ಟಿಗೆ ನಿಜವೋ? ಆದರೆ ಮಂತ್ರಿಯಾಗಲು ಬಯಸಿರುವ ವೀರೇಂದ್ರ ಪಪ್ಪಿ ಬಿಹಾರ ವಿಧಾನಸಭೆ ಚುನಾವಣೆಗೆ ಫಂಡು ಸರಬರಾಜು ಮಾಡುತ್ತಿದ್ದಾರೆ ಎಂಬ ಮೆಸೇಜು ಇ.ಡಿ.ಗೆ ತಲುಪಿದೆ. ಹೀಗೆ ಇ.ಡಿ.ಗೆ ತಲುಪಿದ ಮೆಸೇಜೇ ವೀರೇಂದ್ರ ಪಪ್ಪಿ ಅವರಿಗೆ ಮುಳುವಾಯಿತು ಎಂಬುದು ಕಾಂಗ್ರೆಸ್ ಪಾಳಯದ ಬಿಸಿಬಿಸಿ ಚರ್ಚೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬದಲಾದ ಗ್ರಹಿಕೆ

ಭೈರಪ್ಪನವರ ಸ್ನೇಹಿತರು' ಶೀರ್ಷಿಕೆಯ ಸಂಪಾದಕರ ಸದ್ಯಶೋಧನೆ ಕಿರುಬರಹವು (ಆ.30), ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ಗ್ರಹಿಕೆಯನ್ನು ಅಲ್ಲಗಳೆದಂತಿದೆ. 'ಒಬ್ಬ ವ್ಯಕ್ತಿ ಹೇಗಿದ್ದಾನೆ ಅಂತ ತಿಳಿಯಬೇಕೆಂದರೆ, ಆತ ಯಾರೊಟ್ಟಿಗೆ ಹೆಚ್ಚಾಗಿ ಇರುತ್ತಾನೆ, ಯಾರ್ಯಾರೆಲ್ಲಾ ಅವನ ಸ್ನೇಹಿತರು ಎಂಬುದನ್ನು ತಿಳಿದರೆ ಸಾಕು' ಎಂಬುದೇ ಆ ಗ್ರಹಿಕೆ. ಆದರೆ, ಕಾರ್ಯಕ್ರಮವೊಂದಕ್ಕೆ ಬರಬೇಕಿದ್ದ ಎಸ್.ಎಲ್.ಭೈರಪ್ಪನವರನ್ನು ಬರಮಾಡಿಕೊಳ್ಳಲು ಬಂದ ಅವರ ಸ್ನೇಹಿತರು, ಭೈರಪ್ಪನವರ ಒಂದೂ ಕಾದಂಬರಿಯನ್ನು ಓದಿರಲಿಲ್ಲವಂತೆ! ಇದು ನಿಜಕ್ಕೂ ಆಶ್ಚರ್ಯ ಹುಟ್ಟಿಸುವಂಥದ್ದೇ. ಅವರ ಕೃತಿಯನ್ನು ಓದದ ವ್ಯಕ್ತಿ ಅದು ಹೇಗೆ 'ಗೆಳೆಯ' ಆದ ಎಂಬ ಪ್ರಶ್ನೆಗೆ, ಭೈರಪ್ಪನವರು ''ಕಾದಂಬರಿ ಅಂದರೆ ಅನುಭವಗಳನ್ನು ಅಕ್ಷರ ರೂಪಕ್ಕೆ ಇಳಿಸುವ ಕ್ರಮ. ನನ್ನ ಗೆಳೆಯ ನಾನು ಬರೆದ ಕಾದಂಬರಿಯನ್ನು ಓದದಿದ್ದರೂ, ಆತನಿಂದ ಅದೆಷ್ಟೋ ಜೀವನಪಾಠ ಸಿಗುತ್ತದೆ'' ಎಂಬರ್ಥದಲ್ಲಿ ಉತ್ತರಿಸಿದ್ದು ನಿಜಕ್ಕೂ ಸ್ವಾರಸ್ಯಕರವಾಗಿದೆ.



ಏಕೆಂದರೆ ಸಾಮಾನ್ಯವಾಗಿ, ವ್ಯಕ್ತಿಯೊಬ್ಬರ ಸ್ಥಿತಿ-ಗತಿ, ಸಮಾಜದಲ್ಲಿ ಅವರಿಗಿರುವ ಸ್ಥಾನಮಾನ ಮುಂತಾದ ಅಂಶಗಳು ಮತ್ತೊಬ್ಬರು ಅವರಿಗೆ ಹತ್ತಿರವಾಗಲು ಕಾರಣವಾಗುತ್ತವೆ. ಶ್ರೀಮಂತನಿಗೆ ಇನ್ನೊಬ್ಬ ಶ್ರೀಮಂತ, ಬಡವನಿಗೆ ಇನ್ನೊಬ್ಬ ಬಡವ ಹತ್ತಿರವಾಗಿ ಗೆಳೆಯರಾಗುವುದು ಸಹಜ. ಆದರೆ, ಭೈರಪ್ಪನವರು ಮತ್ತು ಅವರ ಗೆಳೆಯನ ನಡುವೆ ಇಂಥ ಎಣಿಕೆಗಳಿಗೆ ಆಸ್ಪದವಿರಲಿಲ್ಲ.

ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ, ಭೈರಪ್ಪನವರ ಗೆಳೆಯ ನಿಜಾರ್ಥದ ಗೆಳೆಯನಾಗಿದ್ದ ಎಂಬುದು. ಕಾರ್ಯಕ್ರಮದ ಸಂಘಟಕರು ತಮ್ಮ ನಿಗಾವಣೆಗೆ ಎಲ್ಲ ವ್ಯವಸ್ಥೆ ಮಾಡಿದ್ದರೂ, ಭೈರಪ್ಪನವರು ಅವನ್ನೆಲ್ಲ ನಯವಾಗಿ ನಿರಾಕರಿಸಿ ತಮ್ಮ ಗೆಳೆಯನ ಆದರಾತಿಥ್ಯವನ್ನು ಪಡೆದದ್ದು ಮಹಾಭಾರತದ ಈ ಪ್ರಸಂಗವನ್ನು ನೆನಪಿಸುತ್ತದೆ- ಶ್ರೀಕೃಷ್ಣನು ದುರ್ಯೋಧನನ ವೈಭವೋಪೇತ ಸ್ವಾಗತ/ಆತಿಥ್ಯವನ್ನು ಸ್ವೀಕರಿಸದೆ, ತನ್ನ ಆಪ್ತಮಿತ್ರ ವಿದುರನ ಮನೆಗೆ ತೆರಳುತ್ತಾನೆ; ಗೆಳೆತನಕ್ಕೆ ಅಂತಸ್ತು, ಬುದ್ಧಿವಂತಿಕೆ, ಶಾರೀರಿಕ ಸೌಂದರ್ಯ ಯಾವುದೂ ಮುಖ್ಯವಲ್ಲ ಎಂಬ ಸತ್ಯವನ್ನು ಇದು ತಿಳಿಯಪಡಿಸುತ್ತದೆ. ಭೈರಪ್ಪನವರ ವಿಷಯದಲ್ಲೂ ಇದೇ ಆಗಿದ್ದು. ಗೆಳೆಯ-ಗೆಳೆತನ ಎಂಬ ಪರಿಕಲ್ಪನೆಗಳು ಅತ್ಯಂತ ನವಿರಾದಂಥವು. ಗೆಳೆತನವನ್ನು ಸುದೀರ್ಘ ಅವಧಿಯವರೆಗೆ ಉಳಿಸಿಕೊಂಡು ಬರುವುದು ತೀರಾ ಕಷ್ಟದ ಕೆಲಸ. ಇಂದು ನಾವೆಲ್ಲ ಕಾಣುವಂತೆ, ಪ್ರಭಾವಶಾಲಿಯೊಬ್ಬ ತನ್ನ ಮಿತ್ರನಾಗಿರುವ ಸಂದರ್ಭವನ್ನು ಮತ್ತೊಬ್ಬನು ದುರುಪಯೋಗಪಡಿಸಿಕೊಳ್ಳುವುದು ಸಾಮಾನ್ಯವಾಗಿರುವಾಗ, ಭೈರಪ್ಪನವರ ಗೆಳೆಯ ಅವರ ಒಂದೂ ಕಾದಂಬರಿಯನ್ನು ಓದದೆಯೇ ಗೆಳೆತನವನ್ನು ಉಳಿಸಿಕೊಂಡಿದ್ದಾರೆ ಎಂದರೆ, ಅದನ್ನು ನಿಜವಾದ ಗೆಳೆತನ ಎನ್ನಲಡ್ಡಿಯಿಲ್ಲ. ಇನ್ನು, ತಮ್ಮ ಒಂದು ಕೃತಿಯನ್ನೂ ಓದದವನನ್ನು ಭೈರಪ್ಪನವರು ಗೆಳೆಯನಾಗಿ ಕಾಣುತ್ತಿರುವುದೂ ಮತ್ತೊಂದು ವಿಶೇಷವೇ. ಇಂಥ ಗೆಳೆತನ ಸಿಗುವುದೂ ಅಪರೂಪವೇ!

- ಶಂಕರನಾರಾಯಣ ಭಟ್, ಮಾಡಗೇರಿ

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಬೂಕರ್ ಪ್ರಶಸ್ತಿಯಿಂದ ಕಳಂಕಿತವಾದ ಮೈಸೂರು ದಸರಾ

ಬಾನು ಮುಷ್ತಾಕರ ಸಾಧನೆ, ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ ದಸರೆಯ ಉದ್ಘಾಟನೆಗೆ ಆಹ್ವಾನಿಸಿದ್ದರೆ ಅದರಲ್ಲಿ ತಪ್ಪು ಹುಡುಕುವ ಅಗತ್ಯವಿರಲಿಲ್ಲ; ಆದರೆ ಅವರೀಗ ಈ ಗೌರವಕ್ಕೆ ಪಾತ್ರರಾಗುತ್ತಿರುವುದು ಅವರಿಗೆ ದಕ್ಕಿದ ಪ್ರಶಸ್ತಿಯ ಕಾರಣದಿಂದ ಎಂದಾಗಿದ್ದರೆ, ಅದು ದಕ್ಕಲು ಮುಖ್ಯ ಕಾರಣರಾದ ದೀಪಾ ಭಸ್ತಿಯವರನ್ನೂ ಆಹ್ವಾನಿಸಬಹುದಿತ್ತಲ್ಲವೇ?

ವಿವಾದ-ವಿಷಾದ

ಎಚ್.ಆರ್. ಶ್ರೀಪಾದ ಭಾಗಿ

vveditoped@gmail.com

ಮೈಸೂರು ದಸರಾ ಎಂದಕೂಡಲೇ ನಮ್ಮ ಕಣ್ಮುಂದೆ ಬರುವುದು ಮಹಾ ಉತ್ಸವ, ಉತ್ಸಾಹಭರಿತ ಜನಜಾತ್ರೆ ಮತ್ತು ಗಜಪಡೆಯ ರಾಜಗಾಂಭೀರ್ಯದ ನಡಿಗೆ. ಕರ್ನಾಟಕದ ಹೆಮ್ಮೆ ಎನಿಸಿರುವ ದಸರಾ ಆಚರಣೆ ಪ್ರಾರಂಭವಾಗಿದ್ದು ಸುಮಾರು 5 ಶತಮಾನಗಳ ಹಿಂದೆ. ಮೊದಲು ಧಾರ್ಮಿಕ ಕಾರ್ಯಕ್ರಮವಾಗಿದ್ದ ಇದು, ಇಂದು ಧಾರ್ಮಿಕ-ಸಾಂಸ್ಕೃತಿಕ-ಸಾಮಾಜಿಕ ಉತ್ಸವವಾಗಿ ವಿಶ್ವಪ್ರಸಿದ್ಧಿಯಾಗಿದೆ. ಇದನ್ನು ಪ್ರಾರಂಭಿಸಿದವರು ಒಡೆಯರ್ ಅವರ ವಂಶದವರು. ದಸರಾ ಉತ್ಸವಕ್ಕೂ ಸನಾತನ ಹಿಂದೂ ಧರ್ಮಾನುಯಾಯಿಗಳಿಗೂ ಬಿಡಿಸಲಾರದ ಸಂಬಂಧವಿದೆ. ಮಹಾನವಮಿ, ದುರ್ಗಾಪೂಜೆ, ನವರಾತ್ರಿ ಅಥವಾ ದಸರಾ ಉತ್ಸವಕ್ಕೆ ಸನಾತನ ಹಿಂದೂ ಪವಿತ್ರ ಗ್ರಂಥ ರಾಮಾಯಣವೇ ಮೂಲ. ರಾಕ್ಷಸರಾಜ ರಾವಣನ ಮೇಲೆ ಶ್ರೀರಾಮನು ವಿಜಯ ಸಾಧಿಸಿದ್ದನ್ನು ಸ್ಮರಿಸಲು, ಅನ್ಯಾಯದ ವಿರುದ್ಧ ನ್ಯಾಯಕ್ಕೆ ಜಯ ಸಿಕ್ಕಿದ್ದರ ಸಂಕೇತವಾಗಿ, ಕೆಟ್ಟದ್ದರ ಮೇಲೆ ಒಳ್ಳೆಯದು ವಿಜಯ ಸಾಧಿಸುತ್ತದೆ ಎಂಬ ನಂಬಿಕೆಯನ್ನು ನೆನಪಿಸಿಕೊಳ್ಳುವ ಸಲುವಾಗಿ ಈ ಉತ್ಸವವನ್ನು ಪ್ರತಿವರ್ಷ ಬೇರೆ ಬೇರೆ ಹೆಸರಿನಲ್ಲಿ ದೇಶದ ವಿವಿಧ ಭಾಗಗಳಲ್ಲಿ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುತ್ತದೆ. ಮೈಸೂರು ದಸರಾ ಮತ್ತು ಪಶ್ಚಿಮ ಬಂಗಾಳದ ದುರ್ಗಾಪೂಜೆ ಎರಡೂ ಲೋಕಪ್ರಸಿದ್ಧವೇ. ದೇವರ ಅಸ್ತಿತ್ವದ ಮೇಲಿನ ಜನರ ವಿಶ್ವಾಸ, ನಂಬಿಕೆ ಮತ್ತು ಭಕ್ತಿಯ ಭದ್ರಬುನಾದಿಯ ಮೇಲೆ ಈ ಉತ್ಸವಗಳ ಯಶಸ್ಸು ನಿಂತಿದೆ.

ಈ ಪೀಠಿಕೆಗೆ ಕಾರಣ, ಈ ವರ್ಷದ ದಸರಾ ಹಬ್ಬವನ್ನು ಉದ್ಘಾಟಿಸಲಿರುವ ಮುಖ್ಯ ಅತಿಥಿಗಳ ಆಯ್ಕೆಯ ಬಗ್ಗೆ ಎದ್ದಿರುವ ಅಪಸ್ವರ- ಅಸಮಾಧಾನ ಮತ್ತು ತಮ್ಮ ನಿರ್ಧಾರವನ್ನು ಸಮರ್ಥಿಸುವುದಕ್ಕೆ ಕೆಲವರು ಕೊಡುತ್ತಿರುವ ಕಾರಣಗಳು. ಉದ್ಘಾಟನೆಗೆ ಆಯ್ಕೆಯಾಗಿರುವ ಅತಿಥಿಯು ಮುಸ್ಲಿಮರೆಂಬುದು ಈ ಅಪಸ್ವರಕ್ಕಿರುವ ಕಾರಣಗಳಲ್ಲೊಂದು. ಈ ಕಾರ್ಯಕ್ರಮವು ಸರಕಾರಿ ಖರ್ಚಿನಲ್ಲಿ ನಡೆಯುತ್ತಿದ್ದು, ಈ ಹಿಂದೆಯೂ ಹಿಂದೂಯೇತರ ಸಾಧಕರಿಂದ ಉದ್ಘಾಟನೆಯಾಗಿರುವ ಉದಾಹರಣೆಗಳಿವೆ. ದಸರಾ ಕಾರ್ಯಕ್ರಮದ ಬಗ್ಗೆ ಆಗೊಮ್ಮೆ ಈಗೊಮ್ಮೆ ಅಪಸ್ವರ-ಅಪವಾದಗಳು ಬಂದಿದ್ದರೂ, ಅವು ನೆನಪಿನಂಗಳದಿಂದ ಮಾಸಲು ಬಹಳ ಕಾಲ ಬೇಕಾಗುವುದಿಲ್ಲ. ಆದರೆ ಈ ಬಾರಿ ಅತಿಥಿಗಳನ್ನು ಆಯ್ಕೆ ಮಾಡಿರುವುದು, ಬಾನು ಮುಷ್ತಾಕ್ ಅವರು ಸಾಹಿತಿಗಳು ಮತ್ತು ಅವರ ಕಥೆ-ಕವನಗಳಿಂದ ಸಮಾಜದಲ್ಲಿ ಸಕಾರಾತ್ಮಕ ಪರಿಣಾಮಗಳಾಗುತ್ತಿವೆ ಎಂಬ ಕಾರಣಕ್ಕಲ್ಲ. ಕಾರಣ ಅದೇ ಆಗಿದ್ದರೆ, ಅವರನ್ನು ಆಯ್ಕೆ ಮಾಡಲು ಇಷ್ಟು ವರ್ಷ ಕಾಯಬೇಕಾಗಿರಲಿಲ್ಲ. ಅವರು ಹುಟ್ಟಿ ಬೆಳೆದು ವಾಸಿಸುತ್ತಿರುವುದು ಕರ್ನಾಟಕದಲ್ಲೇ. ಆದರೆ ಅವರ ಕಥಾಸಂಕಲನಕ್ಕೆ 'ಬೂಕರ್ ಪ್ರಶಸ್ತಿ' ಬಂದಿದೆ ಎಂಬುದೇ ನಿಜಕಾರಣ. ಅಂದರೆ, ಅವರನ್ನು ಆಹ್ವಾನಿಸಿರುವುದು ಬೂಕರ್ ಪ್ರಶಸ್ತಿಯನ್ನು ಗೌರವಿಸುವುದಕ್ಕಾಗಿಯೇ ಹೊರತು, ಅವರ ಶ್ರಮವನ್ನು ಮತ್ತು ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ ಅವರನ್ನು ಗೌರವಿಸುವ ಉದ್ದೇಶದಿಂದಲ್ಲ ಎಂಬುದು ಸ್ಪಷ್ಟ.

ಬಾನು ಮುಷ್ತಾಕರ ಕಥಾಸಂಕಲನಕ್ಕೆ ಬೂಕರ್ ಪ್ರಶಸ್ತಿ ಬಂದಿದ್ದರಿಂದ, ಅವರು ಮತ್ತೊಮ್ಮೆ ಬೆಳಕಿಗೆ ಬಂದಿದ್ದಾರೆ, ಮಾಧ್ಯಮಗಳಲ್ಲಿ ಪ್ರಚಾರ ಪಡೆಯುತ್ತಿದ್ದಾರೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಬಾನು ಮುಷ್ತಾಕ್‌ರನ್ನು ದಸರೆಯ ಉದ್ಘಾಟನೆಗೆ ಸರಕಾರವು ಆಹ್ವಾನಿಸುವಂತಾಗಲು ಈ ಪ್ರಶಸ್ತಿಯೇ ಕಾರಣವೆಂಬುದು ವಿವರಣೆ ಅಗತ್ಯವಿಲ್ಲದ ಸತ್ಯ. ಬೂಕರ್ ಪ್ರಶಸ್ತಿಯೆಂದರೆ ಏನು, ಯಾರಿಗೆ, ಎಲ್ಲಿ, ಯಾವ ಕಾರಣಕ್ಕೆ ಕೊಡಮಾಡಲಾಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ಜನರಿಗೆ ತಿಳಿಸಬೇಕಿದೆ. ಇದು ಬ್ರಿಟನ್‌ನಲ್ಲಿ ಸಾಹಿತ್ಯ ಕ್ಷೇತ್ರದಲ್ಲಿನ ಸಾಧಕರಿಗೆ ವಾರ್ಷಿಕವಾಗಿ ನೀಡಲಾಗುವ ಪ್ರತಿಷ್ಠಿತ ಪ್ರಶಸ್ತಿ. 'ಬೂಕರ್ ಪ್ರೈಜ್' ಪ್ರತಿಷ್ಠಾನದವರು ಮೂಲ ಆಂಗ್ಲಭಾಷೆಯ ಉತ್ಕೃಷ್ಟ ಕಥೆ-ಕಾದಂಬರಿಗಳ ಲೇಖಕರಿಗೆ, ಅವರ ಸಾಧನೆಯನ್ನು ಮತ್ತು ಆಂಗ್ಲ ಸಾಹಿತ್ಯ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ ಇದನ್ನು ಪ್ರದಾನ ಮಾಡುತ್ತಾರೆ. ಈ ಪ್ರಶಸ್ತಿ ಪಡೆಯಲು ಲೇಖಕರು ಮೂಲ ಆಂಗ್ಲಭಾಷೆಯಲ್ಲೇ ತಮ್ಮ ಕೃತಿಯನ್ನು ಬರೆದಿರಬೇಕು ಮತ್ತು ಅದು ಬ್ರಿಟನ್ನಿನಲ್ಲೇ ಪ್ರಕಾಶಿತವಾಗಿರಬೇಕು ಎಂಬುದು ಇಲ್ಲಿ ನೆನಪಿಡಬೇಕಾದ ಸಂಗತಿ.

ಇದೇ ಪ್ರತಿಷ್ಠಾನದವರು ನೀಡುವ ಇನ್ನೊಂದು ಗೌರವ- 'ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ'. ಈ ವಿಭಾಗದಲ್ಲಿ, ಬೇರೆ ಭಾಷೆಗಳಿಂದ ಆಂಗ್ಲಭಾಷೆಗೆ ಅನುವಾದಿತವಾದ ಉತ್ತಮ ಕೃತಿಗಳನ್ನು ಗುರುತಿಸಿ, ಅದರ ಮೂಲ ಲೇಖಕರು ಮತ್ತು ಅನುವಾದಕರಿಗೆ ಪ್ರಶಸ್ತಿಯನ್ನು ಜಂಟಿಯಾಗಿ ನೀಡಲಾಗುತ್ತದೆ. ಈ ಅನುವಾದಿತ ಗ್ರಂಥವೂ ಬ್ರಿಟನ್‌ನಲ್ಲೇ ಪ್ರಕಾಶಿತವಾಗಿರಬೇಕು. ಇದನ್ನು ಗಮನಿಸಿದರೆ ಬಾನು ಮುಷ್ತಾಕ್‌ರನ್ನು ಸಾಧಕಿಯಾಗಿ ಮತ್ತೊಮ್ಮೆ ಜನರ ಮುಂದೆ ನಿಲ್ಲಿಸಿದ್ದು ಈ ಪ್ರಶಸ್ತಿಯೇ ಎಂದರೆ ಅತಿಶಯೋಕ್ತಿ ಆಗಲಿಕ್ಕಿಲ್ಲ. ಕನ್ನಡದ ನೆಲಕ್ಕೆ, ಕನ್ನಡದ ಲೇಖಕಿ-ಅನುವಾದಕಿಯರಿಗೆ ಜಂಟಿಯಾಗಿ ಈ ಪ್ರಶಸ್ತಿ ಲಭಿಸಿರುವುದಕ್ಕೆ ಅವರ ಕಥಾಸಂಕಲನವೇ ಮೂಲ. ಅನುವಾದಕಿ ದೀಪಾ ಭಸ್ತಿಯವರ ಶ್ರಮ, ಅನುವಾದಿಸುವಾಗ ಮೂಲ ಆಶಯ ಮತ್ತು ಅಭಿಪ್ರಾಯಗಳಿಗೆ ಧಕ್ಕೆ ಬಾರದಂತೆ ಅವರು ನೋಡಿಕೊಂಡಿದ್ದು, ಈ ನಿಟ್ಟಿನಲ್ಲಿ ತಮ್ಮ ವಿದ್ಯೆ-ವಿವೇಕ-ಅನುಭವಗಳನ್ನು ಅವರು ಬಳಸಿದ್ದು ಕೂಡ ಈ ಪ್ರಶಸ್ತಿ ಬಂದಿರುವುದಕ್ಕೆ ಕಾರಣವಾಗಿವೆ. ದೀಪಾ ಭಸ್ತಿಯವರು ಬಾನು ಮುಷ್ತಾಕ್‌ರ ಕೃತಿಯನ್ನು ಆಂಗ್ಲಭಾಷೆಗೆ ಅನುವಾದಿಸದಿದ್ದರೆ ಅಥವಾ ಈ ಕಾರ್ಯದಲ್ಲಿ ಅವರು ತಮ್ಮ ವಿದ್ಯೆ, ವಿವೇಚನೆ, ಭಾಷಾ ಪ್ರೌಢಿಮೆ, ಸಾಹಿತ್ಯಿಕ ಆಸಕ್ತಿ ಮತ್ತು ಅನುಭವವನ್ನು ಸೂಕ್ತವಾಗಿ ಬಳಕೆ ಮಾಡಿರದಿದ್ದರೆ, ಬಾನು ಮುಷ್ತಾಕರಿಗೆ ಈ ಪ್ರಶಸ್ತಿಯ ಗೌರವ ದಕ್ಕುವುದು ಸಾಧ್ಯವಿರಲಿಲ್ಲ ಎಂಬುದು ಸತ್ಯ. ಆದ್ದರಿಂದ, ಅವರು ಈ ಪ್ರಶಸ್ತಿಗೆ ಭಾಜನರಾಗುವಲ್ಲಿ ದೀಪಾ ಭಸ್ತಿಯವರ ಯೋಗದಾನ ಎಷ್ಟರಮಟ್ಟಿಗೆ ಕಾರಣ ಎಂಬುದನ್ನು ಪುನರುಚ್ಚರಿಸುವ ಅಗತ್ಯವಿಲ್ಲ. ಆದರೆ ಪ್ರಸ್ತುತ ದೀಪಾ ಭಸ್ತಿಯವರು ತೆರೆಮರೆಗೆ ಸರಿದಿದ್ದು, ಈ ಪ್ರಶಸ್ತಿಯು ಕೇವಲ ಬಾನು ಮುಷ್ತಾಕರ ಸಾಧನೆಗೆ ಸಂದ ಗೌರವ ಎಂಬಂತೆ ಬಿಂಬಿತವಾಗುತ್ತಿದೆ.

ಬಾನು ಮುಷ್ತಾಕರ ಸಾಧನೆ, ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ಗುರುತಿಸಿ ದಸರೆಯ ಉದ್ಘಾಟನೆಗೆ ಆಹ್ವಾನಿಸಿದ್ದರೆ ಅದರಲ್ಲಿ ತಪ್ಪು ಹುಡುಕುವ ಅಗತ್ಯವಿರಲಿಲ್ಲ; ಆದರೆ ಅವರೀಗ ಈ ಗೌರವಕ್ಕೆ ಪಾತ್ರರಾಗುತ್ತಿರುವುದು ಅವರಿಗೆ ದಕ್ಕಿದ ಪ್ರಶಸ್ತಿಯ ಕಾರಣದಿಂದ ಎಂದಾಗಿದ್ದರೆ, ಅದು ದಕ್ಕಲು ಮುಖ್ಯ ಕಾರಣರಾದ ದೀಪಾ ಭಸ್ತಿಯವರನ್ನೂ ಆಹ್ವಾನಿಸಬಹುದಿತ್ತಲ್ಲವೇ? ಅವರು ಕೂಡ ಕನ್ನಡದ ಮಣ್ಣಿನಲ್ಲೇ ಜನಿಸಿದವರು, ಕನ್ನಡವನ್ನು ಚೆನ್ನಾಗಿ ಬಲ್ಲವರು. ಕನ್ನಡದ ಕಥೆ-ಕಾದಂಬರಿಗಳನ್ನು ತಮ್ಮ ಭಾಷಾ ಪ್ರೌಢಿಮೆ ಮತ್ತು ಸಾಹಿತ್ಯಿಕ ಜ್ಞಾನದ ನೆರವಿನಿಂದ ಆಂಗ್ಲಭಾಷೆಗೆ ಅನುವಾದಿಸಿ, ಕೇವಲ ಕನ್ನಡದ ಓದುಗರಿಗೆ ಸೀಮಿತವಾಗಿರಬಹುದಾಗಿದ್ದ ಕೃತಿಗಳನ್ನು ಜಾಗತಿಕ ಓದುಗರ ಮುಂದಿಡಲು ಯತ್ನಿಸುತ್ತಿರುವ ದೀಪಾ ಅವರೂ ಉತ್ಕೃಷ್ಟ ಬರಹಗಾರ್ತಿಯಲ್ಲವೇ? ಬಾನು ಮುಷ್ತಾಕರಿಗೆ ದಸರೆಯ ಉದ್ಘಾಟನೆಯ ಗೌರವವನ್ನು ಕೊಟ್ಟಿದ್ದರಲ್ಲಿ ತಪ್ಪಿಲ್ಲ; ಆದರೆ ಈ ಪ್ರಶಸ್ತಿಯ ಜಂಟಿ ವಿಜೇತೆ ಮತ್ತು ಪ್ರಶಸ್ತಿಗೆ ಕಾರಣೀಭೂತರಾದ ದೀಪಾ ಭಸ್ತಿಯವರನ್ನು ಮರೆತಿದ್ದೇಕೆ?

ಇನ್ನು, ಈ ಉತ್ಸವದ ಧಾರ್ಮಿಕ ವಿಧಿ-ವಿಧಾನಗಳ ಬಗ್ಗೆ ಹೇಳುವುದಾದರೆ, ಉತ್ಸವ ಪ್ರಾರಂಭವಾಗುವುದೇ ತಾಯಿ ಚಾಮುಂಡಿ ದೇವಿಯನ್ನು ಅರ್ಚಿಸುವ ಮೂಲಕ. ಈ ಅರ್ಚನೆ ನಡೆಯುವುದು ಸನಾತನ ಹಿಂದೂ ಸಂಪ್ರದಾಯದಂತೆ. ಬಾನು ಮುಷ್ತಾಕ್‌ರ ಮತವು ಮೂರ್ತಿಪೂಜೆಯನ್ನು ಒಪ್ಪುವುದಿಲ್ಲವಾದ್ದರಿಂದ, ಅವರು ಈ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೋ ಇಲ್ಲವೋ ಎಂಬ ಬಗ್ಗೆ ಜನರಲ್ಲಿ/ಭಕ್ತರಲ್ಲಿ ಕುತೂಹಲ ಮತ್ತು ಅಪನಂಬಿಕೆ ಇರುವುದು ಸಹಜವೇ. ಉದ್ಘಾಟನೆಯ ಬಗ್ಗೆ ಅಪಸ್ವರಗಳೆದ್ದಾಗ ಆಯೋಜಕರು, ಸರಕಾರದ ಸಂಬಂಧಿತ ಸಚಿವರು ಮತ್ತು ಉದ್ಘಾಟನೆಗೆ ಆಹ್ವಾನಿತರಾಗಿರುವ ಬಾನು ಮುಷ್ತಾಕರೇ ಸ್ಪಷ್ಟನೆ ನೀಡಬಹುದಿತ್ತಲ್ಲವೇ? ಅವರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಿಲ್ಲ ಎಂದಾದರೆ, ಅದರಿಂದ ಬಹುಸಂಖ್ಯಾತ ಭಕ್ತರಿಗೆ ಬೇಸರವಾಗುವುದಿಲ್ಲವೇ? ಹಿಂದೂ ಸಂಪ್ರದಾಯದ ಪ್ರಕಾರ ಪೂಜೆ ಮಾಡದೆಯೇ ದಸರಾ ಉತ್ಸವಕ್ಕೆ ಚಾಲನೆ ನೀಡುವಂತಿಲ್ಲ. ಪೂಜೆಯಲ್ಲಿ ಪಾಲ್ಗೊಳ್ಳುವ ವಿವಾಹಿತೆಯರಿಗೆ ಅರಿಶಿನ, ಕುಂಕುಮ, ಹೂವು, ಕರಿಮಣಿ ಮತ್ತು ಕಾಲುಂಗುರ ಇವು 'ಪಂಚ ಆಭರಣ'ಗಳು. ಇವು ಮುತ್ತೈದೆಯರ ಲಕ್ಷಣ ಮತ್ತು ಅವರಿಗೆ ಹಿಂದೂ ಧಾರ್ಮಿಕ ಪೂಜೆಯಲ್ಲಿ ಭಾಗವಹಿಸುವ ಹಕ್ಕು ಇರುತ್ತದೆ. ಹಾಗೆಯೇ ಅರಿಶಿನ, ಕುಂಕುಮ, ಪುಷ್ಪಗಳಿಲ್ಲದೆ ಅರ್ಚನೆ ಸಾಧ್ಯವಿಲ್ಲ. ಸನಾತನ ಹಿಂದೂ ಸಂಪ್ರದಾಯದ ಪ್ರಕಾರ ಚಾಮುಂಡಿ ದೇವಿಯನ್ನು ಅರ್ಚಿಸುವುದಕ್ಕೆ ಬಾನು ಮುಷ್ತಾಕರಿಗೆ ಒಪ್ಪಿಗೆಯಿದ್ದರೆ ಮತ್ತು ಅದನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸಿದರೆ, ಅವರ ಆಯ್ಕೆಯ ಬಗ್ಗೆ ಎದ್ದಿರುವ ಅಪಸ್ವರಗಳು ತಗ್ಗುವ ಸಾಧ್ಯತೆಗಳಿವೆ.

ಇನ್ನು ಕೆಲವು ಮಹನೀಯರು, ಮಹಿಳೆಯರು, ತಥಾಕಥಿತ ಬುದ್ಧಿಜೀವಿಗಳು, ''ದಸರಾ ಉತ್ಸವವು ಕರ್ನಾಟಕದ ನಾಡಹಬ್ಬ. ಇದು ಹಿಂದೂಧರ್ಮಕ್ಕೆ ಮಾತ್ರ ಸಂಬಂಧಿಸಿದ್ದಲ್ಲ, ಚಾಮುಂಡಿ ಬೆಟ್ಟವು ಹಿಂದೂಗಳ ಆಸ್ತಿಯಲ್ಲ'' ಎಂಬ ಆಣಿಮುತ್ತುಗಳನ್ನು ಉದುರಿಸಿದ್ದಾರೆ. ದಸರಾ ಉತ್ಸವದ ಮೂಲಕಾರಣ, ಉದ್ದೇಶ ಮತ್ತು ಅದನ್ನು ಅನೂಚಾನವಾಗಿ ನಡೆಸಿಕೊಂಡು ಬಂದಿರುವ ಸಾಂಪ್ರದಾಯಿಕ ರೀತಿ-ನೀತಿಯನ್ನು ಬಲ್ಲವರಾರೂ ಇಂಥ ಬಾಲಿಶ ಹೇಳಿಕೆಯನ್ನು ನೀಡುವುದಿಲ್ಲ. ಇನ್ನು, ಚಾಮುಂಡಿ ಅಥವಾ ದುರ್ಗೆಯನ್ನು ತಾಯಿಯೆಂದು, ದೇವರೆಂದು ಪೂಜಿಸುವವರು ಭಕ್ತರು. ಆ ತಾಯಿಯ ಆವಾಸಸ್ಥಾನವನ್ನಾಗಲೀ ಅಥವಾ ಅದರ ಸುತ್ತಮುತ್ತಲಿನ ಭೂಮಿಯನ್ನಾಗಲೀ ತಮ್ಮ ಆಸ್ತಿ ಎಂದು ಭಾವಿಸುವಷ್ಟು ಕನಿಷ್ಠ ಮನಸ್ಥಿತಿ ಈ ತಾಯಿಯ ಭಕ್ತರಿಗಿಲ್ಲ. ಇಲ್ಲಿ ಆ ಗೌರವಾನ್ವಿತ ಲೇಖಕಿಯನ್ನು ಉದ್ಘಾಟನೆಗೆ ಆಯ್ಕೆಮಾಡಿರುವುದರಲ್ಲಿ ತಪ್ಪಿಲ್ಲ; ಆದರೆ ಅದರ ಹಿಂದಿರುವ ಕಾರಣ ಮತ್ತು ಅವರು ಉದ್ಘಾಟನಾ ಸಂಬಂಧಿತ ಧಾರ್ಮಿಕ ಆಚರಣೆ-ಸಂಪ್ರದಾಯಗಳನ್ನು ಪಾಲಿಸಬಲ್ಲರೇ ಎಂಬುದು ಮಾತ್ರ ಜನರ ಪ್ರಶ್ನೆ. ದಸರಾ ಉತ್ಸವದ ಹೊಣೆ ಹೊತ್ತವರು ಇದಕ್ಕೆ ಉತ್ತರದಾಯಿಗಳಾಗುತ್ತಾರೆ.

ಉದ್ಘಾಟನೆಗೆ ಒಪ್ಪಿರುವ ಲೇಖಕಿಯೂ, ಧಾರ್ಮಿಕ ಮತ್ತು ಸಾಂಪ್ರದಾಯಿಕ ಆಚರಣೆಗಳಲ್ಲಿನ ತಮ್ಮ ಪಾಲ್ಗೊಳ್ಳುವಿಕೆಯನ್ನು ಸ್ಪಷ್ಟಪಡಿಸಿದರೆ, ಜನರ ಮನಸ್ಸಿನಲ್ಲಿ ಅವರ ಬಗೆಗಿನ ಗೌರವ ಹೆಚ್ಚಾಗುತ್ತದೆ. ಅವರನ್ನು ಧಾರ್ಮಿಕ ಹಿನ್ನೆಲೆಯಿಂದ ನೋಡುವ ಬದಲು, ಓರ್ವ ಲೇಖಕಿಯಾಗಿ, ಸಮಾಜ ಸುಧಾರಕಿಯಾಗಿ ನೋಡಲು ಅದು ಸಹಕಾರಿಯಾಗುತ್ತದೆ. ಸರಕಾರಿ ಮಟ್ಟದಲ್ಲಿ ಸರಿಯಾಗಿ ಯೋಜಿಸಿ, ಸೂಕ್ತ ವ್ಯಕ್ತಿಯನ್ನು ಆಹ್ವಾನಿಸಿ, ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಯುವಂತೆ ಮಾಡಿದ್ದಿದ್ದರೆ, ಸರಕಾರಕ್ಕಾಗಲೀ ಆಹ್ವಾನಿತ ಅತಿಥಿಗಾಗಲೀ ಮುಜುಗರ ಉಂಟಾಗುವಂಥ ಸಂದರ್ಭವೇ ಬರುತ್ತಿರಲಿಲ್ಲ. ಆದರೀಗ ಬಹುತೇಕರಿಗೆ, 'ಇದು ಮುಸ್ಲಿಮರನ್ನು ತುಷ್ಟೀಕರಿಸಿ, ಬಹುಸಂಖ್ಯಾತ ಹಿಂದೂಗಳ ಭಾವನೆಗಳಿಗೆ ಧಕ್ಕೆಯುಂಟುಮಾಡುವ ಹುನ್ನಾರ' ಎಂದು ಅನಿಸುತ್ತಿದೆ. ಈಗಲೂ ಕಾಲ ಮಿಂಚಿಲ್ಲ, ಸರಕಾರ ಮತ್ತು ಆಹ್ವಾನಿತ ಅತಿಥಿಗಳು ಈ ಬಗ್ಗೆ ಸ್ಪಷ್ಟೀಕರಣ ನೀಡಿದರೆ, ಮೈಸೂರು ದಸರಾ ಉತ್ಸವವು ಕಳಂಕರಹಿತವಾಗಿ ನಡೆದು, ಇತಿಹಾಸದ ಪುಟಗಳಲ್ಲಿ ಮತ್ತೊಂದು ಕಪ್ಪುಚುಕ್ಕೆ ಸೇರದಂತಾಗುತ್ತದೆ...

(ಲೇಖಕರು ಎಂಎಸ್‌ಎಂಇ ಸಪೋರ್ಟ್ ಆ್ಯಂಡ್ ಡೆವಲಪ್‌ಮೆಂಟ್ ಆರ್ಗನೈಸೇಷನ್‌ನ ಸಹ-ಸಂಸ್ಥಾಪಕರು)

ಭಟ್ಟರ್ ಸ್ಕ್ಯಾಚ್

- **ವೆಂಕಣ್ಣ ಆಚಾರ ಹಿತ್ತಲಮನಿ, ಮೈಸೂರು**
  ಬ್ಯಾಟ್ಸ್‌ಮನ್‌ಗಳು ತೊಂಬತ್ತು ದಾಟುತ್ತಿದ್ದಂತೆ ನರ್ವಸ್ ಆಗ್ತಾರೆ, ರಾಜಕಾರಣಿಗಳು?
  – **ಬೇರೆಯವರನ್ನು ನರ್ವಸ್ ಮಾಡ್ತಾರೆ!**
- **ಬೆಂ.ಮು.ಮಾರುತಿ, ಬೆಂಗಳೂರು**
  ಭಟ್ರೇ, ನಾರಿಮಣಿಗೆ ಇರಲೇಬೇಕಾಗಿದ್ದೇನು?
  – **ಕರಿಮಣಿ!**
- **ಸತೀಶ ಎಲ್.ವಿ.,(ಇಮೇಲ್ ಮೂಲಕ)**
  ಭಟ್ರೇ, ಹೆಣ್ಣಿನ ಕಣ್ಣಿನ ನೋಟಕ್ಕೆ ಸೋಲದವರು ಯಾರಾದರೂ ಇದ್ದಾರಾ?
  – **ಕಣ್ಣು ಮಂಜಾದವರು!**
- **ಶ್ರೀದೇವಿ ತಾಳಗುಪ್ಪ, ಸಾಗರ**
  ಭಟ್ರೇ, ಹೆಂಡತಿಯನ್ನು ನೋಯಿಸಿದರೆ ಏನು ಸಿಗುತ್ತದೆ?
  – **ಯಾರ ಹೆಂಡತಿಯನ್ನು ನೋಯಿಸಿದರೆ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು ಮೇಡಂ!**
- **ರಾಜು ಪತ್ತಾರ, ಹುಬ್ಬಳ್ಳಿ**
  ಭಟ್ರನ್ನು ಕೇಳಿದ್ದರೆ ಸರಿ ಹೋಗ್ತಾ ಇತ್ತು ಅಂತಾಳಲ್ಲ, ಹಾಗಂದ್ರೆ ಏನು?
  – Ask The Editor **ಅಂಕಣದ ಪರಿಣಾಮವಿದು!**
- **ಗುಣವಂತ ವಾಲಿಶೆಟ್ಟರ, ಗದಗ**
  ಭಟ್ರೇ, ನೀವು ಯಾವ ಪಕ್ಷದ ಟಿಕೆಟ್ ಕೇಳಿದ್ರೂ ಕೊಡ್ತಾರೆ ಅಂತಾನಲ್ಲ, ನನ್ನ ಸ್ನೇಹಿತ?
  – **ಟಿಕೆಟ್ ಅಷ್ಟು ಕೆಟ್ಟೋಯ್ತು ಅಂತೀಯಾ ?!**
- **ಜಯಶ್ರೀ ಬಿ., (ಇಮೇಲ್ ಮೂಲಕ)**
  ರೆಸ್ಲಿಂಗ್ ಪಂದ್ಯದಲ್ಲಿ ಇಬ್ಬರೂ ಹೊಡೆದಾಡುವುದಿಲ್ಲ ಅಂತ ನಿಮಗೆ ಅನಿಸ್ತಾ ಇಲ್ಲವಾ, ಭಟ್ರೇ?
  – **ಇಬ್ಬರು ಬೆಲ್ಟ್‌ಗಾಗಿ ಬಡಿದಾಡ್ತಾರೆ ಅಂತ ಅನಿಸುತ್ತೆ!**
- **ರಾಮಸ್ವಾಮಿ ಪಿ.ಕೆ., ಮಂಗಳೂರು**
  ಭಟ್ರೇ, ಅವನ ಜತೆ ಮಾತಾಡೋದು ಅಂದ್ರೆ, ಗೋಡೆ ಜತೆ ಮಾತಾಡಿದಂತೆ ಅಂತಾರಲ್ಲ, ಹಾಗಂದರೇನು?
  – **ಫೇಸ್‌ಬುಕ್ ವಾಲ್‌ನಲ್ಲಿ ಸದಾ ಪೋಸ್ಟ್ ಮಾಡುವವರನ್ನು ನೋಡಿ ಹಾಗೆ ಹೇಳಿರಬಹುದು!**
- **ಬಿ.ರಾಮರಾವ್, ಬೆಂಗಳೂರು**
  ಭಟ್ರೇ, ಜೀವನದಲ್ಲಿ ಎಲ್ಲರೂ ಪ್ರೀತಿಗಾಗಿ ಹಾತೊರೆಯುತ್ತಾರಲ್ಲ?
  – **ಹಾಗೇನಿಲ್ಲ, ಪಬ್‌ನಲ್ಲಿ ಬಿಯರ್‌ಗೆ ಹಾತೊರೆಯುವವರನ್ನು ನೋಡಿದ್ದಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ!**
- **ಸಂತೋಷ ಶಾಸ್ತ್ರೀ, ಬೆಂಗಳೂರು**
  'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯ ರಚಿಸಿರುವ ಮೊಯಿಲಿಯವರಿಗೆ ಭಾರತರತ್ನ, ಜ್ಞಾನಪೀಠ, ನೊಬೆಲ್ ಯಾವುದೂ ಯಾಕೆ ಇನ್ನೂ ಬಂದಿಲ್ಲ?
  – **ಮೊಯಿಲಿ ಬರೆದಿದ್ದನ್ನು ಮೊದಲು ಓದಿದರೆ ತಾನೇ ಪ್ರಶಸ್ತಿ ಕೊಡೋದು!**

ಇಷ್ಟು ಮಾಡಿ ಅಮೆರಿಕ ಸಾಧಿಸಿದ್ದಾದರೂ ಏನು?

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಆಗ್ನೇಯ ಏಷ್ಯಾದಲ್ಲಿ ಸಮುದ್ರ ಸೌಭಾಗ್ಯವನ್ನು ಹೊಂದದ ಏಕೈಕ ರಾಷ್ಟ್ರ ಲಾವೋಸ್. ಅಣಬೆಯ ಆಕಾರದಲ್ಲಿರುವ ಈ ದೇಶ ಅತಿ ಹೆಚ್ಚು ಗಡಿಯನ್ನು ಹಂಚಿಕೊಂಡದ್ದು ಬಲಕ್ಕಿರುವ ವಿಯೆಟ್ನಾಂ ಮತ್ತು ಎಡಕ್ಕಿರುವ ಥೈಲ್ಯಾಂಡ್ ದೇಶದೊಂದಿಗೆ. ಉಳಿದಂತೆ, ದಕ್ಷಿಣದಲ್ಲಿ ಕಾಂಬೋಡಿಯಾ, ಉತ್ತರದಲ್ಲಿ ಚೀನಾ ಹಾಗೂ ವಾಯವ್ಯದಲ್ಲಿ ಮ್ಯಾನ್ಮಾರ್ ದೇಶಗಳು ಲಾವೋಸ್‌ಗೆ ಹೊಂದಿಕೊಂಡಿವೆ. ದೇಶದಲ್ಲಿ ಹರಿಯುವ ಮೆಕಾಂಗ್ ನದಿ ದೇಶಕ್ಕೆ ನೀರು ಪೂರೈಕೆಯ ದೊಡ್ಡ ಸಾಧನ. ಲಾವೋಸ್ ಮತ್ತು ಥೈಲ್ಯಾಂಡ್ ನಡುವಿನ ಸುಮಾರು ಮುಕ್ಕಾಲು ಭಾಗಕ್ಕೆ ಈ ನದಿಯೇ ಗಡಿ.

ಈ ದೇಶದಲ್ಲಿ ನಾನು ಕಂಡ ವಿಶೇಷತೆ ಎಂದರೆ, ಹೊಲದಲ್ಲಂತೂ ಕೃಷಿ ಇದ್ದೇ ಇದೆ, ಇಲ್ಲಿಯ ಜನರು ಗುಡ್ಡದ ಮೇಲೂ ಸಾಕಷ್ಟು ಕೃಷಿ ಮಾಡುತ್ತಾರೆ. ಗುಡ್ಡದ ಮೇಲೆ ಜೋಳ, ಪೇರಲೆ, ಚಕ್ಕೋತ, ಬಾಳೆ ಗಿಡಗಳು ಕಾಣುವುದು ಇಲ್ಲಿ ಸರ್ವೇಸಾಮಾನ್ಯ. ಇಲ್ಲಿಯ ಹೆಚ್ಚಿನ ಜನರು ಕೃಷಿಕರು. ಅವರಲ್ಲಿ ಬಹುತೇಕರು ಗುಡ್ಡದ ಮೇಲೆಯೇ ಮನೆ ಕಟ್ಟಿಕೊಂಡು ಅಲ್ಲಿಯೇ ವಾಸಿಸುತ್ತಾರೆ. ಲಾವೋಸ್‌ನಲ್ಲಿ ನೀವು ಕಣ್ಣು ಹಾಯಿಸಿದಷ್ಟು ದೂರಕ್ಕೂ ಹಸಿರೇ ಹಸಿರು. ಈ ದೇಶದ ಮೇಲೆ ಬಹುರಾಷ್ಟ್ರೀಯ ಸಂಸ್ಥೆಗಳು ಲಗ್ಗೆ ಇಟ್ಟಿಲ್ಲ. ಪಿಜ್ಜಾ ಹಟ್, ಪಿಜ್ಜಾ ಇನ್, ಮ್ಯಾಕ್ ಡೊನಾಲ್ಡ್ಸ್‌ನಂಥ ಆಹಾರ ಪೂರೈಕೆಯ ಸಂಸ್ಥೆಗಳು ಕೂಡ ಇನ್ನೂ ದಾಳಿ ಮಾಡಿಲ್ಲ. ಅಷ್ಟರಮಟ್ಟಿಗೆ ಆ ದೇಶ ಇನ್ನೂ ತನ್ನತನವನ್ನು ಉಳಿಸಿಕೊಂಡಿದೆ.

ಇಂಥ ಬಡದೇಶದ ಮೇಲೆ ಅಮೆರಿಕ ಸತತ ಒಂಬತ್ತು ವರ್ಷ, ಪ್ರತಿನಿತ್ಯ, ಸರಾಸರಿ ಪ್ರತಿ 8 ನಿಮಿಷಕ್ಕೊಮ್ಮೆ ಬಾಂಬ್ ಸುರಿಸಿದೆ. ಅದರಲ್ಲಿ ಬಹುತೇಕ ಬಾಂಬ್‌ಗಳು ಇನ್ನೂ ಸಿಡಿಯದೇ ಉಳಿದಿವೆ. ದೇಶದ ಅರ್ಧಕ್ಕಿಂತಲೂ ಹೆಚ್ಚು ಭೂಪ್ರದೇಶದಲ್ಲಿ ಸಿಡಿಯದೇ ಇರುವ ಬಾಂಬ್‌ಗಳ ಹುಡುಕಾಟ ಇಂದಿಗೂ ಜಾರಿಯಲ್ಲಿದೆ. ನಿಮಗೆ ತಿಳಿದಿರಲಿ, ವಿಶ್ವ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಮೇಲೆ ಕೂಡ ಇಷ್ಟೊಂದು ಬಾಂಬ್ ದಾಳಿ ನಡೆಯಲಿಲ್ಲ. ಹಾಗಾದರೆ, ಅಮೆರಿಕ ಈ ದೇಶದ ಮೇಲೆ ಅಷ್ಟೊಂದು ಬಾಂಬ್ ಹಾಕಲು ಕಾರಣವಾದರೂ ಏನು? ಇದು ತಿಳಿಯಬೇಕಾದರೆ ನಾವು ಸ್ವಲ್ಪ ಹಿಂದಕ್ಕೆ ಹೋಗಿ ವಿಯೆಟ್ನಾಂ ಯುದ್ಧದ ಇತಿಹಾಸವನ್ನು ಅರಿತುಕೊಳ್ಳಬೇಕು.

ಲಾವೋಸ್, 1893ರಿಂದ 1953ರವರೆಗೆ 60 ವರ್ಷಗಳ ಕಾಲ ಫ್ರೆಂಚ್ ರಕ್ಷಿತ ಪ್ರದೇಶವಾಗಿತ್ತು. ಅದುವರೆಗೂ ಬೇರೆ ಬೇರೆ ರಾಜರ ಆಡಳಿತದಲ್ಲಿದ್ದ ಲಾವೋಸ್ ದೇಶವನ್ನು 1947ರ ಮೇ ತಿಂಗಳಿನಲ್ಲಿ ಏಕೀಕೃತ ರಾಷ್ಟ್ರವೆಂದು ಘೋಷಿಸಲಾಯಿತು. 1953ರ ಅಕ್ಟೋಬರ್ ತಿಂಗಳಿನಲ್ಲಿ ಲಾವೋಸ್ ದೇಶ ಫ್ರೆಂಚ್ ಆಡಳಿತದಿಂದ ಸ್ವತಂತ್ರವಾಯಿತು. ಕೆಲವು ತಿಂಗಳುಗಳು ಕಳೆದಿದ್ದವಷ್ಟೇ, ಆ ದೇಶದ ದುರ್ದೈವದ, ಅತಿ ಕಷ್ಟದ ದಿನಗಳು ಆಗಲೇ ಆರಂಭವಾದವು. ಅದು ಸತತ ಇಪ್ಪತ್ತೆರಡು ವರ್ಷಗಳವರೆಗೆ ಮುಂದುವರಿಯಿತು. ನಮ್ಮ ಕರ್ನಾಟಕ ರಾಜ್ಯಕ್ಕಿಂತ ಸ್ವಲ್ಪ ಹೆಚ್ಚೇ ಭೂಪ್ರದೇಶ ಹೊಂದಿದ ಈ ದೇಶದಲ್ಲಿ, ಅಂದು ಕೇವಲ ನಲವತ್ತು ಲಕ್ಷ ಜನಸಂಖ್ಯೆ ಹೊಂದಿದ ಪ್ರದೇಶದಲ್ಲಿ (ಈಗ ಲಾವೋಸ್‌ನ ಜನಸಂಖ್ಯೆ ಸುಮಾರು ಎಂಬತ್ತು ಲಕ್ಷ) ಸಾಕಷ್ಟು ಪಂಗಡಗಳಾಗಿದ್ದವು. ಆಂತರಿಕ ಭಿನ್ನಾಭಿಪ್ರಾಯ ಸ್ಫೋಟಗೊಂಡು, ಗಲಭೆಗಳೂ ನಡೆದವು. ಸಾವಿರಾರು ಜನ ಹೆಣವಾಗಿ ಧರೆಗುರುಳಿದರು.

ವಿಯೆಟ್ನಾಂ ಯುದ್ಧದ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು 1955ರಿಂದ 1975ರವರೆಗೆ ಸುಮಾರು 20 ವರ್ಷಗಳ ಕಾಲ ನಡೆಯಿತು. 1945ರಲ್ಲಿ ಹೊ ಚಿ ಮಿನ್ 'ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ವಿಯಟ್ನಾಂ' ಪಕ್ಷದ ವತಿಯಿಂದ ಪ್ರಧಾನಮಂತ್ರಿಯಾಗಿ ಆಯ್ಕೆಯಾದರು. ಮಾರ್ಕ್ಸಿಸ್ಟ್ ಲೆನಿನಿಸ್ಟ್ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡಿದ್ದ ಹೊ ಚಿ ಮಿನ್, 1930ರಲ್ಲಿಯೇ 'ಇಂಡೋಚೈನೀಸ್ ಕಮ್ಯುನಿಸ್ಟ್ ಪಾರ್ಟಿ'ಯನ್ನು ಆರಂಭಿಸಿದ್ದರು. ಕ್ರಮೇಣ ಅದು 'ಕಮ್ಯುನಿಸ್ಟ್ ಪಾರ್ಟಿ ಆಫ್ ವಿಯೆಟ್ನಾಂ' ಎಂದು ಬದಲಾಯಿತು. 1969ರಲ್ಲಿ ಅವರು ಸಾಯುವವರೆಗೂ ಆ ಪಕ್ಷದ ಅಧ್ಯಕ್ಷರಾಗಿದ್ದರು.

ಅಂದು ದಕ್ಷಿಣ ವಿಯೆಟ್ನಾಂನಲ್ಲಿ ಹೆಚ್ಚಿನ ಜನರಿಗೆ ಕಮ್ಯುನಿಸ್ಟ್ ಪರ ಒಲವು ಇರಲಿಲ್ಲ. ಹೊ ಚಿ ಮಿನ್ ದಕ್ಷಿಣದಲ್ಲಿಯೂ ಕಮ್ಯುನಿಸ್ಟ್ ಸಿದ್ಧಾಂತವನ್ನು ಹರಡಲು, ದಕ್ಷಿಣ ವಿಯೆಟ್ನಾಮನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಆ ಕಾಲದಲ್ಲಿ ವಿಯೆಟ್ನಾಂ ಉತ್ತರ ಮತ್ತು ದಕ್ಷಿಣವಾಗಿ ಇಬ್ಭಾಗವಾಗಿತ್ತು. ಅದನ್ನು ಒಗ್ಗೂಡಿಸಿ ಒಂದೇ ದೇಶವನ್ನಾಗಿ ಮಾಡುವುದಕ್ಕೆ ಹೊ ಚಿ ಮಿನ್ ಪ್ರಯತ್ನಿಸುತ್ತಿದ್ದರು. ಇದು ಆಂತರಿಕ ದಂಗೆಗೆ ಕಾರಣವಾಯಿತು. ಪರಿಣಾಮವಾಗಿ, ಉತ್ತರ ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾ ಮತ್ತು ದಕ್ಷಿಣ ವಿಯೆಟ್ನಾಂ, ಅದರ ಮಿತ್ರ ರಾಷ್ಟ್ರಗಳ ನಡುವೆ ದೊಡ್ಡ ಮಟ್ಟದ ಸಂಘರ್ಷಕ್ಕೆ ಕಾರಣವಾಯಿತು. ಉತ್ತರ ವಿಯೆಟ್ನಾಂಗೆ ರಷ್ಯಾ (ಅಂದಿನ ಸೋವಿಯತ್ ಒಕ್ಕೂಟ) ಮತ್ತು ಚೀನಾ ಬೆಂಬಲವಿತ್ತು. ದಕ್ಷಿಣ ವಿಯೆಟ್ನಾಂಗೆ ಅಮೆರಿಕ ಮತ್ತು ಇತರ ಕಮ್ಯುನಿಸ್ಟ್ ವಿರೋಧಿ ರಾಷ್ಟ್ರಗಳ ಬೆಂಬಲವಿತ್ತು. ಇದು 'ಎರಡನೆಯ ಇಂಡೋಚೈನಾ ಯುದ್ಧ' ಎಂದು ಹೆಸರಾಯಿತು. ಆ ಕಾಲದಲ್ಲಿ ಅಮೆರಿಕ ಮತ್ತು ರಷ್ಯಾ ತಮ್ಮ ಪ್ರತಿಷ್ಠೆಗಾಗಿ ಇಪ್ಪತ್ತು ವರ್ಷಗಳ ಕಾಲ ವಿಯೆಟ್ನಾಂ, ಲಾವೋಸ್‌ನಂಥ ದೇಶಗಳನ್ನು ಬಳಸಿಕೊಂಡವು. 1965ರ ನಂತರವಂತೂ ಅಮೆರಿಕ ನೇರವಾಗಿಯೇ ಈ ಯುದ್ಧದಲ್ಲಿ ಭಾಗವಹಿಸಿತ್ತು. ವಿಯೆಟ್ನಾಂನಲ್ಲಿ ಆರಂಭವಾದ ಈ ಹೋರಾಟ ಲಾವೋಸ್ ಮತ್ತು ಕಾಂಬೋಡಿಯಾ ದೇಶದ ಅಂತರ್ಯುದ್ಧಗಳಿಗೂ ವ್ಯಾಪಿಸಿತು.

ಆ ಕಾಲದಲ್ಲಿ ಲಾವೋಸ್‌ಗೆ ಅದರದ್ದೇ ಆದ ಸಮಸ್ಯೆಗಳಿದ್ದವು. ಆದರೆ ಉತ್ತರ ವಿಯೆಟ್ನಾಂ, ದಕ್ಷಿಣ ವಿಯೆಟ್ನಾಂಗೆ ಯುದ್ಧ ಸಾಮಗ್ರಿಗಳನ್ನು ಸಾಗಿಸಲು ಪಕ್ಕದ ದೇಶವಾದ ಲಾವೋಸ್ ಅನ್ನು ಬಳಸಿಕೊಂಡಿತು. ದೇಶದ ಗಡಿಯ ಒಳಗೆ ರಸ್ತೆಗಳು ನಿರ್ಮಾಣಗೊಂಡವು. 'ಪೀಪಲ್ಸ್ ಆರ್ಮಿ ಆಫ್ ವಿಯೆಟ್ನಾಂ' ಉತ್ತರ ಮತ್ತು ಆಗ್ನೇಯ ಲಾವೋಸ್‌ನಲ್ಲಿ ಕಾರ್ಯನಿರ್ವಹಿಸುತ್ತಿತ್ತು. 1954ರಿಂದ ಉತ್ತರ ವಿಯೆಟ್ನಾಂ ಸೈನ್ಯವನ್ನು ಲಾವೋಸ್‌ನಿಂದ ಹೊರದಬ್ಬಲು ಸಾಕಷ್ಟು ಪ್ರಯತ್ನಗಳು ನಡೆದವು. ಆದರೆ ಯಾವುದೇ ಒಪ್ಪಂದವನ್ನಾಗಲಿ, ಸಂಧಾನವನ್ನಾಗಲಿ, ಮಾತುಕತೆಯನ್ನಾಗಲಿ ಪರಿಗಣಿಸದೆ ಉತ್ತರ ವಿಯೆಟ್ನಾಂ ತನ್ನ ಕೆಲಸವನ್ನು ಮುಂದುವರಿಸಿತ್ತು. ವಿಯೆಟ್ನಾಂ ಗಡಿಗೆ ಸಮಾನಾಂತರವಾಗಿ ಆಗ್ನೇಯ ಲಾವೋಸ್‌ನಿಂದ ದಕ್ಷಿಣದಲ್ಲಿರುವ ಹೊ ಚಿ ಮಿನ್‌ಗೆ (ಅಂದರೆ, ಅಂದಿನ ಸೈಗಾಂವ್‌ಗೆ) ಹೆದ್ದಾರಿಯನ್ನು ನಿರ್ಮಿಸಿತು. ಈ ದಾರಿಯನ್ನು ಉತ್ತರ ವಿಯೆಟ್ನಾಂ ಪಡೆಗಳು ದಕ್ಷಿಣ ವಿಯೆಟ್ನಾಂಗೆ ಸಾಮಾನು ಸರಬರಾಜು ಮತ್ತು ಯುದ್ಧ ಸಾಮಗ್ರಿಗಳನ್ನು ಸಾಗಿಸಲು ಬಳಸಿಕೊಳ್ಳುತ್ತಿದ್ದವು.

ಉತ್ತರ ವಿಯೆಟ್ನಾಂ ಲಾವೋಸ್‌ನ ಉತ್ತರ ಭಾಗದಲ್ಲಿ ಗಣನೀಯ ಪ್ರಮಾಣದಲ್ಲಿ ಮಿಲಿಟರಿ ಪಡೆಯನ್ನು ಹೊಂದಿತ್ತು. ರಾಯಲ್ ಲಾವೋ ಸರಕಾರದ ಮೇಲೆ ಒತ್ತಡ ಹೇರಲು ಸ್ಥಳೀಯ ಕಮ್ಯುನಿಸ್ಟ್ ದಂಗೆಯನ್ನು ಪ್ರಯೋಗಿಸುವ, ಪ್ರಾಯೋಜಿಸುವ ಮತ್ತು ಪ್ರೋತ್ಸಾಹಿಸುವ ಕೆಲಸವನ್ನು ಮಾಡುತ್ತಿತ್ತು. ಉತ್ತರ ವಿಯೆಟ್ನಾಂನ ಈ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸುವ ಅಥವಾ ನಿಲ್ಲಿಸುವ ಪ್ರಯತ್ನವಾಗಿ ಅಮೆರಿಕದ ಗುಪ್ತಚರ ಸಂಸ್ಥೆ (ಸಿಐಎ) ಉತ್ತರ ಲಾವೋಸ್‌ನ ಜನರಿಗೆ ತರಬೇತಿ ನೀಡುತ್ತಿತ್ತು.

ರಾಯಲ್ ಲಾವೋ ಸೇನಾಪಡೆಯ ನೇತೃತ್ವದಲ್ಲಿ ಸ್ಥಳೀಯ ಬುಡಕಟ್ಟು ಜನಾಂಗದ ಸುಮಾರು ಮೂವತ್ತು ಸಾವಿರ ಸೈನಿಕರ ಪಡೆ, ಏರ್ ಅಮೆರಿಕ, ರಾಯಲ್ ಲಾವೋ ಏರ್‌ಫೋರ್ಸ್ ಸಹಾಯದೊಂದಿಗೆ, ಅಮೆರಿಕದ ರಾಯಭಾರಿ ಸೂಚಿಸಿದ ರಹಸ್ಯ ವಾಯು ಕಾರ್ಯಾಚರಣೆಯಿಂದ ವಿಯೆಟ್ನಾಂನ ಪೀಪಲ್ಸ್ ಆರ್ಮಿ ನ್ಯಾಷನಲ್ ಲಿಬರೇಶನ್ ಫ್ರಂಟ್ ಮತ್ತು ಮಿತರಾಷ್ಟ್ರಗಳ ವಿರುದ್ಧ ಹೋರಾಟ ನಡೆಸಿತ್ತು.

ಈ ನಡುವೆ ಉತ್ತರ ಲಾವೋಸ್‌ನ ರಾಜಮನೆತನದ ರಾಜಕುಮಾರನೊಬ್ಬ ವಿಯೆಟ್ನಾಂಗೆ ಹೋಗಿ ಹೊ ಚಿ ಮಿನ್‌ರ ಕಮ್ಯುನಿಸ್ಟ್ ಪಕ್ಷವನ್ನು ಸೇರಿಕೊಂಡಿದ್ದ. ಕೆಲವು ಸೈನಿಕರನ್ನು ಕೂಡಿಕೊಂಡು ಆತ ಉತ್ತರ ಲಾವೋಸ್‌ನ ಒಂದು ಪ್ರದೇಶವನ್ನು ವಶಪಡಿಸಿಕೊಂಡಿದ್ದ. ಲಾವೋನ ಉಳಿದ ಭೂಮಿಯ ಒಡೆತನಕ್ಕೆ ಆತ ವಿಯೆಟ್ನಾಂ ಸೇನೆಯೊಂದಿಗೆ ಆಗಾಗ ರಾಯಲ್ ಲಾವೋ ಆರ್ಮಿಯ ಮೇಲೆ ಯುದ್ಧಕ್ಕೆ ಬರುತ್ತಿದ್ದ. ಆತನ ಪ್ರಯತ್ನವೆಲ್ಲ ವಿಫಲವಾಯಿತು. ಒಮ್ಮೆಯಂತೂ ಉತ್ತರ ವಿಯೆಟ್ನಾಂ ಸರಕಾರ ಮೂವತ್ತರಿಂದ ನಲವತ್ತು ಸಾವಿರ ಸೈನಿಕರನ್ನು ಲಾವೋಸ್ ಒಳಗೆ ನುಸುಳಲು ನಿಯೋಜಿಸಿತ್ತು. ಲಾವೋ ಸೈನ್ಯ ಅವರಲ್ಲಿ ಬಹುತೇಕರನ್ನು ಬಂಧಿಸಿ ಇಟ್ಟಿತ್ತು. ಆದರೆ ಅವರೆಲ್ಲ ಒಂದೇ ಒಂದು ಗುಂಡನ್ನೂ ಹಾರಿಸದೆ ರಾತ್ರೋರಾತ್ರಿ ತಪ್ಪಿಸಿಕೊಂಡು ಹೋದರು. ಲಾವೋ ಸೈನ್ಯ ರಾಜಕುಮಾರನನ್ನೂ ಬಂಧಿಸಿತ್ತು. ಅವನೂ ಸದ್ದಿಲ್ಲದೇ ಪರಾರಿಯಾಗಿದ್ದ.

ಲಾವೋಸ್‌ನ ಆಂತರಿಕ ಯುದ್ಧ ದಕ್ಷಿಣಕ್ಕೂ ಹರಡಿಕೊಂಡಿತ್ತು. ಸುಮಾರು ಆರು-ಏಳು ವರ್ಷಗಳ ಸೆಣಸಾಟದಿಂದ ಎರಡೂ ಕಡೆಯವರು ಹೈರಾಣಾಗಿದ್ದರು. ಎರಡೂ ಕಡೆಯವರು ರಾಜಿಯಾಗಿ ತಟಸ್ಥ ಸರಕಾರಕ್ಕೆ ಒಪ್ಪಿಗೆ ಸೂಚಿಸಿದರು. ಆದರೆ ಅದೂ ಕೆಲವು ತಿಂಗಳುಗಳ ಕಾಲವಷ್ಟೇ ನಡೆಯಿತು. ತಟಸ್ಥರಲ್ಲಿಯೇ ಬಲ ತಟಸ್ಥ ಮತ್ತು ಎಡ ತಟಸ್ಥ ಎಂದು ಎರಡು ಪಂಗಡಗಳಾದವು. ಆ ಕಾಲದಲ್ಲಿ ಲಾವೋಸ್ ಸರಕಾರ ಮತ್ತು ಸೈನ್ಯ ಬಲಹೀನವಾಗಿತ್ತು. ಈ ಅವಕಾಶವನ್ನು ಉಪಯೋಗಿಸಿಕೊಂಡ ಕಮ್ಯುನಿಸ್ಟರು ಮತ್ತೆ ದಂಗೆ ಎದ್ದು ಲಾವೋಸ್ ಅನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನಿಸಿದರು. ಲಾವೋಸ್‌ನ ಕೆಲವು ಪ್ರದೇಶಗಳಲ್ಲಿ ರಾಜಮನೆತನದ ಮತ್ತು ತಟಸ್ಥ ಪ್ರದೇಶಗಳ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡರು. ಅಲ್ಲಿಗೆ ಅಮೆರಿಕ ಕಮ್ಯುನಿಸ್ಟ್ ಶಿಬಿರಗಳ ಮೇಲೆ ಬಾಂಬ್ ದಾಳಿ ಮಾಡಲು ನಿರ್ಧರಿಸಿತ್ತು. ಜತೆಗೆ ಅಗತ್ಯವಿದ್ದ ಶಸ್ತ್ರಾಸ್ತ್ರಗಳನ್ನೂ ಪೂರೈಸಿತು.

1960ರ ದಶಕದ ಮಧ್ಯದಲ್ಲಿ ವಿಯೆಟ್ನಾಂ ಕಮ್ಯುನಿಸ್ಟರು ತಾವು ಲಾವೋಸ್‌ನಲ್ಲಿ ನಿರ್ಮಿಸಿದ ದಾರಿಯಿಂದ ಒಳಗೆ ನುಸುಳುವುದನ್ನು ಹೆಚ್ಚಿಸಿದರು. ಆಗ ಅಮೆರಿಕ ದಾರಿಯ ಒಂದು ಭಾಗದ ಮೇಲೆ ಬಾಂಬ್ ದಾಳಿ ಮಾಡಲು ನಿರ್ಧರಿಸಿ, 'ಆಪರೇಷನ್ ಟೈಗರ್ ಹೌಂಡ್' ಆರಂಭಿಸಿತು. 1967ರ ವೇಳೆಗೆ ವಿಯೆಟ್ನಾಂ ಸೇನೆ ಲಾವೋ ಸೈನ್ಯದ ಮೇಲೆ ಬಹು ವಿಭಾಗದಲ್ಲಿ ದಾಳಿಯನ್ನು ಆರಂಭಿಸಿತು. ಲಾವೋಸ್‌ನ ಸರಕಾರಿ ಪಡೆಗಳು ಕಣಿವೆಯಿಂದ ಹಿಂದೆ ಸರಿಯಲು ಆರಂಭಿಸಿದವು. ಲಾವೋಸ್ ಸರಕಾರಿ ಸೈನಿಕರಲ್ಲಿ ಹೆಚ್ಚಿನವರು ಬೆಟ್ಟ-ಗುಡ್ಡಗಳಲ್ಲಿ ಚದುರಿಹೋದರು. ಕೆಲವರು ಕೊಲ್ಲಲ್ಪಟ್ಟರು. ರಾಜ ಮನೆತನದವರೂ ಸೋಲು ಅನುಭವಿಸುತ್ತಿದ್ದರು. ಅವರ ಸೈನ್ಯವಂತೂ ಮುಂದೆ ಎಂದಿಗೂ ಚೇತರಿಸಿಕೊಳ್ಳಲೇ ಇಲ್ಲ.

ಸುಮಾರು ಒಂದು ವರ್ಷದವರೆಗೆ ಕಮ್ಯುನಿಸ್ಟರು ನಿಧಾನವಾಗಿ ಲಾವೋಸ್‌ನ ಉತ್ತರ ಭಾಗದಲ್ಲಿ ಮುನ್ನಡೆದು, ಲಾವೋಸ್ ಪಡೆಗಳನ್ನು ಸೋಲಿಸುತ್ತಿದ್ದರು. ಉತ್ತರ ವಿಯೆಟ್ನಾಂನಿಂದ ದಕ್ಷಿಣ ವಿಯೆಟ್ನಾಂಗೆ ನಿರ್ಮಿಸಿದ ದಾರಿಯಲ್ಲಿ ಎಂದಿಗಿಂತಲೂ ಹೆಚ್ಚು ಸೇನಾ ಪಡೆಗಳ ಚಲನ ಮತ್ತು ಶಸ್ತ್ರಾಸ್ತ್ರಗಳ ಸರಬರಾಜು ನಡೆಯುತ್ತಿತ್ತು. ಇದನ್ನು ತಡೆಯಲು ಅಮೆರಿಕ 'ಆಪರೇಷನ್ ಕಮಾಂಡೋ ಹಂಟ್' ಹೆಸರಿನಲ್ಲಿ ಹೊಸ ಕಾರ್ಯಾಚರಣೆಯನ್ನು ಆರಂಭಿಸಿ ಇನ್ನಷ್ಟು ಬಾಂಬ್ ಸುರಿಸಿತು. ಈ ಕಾರ್ಯಾಚರಣೆ ಸುಮಾರು ನಾಲ್ಕು ವರ್ಷಗಳ ಕಾಲ ನಡೆಯಿತು. ಆದರೆ ಅಮೆರಿಕಕ್ಕೆ ಸ್ವಲ್ಪವೂ ಯಶಸ್ಸು ಸಿಗಲಿಲ್ಲ. 1973ರಲ್ಲಿ 'ಪ್ಯಾರಿಸ್ ಶಾಂತಿ ಒಪ್ಪಂದ'ಕ್ಕೆ ಸಹಿ ಹಾಕಿ ಅಮೆರಿಕ ಲಾವೋಸ್‌ನಿಂದ ಹೊರಬಂತು. ಒಪ್ಪಂದದ ಪ್ರಕಾರ ಉತ್ತರ ವಿಯೆಟ್ನಾಂ ತನ್ನ ಪಡೆಯನ್ನು ಹಿಂದಕ್ಕೆ ಸರಿಸುವ ಅಗತ್ಯವಿರಲಿಲ್ಲ. ಅಮೆರಿಕ ಹಿಂದೆ ಸರಿದ ಬೆನ್ನಲ್ಲೇ ಲಾವೋಸ್‌ನಲ್ಲಿ ಅಧಿಕೃತವಾಗಿ ಕಮ್ಯುನಿಸ್ಟ್ ಸರಕಾರ ಅಧಿಕಾರಕ್ಕೆ ಬಂತು. ಈ ಸಂದರ್ಭದಲ್ಲಿ ಸಾವಿರಾರು ಜನ ಪ್ರಾಣ ಕಳೆದುಕೊಂಡರು. ಸಾವಿರಾರು ಜನ ಅಂಗಾಂಗ ಕಳೆದುಕೊಂಡರು.

ಯುದ್ಧ ಅಂದಮೇಲೆ ಸಾವು-ನೋವು, ಯಾತನೆ-ವೇದನೆ ಎಲ್ಲ ಇದ್ದದ್ದೇ. ಶಸ್ತ್ರಾಸ್ತ್ರ ಹಿಡಿದು ಮಾಡಿದ ಯಾವ ಯುದ್ಧವೂ ಸಂತೋಷ ಕೊಡುವಂಥದ್ದಲ್ಲ. ಯುದ್ಧದ ನೋವಿನ ನಡುವೆ ಯಾವ ಕಾರಣಕ್ಕಾಗಿ ಯುದ್ಧ ನಡೆಯಿತೋ ಅದು ಸಫಲವಾದರೆ ಅಷ್ಟರ ಮಟ್ಟಿಗೆ ಸಮಾಧಾನಪಟ್ಟುಕೊಳ್ಳಬಹುದು. ಇಲ್ಲಿ ಲಾವೋಸ್‌ನ ಜನ ಪ್ರಾಣ ಕಳೆದುಕೊಂಡಿದ್ದು ಯಾವುದಕ್ಕಾಗಿ? ವಿಯೆಟ್ನಾಂನ ರಾಜನೀತಿಯಿಂದಾಗಿ, ಅಲ್ಲಿಯ ಜನರ ಮಹತ್ವಾಕಾಂಕ್ಷೆಯನ್ನು ತೃಪ್ತಿಪಡಿಸುವುದಕ್ಕಾಗಿ. ಉತ್ತರ ಮತ್ತು ದಕ್ಷಿಣ ವಿಯೆಟ್ನಾಂನಲ್ಲಿ ಯಾರೇ ಗೆದ್ದರೂ, ಯಾರೇ ಸೋತರೂ ಲಾವೋಸ್ ದೇಶದ ಮೇಲೆ ಹೇಳಿಕೊಳ್ಳುವಂಥ ಯಾವ ಪರಿಣಾಮವೂ ಆಗುತ್ತಿರಲಿಲ್ಲ. ದೇಶದ ಆಂತರಿಕ ಗಲಭೆಗಳನ್ನು ಯಾವ ದೇಶವಾದರೂ ಸಹಿಸಿಕೊಳ್ಳುತ್ತದೆ, ಸುಧಾರಿಸಿಕೊಳ್ಳುತ್ತದೆ. ಯಡವಟ್ಟಾಗುವುದು ಬೇರೆ ದೇಶಗಳು ಮೂಗು ತೂರಿಸಿದಾಗ. ವಿಯೆಟ್ನಾಂ ತನ್ನ ಸ್ವಾರ್ಥಕ್ಕಾಗಿ ಲಾವೋಸ್‌ನಲ್ಲಿ ರಸ್ತೆ ನಿರ್ಮಿಸದಿದ್ದಿದ್ದರೆ, ರಷ್ಯಾ, ಚೀನಾ ಅದರ ಬೆಂಬಲಕ್ಕೆ ನಿಲ್ಲದಿದ್ದಿದ್ದರೆ, ಅಮೆರಿಕ ಮಧ್ಯ ಪ್ರವೇಶಿಸದಿದ್ದಿದ್ದರೆ, ಎಲ್ಲಕ್ಕಿಂತ ಹೆಚ್ಚಾಗಿ, ಲಕ್ಷಗಟ್ಟಲೆ ಬಾಂಬ್ ಹಾಕದಿದ್ದಿದ್ದರೆ, ಲಾವೋಸ್‌ನ ಅಮಾಯಕರು ಸಾಯುತ್ತಿರಲಿಲ್ಲ. ಇಂದಿನ ಪೀಳಿಗೆಯಷ್ಟೇ ಅಲ್ಲ, ಮುಂದಿನ ನಾಲ್ಕು ತಲೆಮಾರಿನವರೂ ಭಯದ ವಾತಾವರಣದಲ್ಲಿ, ಅನಿಶ್ಚಿತತೆಯಲ್ಲಿ ಬದುಕಬೇಕಾಗುತ್ತಿರಲಿಲ್ಲ. ಈ ಯುದ್ಧದ ಕೊನೆಗೆ ಉಳಿಯುವ ಪ್ರಶ್ನೆ ಒಂದೇ. ಅಷ್ಟೊಂದು ಬಾಂಬ್ ಸುರಿಸಿ ಇಲ್ಲಿ ಅಮೆರಿಕ ಸಾಧಿಸಿದ್ದಾದರೂ ಏನು? ಯಾವ ದೇಶದ ಸಹಾಯಕ್ಕೆ ಎಂದು ಹೇಳಿಕೊಂಡು ಬಂದು ನಿಂತಿತ್ತೋ ಆ ದೇಶವನ್ನು ಹಳ್ಳಕ್ಕೆ ತಳ್ಳಿದ್ದು ಬಿಟ್ಟರೆ ಮತ್ತೇನೂ ಇಲ್ಲ. ಕೊನೆ ಪಕ್ಷ ತಾನು ಹಾಕಿದ, ಇನ್ನೂ ಸಿಡಿಯದ ಬಾಂಬ್‌ಗಳನ್ನು ಹುಡುಕಿ ನಿಷ್ಕ್ರಿಯಗೊಳಿಸುವುದಕ್ಕಾದರೂ ಸಹಾಯ ಮಾಡಬಹುದಿತ್ತು. ಅದನ್ನೂ ಮಾಡುತ್ತಿಲ್ಲ.

ಅಂತೂ ಯಾರದ್ದೋ ಮಹತ್ವಾಕಾಂಕ್ಷೆಗೆ, ಯಾರದ್ದೋ ಪ್ರತಿಷ್ಠೆಗೆ ಬಡಪಾಯಿ ಲಾವೋಸ್ ಬಲಿಪಶುವಾಗಿದ್ದಷ್ಟೇ ಬಂತು!

ಸದನ ನಡೆಯದಿದ್ದರೆ ವಿರೋಧ ಪಕ್ಷಗಳಿಗೇ ನಷ್ಟ

ಪ್ರಕಾಶಪಥ

ಪ್ರಕಾಶ್ ಶೇಷರಾಘವಾಚಾರ್
vveditoped@gmail.com

ಸಂಸತ್‌ನ ಈ ಬಾರಿಯ ಮಳೆಗಾಲದ ಅಧಿವೇಶನದಲ್ಲಿ ವಿರೋಧ ಪಕ್ಷಗಳ ಗದ್ದಲದ ಕಾರಣ ಕಲಾಪವನ್ನು ನಡೆಸಲು ಅಡ್ಡಿಯಾಗಿ, ಆಡಳಿತ ಪಕ್ಷವು ಲೋಕಸಭೆಯಲ್ಲಿ 12 ಮತ್ತು ರಾಜ್ಯಸಭೆಯಲ್ಲಿ 15 ವಿಧೇಯಕಗಳಿಗೆ ಚರ್ಚೆಯಿಲ್ಲದೆ ಅಂಗೀಕಾರವನ್ನು ಪಡೆದುಕೊಂಡಿತು. ಇಷ್ಟಕ್ಕೂ ಸದನ ನಡೆಯಲು ಅಡ್ಡವಾದ ಅಂಥ ಗಂಭೀರ ವಿಷಯವಾದರೂ ಏನು? ಬಿಹಾರದಲ್ಲಿ ಚುನಾವಣಾ ಆಯೋಗವು ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯು (ಎಸ್‌ಐಆರ್) ವಿರೋಧ ಪಕ್ಷಗಳ, ಅದರಲ್ಲಿಯೂ ತೃಣಮೂಲ ಕಾಂಗ್ರೆಸ್‌ನ ನಿದ್ರೆಗೆಡಿಸಿಬಿಟ್ಟಿದೆ. ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕು ಎಂಬುದು ಇವರ ಹಠವಾಗಿತ್ತು. ಆದರೆ ಆಡಳಿತ ಪಕ್ಷವು, 'ನಿಯಮಾವಳಿಗಳ ಪ್ರಕಾರ ಚುನಾವಣಾ ಆಯೋಗದ ಕ್ರಮವನ್ನು ಸದನದಲ್ಲಿ ಚರ್ಚಿಸಲು ಸಾಧ್ಯವಿಲ್ಲ; ಕಾರಣ ಉತ್ತರ ನೀಡಬೇಕಾದವರು ಚುನಾವಣಾ ಆಯೋಗದವರು. ಅವರ ಪರವಾಗಿ ಸರಕಾರ ಉತ್ತರ ಕೊಡಲು ಸಾಧ್ಯವಿಲ್ಲ' ಎಂದು ವಾದಿಸಿತು.

1988ರಲ್ಲಿ, ಅಂದಿನ ಲೋಕಸಭಾಧ್ಯಕ್ಷ ಬಲರಾಮ್ ಜಾಖಡ್ ಅವರು, 'ಚುನಾವಣಾ ಆಯೋಗವು ಸದನದ ವ್ಯಾಪ್ತಿಗೆ ಬರುವುದಿಲ್ಲ' ಎಂದು ತೀರ್ಪು ನೀಡಿದ್ದರು. ಅದನ್ನು ಉಲ್ಲೇಖಿಸಿ ಉಭಯ ಸದನದ ಸಭಾಧ್ಯಕ್ಷರು ಚರ್ಚೆಗೆ ಅವಕಾಶ ನಿರಾಕರಿಸಿದರು. ಆಗ ಶುರುವಾಯ್ತು ನೋಡಿ ಇವರಿಬ್ಬರ ನಡುವಿನ ಹಗ್ಗಜಗ್ಗಾಟ. 'ನೀ ಕೊಡೆ, ನಾ ಬಿಡೆ' ಎಂಬಂತೆ ಇಬ್ಬರೂ ತಮ್ಮ ತಮ್ಮ ನಿಲುವಿನಿಂದ ಅಲ್ಲಾಡಲಿಲ್ಲ.

ಜುಲೈ 21ರಿಂದ ಆಗಸ್ಟ್ 21ರವರೆಗೆ ಉಭಯ ಸದನಗಳ ಕಲಾಪಗಳು ನಡೆದವು; ಲೋಕಸಭೆಯ ಶೇ.29 ಮತ್ತು ರಾಜ್ಯಸಭೆಯ ಶೇ.34ರಷ್ಟು ಸಮಯದವರೆಗೆ ಮಾತ್ರ ಕಲಾಪ ನಡೆಯಿತು. ಮೀಸಲಿದ್ದ 120 ಗಂಟೆಯ ಅವಧಿಯಲ್ಲಿ ಕೇವಲ 37 ಗಂಟೆಗಳಷ್ಟೇ ಸದನಗಳು ಕಾರ್ಯನಿರ್ವಹಿಸಿದ್ದು. ಸದನವನ್ನು ನಡೆಸಲು ಸರಕಾರವು ಒಂದು ನಿಮಿಷಕ್ಕೆ 2.5 ಲಕ್ಷ ರುಪಾಯಿಗಳನ್ನು ವೆಚ್ಚ ಮಾಡುತ್ತದೆ; ಆದರೆ ಸರಿಯಾಗಿ ಕಲಾಪವೇ ನಡೆಯದ ಕಾರಣ ಜನರ ಈ ತೆರಿಗೆ ಹಣವು ನೀರಿನಲ್ಲಿ ಹೋಮಮಾಡಿದಂತಾಯಿತು. ಇದು ವಿಷಾದದ ಸಂಗತಿ. ಅಧಿವೇಶನದಲ್ಲಿ ಸದಸ್ಯರು ಹಲವಾರು ಪ್ರಮುಖ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುತ್ತಾರೆ. ರಾಜ್ಯಕ್ಕೆ ಮತ್ತು ತಮ್ಮ ಮತಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿ ಸರಕಾರದ ಗಮನ ಸೆಳೆಯುತ್ತಾರೆ. ಚರ್ಚೆಯ ಮೂಲಕ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಇದು ಉತ್ತಮ ಅವಕಾಶವೂ ಹೌದು. ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ವಿರೋಧಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು; ಆದರೆ ಮತದಾರರ ಪಟ್ಟಿಯ ಪರಿಷ್ಕರಣೆಗೆ ತಡೆ ನೀಡಲು ನ್ಯಾಯಾಲಯ ನಿರಾಕರಿಸಿತು. ತಮ್ಮ ಅರ್ಜಿಗೆ ನ್ಯಾಯಾಲಯದಲ್ಲಿ ಮಾನ್ಯತೆ ದೊರೆಯದಾದಾಗ ವಿರೋಧ ಪಕ್ಷಗಳು ಹಠವನ್ನು ತೊರೆದು ಕಲಾಪದಲ್ಲಿ ಭಾಗವಹಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ನ್ಯಾಯಾಲಯದಲ್ಲಿ ಪ್ರಶ್ನಿಸಿದ ನಂತರ ಸದನದಲ್ಲಿ ಚರ್ಚೆಗಾಗಿ ವಿಪಕ್ಷಗಳು ಹಠಕ್ಕೆ ಬಿದ್ದಿದ್ದು ನೋಡಿದರೆ, ಸದನವು ನಡೆಯಲು ಅವಕಾಶ ನೀಡಬಾರದು ಎಂಬ ತೀರ್ಮಾನಕ್ಕೆ ಅವು ಬಂದಿದ್ದವು ಎನಿಸುತ್ತದೆ.

2009ರ, ಯುಪಿಎ ಸರಕಾರದ ಎರಡನೇ ಅವಧಿಯಲ್ಲಿ, ಒಂದಲ್ಲಾ ಒಂದು ಹಗರಣಗಳು ಬಯಲಾಗುತ್ತ ಸದನದಲ್ಲಿ ಕಲಾಪ ನಡೆಯುವುದೇ ದುಸ್ತರವಾಗಿತ್ತು. ಆ ಸಂದರ್ಭದಲ್ಲಿ ಅರುಣ್ ಜೇಟ್ಲಿಯವರು, 'ಸದನದ ಕಲಾಪಕ್ಕೆ ಅಡ್ಡಿಪಡಿಸುವುದು ವಿರೋಧ ಪಕ್ಷಗಳ ಹಕ್ಕು' ಎಂದು ಹೇಳಿಕೆ ನೀಡಿದ್ದರು. ಆದರೆ ಕಾಂಗ್ರೆಸ್ಸಿಗರು ತಾವು ಕಲಾಪಕ್ಕೆ ಅಡ್ಡಿ ಮಾಡಿದಾಗಲೆಲ್ಲಾ, ಆ ಹೇಳಿಕೆಯನ್ನು ನೆನಪಿಸಿ ತಮ್ಮ ವರ್ತನೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ಅವರ ನಿಲುವು ಹೇಗೆ ಸಮರ್ಥನೀಯವಾಗಿರಲಿಲ್ಲವೋ ಹಾಗೆಯೇ ಈಗಿನ ಬೆಳವಣಿಗೆಯೂ ಸಮರ್ಥನೀಯವಲ್ಲ.

ಸದನವು ಆರೋಗ್ಯಕರ ಚರ್ಚೆಗೆ, ಜನಹಿತ ಕಾರ್ಯಕ್ಕೆ ವೇದಿಕೆಯಾಗಬೇಕೇ ವಿನಾ, ಗದ್ದಲ-ಗಲಾಟೆಗಲ್ಲ. ಜನಪ್ರತಿನಿಧಿಗಳು ತಮ್ಮನ್ನು ಚುನಾಯಿಸಿದ ಮತದಾರರಿಗೆ, ಸಂಸತ್‌ನಲ್ಲಿ ತಾವು ಪ್ರಸ್ತಾಪಿಸಿದ ವಿಷಯಗಳು ಹಾಗೂ ಗಮನ ಸೆಳೆದ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಬೇಕು. ಆದರೆ ಕಲಾಪವೇ ನಡೆಯದಿದ್ದರೆ ಮತದಾರರಿಗೆ ಇವರು ಏನು ಉತ್ತರವನ್ನು ನೀಡಿಯಾರು? ಕ್ಷುಲ್ಲಕ ಕಾರಣಗಳನ್ನು ಮುಂದಿಟ್ಟುಕೊಂಡು ಸದನದ ಕಲಾಪಕ್ಕೆ ಅಡ್ಡಿಪಡಿಸುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ನಮ್ಮ ಸಂವಿಧಾನವನ್ನು ರಚಿಸಿದವರಿಗೆ, ಇಡೀ ಅಧಿವೇಶನವನ್ನೇ ಆಪೋಶನ ತೆಗೆದುಕೊಳ್ಳುವ ವಿಪಕ್ಷಗಳ ಇಂಥ ಮಾನಸಿಕತೆ ಮತ್ತು 'ರಾಜಕೀಯ ಅಜೆಂಡಾ' ಬಗ್ಗೆ ಊಹೆ ಇರಲಿಲ್ಲವೆನಿಸುತ್ತದೆ. ಇದ್ದಿದ್ದರೆ ಪ್ರಾಯಶಃ ಈ ಪ್ರವೃತ್ತಿಗೂ ಕಡಿವಾಣ ಹಾಕಬಲ್ಲ ಸೂಕ್ತ ನಿಯಮಾವಳಿಗಳನ್ನು ಅವರು ಸಂಸದೀಯ ವ್ಯವಸ್ಥೆಯಲ್ಲಿ ಅಳವಡಿಸಿರುತ್ತಿದ್ದರು.

ಅಮೆರಿಕ ಮೂಲದ ಹಿಂಡನ್‌ಬರ್ಗ್ ಸಂಶೋಧನಾ ಗುಂಪು 2023ರಲ್ಲಿ ಮೊದಲ ಬಾರಿಗೆ, ಸಂಸತ್ ಅಧಿವೇಶನಕ್ಕೂ ಮುನ್ನ, 'ಅದಾನಿ ಸಮೂಹವು ಷೇರು ವ್ಯವಹಾರ ಮತ್ತು ಲೆಕ್ಕಪತ್ರದಲ್ಲಿ ವಂಚನೆ ಮಾಡಿದೆ' ಎಂಬ ವರದಿಯನ್ನು ಬಿಡುಗಡೆ ಮಾಡಿತು. ತದನಂತರ, ಪ್ರತಿ ಸಂಸತ್ ಅಧಿವೇಶನಕ್ಕೂ ಮುನ್ನ ಇಂಥ ಏನಾದರೂ ಹೊಸ ವರದಿ ಬಿಡುಗಡೆ ಮಾಡುವುದು ಅದರ ಪರಿಪಾಠವಾಗಿತ್ತು. ಇದನ್ನು ಮುಂದಿಟ್ಟುಕೊಂಡು ರಾಹುಲ್ ಗಾಂಧಿಯವರು ಸದನದಲ್ಲಿ ಗದ್ದಲವೆಬ್ಬಿಸಿ ಕಲಾಪಕ್ಕೆ ಅಡ್ಡಿಮಾಡುವುದು ಸಾಮಾನ್ಯವಾಗಿತ್ತು. ಅಂತಿಮವಾಗಿ, ಸದರಿ ಹಿಂಡನ್‌ಬರ್ಗ್ ಸಂಸ್ಥೆಯೇ ತನ್ನ ಬಾಗಿಲು ಹಾಕಿಕೊಂಡು ಹೊಯಿತು. ಆದರೆ, ಈ ಸಂಸ್ಥೆಯ ವರದಿಯನ್ನಾಧರಿಸಿ ಗದ್ದಲವಾಗಿದ್ದಕ್ಕೆ ವ್ಯರ್ಥವಾದ ಕಲಾಪದ ಸಮಯವು ಮರಳಿ ಬರುವುದೇ?!

ರಫೇಲ್ ಯುದ್ಧವಿಮಾನ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ, ಪೆಗಾಸಿಸ್ ಸ್ಪೈವೇರ್ ಕಂಪನಿಯು ವಿಪಕ್ಷ ನಾಯಕರ ಮೊಬೈಲ್ ಸಂವಹನಗಳ ಮೇಲೆ ಕಣ್ಗಾವಲು ನಡೆಸುತ್ತಿದೆ ಎಂಬ ಆರೋಪಗಳನ್ನು ಮುಂದಿಟ್ಟುಕೊಂಡು ಕಲಾಪಕ್ಕೆ ಹಲವು ಬಾರಿ ಅಡ್ಡಿಪಡಿಸಲಾಯಿತು. ಈ ಆರೋಪಗಳಲ್ಲಿ ಯಾವುದೇ ತಥ್ಯವಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವೇನೋ ತೀರ್ಪು ನೀಡಿತು. ಆದರೆ ಅಷ್ಟು ಹೊತ್ತಿಗಾಗಲೇ ಈ ವಿಚಾರವಾಗಿ ಹಲವಾರು ಗಂಟೆಗಳ ಕಲಾಪ ಆಹುತಿಯಾಗಿತ್ತು.

ಮತದಾರರ ಪಟ್ಟಿಯ ಪರಿಷ್ಕರಣೆಯ ವಿಷಯದಲ್ಲಿ ಅತಿ ಹೆಚ್ಚು ಆತಂಕದಲ್ಲಿ ಇರುವುದು ತೃಣಮೂಲ ಕಾಂಗ್ರೆಸ್. ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಸೇರ್ಪಡೆ ಮಾಡಿರುವುದು ಗುಟ್ಟೇನಲ್ಲ. ಈಗ ಮತದಾರರ ಪಟ್ಟಿಯ ಪರಿಷ್ಕರಣೆಯ ವೇಳೆ ಸೂಕ್ತ ದಾಖಲೆ ಕೇಳಿದರೆ, ಲಕ್ಷಾಂತರ ಅಕ್ರಮ ಮತದಾರರು ಸಿಕ್ಕಿಬೀಳುವುದು ಖಾತ್ರಿ. ಹೀಗಾಗಿ ತೃಣಮೂಲ ಕಾಂಗ್ರೆಸ್ಸಿಗರು ಸದರಿ ಪರಿಷ್ಕರಣೆಯನ್ನು ಅತ್ಯುಗ್ರವಾಗಿ ವಿರೋಧಿಸಿದರು.

ಚುನಾವಣಾ ಆಯೋಗವು ಬಿಹಾರದ ಪರಿಷ್ಕೃತ ಮತದಾರರ ಪಟ್ಟಿಯನ್ನು ಪ್ರಕಟಿಸಿದೆ. ಸೆಪ್ಟೆಂಬರ್ 1ರೊಳಗೆ ಆಕ್ಷೇಪ ಸಲ್ಲಿಸಲು ಅವಕಾಶ ನೀಡಿದ್ದರೂ, 'ಮತಗಳ್ಳತನ ಆಗುತ್ತಿದೆ' ಅಂತ ಇಂದು ಬೊಬ್ಬೆ ಹೊಡೆಯುತ್ತಿರುವವರು ಒಂದೇ ಒಂದು ಆಕ್ಷೇಪವನ್ನೂ ಸಲ್ಲಿಸಿಲ್ಲ. ಇಂಥವರು ಸದನದ ಸಮಯವನ್ನು ಹಾಳುಮಾಡುವ ಬದಲು, ಮತದಾರರ ಪಟ್ಟಿಯ ದೋಷಗಳನ್ನು ಹೊರಗೆ ಎಳೆಯಬೇಕಿತ್ತಲ್ಲವೇ? ಅದನ್ನು ಸಾಕ್ಷಿ ಸಮೇತ ತೋರಿಸಿದ್ದಿದ್ದರೆ ಅವರ ಆರೋಪಕ್ಕೆ ಇನ್ನಷ್ಟು ಬಲ ಬರುತ್ತಿತ್ತು. ಆದರೆ ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷದವರು ಆಕ್ಷೇಪವನ್ನೇ ಸಲ್ಲಿಸದೆ ಕೇವಲ ರಾಜಕೀಯಕ್ಕಾಗಿ ಮತಗಳ್ಳತನದ ಆರೋಪ ಮಾಡುತ್ತಿದ್ದಾರೆ. ಈ ವರ್ತನೆಯು ಬಿಜೆಪಿಯ ವಾದಕ್ಕೆ ಪುಷ್ಟಿ ನೀಡಿದೆ.

ಸಂಸತ್ತು ನಡೆಯದಿದ್ದರೆ ಆಡಳಿತ ಪಕ್ಷವು ಕಳೆದುಕೊಳ್ಳುವಂಥದ್ದು ಏನೂ ಇಲ್ಲ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಖಾತೆಯ ಸಚಿವ ಕಿರಣ್ ರಿಜಿಜು ಸ್ಪಷ್ಟವಾಗಿ ಹೇಳಿದ್ದಾರೆ. ಏಕೆಂದರೆ, ಪ್ರತಿಪಕ್ಷಗಳ ಪ್ರಶ್ನೆಗೆ ಉತ್ತರಿಸುವ ಗೋಜಿರುವುದಿಲ್ಲ, ಆಡಳಿತ ವ್ಯವಸ್ಥೆಯಲ್ಲಿನ ಲೋಪ/ನ್ಯೂನತೆ/ಕೊರತೆ ಹೊರಬರುತ್ತದೆ ಎಂಬ ಮುಜುಗರವಿರುವುದಿಲ್ಲ! ಸದನವೇ ನಡೆಯದಿದ್ದರೆ ಅಧಿಕಾರಿಶಾಹಿಗಳು ಒತ್ತಡದಿಂದ/ಮುಜುಗರದಿಂದ ಬಚಾವ್ ಆಗುತ್ತಾರೆ. ಸರಕಾರಕ್ಕೂ ಯಾರಿಗೂ ಉತ್ತರಿಸುವ ತಾಪತ್ರಯವೇ ಇಲ್ಲದೆ, 'ಮಲಗುವವನಿಗೆ ಹಾಸಿಗೆ ಹಾಸಿಕೊಟ್ಟಂತೆ' ಆಗುತ್ತದೆ.

ಹಿಂದೆಲ್ಲಾ ಸದನದಲ್ಲಿ ಗದ್ದಲವಾದರೆ ಕಲಾಪವನ್ನು ನಡೆಸದೆ ಮುಂದೂಡಲಾಗುತ್ತಿತ್ತು; ಆದರೆ ಈ ಗದ್ದಲದ ಹಿಂದೆ ಆಡಳಿತವನ್ನು ನಿಷ್ಕ್ರಿಯ ಮಾಡುವ ಹುನ್ನಾರವೇ ಹೆಚ್ಚಾದಾಗ ವರಸೆಯು ಬದಲಾಯಿತು. ಈಗ ಗದ್ದಲ-ಗಲಾಟೆಗಳ ನಡುವೆಯೇ ಪೂರ್ವನಿರ್ಧಾರಿತ ವಿಧೇಯಕಗಳಿಗೆ ಅಂಗೀಕಾರ ಪಡೆಯುವ ಪರಿಪಾಠ ಆರಂಭವಾಗಿದೆ. ಅಂಥ ಕೆಲವು ಹೀಗಿವೆ ನೋಡಿ:

- ವಿಶೇಷವಾಗಿ, ಕ್ರೀಡಾ ಆಡಳಿತ ವಿಧೇಯಕ, 2025;
- ರಾಷ್ಟ್ರೀಯ ಡೋಪಿಂಗ್ ವಿರೋಧಿ (ತಿದ್ದುಪಡಿ) ವಿಧೇಯಕ, 2025;
- ಆದಾಯ ತೆರಿಗೆ ವಿಧೇಯಕ, 2025;
- ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2025.

ಈ ವಿಧೇಯಕಗಳು ಜನಜೀವನದಲ್ಲಿ ಅನೇಕ ಬದಲಾವಣೆಯನ್ನು ತರುವಷ್ಟರ ಮಟ್ಟಿಗಿನ ಮಹತ್ವ ಉಳ್ಳಂಥವು. ವಿಪಕ್ಷಗಳು ಈ ವಿಧೇಯಕಗಳ ಕುರಿತಾದ ಸದನದ ಚರ್ಚೆಯಲ್ಲಿ ಭಾಗವಹಿಸಿ, ಇವುಗಳ ತಪ್ಪು-ಒಪ್ಪುಗಳ ಬಗ್ಗೆ ಸರಕಾರದ ಗಮನ ಸೆಳೆಯಬೇಕಿತ್ತು. ಆದರೆ, ಜನಪರ ಹಿತಕ್ಕಿಂತ ತಮ್ಮ 'ರಾಜಕೀಯ ಅಜೆಂಡಾ' ಮಾತ್ರವೇ ವಿಪಕ್ಷಗಳವರ ಆದ್ಯತೆಯ ವಿಷಯವಾದ ಕಾರಣ ಗದ್ದಲ-ಗಲಾಟೆಗೆ ಅವರು ಪ್ರಾಶಸ್ತ್ಯ ಕೊಟ್ಟರು. ಇವರು ಚರ್ಚೆಯಲ್ಲಿ ಭಾಗವಹಿಸದಿದ್ದುದಕ್ಕೆ ತಲೆಕೆಡಿಸಿಕೊಳ್ಳದ ಆಡಳಿತ ಪಕ್ಷವು ತಾನು ಮಂಡಿಸಿದ ವಿಧೇಯಕಗಳಿಗೆ ಅಂಗೀಕಾರವನ್ನು ಪಡೆದುಕೊಂಡಿತು. ಈ ಸದಸ್ಯರ ಹಠದಿಂದಾಗಿ ನಷ್ಟವಾಗಿದ್ದು ವಿಪಕ್ಷಗಳಿಗೇ ವಿನಾ ಆಡಳಿತ ಪಕ್ಷಕ್ಕಲ್ಲ. ಕೇವಲ ಒಂದೇ ಅಜೆಂಡಾಗೆ ಜೋತುಬಿದ್ದು ಸದನ ನಡೆಯದ ಹಾಗೆ ನೋಡಿಕೊಂಡಿದ್ದು ಅವರಿಗೇ ತಿರುಗುಬಾಣವಾಯಿತು. ವಿಧೇಯಕಗಳನ್ನು ಅಂಗೀಕರಿಸಿಕೊಂಡ ಆಡಳಿತ ಪಕ್ಷವು ಇವರ ಮೊಂಡುತನದ ಲಾಭ ಪಡೆಯಿತು. ಬಿಹಾರದಲ್ಲಿ 'ಮತಾಧಿಕಾರ ಯಾತ್ರೆ' ಕೈಗೊಂಡಿರುವ ರಾಹುಲ್‌ರವರು ಸಭೆಗಳಲ್ಲಿ ತಮ್ಮ ಅಭಿಪ್ರಾಯ ಮಂಡಿಸುತ್ತಿದ್ದಾರೆ; ಅವರು ಈ ನಿರ್ಣಯವನ್ನು ಮೊದಲೇ ಕೈಗೊಂಡು ಕಲಾಪದಲ್ಲಿ ಭಾಗವಹಿಸುವುದಕ್ಕೆ ತಮ್ಮ ಪಕ್ಷದ ಸದಸ್ಯರಿಗೆ ಅವಕಾಶ ಕೊಡಬಹುದಾಗಿತ್ತು.

ಸದನದಲ್ಲಿ ಕಲಾಪವು ಸುಗಮವಾಗಿ ನಡೆಯುವಂತಾಗುವಲ್ಲಿ ಮತ್ತು ಸಂಸದೀಯ ಸತ್ಸಂಪ್ರದಾಯಗಳನ್ನು ಕಾಯ್ದುಕೊಳ್ಳುವಲ್ಲಿ ಆಡಳಿತ ಪಕ್ಷಕ್ಕೆ ಇನ್ನೂ ಹೆಚ್ಚಿನ ಜವಾಬ್ದಾರಿಯಿದೆ. ಅದು ಸಂಧಾನ, ಮನವೊಲಿಕೆಯ ಮೂಲಕ ಅಥವಾ ಮಧ್ಯದ ಹಾದಿಯನ್ನು ಕಂಡುಕೊಂಡು ಕಲಾಪವು ನಡೆಯುವಂತೆ ನೋಡಿಕೊಳ್ಳಬೇಕಿದೆ.

ರಾಜಕೀಯವನ್ನು ಬೀದಿಯಲ್ಲಿ ಮಾಡಬೇಕು, ಚರ್ಚೆ ಮತ್ತು ಸಂವಾದವನ್ನು ಸದನದೊಳಗೆ ಮಾಡಬೇಕು; ಆದರೆ ದುರ್ದೈವವಶಾತ್, ಇತ್ತೀಚಿನ ದಿನಗಳಲ್ಲಿ 'ಬೀದಿ ರಾಜಕೀಯ'ವು ಸದನವನ್ನು ಪ್ರವೇಶಿಸಿದೆ. ಅದು ಸದನದ ಪಾವಿತ್ರ್ಯವನ್ನು ಹಾಳುಗೆಡಹುತ್ತಿದೆ. ಇದರಿಂದಾಗಿ ಆರೋಗ್ಯಕರ ಚರ್ಚೆಗಳು ಮತ್ತು ಪರಸ್ಪರ ಸಂವಾದಗಳು ಮರೆಯಾಗುತ್ತಿವೆ.

(ಲೇಖಕರು ಬಿಜೆಪಿ ವಕ್ತಾರರು)

ಯಕ್ಷಪ್ರಶ್ನೆ

ಅರುಣ ಜೋಶಿ

ಕ್ಷಮಾಪಣೆ ಯಾಕೆ...?

ಮಾನ್ಯ ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಕಳೆದ ವಾರ ಕರ್ನಾಟಕ ವಿಧಾನಸಭೆಯಲ್ಲಿ ಮಾತನಾಡುತ್ತ, ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಪ್ರಾರ್ಥನೆಯ ಎರಡು ಸಾಲುಗಳನ್ನು ಉಲ್ಲೇಖಿಸಿದರು. ಇದು ಬೆಂಗಳೂರಿನಿಂದ ದೆಹಲಿಯವರೆಗೂ ಚರ್ಚೆಯ ವಿಷಯವಾಗಿ ಪರಿಣಮಿಸಿ, ಕೊನೆಗೆ ಕಾಂಗ್ರೆಸ್ ಹೈಕಮಾಂಡ್‌ನ ಸೂಚನೆಯ ಮೇರೆಗೆ ಡಿ.ಕೆ. ಶಿವಕುಮಾರ್ ಅವರು ಕ್ಷಮೆ ಯಾಚಿಸಿದರು. ಈ ಬೆಳವಣಿಗೆಯು ಪ್ರಸಕ್ತ ರಾಜಕೀಯ ಪರಿಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ.

ಆರೆಸ್ಸೆಸ್ ಇದೇ ವರ್ಷ ತನ್ನ ಹುಟ್ಟಿನ ಶತಮಾನೋತ್ಸವವನ್ನು (1925-2025) ವಿಶ್ವಾದ್ಯಂತ ಆಚರಿಸುತ್ತಿದೆ. ಆರೆಸ್ಸೆಸ್ ಒಂದು ಸಾಂಸ್ಕೃತಿಕ, ಸಾಮಾಜಿಕ ಸಂಘಟನೆ. ರಾಜಕೀಯ ನೇತಾರರು, ಶಿಕ್ಷಣ ತಜ್ಞರು, ಲೇಖಕರು, ಕಾರ್ಮಿಕ ನಾಯಕರು, ಸರಕಾರಿ ನೌಕರರು, ವಿದ್ಯಾರ್ಥಿ ನಾಯಕರು- ಹೀಗೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿದ್ದು ಆರೆಸ್ಸೆಸ್‌ನ ವಿಚಾರವನ್ನು ಮೈಗೂಡಿಸಿಕೊಂಡಿರುವ ಲಕ್ಷಾಂತರ ಜನರಿದ್ದಾರೆ, ಅವರೆಲ್ಲ ಜಾತಿ-ಪಂಥ-ಪಕ್ಷಗಳ ಭೇದ ಮರೆತು ಆರೆಸ್ಸೆಸ್‌ನ ಸ್ವಯಂಸೇವಕರಾಗಿದ್ದಾರೆ. ಇನ್ನುಳಿದ ಹಲವು ಜನರು ಆರೆಸ್ಸೆಸ್‌ನ ಸಕ್ರಿಯ ಕಾರ್ಯಕರ್ತರಲ್ಲದಿದ್ದರೂ ಹಿತೈಷಿಗಳಾಗಿದ್ದಾರೆ. ಇಷ್ಟಾಗಿಯೂ, ಪ್ರಜಾಪ್ರಭುತ್ವದ ಚರ್ಚೆಯ ಬಿರುಸಿನಲ್ಲಿ ಸಂಘಟನೆಯೊಂದರ ಪ್ರಾರ್ಥನೆಯ ಕೆಲವು ಸಾಲುಗಳನ್ನು ಸಂದರ್ಭೋಚಿತವಾಗಿ ಉಲ್ಲೇಖಿಸಿದ್ದಕ್ಕೆ ಕ್ಷಮೆ ಕೇಳುವ ಪ್ರಮೇಯ ಉದ್ಭವಿಸಿದ್ದೇಕೆ? ಎಂಬುದೇ ಯಕ್ಷಪ್ರಶ್ನೆ!

ಈ ಪ್ರಾರ್ಥನೆಯ ಸಾರವನ್ನು ಅವಲೋಕಿಸಿದರೆ, ಮಾತೃಭೂಮಿ ಭಾರತ ದೇಶದ ವರ್ಣನೆ, ಪುಣ್ಯಭೂಮಿ ಎಂಬ ಉಲ್ಲೇಖ, ಈ ದೇಶ ಸೇವೆಯ ಕಾರ್ಯವನ್ನು ಸ್ವ-ಇಚ್ಛೆಯಿಂದ ದೃಢವಾಗಿ ಸ್ವೀಕರಿಸಿದ್ದೇನೆ ಎಂಬ ಸಂಕಲ್ಪ ಅದರಲ್ಲಿ ಅಡಕವಾಗಿರುವುದು ಅರಿವಾಗುತ್ತದೆ. ಇದರಲ್ಲಿ ಕಾಂಗ್ರೆಸ್‌ನವರಾಗಲೀ, ಬೇರೆಯವರಾಗಲೀ ಉಲ್ಲೇಖಿಸಬಾರದ ವಿಷಯವೇನಿದೆ ಎಂಬುದನ್ನು ಕಾಂಗ್ರೆಸ್‌ನ ಯಾವ ನಾಯಕರೂ ಇದುವರೆಗೆ ಹೇಳಲಿಲ್ಲ. ಆದರೆ ಆ ಸಾಲನ್ನು ಉಲ್ಲೇಖಿಸಿದ್ದು ತಪ್ಪು ಎಂಬಂತೆ ಹಲವರು ಮಾತನಾಡುತ್ತಿದ್ದಾರೆ.

ಇತಿಹಾಸವನ್ನು ಕೆದಕುತ್ತಾ ಹೋದರೆ, ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರದಲ್ಲಿ, ಸಂಖ್ಯಾಬಲ ಏನೇ ಇದ್ದರೂ ದೇಶದ ಆಂತರಿಕ ಮತ್ತು ಬಾಹ್ಯ ವ್ಯವಹಾರಗಳಲ್ಲಿ ಆರೆಸ್ಸೆಸ್‌ನ ಛಾಪು ಇದ್ದೇ ಇರುವುದು ಅರಿವಾಗುತ್ತದೆ. ದೇಶದ ಉದ್ದಗಲಕ್ಕೂ ಆರೆಸ್ಸೆಸ್ ಮತ್ತು ಅದರ ವೈಚಾರಿಕ ಅಂಗಸಂಸ್ಥೆಗಳಾದ ಎಬಿವಿಪಿ, ಬಿಜೆಪಿ, ಬಿಎಂಎಸ್, ಭಾರತ ಶಿಕ್ಷಣ ಮಂಡಳಿ, ಸಂಸ್ಕೃತ ಭಾರತಿ, ವನವಾಸಿ ಕಲ್ಯಾಣ ಆಶ್ರಮ, ಬಾಲ ಭಾರತಿ, ಅಧಿವಕ್ತ ಪರಿಷತ್, ಸಾಮರಸ್ಯ ವೇದಿಕೆ, ವಿಶ್ವ ಹಿಂದೂ ಪರಿಷತ್ ಮುಂತಾದವುಗಳಲ್ಲಿ ಬೇರೆ ಬೇರೆ ವೈಚಾರಿಕತೆಯ ಜನ ಸಹಜವಾಗಿ ಅತಿಥಿಗಳಾಗಿ, ಪ್ರೇಕ್ಷಕರಾಗಿ ಬಂದುಹೋಗುತ್ತಾರೆ. ಏಕೆಂದರೆ ಸಮಾಜದ ಎಲ್ಲ ಕ್ಷೇತ್ರಗಳನ್ನೂ/ಸ್ತರಗಳನ್ನೂ ಆರೆಸ್ಸೆಸ್ ತಲುಪಿದೆ. ಆರೆಸ್ಸೆಸ್‌ನ ಮೂಲೋದ್ದೇಶವೇ ದೇಶಭಕ್ತಿ ಮತ್ತು ಭಾರತೀಯರ ಏಕತೆ. ಹಿಂದುತ್ವವೇ ಈ ದೇಶದ ಮೂಲ ಉಸಿರು ಎಂದು ಆರೆಸ್ಸೆಸ್ ನಂಬಿದೆ. ಆದರೆ, ಸಂಸ್ಕೃತಿ ಮತ್ತು ದೇಶಭಕ್ತಿ ಇರುವ ಸಾವಿರಾರು ಮಂದಿ ಹಿಂದುಯೇತರ ಧರ್ಮೀಯರು ಆರೆಸ್ಸೆಸ್‌ನ ಸಕ್ರಿಯ ಕಾರ್ಯಕರ್ತರಾಗಿದ್ದಾರೆ ಮತ್ತು ಹಿತೈಷಿಗಳಾಗಿದ್ದಾರೆ ಎಂಬುದು ಸರ್ವವೇದ್ಯ.

ಸ್ವಾತಂತ್ರ್ಯಪೂರ್ವದಲ್ಲಿ ಆರೆಸ್ಸೆಸ್ ಶಾಖೆಗೆ ಮಹಾತ್ಮ ಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್ ಅವರಂಥ ನಾಯಕರು ಭೇಟಿಕೊಟ್ಟ ಇತಿಹಾಸ ಆರೆಸ್ಸೆಸ್‌ನ ನೆನಪಿನ ಅಂಗಳದಲ್ಲಿದೆ. 1947ರ ದೇಶ ವಿಭಜನೆಯ ಕರಾಳ ಸಂದರ್ಭದಲ್ಲಿ, ಭಾರತ ಮತ್ತು ಪಾಕಿಸ್ತಾನ ಭೂಭಾಗದಿಂದ ನಾಗರಿಕರು ಪಲಾಯನ ಮಾಡುತ್ತಿದ್ದ ದುರ್ಭರ ಸನ್ನಿವೇಶದಲ್ಲಿ, ಹಿಂದೂಗಳಿಗೂ ಮುಸಲ್ಮಾನರಿಗೂ ರಕ್ಷಣೆ ಮತ್ತು ಮಾರ್ಗದರ್ಶನ ನೀಡಿದ್ದು ಆರೆಸ್ಸೆಸ್ ಎಂದು ಅಂದಿನ ಕಾಂಗ್ರೆಸ್ ನಾಯಕರೇ ತಮ್ಮ ಬರಹಗಳಲ್ಲಿ ಉಲ್ಲೇಖಿಸಿರುವುದುಂಟು. ಅಲ್ಲದೆ, ಕಾಶ್ಮೀರದ ಶ್ರೀನಗರದ ಮೇಲೆ 1948ರಲ್ಲಿ ಪಾಕಿಸ್ತಾನ ದಾಳಿಮಾಡಿದಾಗ, ಅಲ್ಲಿನ ವಿಮಾನ ನಿಲ್ದಾಣದಲ್ಲಿದ್ದ ಹಿಮಪಾತವನ್ನು ತೆಗೆದುಹಾಕಿದ್ದೇ ಆರೆಸ್ಸೆಸ್‌ನ ಕಾರ್ಯಕರ್ತರು. ಈ ಕೆಲಸವನ್ನು ಪಕ್ಷಾತೀತವಾಗಿ ದೇಶವೇ ಮೆಚ್ಚಿಕೊಂಡಿತು.

ನಂತರ 1965ರಲ್ಲಿ ಚೀನಾ ಆಕ್ರಮಣ ಮಾಡಿದಾಗ ಆರೆಸ್ಸೆಸ್ ನೀಡಿದ ಸೇವೆಗೆ ಗೌರವ ಎಂಬಂತೆ ಅಂದಿನ ಪ್ರಧಾನಿ ನೆಹರು ಅವರು ಗಣರಾಜ್ಯೋತ್ಸವದ ಪರೇಡಿನಲ್ಲಿ ಭಾಗವಹಿಸುವಂತೆ ಆರೆಸ್ಸೆಸ್ ಕಾರ್ಯಕರ್ತರಿಗೆ ಆಹ್ವಾನ ನೀಡಿದ್ದರು. ಸೇನಾಬಲಗಳೊಂದಿಗೆ ಈ ಸ್ವಯಂಸೇವಕರು ಎದೆಯುಬ್ಬಿಸಿ 'ಇಂಡಿಯಾ ಗೇಟ್' ಮುಂದೆ ಹೆಜ್ಜೆ ಹಾಕಿದ್ದರು. ಹಾಗಾದರೆ, ಇಂದಿನ ಕಾಂಗ್ರೆಸ್ಸಿಗರು ನೆಹರುರವರ ಈ ಕ್ರಮವನ್ನು ಒಪ್ಪುವರೇ ಇಲ್ಲಾ ಖಂಡಿಸುವರೇ? ಆರೆಸ್ಸೆಸ್‌ನ ಪ್ರಾರ್ಥನೆಯ ಸಾಲೊಂದನ್ನು ಹೇಳಿದರೆ ಅಪರಾಧವಾದರೆ, ಆರೆಸ್ಸೆಸ್‌ನ ಕಾರ್ಯಕರ್ತರನ್ನು ಪರೇಡಿಗೆ ಕರೆದಿದ್ದು ಸಹ್ಯವೇ?

ತರುವಾಯದಲ್ಲಿ, ಪಾಕಿಸ್ತಾನದ ಜತೆಗಿನ 1972ರ ಯುದ್ಧದ ಸಂದರ್ಭದಲ್ಲಿ ದೇಶದ ಸೈನಿಕರಿಗೆ ಇಡೀ ಭಾರತದಲ್ಲಿ ಬೆಂಬಲವಾಗಿ ನಿಂತಿದ್ದು ಆರೆಸ್ಸೆಸ್ ಸಂಘಟನೆ. ಅಷ್ಟೇ ಅಲ್ಲ, ಕಾರ್ಗಿಲ್ ಸಂಘರ್ಷ ಮತ್ತು ಇತ್ತೀಚಿನ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಸಂದರ್ಭಗಳಲ್ಲಿ ಕೂಡ ದೇಶಕ್ಕೆ ಅವಶ್ಯವಿರುವ ಕಾರ್ಯವನ್ನು ಆರೆಸ್ಸೆಸ್ ಮಾಡಿಕೊಂಡು ಬಂದಿದೆ. ಯುದ್ಧದ ಸಂದರ್ಭಗಳಲ್ಲಿ ಆರೆಸ್ಸೆಸ್ ಹೀಗೆ ನಿರ್ವಹಿಸಿದ ಪಾತ್ರದಿಂದಾಗಿಯೇ ಅಂದಿನ ಕಾಂಗ್ರೆಸ್ ಸರಕಾರದ ಪ್ರಧಾನಿಗಳು ಕೂಡ 'ರಾಜಕೀಯ ಪಕ್ಷ'ವಲ್ಲದ ಈ ಸಾಮಾಜಿಕ ಸಂಘಟನೆಯನ್ನು 'ಸರ್ವಪಕ್ಷ ಸಭೆ'ಗೆ ಆಹ್ವಾನಿಸಿದ್ದು. ಇದು ಆರೆಸ್ಸೆಸ್‌ನ ರಾಷ್ಟ್ರೀಯ ಮಹತ್ವಕ್ಕೆ ಹಿಡಿದ ಕನ್ನಡಿ.

ದೇಶದಲ್ಲಿ ಹಲವಾರು ಬಾರಿ ಪ್ರವಾಹದ ಪರಿಸ್ಥಿತಿ ಉಂಟಾದಾಗ, ಲಾತೂರ್‌ನಲ್ಲಿ ಆದಂಥ ಭೂಕಂಪದ ಸಂದರ್ಭದಲ್ಲಿ, ಸುನಾಮಿ ಅಪ್ಪಳಿಸಿದಾಗ, ಅಷ್ಟೇಕೆ 1996ರ ಹಜ್ ಯಾತ್ರೆಗೆ ಹೊರಟಿದ್ದ ವಿಮಾನವು ಚರ್ಕಿ ದಾದ್ರಿ ಎಂಬಲ್ಲಿ ದುರಂತಕ್ಕೆ ಈಡಾದಾಗ, ಅಲ್ಲಿ ಜಾತಿ-ಧರ್ಮಗಳನ್ನು ನೋಡದೆ ಸೇವಾಕಾರ್ಯಕ್ಕೆ ಟೊಂಕ ಕಟ್ಟಿದ್ದು ಇದೇ ಆರೆಸ್ಸೆಸ್ ಸಂಘಟನೆ. 1977ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ, ಲೋಕನಾಯಕ ಜಯಪ್ರಕಾಶ ನಾರಾಯಣ ಅವರು ಸಮಾಜವಾದಿಯಾಗಿದ್ದರೂ ಅವರ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತಿದ್ದು ಇದೇ ಸಂಘಟನೆ. ಸ್ವಾತಂತ್ರ್ಯಾನಂತರದ ಅತಿದೊಡ್ಡ ಯಶಸ್ವಿ ಹೋರಾಟವಾದ ರಾಮಮಂದಿರ ನಿರ್ಮಾಣ ಚಳವಳಿಯನ್ನು ಸಾಮಾಜಿಕ ಮತ್ತು ನ್ಯಾಯಾಂಗದ ಮಟ್ಟದಲ್ಲಿ ಮುನ್ನಡೆಸಿ, ಜನ-ಜನರಿಗೂ, ಮನೆ-ಮನೆಗಳಿಗೂ ತಲುಪಿಸಿದ್ದು ಆರೆಸ್ಸೆಸ್. ಹಾಗಾದರೆ ಡಿ.ಕೆ.ಶಿವಕುಮಾರ್‌ರವರು ಆರೆಸ್ಸೆಸ್‌ನ ಎರಡು ಸಾಲು ಪ್ರಾರ್ಥನೆಯನ್ನು ಹೇಳಿದರೆ ಏನು ಕಷ್ಟ? ಇದನ್ನು ಒಳನೋಟದಿಂದ ನೋಡಿದರೆ ಕಾಂಗ್ರೆಸ್‌ನ ಸ್ಥಿತಿ ಅರ್ಥವಾಗುತ್ತದೆ. ಈಗಿನ ಕಾಂಗ್ರೆಸ್ 'ಥಿಂಕ್‌ಟ್ಯಾಂಕ್'ನವರು ಕಾಯಮ್ಮಾಗಿ ಎಡಪಂಥೀಯ ಮತ್ತು ಅರಾಷ್ಟ್ರೀಯ ಶಕ್ತಿಗಳೊಂದಿಗೆ ಮೇಳೈಸಿದ್ದಾರೆ. ಅವರ ದೃಷ್ಟಿಯಲ್ಲಿ ಕಾಶ್ಮೀರಿ ಉಗ್ರರಿಗೆ ನೀಡುವ ಗಲ್ಲುಶಿಕ್ಷೆ, ಮಾನವ ಹಕ್ಕಿನ ಉಲ್ಲಂಘನೆ; ಹಾಗೆಯೇ ಭಾರತೀಯ ಸೇನಾ ಕಾರ್ಯಾಚರಣೆ ಬಗ್ಗೆ ಅವರದು ಅವಹೇಳನೆ. ಹಿಂದೊಮ್ಮೆ ಸ್ವತಃ ಪ್ರಧಾನಿ ಮೋದಿಯವರೇ ಹೇಳಿದಂತೆ, ಬಿಜೆಪಿ ಮತ್ತು ಮೋದಿಯವರನ್ನು ವಿರೋಧಿಸುವ ಭರದಲ್ಲಿ ಭಾರತದ ಮಾನ-ಚಿಹ್ನೆಗಳನ್ನು ವಿರೋಧಿಸುತ್ತಿರುವುದು ಕೆಲವರ ಚಾಳಿ ಆಗಿದೆ. ಈ ನಿಟ್ಟಿನಲ್ಲಿ ನೋಡಿದಾಗ, ಕಾಂಗ್ರೆಸ್ಸಿನ ಡಿಸಿಎಂ ಒಬ್ಬರು ಆರೆಸ್ಸೆಸ್‌ನ ಪ್ರಾರ್ಥನೆಯ ಎರಡು ಸಾಲು ಹೇಳಿದಾಗ, ಅವರನ್ನು ಅಪರಾಧಿಯಂತೆ ಕಂಡ ಸತ್ಯ ಅರಿವಾಗುತ್ತದೆ.

ಬಿಜೆಪಿಯ ವೈಚಾರಿಕ ಮಾತೃಸಂಸ್ಥೆ ಆರೆಸ್ಸೆಸ್ ಅನ್ನು ಒಪ್ಪಿದರೆ ತನ್ನ ವೋಟ್ ಬ್ಯಾಂಕ್‌ಗೆ ಎಲ್ಲಿ ಏಟು ಬೀಳುತ್ತದೋ ಎಂಬ ಭಯ ಕಾಂಗ್ರೆಸ್ ಅನ್ನು ಕಾಡುತ್ತಿದೆ. ಅದೂ ಅಲ್ಲದೆ, ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿಯವರು ಆರೆಸ್ಸೆಸ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಕ್ಕೆ ಕೋರ್ಟ್‌ನಲ್ಲಿ ಮೊಕದ್ದಮೆ ಎದುರಿಸುತ್ತಿದ್ದಾರೆ. ಹೀಗಿರುವಾಗ ಈ ಪ್ರಾರ್ಥನೆಯ ಸಾಲನ್ನು ಅವರು ಸಹಿಸಿಯಾರೇ? ಅಷ್ಟೇ ಏಕೆ, ರಾಜ್ಯಸಭಾ ಚುನಾವಣೆಯ ವೇಳೆ ವಿಧಾನಸೌಧದಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ್ದಕ್ಕೆ ಯಾರೂ ಕ್ಷಮೆ ಯಾಚಿಸಿಲ್ಲ. ದೇಶಭಕ್ತಿ ಪ್ರಾರ್ಥನೆಯ ಎರಡು ಸಾಲನ್ನು ಹೇಳಿದ್ದಕ್ಕೆ ಕ್ಷಮೆ ಕೇಳಬೇಕೇ? ಏಕೆ?

ಈ ಪ್ರಕರಣದಿಂದ ತಿಳಿಯಬೇಕಾದುದೇನೆಂದರೆ, ಯಾರು ಎಷ್ಟೇ ಒಳ್ಳೆಯವರಿರಲಿ, ಕೆಟ್ಟವರಿರಲಿ, ಲಾಭ-ನಷ್ಟದ ಆಧಾರದ ಮೇಲೆ ನಾವು ಅವರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಬೇಕು. ಇಂಥ ಅಸಹಿಷ್ಣುತೆಯನ್ನು ಭಾರತದ ಪ್ರಜಾಪ್ರಭುತ್ವ ಸಹಿಸುವುದೇ ಎಂಬುದಕ್ಕೆ ಕಾಲವೇ ಉತ್ತರಿಸಲಿದೆ.

(ಲೇಖಕರು ನಿಕಟಪೂರ್ವ ಸಹಾಯಕ ಸಾಲಿಸಿಟರ್ ಜನರಲ್, ಭಾರತ ಸರಕಾರ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:230

ಸಮಾಚಾರ ಸಣ್ಣದಲ್ಲ

ಮನಾಲಿ: ಮತ್ತೆ ಮೇಘಸ್ಫೋಟ

ಉತ್ತರಾಖಂಡ: ಹಿಮಾಚಲ ಪ್ರದೇಶಗಳಲ್ಲಿ ಮತ್ತೆ ಮೇಘಸ್ಫೋಟವಾಗಿದೆ. ಮನಾಲಿ ಪ್ರದೇಶ ಮತ್ತು ವಲಯ 2ರಲ್ಲಿ ಮೇಘಸ್ಫೋಟವಾಗಿದ್ದು, ಮನಾಲಿ ವಿಭಾಗ 19ರಲ್ಲಿ ಶನಿವಾರ ರಾತ್ರಿ 10ರಿಂದ ಧಾರಾಕಾರ ಮಳೆ ಸುರಿದಿದೆ. ಒಂದು ಗಂಟೆ ಅವಧಿಯಲ್ಲಿಯೇ 106.2 ಮಿಮೀ ಮಳೆಯಾಗಿದೆ. ಮಧ್ಯರಾತ್ರಿ 11 ರಿಂದ 12 ಗಂಟೆವರೆಗೆ 126.6 ಮಿಮೀ ಮಳೆಯಾಗಿದೆ. ಭಾನುವಾರ ಬೆಳಗ್ಗೆ 8.30ಕ್ಕೆ ಮುಂಚಿನ 24 ಗಂಟೆಗಳಲ್ಲಿ ಮನಾಲಿಯಲ್ಲಿ 27, ನ್ಯೂ ಮನಾಲಿ ಟೌನ್‌ನಲ್ಲಿ 26 ಮತ್ತು ವಿಮ್ಕೊ ನಗರದಲ್ಲಿ 23 ಸೆಂ.ಮೀ. ಮಳೆ ದಾಖಲಾಗಿದೆ ಎಂದು ಹವಾಮಾನ ಇಲಾಖೆಯ ಬುಲೆಟಿನ್ ತಿಳಿಸಿದೆ.

ಎಂಜಿನ್‌ನಲ್ಲಿ ಬೆಂಕಿ: ವಿಮಾನ ವಾಪಸ್

ದೆಹಲಿ: ಇಂದೋರ್‌ಗೆ ಹೊರಟಿದ್ದ ಏರ್ ಇಂಡಿಯ ಸಂಸ್ಥೆಯ 'ಎ320 ನಿಯೋ' ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ವಿಮಾನ ದೆಹಲಿಯಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಅದಕ್ಕೂ ಮುನ್ನ ಆಕಾಶದಲ್ಲಿ ಅರ್ಧ ಗಂಟೆ ಕಾಲ ಹಾರಾಟ ನಡೆಸಿದ್ದ ವಿಮಾನ, ಎಂಜಿನ್‌ನಲ್ಲಿ ಬೆಂಕಿ ಹೊತ್ತಿರುವ ಸೂಚನೆ ಸಿಕ್ಕ ಬೆನ್ನಲ್ಲೇ ದೆಹಲಿ ವಿಮಾನ ನಿಲ್ದಾಣಕ್ಕೆ ವಾಪಸಾಗಿದೆ. ಬೆಂಕಿಯಿಂದಾಗಿ ವಿಮಾನದ ಒಂದು ಎಂಜಿನ್ ಸ್ಥಗಿತಗೊಂಡಿತ್ತು. ಮತ್ತೊಂದು ಎಂಜಿನ್ ಚಾಲೂ ಇತ್ತು. ಹಾಗಾಗಿ, ವಿಮಾನ ದೆಹಲಿ ವಿಮಾನ ನಿಲ್ದಾಣದಲ್ಲಿ ಭಾನುವಾರ ಬೆಳಗ್ಗೆ 6.15 ರ ವೇಳೆ ಸುರಕ್ಷಿತವಾಗಿ ಲ್ಯಾಂಡ್ ಆಯಿತು ಎಂದು ಏರ್ ಇಂಡಿಯ ಸಂಸ್ಥೆ ಸುದ್ದಿಗಾರರಿಗೆ ತಿಳಿಸಿದೆ. ವಿಮಾನದಲ್ಲಿ ಸಿಬ್ಬಂದಿಗಳು ಮತ್ತು 90 ಪ್ರಯಾಣಿಕರಿದ್ದರು ಎಂದು ತಿಳಿಸಿದೆ.

ಯುರೋಪ್ ಕೂಡಾ ಭಾರತಕ್ಕೆ ಸುಂಕ ಹಾಕಲಿ

ವಾಷಿಂಗ್ಟನ್: ಭಾರತದಿಂದ ಆಮದಾಗುವ ಉತ್ಪನ್ನಗಳ ಮೇಲೆ ಅಮೆರಿಕ ವಿಧಿಸಿದ ಪ್ರಮಾಣದಲ್ಲಿಯೇ ಶೇ.50ರಷ್ಟು ಸುಂಕವನ್ನು ಯುರೋಪಿಯನ್ ಒಕ್ಕೂಟಗಳೂ ಹಾಕಬೇಕಿದೆ ಎಂದು ಡೊನಾಲ್ಡ್

ಟ್ರಂಪ್ ಸರಕಾರ ಒತ್ತಾಯಿಸುತ್ತಿದೆ ಎಂದು ವರದಿಯಾಗಿದೆ. ಭಾರತದ ಸರಕುಗಳ ಮೇಲೆ ಮೊದಲಿಗೆ ಶೇ.25 ಪ್ರತಿಸುಂಕ ವಿಧಿಸಿದ ಅಮೆರಿಕ, ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವುದಕ್ಕೆ ದಂಡವಾಗಿ ಮತ್ತೆ ಶೇ.25ರಷ್ಟು ಹೆಚ್ಚುವರಿ ಸುಂಕ ವಿಧಿಸಿದ್ದಾರೆ. ಅಮೆರಿಕ ಶೇ.50 ರಷ್ಟು ಸುಂಕ ವಿಧಿಸಿದರೂ ಭಾರತ ತಣ್ಣಗಿರುವುದನ್ನು ನೋಡಿ ಕೆರಳಿರುವ ಅಧ್ಯಕ್ಷ ಟ್ರಂಪ್, ಭಾರತಕ್ಕೆ ನೀವೂ ಹೆಚ್ಚಿನ ಸುಂಕ ವಿಧಿಸಿ ಎಂದು ಯುರೋಪ್ ದೇಶಗಳ ಮೇಲೆ ಒತ್ತಡ ಹಾಕಲಾರಂಭಿಸಿದ್ದಾರೆ. ಮೋದಿ, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ದ್ವಿಪಕ್ಷೀಯ ಸಭೆ ನಡೆಸಿದ ಬೆನ್ನಲ್ಲೇ ಯೂರೋಪ್ ದೇಶಗಳ ಮೇಲೆ ಟ್ರಂಪ್ ಒತ್ತಡ ಹಾಕಲಾರಂಭಿಸಿದ್ದಾರೆ.

ಆಯೋಗದಿಂದ 89 ಲಕ್ಷ ದೂರು ತಿರಸ್ಕೃತ

ಪಟನಾ: ಬಿಹಾರದಲ್ಲಿ ಮತದಾರರ ಪಟ್ಟಿಯಿಂದ ಕೈಬಿಡಲಾಗಿರುವವರ ಪರವಾಗಿ ಕಾಂಗ್ರೆಸ್ ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರು ಚುನಾವಣಾ ಆಯೋಗದ ಸೂಚನೆ ಪ್ರಕಾರವೇ ದೂರು ಸಲ್ಲಿಸಿದ್ದರೂ ಆಯೋಗ ಎಲ್ಲಾ ದೂರುಗಳನ್ನೂ ತಿರಸ್ಕರಿಸಿದೆ ಎಂದು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ. ಈ ಸಂಬಂಧ ಸುದ್ದಿಗಾರರ ಜತೆ ಭಾನುವಾರ ಪಟನಾದಲ್ಲಿ ಮಾತನಾಡಿದ ಕಾಂಗ್ರೆಸ್ ನಾಯಕ ಪವನ್ ಖೇರಾ, ಆಯೋಗದ ಈ ನಡೆ 'ಮತ ಕಳವು' ಆರೋಪಕ್ಕೆ ಪುಷ್ಟಿ ನೀಡುತ್ತಿದೆ. ಇದರ ವಿರುದ್ಧ ಕಾಂಗ್ರೆಸ್ ಮತ್ತು ಆರ್‌ಜೆಡಿ ಪಕ್ಷಗಳು ಸೇರಿದಂತೆ 'ಮಹಾಘಟಬಂಧನ್' ಹೋರಾಟ ಮುಂದುವರಿಸಲಿದೆ ಎಂದಿದ್ದಾರೆ.

ಕಾಲೊರಸಿಗೆ ರಾಹುಲ್ ಚಿತ್ರವಿರಿಸಿ ಆಕ್ರೋಶ

ಪ್ರಯಾಗ್‌ರಾಜ್: ಬಿಹಾರದ ದರ್ಭಂಗಾದಲ್ಲಿ ನಡೆದ ಕಾಂಗ್ರೆಸ್ ಮೆರವಣಿಗೆ ವೇಳೆ ರಾಹುಲ್ ಗಾಂಧಿ ಬೆಂಬಲಿಗರು ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ತಾಯಿಯ ಕುರಿತು ಆಕ್ಷೇಪಾರ್ಹ ಪದ ಬಳಸಿ ನಿಂದಿಸಿದ್ದಾರೆ. ಈ ಬಗ್ಗೆ ರಾಹುಲ್ ಗಾಂಧಿ ಕ್ಷಮೆಯನ್ನೇ ಕೋರಿಲ್ಲ ಎಂದು ಕಿಡಿಕಾರಿರುವ ಬಿಜೆಪಿ ನಾಯಕ ಸುರೇಂದ್ರ ಚೌಧರಿ ಮತ್ತು ಅವರ ಬೆಂಬಲಿಗರು ಪ್ರಯಾಗ್‌ರಾಜ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು. ರಾಹುಲ್ ಗಾಂಧಿ ಭಾವಚಿತ್ರವನ್ನು ಕಾಲೊರೆಸು ಮೇಲೆ ಅಂಟಿಸಿ ತುಳಿದು ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ಮೋದಿ ನಿಂದನೆ ಮಾಡುವುದನ್ನು ಮುಂದುವರಿಸಿದರೆ ರಾಹುಲ್ ಚಿತ್ರವನ್ನು ಟಿಶ್ಯೂ ಪೇಪರ್ ಮೇಲೆ ಮುದ್ರಿಸುತ್ತೇವೆ ಎಂದು ಚೌಧರಿ ಗುಡುಗಿದರು.

{ ಮನೀಶ್ ತಿವಾರಿ } ಕಾಂಗ್ರೆಸ್ ಸಂಸದ

ಮುಂಗಾರು ಸಂಸತ್ ಅಧಿವೇಶನದಲ್ಲಿ ಆಪರೇಷನ್ ಸಿಂದೂರ್ ವಿಚಾರ ಚರ್ಚಿಸಲು ಕಾಂಗ್ರೆಸ್‌ನಿಂದ ಪಟ್ಟಿ ಮಾಡಲಾಗಿದ್ದ ಚರ್ಚಾಪಟುಗಳಲ್ಲಿ ನನ್ನ ಹೆಸರು ಇರಲಿಲ್ಲ. ನಾನು ಚರ್ಚೆ ಮಾಡುವಷ್ಟು ಅರ್ಹ ವ್ಯಕ್ತಿ ಅಲ್ಲ ಎಂಬುದು ಅದಕ್ಕೆ ಕಾರಣವಾಗಿರಬೇಕು. ಕಾಂಗ್ರೆಸ್‌ನಲ್ಲೀಗ 99 ಸಂಸದರಿದ್ದಾರೆ, ಹಾಗಾಗಿ ನನ್ನನ್ನು ಪರಿಗಣಿಸದಿರಬಹುದು. ನನಗೆ ಬೇಸರವಿಲ್ಲ.

125ನೆ ಮನ್‌ಕಿ ಬಾತ್‌ನಲ್ಲಿ ಸರ್ ಎಂ.ವಿಶ್ವೇಶ್ವರಯ್ಯ ಗುಣಗಾನ | ರಷ್ಯಾದಲ್ಲಿ ರಾಮಾಯಣ, ಪುಲ್ವಾಮಾ ಕ್ರಿಕೆಟ್ ಪಂದ್ಯ ಉಲ್ಲೇಖ

ಸರ್ವಂ ಸ್ವದೇಶಿಮಯಂ ಮೋದಿ ಮಂತ್ರ ಬೋಧನೆ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಚೀನಾ ಪ್ರವಾಸದಲ್ಲಿರುವಾಗಲೂ ಅವರ ಬಲು ಇಷ್ಟದ 'ಮನ್ ಕಿ ಬಾತ್' ರೇಡಿಯೊ ಸಂದೇಶ ಕಾರ್ಯಕ್ರಮ ನಿಗದಿಯಂತೆಯೇ ತಿಂಗಳ ಕೊನೆಯ ಭಾನುವಾರ ಪ್ರಸಾರವಾಗಿದೆ. ಈ ಬಾರಿಯ 125ನೇ 'ಮನ್ ಕಿ ಬಾತ್' ರೇಡಿಯೊ ಭಾಷಣದಲ್ಲಿ ಪ್ರಧಾನಿ ಮೋದಿ ಅವರು, 'ಸದಾ ಸ್ವದೇಶಿ ವಸ್ತುಗಳನ್ನೇ ಬಳಸಿ' ಎಂದು ದೇಶದ ಜನತೆಗೆ ಕರೆ ನೀಡಿದ್ದಾರೆ.

ದೇಶಾದ್ಯಂತ ಗಣೇಶ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದೆ. ಈ ವೇಳೆ, ಸ್ವದೇಶಿ ವಸ್ತುಗಳನ್ನೇ ಬಳಸಿ, ನೀವು ಬಳಸುವ ಪ್ರತಿ ಯೊಂದು ವಸ್ತು ಕೂಡಾ ಭಾರತದಲ್ಲೇ

ತಯಾರಾಗಿರಬೇಕು. ಗೌರಿ-ಗಣೇಶ ದೇವರ ಮೂರ್ತಿ, ದೀಪ, ಹೂಮಾಲೆ ಎಲ್ಲವೂ ಭಾರತೀಯರೇ ತಯಾರಿಸಿರುವ ಸಾಮಗ್ರಿ ಆಗಿರಬೇಕು. 'ಸರ್ವವೂ ಸ್ವದೇಶಿ ಆಗಿರಲಿ'. ಈ ಬಗ್ಗೆ ದೇಶವಾಸಿಗಳು ಗಮನವಿಡಬೇಕು ಎಂದು ಮೋದಿ ಅರಿವು ಮೂಡಿಸಿದ್ದಾರೆ.

ಹೆಮ್ಮೆಯಿಂದ 'ಇದು ಸ್ವದೇಶಿ' ಎಂದು ಘೋಷಿಸಿ ಮತ್ತು ಅದನ್ನೇ ಖರೀದಿಸಿ. ಆ ಮೂಲಕ ಸ್ವದೇಶಿ ಭಾವನೆ ಮುಂದುವರಿಸಿ. ಜೀವನದ ಪ್ರತಿ ಹಂತ ದಲ್ಲೂ, ಪ್ರತಿ ಅಗತ್ಯದಲ್ಲೂ ಎಲ್ಲವೂ ಸ್ವದೇಶಿಯೇ ಆಗಿರಬೇಕು. ಹಾಗೆ ನೋಡಿಕೊಳ್ಳಿ ಎಂದ ಮೋದಿ ಜನರನ್ನು ಉತ್ತೇಜಿಸಿದ್ದಾರೆ. ಏಕೆಂದರೆ ಇದು ಅಭಿವೃದ್ಧಿ ಹೊಂದಿದ ಭಾರತಕ್ಕೆ ಮಾರ್ಗವಾಗಿರುತ್ತದೆ. 'ಆತ್ಮನಿರ್ಭರತೆ' ಮತ್ತು 'ಲೋಕಲ್ ಫಾರ್ ವೋಕಲ್' ಎಂಬುದೇ ಈಗ ಭಾರತದ ಮಂತ್ರವಾಗಬೇಕಿದೆ ಎಂದಿದ್ದಾರೆ.

ಮುನಿದ ಪ್ರಕೃತಿ: ಈ ವೇಳೆ, ರಷ್ಯಾದಲ್ಲಿ ರಾಮಾಯಣ ಪ್ರದರ್ಶನ, ಪುಲ್ವಾಮಾದಲ್ಲಿ ಹಗಲು-ರಾತ್ರಿ ಕ್ರಿಕೆಟ್ ಪಂದ್ಯ ನಡೆದಿರುವುದು, ವಾಟರ್ ಸ್ಪೋರ್ಟ್, ದೇಶದ ವಿವಿಧೆಡೆಯ ಮೇಘಸ್ಫೋಟ, ಪ್ರವಾಹ ಪರಿಸ್ಥಿತಿ ವಿಚಾರಗಳನ್ನು ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಈ ವರ್ಷ ಅದೇಕೋ ಪ್ರಕೃತಿ ನಮ್ಮ ಬಗ್ಗೆ ಮುನಿದಂತಿದೆ. ಪ್ರಕೃತಿಯ ಸವಾಲುಗಳನ್ನು ಅನಿವಾರ್ಯವಾಗಿ ಎದುರಿಸಲೇಬೇಕಾಗಿ ಬಂದಿದೆ ಎಂದಿದ್ದಾರೆ.

ಕರ್ಮಯೋಗಿಗೆ ನಮನ

ಸೆ.15 ಭಾರತದ ಸರ್ವಶ್ರೇಷ್ಠ ಎಂಜಿನಿಯರ್ 'ಸರ್' ಮೋಕ್ಷಗುಂಡಂ ವಿಶ್ವೇಶ್ವರಯ್ಯ(ಸರ್ ಎಂ.ವಿ) ಅವರ ಜನ್ಮದಿನ ಎಂಬುದನ್ನು ದೇಶ

ವಾಸಿಗಳಿಗೆ ನೆನಪಿಸಿರುವ ಪ್ರಧಾನಿ ಮೋದಿ, ಆ ದಿನ ವನ್ನು ನಾವು 'ಎಂಜಿನಿಯರ್ಸ್ ಡೇ'(ಅಭಿಯಂತ ರರ ದಿನ) ಎಂದು ಆಚರಿಸು ತ್ತೇವೆ. ಎಂಜಿನಿಯರ್‌ಗಳು ಕೇವಲ ಕಟ್ಟಡ ನಿರ್ಮಿಸು ವುದಿಲ್ಲ, ಯಂತ್ರಗಳನ್ನಷ್ಟೇ ತಯಾರಿಸುವುದಿಲ್ಲ, ಅವರು 'ಕನಸುಗಳನ್ನು ವಾಸ್ತವಕ್ಕೆ ಬದಲಿಸುವ 'ಕರ್ಮಯೋಗಿ'ಗಳು ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ. ಭಾರತದ ಪ್ರತಿಯೊಬ್ಬ ಎಂಜಿನಿಯರ್‌ಗೂ ನಾನು ಕೃತಜ್ಞನಾಗಿರುವೆ. ಅವರಿಗೆಲ್ಲರಿಗೂ ಶುಭ ಹಾರೈಸುವೆ ಎಂದಿದ್ದಾರೆ.

ರಾಯಲ್ ಪ್ರೀಮಿಯರ್ ಲೀಗ್

ಸದಾ ಗುಂಡಿನ ಮೊರೆತ, ಭಯೋತ್ಪಾದನೆ, ಸೇನೆಯ ಸಂಚಾರವೇ ಕಾಣುತ್ತಿದ್ದ ಪುಲ್ವಾಮಾದಲ್ಲಿ ಇದೇ ಮೊದಲ ಬಾರಿಗೆ ಹಗಲು-ರಾತ್ರಿ ಕ್ರಿಕೆಟ್ ಪಂದ್ಯ ನಡೆದಿದೆ. ಇದು ನಿಜಕ್ಕೂ ಬದಲಾದ ಪರಿಸ್ಥಿತಿಗೆ ದೃಢೀಕರಣವಾಗಿದೆ. ಈ ಮೊದಲು ಪುಲ್ವಾಮಾದಲ್ಲಿ ಕ್ರಿಕೆಟ್ ಎಂಬುದು ಅಸಾಧ್ಯವಾಗಿತ್ತು. ಆದರೆ ದೇಶ ಬದಲಾಗಿದೆ. ಈ ಪಂದ್ಯಾವಳಿ 'ರಾಯಲ್ ಪ್ರೀಮಿಯರ್ ಲೀಗ್'ನ ಒಂದು ಭಾಗವಾಗಿದೆ. ಇದರಲ್ಲಿ ಜಮ್ಮು-ಕಾಶ್ಮೀರದ ಹಲವು ತಂಡಗಳು ಭಾಗವಹಿಸುತ್ತಿವೆ. ಪುಲ್ವಾಮಾದಲ್ಲಿನ ಹಗಲು-ರಾತ್ರಿ ಕ್ರೀಡಾಕೂಟದಲ್ಲಿ ಸಾವಿರಾರು ಜನರು, ವಿಶೇಷವಾಗಿ ಯುವಜನರು ಕ್ರಿಕೆಟ್ ಆನಂದಿಸುತ್ತಿದ್ದಾರೆ. ಈ ದೃಶ್ಯವನ್ನು ನೋಡಿದರೆ ಮನಸ್ಸು ತುಂಬಿ ಬರುತ್ತದೆ ಎಂದು ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರಾಕೃತಿಕ ವಿಕೋಪ: ಮಾನವೀಯತೆ

ಕಳೆದ ಕೆಲ ವಾರಗಳಿಂದ ಪ್ರಕೃತಿ ನಮ್ಮ ಮೇಲೆ ಮುನಿದಿದೆ. ಮೇಘಸ್ಫೋಟ, ಧಾರಾಕಾರ ಮಳೆ, ದಿಢೀರ್ ಪ್ರವಾಹ ಮತ್ತು ಭೂಕುಸಿತ ಉಂಟಾಗಿ ಭಾರೀ ಪ್ರಮಾಣದಲ್ಲಿ ಹಾನಿ ಉಂಟಾಗಿದೆ. ಹತ್ತಾರು ಜೀವಗಳನ್ನು ಕಳೆದುಕೊಂಡಿದ್ದೇವೆ. ಅವಘಡಗಳಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡವರ ನೋವು ನಮ್ಮೆಲ್ಲರ ನೋವುವಾಗಿದೆ. ಪ್ರಾಕೃತಿಕ ವಿಕೋಪ ಎಲ್ಲೇ ಉಂಟಾದರೂ 'ಎನ್‌ಡಿಆರ್‌ಎಫ್' ಮತ್ತು ರಾಜ್ಯಗಳಲ್ಲಿ 'ಎಸ್‌ಡಿಆರ್‌ಎಫ್' ಹಾಗೂ ಇತರೆ ರಕ್ಷಣಾ ಕಾರ್ಯಾಚರಣೆ ಪಡೆಗಳು ಜನ-ಜಾನುವಾರು ರಕ್ಷಿಸಲು ಹಗಲಿರುಳು ಶ್ರಮಿಸಿವೆ. ಸ್ಥಳೀಯರೂ, ಸಾಮಾಜಿಕ ಕಾರ್ಯಕರ್ತರು, ವೈದ್ಯರು, ಸ್ಥಳೀಯ ಆಡಳಿತದ ಅಧಿಕಾರಿಗಳೂ ಈ ಪ್ರಾಕೃತಿಕ ವಿಕೋಪದ ತುರ್ತು ಸಮಯದಲ್ಲಿ ಸಾಧ್ಯವಿರುವ ಎಲ್ಲ ನೆರವು ನೀಡುತ್ತಿದ್ದಾರೆ. ಆ ಮೂಲಕ ಕಷ್ಟದ ಸಮಯದಲ್ಲಿ ಮಾನವೀಯತೆ ತೋರುವುದು ಮುಖ್ಯ ಎಂಬುದನ್ನು ದೇಶವಾಸಿಗಳು ಮನದಟ್ಟು ಮಾಡಿಕೊಂಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯ

ಕಾರ್ಯದಲ್ಲಿ ಭಾಗಿಯಾದ ಪ್ರತಿ ನಾಗರಿಕರಿಗೂ ಧನ್ಯವಾದ ಅರ್ಪಿಸುವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಪ್ರಾಕೃತಿಕ ವಿಕೋಪಗಳು ದೇಶವನ್ನು ಪರೀಕ್ಷಿಸುತ್ತಿವೆ. ಪ್ರವಾಹ-ಭೂಕುಸಿತಗಳಿಂದ ಭಾರಿ ವಿನಾಶ ಕಂಡಿದ್ದೇವೆ. ಇದು ಪ್ರತಿಯೊಬ್ಬ ಭಾರತೀಯನನ್ನೂ ದುಃಖಿತರನ್ನಾಗಿಸಿದೆ. ಸರಕಾರವೂ ಸಮರೋಪಾದಿ ಕೆಲಸ ಮಾಡುತ್ತಿದೆ. ಪರಿಹಾರ ಸಾಮಗ್ರಿಗಳನ್ನು ಹೆಲಿಕಾಪ್ಟರ್ ಮೂಲಕ ಪ್ರವಾಹ ಸ್ಥಳಗಳಿಗೆ ತಲುಪಿಸಲಾಗುತ್ತಿದೆ. ಗಾಯಾಳುಗಳನ್ನು ಏರ್ ಲಿಫ್ಟ್ ಮಾಡಲು ಸೇನಾ ಹೆಲಿಕಾಪ್ಟರ್‌ಗಳು ನೆರವಾಗುತ್ತಿವೆ. ವಿಪತ್ತಿನ ಸಮಯದಲ್ಲಿ ಸಹಾಯ ಮಾಡಲು ಭಾರತೀಯ ಸೇನೆಯ ಎಂಜಿನಿಯರ್‌ಗಳೂ ಮುಂದೆ ಬಂದಿದ್ದಾರೆ ಎಂದರು.

ಭಾರತದ ಸಂಸ್ಕೃತಿ

ವಿಶ್ವದಲ್ಲೇ ಅತ್ಯಧಿಕ ಹಿಮಪಾತದ, ಚಳಿಯಾಗುವ ಪ್ರದೇಶಗಳಲ್ಲಿ ಒಂದಾದ ರಷ್ಯಾದ ವ್ಲಾಡಿವೋಸ್ಟೋಕ್‌ನಲ್ಲಿ ಭಾರತದ ಶ್ರೇಷ್ಠ 'ರಾಮಾಯಣ' ಪ್ರಸಂಗಗಳ ವಿವಿಧ ವಿಷಯಗಳ ಕುರಿತು ವರ್ಣಚಿತ್ರ ಸ್ಪರ್ಧೆ ಆಯೋಜನೆಯಾಗಿತ್ತು. ಇದು, ರಾಮಾಯಣ ಮತ್ತು ಭಾರತೀಯ ಸಂಸ್ಕೃತಿ ಕುರಿತ ಪ್ರೀತಿ ಪ್ರಪಂಚದ ಮೂಲೆ ಮೂಲೆಗೂ ತಲುಪುತ್ತಿದೆ ಎನ್ನುವುದರ ಸಂಕೇತವಾಗಿದೆ ಎಂದು ಪ್ರಧಾನಿ ಮೋದಿ ಹರ್ಷ ವ್ಯಕ್ತಪಡಿಸಿದರು. ಇನ್ನೊಂದೆಡೆ, ಕೆನಡಾದ ಮಿಸ್ಸಿಸೌಗಾ ನಗರದಲ್ಲಿ 51 ಅಡಿಗಳಷ್ಟು ಎತ್ತರವಾದ ಶ್ರೀರಾಮ ಭಗವಾನರ ಪ್ರತಿಮೆ ಇತ್ತೀಚೆಗೆ ಅನಾವರಣಗೊಂಡಿದೆ. ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನರು ತುಂಬಾ ಸಂಭ್ರಮಿಸಿದ್ದಾರೆ. ಅವರೆಲ್ಲರೂ ಶ್ರೀರಾಮ ಭಗವಾನರ ಭವ್ಯ ಪ್ರತಿಮೆಯ ವೀಡಿಯೊಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿರುವುದೇ ಸಾಕ್ಷಿಯಾಗಿದೆ ಎಂದು ಪ್ರಧಾನಿ ಉಲ್ಲೇಖಿಸಿದ್ದಾರೆ.

ತೇಜಸ್ ಮಾರ್ಕ್-1ಎ ಶ್ರೇಣಿ ಎರಡು ವಿಮಾನ ಶೀಘ್ರ ಐಎಎಫ್‌ಗೆ

ದೆಹಲಿ: ಹಿಂದೂಸ್ತಾನ್ ಏರೋನಾಟಿಕ್ಸ್ ಲಿ. (ಎಚ್‌ಎಎಲ್) ತಯಾರಿಸಿರುವ 'ತೇಜಸ್ ಮಾರ್ಕ್-1ಎ' ಶ್ರೇಣಿಯ ಎರಡು ಯುದ್ಧ ವಿಮಾನಗಳು ಸೆಪ್ಟೆಂಬರ್‌ನಲ್ಲಿ ಭಾರತೀಯ ಸೇನೆಗೆ ಹಸ್ತಾಂತರವಾಗುವ ಸಾಧ್ಯತೆ ಇದೆ ಎಂದು ರಕ್ಷಣಾ ಇಲಾಖೆ ಕಾರ್ಯದರ್ಶಿ ಆರ್.ಕೆ. ಸಿಂಗ್ ಭಾನುವಾರ ಹೇಳಿದ್ದಾರೆ.

ದೆಹಲಿಯಲ್ಲಿ ಸುದ್ದಿವಾಹಿನಿಯೊಂದು ಆಯೋಜಿಸಿರುವ 'ರಕ್ಷಣಾ ಕ್ಷೇತ್ರ ಶೃಂಗಸಭೆ'ಯಲ್ಲಿ ಮಾತನಾಡಿದ ಆರ್.ಕೆ.ಸಿಂಗ್, ಕೇಂದ್ರ ಸರಕಾರದ ಸ್ವಾಮ್ಯದ ರಕ್ಷಣಾ ಕ್ಷೇತ್ರದಲ್ಲಿನ ಹೆಮ್ಮೆಯ ಸಂಸ್ಥೆಯಾಗಿರುವ 'ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.' ಮೊದಲಿಗೆ ಎರಡು ವಿಮಾನಗಳನ್ನು ಹಸ್ತಾಂತರಿಸಲಿದೆ. ನಂತರ 97 ತೇಜಸ್ ಮಾರ್ಕ್-1ಎ ಯುದ್ಧ ವಿಮಾನ ಗಳನ್ನು ಖರೀದಿಸಲು ರಕ್ಷಣಾ ಸಚಿವಾಲಯ ಎಚ್‌ಎಎಲ್ ಜತೆ ಹೊಸ ಒಪ್ಪಂದ ಮಾಡಿಕೊ ಳ್ಳುವ ಸಾಧ್ಯತೆಯಿದೆ ಎಂದು ಆರ್.ಕೆ.ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಹಿಂದಿನ ಒಪ್ಪಂದದಡಿ 'ತೇಜಸ್ ಮಾರ್ಕ್-1ಎ' ವಿಮಾನಗಳನ್ನು ಭಾರತೀಯ ವಾಯುಪಡೆಗೆ ಪೂರೈಕೆ ಮಾಡು ವುದ'ರಲ್ಲಿ ಬಹಳ ವಿಳಂಬವಾದ ಬಗ್ಗೆ ಐಎಎಫ್ ಮುಖ್ಯಸ್ಥರೇ ಇತ್ತೀಚೆಗೆ ಬಹಿರಂಗವಾಗಿ ಬೇಸರ ವ್ಯಕ್ತಪಡಿಸಿದ್ದರು. ತೇಜಸ್ ವಿಮಾನಗಳ ತಯಾರಿಕೆ ವಿಚಾರದಲ್ಲಿ ಈಗ ಆಶಾದಾಯಕ ಬೆಳವಣಿಗೆ'ಗಳಾಗಿವೆ. ಒಟ್ಟು 38 ತೇಜಸ್ ಶ್ರೇಣಿ ಯುದ್ಧ ವಿಮಾನಗಳು ಸದ್ಯ ಭಾರತೀಯ ಸೇನಾಪಡೆಗಳಲ್ಲಿ ಸೇವೆಯಲ್ಲಿವೆ. 80ಕ್ಕೂ ಹೆಚ್ಚು ತೇಜಸ್ ಯುದ್ಧ ವಿಮಾನಗಳು ತಯಾರಾಗುತ್ತಿವೆ ಎಂದು ಅಂಕಿ ಅಂಶ ನೀಡಿದರು. ಎಚ್‌ಎಎಲ್ ಪೂರ್ಣ ಪ್ಯಾಕೇಜ್ ಒಳಗೊಂಡ 2 ತೇಜಸ್ ವಿಮಾನಗಳನ್ನು ವಾಯುಪಡೆಗೆ ಹಸ್ತಾಂತರಿಸಿದ ನಂತರವಷ್ಟೇ ಹೊಸ ಒಪ್ಪಂದಕ್ಕೆ ಸಹಿ ಹಾಕುತ್ತೇವೆ ಎಂದು ನಾನು ಎಚ್‌ಎಎಲ್‌ಗೆ ಸ್ಪಷ್ಟಪಡಿಸಿದ್ದೇನೆ ಎಂದು ಸಿಂಗ್ ಹೇಳಿದರು. ಕೇಂದ್ರ ಸರಕಾರ 67,000 ಕೋಟಿ ರು. ನೀಡಿ 97 ತೇಜಸ್ ಯುದ್ಧ ನಗಳನ್ನು ಖರೀದಿಸುವುದಕ್ಕೆ ಅನುಮೋದಿಸಿದೆ.

ಇಸ್ರೇಲ್ ಬಾಂಬ್‌ದಾಳಿ: ಹೌತಿ ಪ್ರಧಾನಿ ಅಲಿ ಹತ

ಕೈರೊ: ಯೆಮೆನ್ ರಾಜಧಾನಿ ಸನಾ ನಗರದಲ್ಲಿ ನಡೆಯುತ್ತಿದ್ದ ಹೌತಿ ಆಡಳಿತದ ಕಾರ್ಯಾಗಾರವೊಂದರ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿದ್ದರಿಂದ ಹೌತಿ ಬಂಡುಕೋರರ ಪ್ರಧಾನಿ ಅಹ್ಮದ್ ಅಲ್



-ರಹ್ವಿ ಮತ್ತು ಹಲವು ಸಚಿವರು ಹತರಾಗಿದ್ದಾರೆ. ಕೆಲವು ಸಚಿವರು ಮತ್ತು ಅಧಿಕಾರಿಗಳು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ. ಕೆಂಪು ಸಮುದ್ರದಲ್ಲಿ ಇಸ್ರೇಲ್‌ನ ಹಡಗುಗಳ ಮೇಲೆ ಹೌತಿ ಬಂಡುಕೋರರ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸುತ್ತಿರುವುದಕ್ಕೆ ಪ್ರತಿಕ್ರಿಯೆಯಾಗಿ ಇಸ್ರೇಲ್, ಯೆಮೆನ್‌ನಲ್ಲಿ ನೇರವಾಗಿ ಹೌತಿ ಸಚಿವರು, ಅಧಿಕಾರಿಗಳ ಕಾರ್ಯಾಗಾರದ ಮೇಲೆಯೇ ದಾಳಿ ಮಾಡಿದೆ. ಪರಿಣಾಮ 70ಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ. ಅಹ್ಮದ್ ಅಲ್-ರಹ್ವಿ ಯೆಮೆನ್‌ನ ಅಬ್ಯಾನ್ ಪ್ರಾಂತ್ಯದವರು. ಮಾಜಿ ಅಧ್ಯಕ್ಷ ಅಲಿ ಅಬ್ದುಲ್ಲಾ ಸಲೇಹ್ ಅವರ ಮಿತ್ರ. 2014ರ ಆಗಸ್ಟ್‌ನಲ್ಲಿ ಹೌತಿ ಉಗ್ರರು ಸನಾ ನಗರವನ್ನು ವಶಪಡಿಸಿಕೊಂಡಾಗ ಅಲಿ ಅವರನ್ನು ಪ್ರಧಾನಿಯಾಗಿ ನೇಮಿಸಲಾಗಿತ್ತು. ಉಪ ಪ್ರಧಾನಿ ಮೊಹಮ್ಮದ್ ಮೊಫ್ತಾಹ್ ದೈನಂದಿನ ಆಡಳಿತ ನಿರ್ವಹಿಸುತ್ತಿದ್ದರು. ಈಗಿನ ಇಸ್ರೇಲ್ ದಾಳಿಯಲ್ಲಿ ಅಲಿ ಹತರಾಗಿರುವುದರಿಂದ ಮೊಫ್ತಾಹ್ ಹಂಗಾಮಿ ಪ್ರಧಾನಿಯಾಗಿದ್ದಾರೆ. ಪ್ರಧಾನಿ ಅಲಿ ಹತ್ಯೆಗೆ ಪ್ರತಿಕಾರ ಕೈಗೊಳ್ಳುತ್ತೇವೆ ಎಂದು ಹೌತಿಗಳ ಉನ್ನತ ರಾಜಕೀಯ ನಾಯಕ ಮಹ್ದಿ ಅಲ್-ಮಶತ್ ಘೋಷಿಸಿದ್ದಾರೆ.

ಮೆದುಳಿಗೆ 2 ಶಸ್ತ್ರಚಿಕಿತ್ಸೆಯಾಗಿದ್ದರೂ ಸದ್ಗುರು ಮೋಟಾರ್‌ಬೈಕ್ ಯಾತ್ರೆ!

ಕೊಯಮತ್ತೂರು: ಒಂದೂವರೆ ವರ್ಷದ ಹಿಂದೆ ಮೆದುಳಿಗೆ 2 ಶಸ್ತ್ರಚಿಕಿತ್ಸೆಗಳಾಗಿದ್ದರೂ ಸದ್ಗುರು ಜಗ್ಗಿ ವಾಸುದೇವ್ ಈಗ ಮೋಟಾರ್ ಬೈಕ್‌ನಲ್ಲಿ ಯಶಸ್ವಿಯಾಗಿ ಕೈಲಾಸ ಮಾನಸ ಸರೋವರ ಯಾತ್ರೆ ಪೂರ್ಣಗೊಳಿಸಿದ್ದು, ಶನಿವಾರ ಕೊಯಮತ್ತೂರಿನ ಇಶಾ ಯೋಗ ಕೇಂದ್ರಕ್ಕೆ ವಾಪಸಾಗಿದ್ದಾರೆ. ಅವರನ್ನು ಭಕ್ತರು ಪುಷ್ಪವೃಷ್ಟಿ ನಡೆಸಿ ಪ್ರೀತಿಯಿಂದ ಬರಮಾಡಿಕೊಂಡಿದ್ದಾರೆ.

ಮೆದುಳಿಗೆ 2 ಶಸ್ತ್ರಚಿಕಿತ್ಸೆಗಳಾಗಿದ್ದರೂ, ವೃದ್ಧಾಪ್ಯ ಕಾಲಿಟ್ಟಿದ್ದರೂ ಮೋಟಾರ ಬೈಕ್‌ನಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡಿರುವುದು ಸದ್ಗುರು ಅವರ ಅಚಲ ವಿಶ್ವಾಸ, ಬದ್ಧತೆಗೆ ಸಾಕ್ಷಿಯಾಗಿದೆ ಎಂದು ಭಕ್ತರು ಕೊಂಡಾಡಿದ್ದಾರೆ. ಮಾಧ್ಯಮದ ಜತೆ ಮಾತನಾಡಿದ ಸದ್ಗುರು, ವೈದ್ಯರ ಪ್ರಕಾರ ನಾನು ಈಗ ಮೋಟಾರ್ ಬೈಕ್ ಸವಾರಿ ಮಾಡುವಂತಿರಲಿಲ್ಲ. ಹಾಗಿದ್ದೂ ನಾನು ಸಮುದ್ರ ಮಟ್ಟದಿಂದ 18 ಸಾವಿರ ಅಡಿ ಎತ್ತರದ ಪ್ರದೇಶಕ್ಕೆ ಮೋಟಾರ್ ಬೈಕ್‌ನಲ್ಲಿ ಹೋಗಿ ಬಂದಿದ್ದೇನೆ. ಇದು ಯೋಗದ ಶಕ್ತಿ' ಎಂದು ಪ್ರತಿಕ್ರಿಯಿಸಿದ್ದಾರೆ.

ಆ.9ರಂದು ಉತ್ತರ ಪ್ರದೇಶದ ಗೋರಖ್‌ಪುರದಿಂದ ಸದ್ಗುರು ಬೈಕ್‌ನಲ್ಲಿ ಯಾತ್ರೆ ಪ್ರಾರಂಭಿಸಿ ಕಠ್ಮಂಡು, ಭಕ್ತಪುರ ಮತ್ತು ನೇಪಾಳದ ತುಲಿಕೇಲ್ ಮೂಲಕ ಟಿಬೆಟ್ ಗಡಿ ಮೂಲಕ ಜಾಂಗ್ಮು, ನ್ಯಾಲಂ ಮತ್ತು ಸಾಗಾ ಮಾರ್ಗವಾಗಿ ಮಾನಸ ಸರೋವರ ತಲುಪಿದರು. ಅಲ್ಲಿಂದ ಕೈಲಾಸ ಪರ್ವತದ ದರ್ಶನಕ್ಕಾಗಿ ಪಾದಯಾತ್ರೆ ಕೈಗೊಂಡಿದ್ದಾರೆ.

ದೇಶಾದ್ಯಂತ ಮತದಾರರ ಅಧಿಕಾರ ಯಾತ್ರೆ

ಆರಾ: ಬಿಹಾರದ ಪಟನಾದಲ್ಲಿ ಆ.17ರಂದು ಆರಂಭಿಸಿದ 'ಮತದಾರ ಅಧಿಕಾರ ಯಾತ್ರೆ'ಯನ್ನು ರಾಜ್ಯದ ಮಟ್ಟಿಗೆ ಭಾನುವಾರ ಪೂರ್ಣಗೊಳಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಯಾತ್ರೆಯನ್ನು ದೇಶಾದ್ಯಂತ ಕೈಗೊಳ್ಳುವುದಾಗಿ ಪ್ರಕಟಿಸಿದ್ದಾರೆ.

ಚುನಾವಣಾ ಆಯೋಗ 'ವೋಟ್ ಚೋರಿ'(ಮತ ಕಳವು) ನಡೆಸುತ್ತಾ ಬಿಜೆಪಿಗೆ ಅಧಿಕಾರಕ್ಕೇರಲು ನೆರವಾಗುತ್ತಿದೆ ಎಂದು ಆರೋಪಿಸುತ್ತಿರುವ ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಯಾತ್ರೆ ವೇಳೆ ಆರ್‌ಎಸ್‌ಎಸ್ ವಿರುದ್ಧವೂ ಕಿಡಿಕಾರಿದ್ದಾರೆ. ಜನರ ಮತಹಕ್ಕು ಕಸಿದು ಮೋದಿ ಅಧಿಕಾರಕ್ಕೆ ಬಂದಿದ್ದಾರೆ. ಬಿಹಾರದಲ್ಲಿ ಆ ರೀತಿಯಾಗಲು ನಾವು ಬಿಡುವುದಿಲ್ಲ ಎಂದಿದ್ದಾರೆ. ಭೋಜಪುರ ಜಿಲ್ಲೆಯಲ್ಲಿ ಭಾನುವಾರ ಮತ ಅಧಿಕಾರ ಯಾತ್ರೆಯಲ್ಲಿ ಮಾತನಾಡಿದ ರಾಹುಲ್, ಬಿಹಾರದಲ್ಲಿ ಇತ್ತೀಚೆಗೆ ಚುನಾವಣಾ ಆಯೋಗ ನಡೆಸಿದ ಮತದಾರರ ಪಟ್ಟಿಯ 'ವಿಶೇಷ ಕ್ಷಿಪ್ರ ಪರಿಷ್ಕರಣೆ'(ಎಸ್‌ಐಆರ್) ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲಿನ ದಾಳಿಯಾಗಿದೆ ಎಂದಿದ್ದಾರೆ. 2024ರಲ್ಲಿ ಮಹಾರಾಷ್ಟ್ರ ವಿಧಾನಸಭೆ ಚುನಾವಣೆ ಮತ್ತು ಕರ್ನಾಟಕದಲ್ಲಿ ಲೋಕಸಭಾ ಚುನಾವಣೆ ಸೇರಿದಂತೆ ದೇಶದ ಹಲವೆಡೆ ಚುನಾವಣಾ ಆಯೋಗ ಮತ್ತು ಬಿಜೆಪಿ ಸೇರಿಕೊಂಡು ಮತ ಕಳವು ನಡೆಸಿದ್ದಾರೆ. ದಲಿತರು, ಅಲ್ಪಸಂಖ್ಯಾತರು, ಮಹಿಳೆಯರ ಮತದಾನ ಹಕ್ಕನ್ನು ನರೇಂದ್ರ ಮೋದಿ ಸರಕಾರ ಕಸಿಯುತ್ತಿದೆ. ಜನತೆ ಅವರನ್ನು ಮತಕಳ್ಳರು ಎಂದು ಕರೆಯುತ್ತಿದ್ದಾರೆ' ಎಂದು ಟೀಕಿಸಿದರು.

ನಾನೇ ಸಿಎಂ ಅಭ್ಯರ್ಥಿ: ತೇಜಸ್ವಿ

ಮತದಾರ ಅಧಿಕಾರ ಯಾತ್ರೆಯುದ್ದಕ್ಕೂ ರಾಹುಲ್ ಗಾಂಧಿ ಜತೆಗೇ ಇದ್ದ ಆರ್‌ಜೆಡಿ ಪಕ್ಷದ ನಾಯಕ ತೇಜಸ್ವಿ ಯಾದವ್, ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ನಾನೇ 'ಇಂಡಿ ಒಕ್ಕೂಟದ ಸಿಎಂ ಅಭ್ಯರ್ಥಿ' ಎಂದು ಆರಾದಲ್ಲಿನ ವೇದಿಕೆಯಲ್ಲಿ ರಾಹುಲ್ ಸಮ್ಮುಖದಲ್ಲೇ ಭಾನುವಾರ ಘೋಷಿಸಿದ್ದಾರೆ.

ತಿರುವನಂತಪುರಂ: ಸುಪ್ರೀಂ ನ್ಯಾ.ವಿಕ್ರಂನಾಥ್ ಲಘುದಾಟಿ ಭಾಷಣ

ನನ್ನ ವಿಶ್ವಪ್ರಸಿದ್ಧಿಗೊಳಿಸಿದ ಬೀದಿನಾಯಿಗೆ ಧನ್ಯವಾದ

ತಿರುವನಂತಪುರಂ: ನ್ಯಾಯಾಲಯದ ಒಳ-ಹೊರಗೆ ಲಘು ಹಾಸ್ಯಕ್ಕೆ ಹೆಸರಾದ ಸುಪ್ರೀಂ ಕೋರ್ಟ್ ಹಿರಿಯ ನ್ಯಾಯಮೂರ್ತಿ ವಿಕ್ರಂನಾಥ್ ಅವರು 'ಬೀದಿನಾಯಿಗೆ ಧನ್ಯವಾದ' ಹೇಳಿದ್ದಾರೆ.

ಮುಂಬರುವ ದಿನಗಳಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯೂ ಆಗಲಿರುವ ನ್ಯಾ.ವಿಕ್ರಂನಾಥ್, ಬೀದಿನಾಯಿ ಪ್ರಕರಣದಲ್ಲಿ ಸಮತೋಲನದ ತೀರ್ಪು ನೀಡಿದೆನೆಂಬ ಕಾರಣಕ್ಕೆ ಭಾರತವಷ್ಟೇ ಅಲ್ಲ, ವಿಶ್ವಾದ್ಯಂತದ ಪ್ರಾಣಿ ಪ್ರಿಯರಿಂದ ನನಗೆ ಮೆಚ್ಚುಗೆ ಮಹಾಪೂರ ಹರಿದುಬಂದಿದೆ ಎಂದಿದ್ದಾರೆ. ಕೇರಳದ ತಿರುವನಂತಪುರಂನಲ್ಲಿ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಆಯೋಜಿಸಿದ್ದ 'ಮಾನವ-ವನ್ಯಜೀವಿ ಸಂಘರ್ಷ' ಕುರಿತ ಪ್ರಾದೇಶಿಕ ಸಮ್ಮೇಳನದಲ್ಲಿ ಶನಿವಾರ ಮಾತನಾಡಿದ ನ್ಯಾ.ವಿಕ್ರಂನಾಥ್, ಪ್ರಕರಣದ ವಿಚಾರಣೆಯನ್ನು ತಮಗೆ ವಹಿಸಿಕೊಟ್ಟಿದ್ದಕ್ಕಾಗಿ ಮುಖ್ಯ ನ್ಯಾಯಮೂರ್ತಿ ಬಿ.

ಆರ್.ಗವಾಯಿ ಅವರಿಗೆ ಧನ್ಯವಾದ ಸಲ್ಲಿಸಿದರು.

ಈವರೆಗೂ ನಾನು ಸಣ್ಣಪುಟ್ಟ ತೀರ್ಪು, ಆದೇಶಗಳಿಂದಾಗಿ ನ್ಯಾಯಾಂಗ ವಲಯದಲ್ಲಿ ಹೆಸರಾಗಿದ್ದೆ. ಆದರೆ, ಈ ಬೀದಿನಾಯಿ ಗಳಿಂದಾಗಿ ವಿಶ್ವಾದ್ಯಂತದ ನಾಗರಿಕ ಸಮಾಜ ನನ್ನನ್ನು ಗುರುತಿಸುವಂತಾ ಯಿತು. ನಾಯಿ ಪ್ರಿಯರಷ್ಟೇ ಅಲ್ಲದೆ, ಬೀದಿನಾಯಿಗಳೂ ನನಗೆ ಆಶೀರ್ವಾದ ಮಾಡಿವೆ, ಶುಭಾಶಯ ಹೇಳಿವೆ ಎಂಬ ಸಂದೇಶಗಳೂ ನನಗೆ ಬರುತ್ತಿವೆ' ಎಂದು ಲಘುದಾಟಿಯಲ್ಲಿ ಹೇಳಿದರು.

ದೆಹಲಿ ಮತ್ತು ರಾಷ್ಟ್ರೀಯ ರಾಜಧಾನಿ ವಲಯದಲ್ಲಿನ ಬೀದಿನಾಯಿಗಳನ್ನು ಆಶ್ರಯ ಕೇಂದ್ರಗಳಿಗೆ ಸ್ಥಳಾಂತರಿಸಬೇಕೆಂಬ ದ್ವಿಸದಸ್ಯ ಪೀಠದ ಆ.11ರ ಆದೇಶವನ್ನು ಆ.22ರಂದು ಮಾರ್ಪಡಿಸಿದ ನ್ಯಾ.ವಿಕ್ರಂನಾಥ್ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠ, ದೆಹಲಿ ಮಹಾನಗರ ಪಾಲಿಕೆ ಅದಾಗಲೇ ಸೆರೆ ಹಿಡಿದಿದ್ದ ಬೀದಿನಾಯಿಗಳನ್ನು ಮೊದಲಿನ ಜಾಗದಲ್ಲೇ ಬಿಡುವಂತೆ ಆದೇಶ ಹೊರಡಿಸಿತು.

ಚೆನ್ನೈ ಮಳೆ, ವಿಮಾನ ಮಾರ್ಗ ಬದಲಾವಣೆ

ಚೆನ್ನೈ: ತಮಿಳುನಾಡು ರಾಜಧಾನಿ ಚೆನ್ನೈನಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಮುಂಜಾನೆವರೆಗೂ ಧಾರಾಕಾರ ಮಳೆ ಸುರಿದಿದೆ. ಉತ್ತರ ಚೆನ್ನೈನಲ್ಲಿ ಅತಿ ಹೆಚ್ಚು ಮಳೆ

ಯಾಗಿದೆ. ತಮಿಳುನಾಡು, ಪುದುಚೇರಿ ಮತ್ತು ಕಾರೈಕಲ್ ಪ್ರದೇಶದಲ್ಲಿ ಗಂಟೆಗೆ 40-50 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸುತ್ತಿದೆ. ಚೆನ್ನೈ ನಗರದಲ್ಲಿ ರಾತ್ರಿಯಿಡೀ ಧಾರಾಕಾರ ಮಳೆಯಾಗುತ್ತಿದ್ದುದರಿಂದ ಚೆನ್ನೈ ವಿಮಾನ ನಿಲ್ದಾಣದಲ್ಲಿ ಬಂದಿಳಿಯಬೇಕಿದ್ದ ಕೆಲವು ವಿಮಾನಗಳ ಮಾರ್ಗ ಬದಲಿಸಿ ಬೆಂಗಳೂರಿನತ್ತ ತೆರಳಲು ಸೂಚನೆ ನೀಡಲಾಗಿದೆ ಎಂದು ಚೆನ್ನೈ ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಭಾನುವಾರ ಬೆಳಗಿನ ಜಾವವೂ ಭಾರೀ ಮಳೆಯಾಗುತ್ತಿದ್ದ ಕಾರಣ ಬೆಂಗಳೂರು, ದೆಹಲಿ, ಫ್ರಾನ್ಸ್ ಮತ್ತು ಮಂಗಳೂರು ಕಡೆಯಿಂದ ಚೆನ್ನೈಗೆ ಬರಬೇಕಿದ್ದ ವಿಮಾನಗಳನ್ನು ಬೆಂಗಳೂರಿನಲ್ಲೇ ಇಳಿಯುವಂತೆ ಸೂಚಿಸಲಾಯಿತು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

'ಕ್ವಾಡ್' ಶೃಂಗ, ಭಾರತ ಪ್ರವಾಸ ಇಲ್ಲ: ಟ್ರಂಪ್

ದೆಹಲಿ: ವರ್ಷಾಂತ್ಯಕ್ಕೆ 'ಕ್ವಾಡ್' ಶೃಂಗಸಭೆಯಲ್ಲಿ ಭಾಗಿಯಾಗಲು ಭಾರತಕ್ಕೆ ಬರಬೇಕಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇಲ್ಲ ಎಂದಿದ್ದಾರೆ. ಪ್ರತಿಸುಂಕ,



ದಂಡಸುಂಕದ ಕಾರಣದಿಂದಾಗಿ ಪ್ರಧಾನಿ ನರೇಂದ್ರ ಮೋದಿ-ಡೊನಾಲ್ಡ್ ಟ್ರಂಪ್ ನಡುವಿನ ಸಂಬಂಧ ಹದಗೆಟ್ಟಿರುವುದ ರಿಂದಲೇ ಟ್ರಂಪ್ ಭಾರತ ಪ್ರವಾಸ ರದ್ದುಗೊಳಿಸಿದ್ದಾರೆ ಎನ್ನಲಾಗಿದೆ. ಕ್ವಾಡ್ ಶೃಂಗಸಭೆಗೆ ಭಾರತಕ್ಕೆ ಬರುವುದಾಗಿ ಈ ಮೊದಲು ಮೋದಿಗೆ ಹೇಳಿದ್ದ ಟ್ರಂಪ್ ಈಗ, ನಿರ್ಧಾರ ಬದಲಿಸಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಈ ಬಾರಿಯ ಕ್ವಾಡ್ ಶೃಂಗಸಭೆ ನವೆಂಬರ್‌ನಲ್ಲಿ ಭಾರತದ ಆತಿಥ್ಯದಲ್ಲಿ ದೆಹಲಿಯಲ್ಲಿ ನಡೆಯಲಿದೆ. ಆಸ್ಟ್ರೇಲಿಯ, ಜಪಾನ್ ಮತ್ತು ಅಮೆರಿಕ ನಾಯಕರು ಭಾಗಿಯಾಗಲಿದ್ದಾರೆ.

ಭಾರತ-ಪಾಕ್ ಯುದ್ಧವನ್ನು 'ನಿಲ್ಲಿಸಿದ್ದು ನಾನೇ' ಎಂಬ ಅಧ್ಯಕ್ಷ ಟ್ರಂಪ್ ಅವರ ಪುನರಾವರ್ತಿತ ಹೇಳಿಕೆಗಳು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಲ್ಲಿ ಅಸಮಾಧಾನ ಉಂಟು ಮಾಡಿದೆ ಎಂದು ಪತ್ರಿಕೆ ವರದಿ ಮಾಡಿದೆ.

ಯುಪಿಎಸ್‌ಸಿ 1129 ಹುದ್ದೆ: ಮುಖ್ಯ ಪರೀಕ್ಷೆ

ದೆಹಲಿ: ದೇಶದ ಅತ್ಯಂತ ಪ್ರತಿಷ್ಠಿತ ಸ್ಪರ್ಧಾತ್ಮಕ ಪರೀಕ್ಷೆ 'ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್'(ಯುಪಿಎಸ್‌ಸಿ) ಸಿವಿಲ್ ಸರ್ವೀಸಸ್-2025ರ ಮುಖ್ಯ ಪರೀಕ್ಷೆ ಭಾನುವಾರ ಬೆಂಗಳೂರು,



ದೆಹಲಿ, ಮುಂಬೈ, ಕೋಲ್ಕತಾ ಸೇರಿದಂತೆ ದೇಶದ ವಿವಿಧ ಕೇಂದ್ರಗಳಲ್ಲಿ ನಡೆದಿದೆ. ಬೆಳಗ್ಗೆ 9ರಿಂದ ಮಧ್ಯಾಹ್ನ 12 ಮತ್ತು ಮಧ್ಯಾಹ್ನ 2.30ರಿಂದ ಸಂಜೆ 5.30ರವರೆಗೆ ಪರೀಕ್ಷೆ ಜರುಗಿದೆ. ಈ ಪರೀಕ್ಷೆಯು ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ಪೊಲೀಸ್ ಸೇವೆ (ಐಪಿಎಸ್), ಭಾರತೀಯ ವಿದೇಶಾಂಗ ಸೇವೆ(ಐಎಫ್‌ಎಸ್) ಮತ್ತಿತರ ನಾಗರಿಕ ಸೇವೆಗಳ ಇಲಾಖೆಗಳಿಗೆ ಸಮರ್ಥ ಅಧಿಕಾರಿಗಳನ್ನು ಆಯ್ಕೆ ಮಾಡುವ ಪರೀಕ್ಷೆಯಲ್ಲಿ 2ನೇ ಹಂತವಾಗಿದೆ. ಒಟ್ಟು 1129 ಹುದ್ದೆಗಳಿಗಾಗಿ ಲಿಖಿತ ಪರೀಕ್ಷೆ ನಡೆದಿದ್ದು, 14,625 ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆದಿದ್ದಾರೆ. ಇದಕ್ಕೂ ಮುನ್ನ ಇದೇ ವರ್ಷ ನಡೆದ ಪೂರ್ವಭಾವಿ ಪರೀಕ್ಷೆಗೆ 13 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. 1129 ಹುದ್ದೆಗಳಲ್ಲಿ 979 ಹುದ್ದೆಗಳು ಸಿವಿಲ್ ಸರ್ವೀಸಸ್‌ಗೆ ಸೇರಿದ್ದಾಗಿವೆ. ಅದರಲ್ಲಿ 38 ಹುದ್ದೆ ವಿಶೇಷ ಚೇತನ ವ್ಯಕ್ತಿಗಳಿಗೆ ಮೀಸಲಾಗಿವೆ.

ಪಟಾಕಿ ಘಟಕ ಸ್ಫೋಟ, ಮಕ್ಕಳು ಸೇರಿ 4 ಸಾವು

ಲಖನೌ: ಉತ್ತರ ಪ್ರದೇಶದ ಲಖನೌ ನಗರದ ಥಾನಾ ಕುರ್ಸಿ ಪ್ರದೇಶದ ಬೆಹ್ತಾ ಬಜಾರ್‌ನಲ್ಲಿನ ಅಕ್ರಮ ಪಟಾಕಿ ತಯಾರಿಕಾ ಘಟಕದಲ್ಲಿ ಭಾನುವಾರ ಬೆಳಗ್ಗೆ ಭಾರಿ ಸ್ಫೋಟ

ವಾಗಿದೆ. ಪರಿಣಾಮ, ಘಟಕದ ಮಾಲೀಕ ಆಲಂ ಮತ್ತು ಆತನ ಪತ್ನಿ, ಇಬ್ಬರು ಮಕ್ಕಳು ದುರ್ಮರಣಕ್ಕೀಡಾಗಿದ್ದಾರೆ. ನೆರೆಹೊರೆಯ ಮನೆಗಳ ಹಲವರು ಗಾಯಗೊಂಡಿದ್ದಾರೆ. ಪಟಾಕಿ ಉದ್ಯಮಿ ಆಲಂ ಮನೆ ಯಲ್ಲಿಯೇ ಗನ್‌ಪೌಡರ್ ಮತ್ತು ಪಟಾಕಿಗಳನ್ನು ತಯಾರಿಸುತ್ತಿದ್ದಾಗ ಸ್ಫೋಟವಾಗಿದೆ. ಸ್ಫೋಟದ ತೀವ್ರತೆಗೆ ಇಡೀ ಮನೆ ಧ್ವಂಸ ವಾಗಿದೆ. ಆಲಂ ಕುಟುಂಬವಲ್ಲದೇ, ಇನ್ನೂ ಮೂವರು ಸಾವಿಗೀಡಾಗಿದ್ದಾರೆ. ಮೂವರು ಕುಸಿದ ಮನೆಯ ಅವಶೇಷಗಳಡಿ ಸಿಲುಕಿದ್ದಾರೆ ಎಂದು ನೆರೆಹೊರೆಯವರು ಹೇಳಿದ್ದಾರೆ. ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಪೊಲೀಸರು, ಅಗ್ನಿಶಾಮಕ ದಳ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ತಲುಪಿದ್ದು, ಗಾಯಾಳುಗಳನ್ನು ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದಾರೆ.

ಸಮಾಚಾರ ಸಣ್ಣದಲ್ಲ

ಚಲಿಸುವ ವ್ಯಾನಲ್ಲಿ ದುರುಳರಿಂದ ರೇಪ್

ಭುವನೇಶ್ವರ: ಒಡಿಶಾದ ಉಡಾಲ ಪೊಲೀಸ್ ವ್ಯಾಪ್ತಿಯ ರಾಜ್ಯ ಹೆದ್ದಾರಿಯಲ್ಲಿ ಚಲಿಸುವ ಪ್ರಯಾಣಿಕರ ವ್ಯಾನ್‌ನಲ್ಲಿ 21 ವರ್ಷದ ಯುವತಿ ಮೇಲೆ ಆರು ಜನರು ಅತ್ಯಾಚಾರ ನಡೆಸಿ ಬಳಿಕ ರಸ್ತೆ ಮಧ್ಯೆ ಎಸೆದು ಹೋಗಿದ್ದಾರೆ. ಆರೋಪಿಗಳೆಲ್ಲರೂ ಸರತ್ ಪ್ರದೇಶ ದವರು. ಅವರಲ್ಲಿಬ್ಬರು ಜನವರಿಯಲ್ಲಿ ಮಕರ ಸಂಕ್ರಾಂತಿ ಹಬ್ಬದ ಸಂದರ್ಭ ಪರಿಚಿತರಾಗಿದ್ದರು. ಮಗಳಿಗೆ ಖಾಸಗಿ ಕಂಪನಿಯಲ್ಲಿ ನೌಕರಿ ಕೊಡಿಸುವ ಭರವಸೆ ನೀಡಿದ್ದರು. ಅವರ ಮಾತು ನಂಬಿ ಮಗಳನ್ನು ಅವರೊಂದಿಗೆ ಕಳಿಸಿಕೊಟ್ಟಿದ್ದೆ. ಆದರೆ ಆರೋಪಿ ಗಳಿಬ್ಬರು ಇತರೆ ನಾಲ್ವರ ಜತೆಗೂಡಿ ಅತ್ಯಾಚಾರ ನಡೆಸಿದ್ದಾರೆ ಎಂದು ಸಂತ್ರಸ್ತೆಯ ತಾಯಿ ಪೊಲೀಸರಿಗೆ ದೂರು ನೀಡಿದ್ದಾರೆ. ಘಟನೆ ಕುರಿತು ಉಡಾಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಶನಿವಾರ ಬೆಳಗ್ಗೆ ಇಬ್ಬರು ಆರೋಪಿಗಳನ್ನು ಬಂಧಿಸಲಾ ಗಿದ್ದು, ಉಳಿದ ಆರೋಪಿಗಳಿಗಾಗಿ ಶೋಧ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಹಾರ ಮತಪಟ್ಟಿ: ಹೆಸರು ಕೈಬಿಡಲು 2.07 ಲಕ್ಷ ಅರ್ಜಿ

ದೆಹಲಿ: ಮತದಾರರ ಪಟ್ಟಿಯಿಂದ ಕೈಬಿಡುವಂತೆ ಕೋರಿ 2.07 ಲಕ್ಷ ಅರ್ಜಿಗಳು ಬಿಹಾರದಲ್ಲಿ ಸಲ್ಲಿಕೆಯಾಗಿವೆ ಎಂದು ಚುನಾವಣಾ ಆಯೋಗ ಭಾನುವಾರ ಮಾಹಿತಿ ನೀಡಿದೆ. ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಭಾಗವಾಗಿ ಚುನಾವಣಾ ಆಯೋಗವು ಬಿಡುಗಡೆ ಮಾಡಿರುವ ಕರಡು ಮತದಾರರ ಪಟ್ಟಿ ಕುರಿತು ಆಕ್ಷೇಪಣೆ ಸಲ್ಲಿಸಲು ನಿಗದಿ ಪಡಿಸಿರುವ ಕಾಲಮಿತಿ ಕೊನೆಗೊಳ್ಳಲು ಒಂದು ದಿನ ಬಾಕಿ ಇರುವಾಗ ಆಯೋಗ ಈ ಮಾಹಿತಿ ನೀಡಿದೆ. ಅಂತಿಮ ಮತದಾರರ ಪಟ್ಟಿಯು ಸೆಪ್ಟೆಂಬರ್ 30ರಂದು ಬಿಡುಗಡೆಯಾಗಲಿದೆ. ಕರಡು ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗಿರುವ 65 ಲಕ್ಷ ಮಂದಿಯ ಪೈಕಿ 33,236 ಮಂದಿ ಮಾತ್ರ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲು ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದು ಆಯೋಗ ತಿಳಿಸಿದೆ. ಅಲ್ಲದೇ, ಸಿಪಿಐ(ಎಂಎಲ್) ಎಲ್ ಪಕ್ಷದ ಬೂತ್ ಮಟ್ಟದ ಏಜೆಂಟ್‌ಗಳ ಮೂಲಕ 128 ಅರ್ಜಿಗಳು ಸಲ್ಲಿಕೆಯಾಗಿವೆ. 15 ಅರ್ಜಿಗಳು ಮತದಾರರ ಸೇರ್ಪಡೆಗೆ ಹಾಗೂ 103 ಅರ್ಜಿಗಳು ಹೆಸರುಗಳನ್ನು ಕೈಬಿಡುವಂತೆ ಕೋರಿ ಸಲ್ಲಿಕೆಯಾಗಿವೆ. ಆರ್‌ಜೆಡಿ 10 ಅರ್ಜಿಗಳನ್ನು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಲು ಕೋರಿ ಸಲ್ಲಿಸಿದೆ ಎಂದೂ ಮಾಹಿತಿ ನೀಡಿದೆ.

ರಾಜಣ್ಣಗೆ ಸಚಿವ ಸ್ಥಾನ ಸ್ವಾಮೀಜಿಗಳ ಬೆಂಬಲ



ತುಮಕೂರು: ಹಿರಿಯ ನಾಯಕ ರಾಜಣ್ಣ ಅವರನ್ನು ಮತ್ತೆ ಸಚಿವ ಸಂಪುಟಕ್ಕೆ ತೆಗೆದುಕೊಳ್ಳಬೇಕೆಂಬ ಕೂಗಿನ ನಡುವೆ ವಿವಿಧ ಮಠಗಳ ಸ್ವಾಮೀಜಿಗಳು ಮರಳಿ ಸಚಿವ ಸ್ಥಾನ ನೀಡಬೇಕೆಂದು ಧ್ವನಿ ಎತ್ತಿದ್ದಾರೆ. ಭಾನುವಾರ ತುಮಕೂರಿನ ಕ್ಯಾತ್ಸಂದ್ರದ ರಾಜಣ್ಣ ಅವರ ನಿವಾಸಕ್ಕೆ ಬಂದ ಚಿತ್ರದುರ್ಗದ ಅಖಿಲ ಕುಂಚಿಟಿಗ ಮಹಾಸಂಸ್ಥಾನ ಮಠದ ಜಗದ್ಗುರು ಶಾಂತವೀರ ಮಹಾಸ್ವಾಮೀಜಿ, ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಮಹಾ ಸ್ವಾಮೀಜಿ, ಹೊಸದುರ್ಗದ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ, ಚಿತ್ರದುರ್ಗದ ಜಗದ್ಗುರು ಬಸವಮೂರ್ತಿ ಮಾದಾರ ಚೆನ್ನಯ್ಯ ಮಹಾಸ್ವಾಮೀಜಿ, ದಾವಣಗೆರೆಯ ಜಗದ್ಗುರು ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿ ರಾಜಣ್ಣ ಅವರನ್ನು ಭೇಟಿಯಾದರು. ಸತತ ಒಂದು ಗಂಟೆಗೂ ಅಧಿಕ ಕಾಲ ರಾಜಣ್ಣನ ಜೊತೆ ಚರ್ಚೆ ನಡೆಸಿದ 15ಕ್ಕೂ ಹೆಚ್ಚು ಸ್ವಾಮಿಜಿಗಳು ಸಚಿವ ಸ್ಥಾನದಿಂದ ತೆರವು ವಿಚಾರಕ್ಕೆ ಬೇಸರ ವ್ಯಕ್ತಪಡಿಸುವುದರ ಜೊತೆಗೆ ನಿಮ್ಮ ಜೊತೆ ನಾವಿದ್ದೇವೆ ಎಂಬ ಧೈರ್ಯ ತುಂಬಿದರು. ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ಕೈ ಬಿಟ್ಟಿರೊದು ಆಘಾತಕಾರಿ ವಿಚಾರ. ಇದು ರಾಜ್ಯದ ಜನತೆಗೆ ಆದ ನಷ್ಟ. ಹೈಕಮಾಂಡ್ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಮತ್ತೆ ರಾಜಣ್ಣನಿಗೆ ಸಚಿವ ಸ್ಥಾನ ಕೊಡಬೇಕು. ಈ ಸಂಬಂಧ ಹೈಕಮಾಂಡ್ ಭೇಟಿಗೆ ನಿರ್ಧಾರ ಮಾಡಿದ್ದೇವೆ ಎಂದರು.

ಬೆಳಗಾವಿ: 145 ಕೋಟಿ ಜಿವಿಸ್ಟಿ ವಂಚಿಸಿದವ ಸೆರೆ

ಬೆಳಗಾವಿ: ಸುಮಾರು 145 ಕೋಟಿ ರು. ಮೌಲ್ಯದ ನಕಲಿ ಇನ್ವಾಯ್ಸ್‌ಗಳನ್ನು ಸೃಷ್ಟಿಸಿ ಅಂದಾಜು 45 ಕೋಟಿ ರು.ವಂಚನೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಒಬ್ಬ ವ್ಯಕ್ತಿಯನ್ನು ಬೆಳಗಾವಿ ವಲಯ ಘಟಕದ ಜಿ.ಎಸ್.ಟಿ. ಗುಪ್ತಚರ ನಿರ್ದೇಶನಾಲಯದ ಡಿಜಿಜಿಐ ಅಧಿಕಾರಿಗಳು ಬಂಧಿಸಿದ್ದಾರೆ. ನಕಲಿ ದಾಖಲೆಗಳನ್ನು ಬಳಸಿಕೊಂಡು ಗುಂಪೊಂದು ನಕಲಿ ಜಿಎಸ್‌ಟಿ ನೋಂದಣಿಗಳನ್ನು ಸೃಷ್ಟಿಸಿ ನಕಲಿ ಐಟಿಸಿಯನ್ನು ಪಡೆದುಕೊಂಡು ರವಾನಿಸುವ ಚಟುವಟಿಕೆಯಲ್ಲಿ ನಿರತವಾಗಿತ್ತು. ಶೋಧದ ಸಮಯದಲ್ಲಿ ಆರೋಪಿಯಿಂದ ಅಧಿಕಾರಿಗಳು ಮೊಬೈಲ್ ಫೋನ್, ನಕಲಿ ಆಧಾರ್ ಕಾರ್ಡು ಮತ್ತು ನಕಲಿ ಸಂಸ್ಥೆಗಳ ಸೈನ್ ಬೋರ್ಡ್‌ನ ಛಾಯಾಚಿತ್ರಗಳೂ ಸೇರಿದಂತೆ ಹಲವಾರು ದಾಖಲೆಗಳು ಮತ್ತು ಸಾಕ್ಷ್ಯಗಳನ್ನು ವಶಪಡಿಸಿಕೊಂಡಿದ್ದಾರೆ. ನಕಲಿ ಇನ್ವಾಯ್ಸ್‌ಗಳು ಮತ್ತು ಇ-ವೇ ಬಿಲ್‌ಗಳನ್ನು ರಚಿಸಲು ನೈಜ ವ್ಯಾಪಾರ ಕಾರ್ಯಾಚರಣೆಗಳಿಲ್ಲದ ಶೆಲ್ ಕಂಪನಿಗಳನ್ನು ಬಳಕೆ ಮಾಡಿಕೊಂಡಿರುವುದು ಈ ವೇಳೆ ಬೆಳಕಿಗೆ ಬಂದಿದೆ.

ಪುರಸಭೆ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮೀಸಲಾತಿ

ಹಿಂದುಳಿದ ವರ್ಗಗಳಿಗೆ ಶೇಕಡಾ 42 ಮೀಸಲು: ತೆಲಂಗಾಣ ಮಸೂದೆ

ಹೈದರಾಬಾದ್: ತೆಲಂಗಾಣ ವಿಧಾನಸಭೆಯು ಭಾನುವಾರ ಪುರಸಭೆ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆಗಳನ್ನು ಸರ್ವಾನುಮತದಿಂದ ಅಂಗೀಕರಿಸಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ (ಬಿ.ಸಿ) ಶೇ. 42ರಷ್ಟು ಮೀಸಲಾತಿ ಜಾರಿಗೆ ತರಲು ದಾರಿ ಮಾಡಿಕೊಟ್ಟಿದೆ.

ಮಸೂದೆಯ ಕುರಿತು ಮಾತನಾಡಿದ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಶೇ.42ರಷ್ಟು ಮೀಸಲಾತಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಶೇ.42ರಷ್ಟು ಮೀಸಲಾತಿಗಾಗಿ ಎರಡು ಮಸೂದೆಗಳನ್ನು ವಿಧಾನಸಭೆ ಅಂಗೀಕರಿಸಿ ರಾಜ್ಯಪಾಲರಿಗೆ ಕಳುಹಿಸಲಾಗಿದೆ. ಅವರು ಅನುಮೋದನೆ ನೀಡದೆ ರಾಷ್ಟ್ರಪತಿಗಳಿಗೆ ಕಳುಹಿಸಿದ್ದಾರೆ. ಮಸೂದೆಗಳು ಸುಮಾರು ಐದು ತಿಂಗಳಿನಿಂದ ರಾಷ್ಟ್ರಪತಿಗಳ ಬಳಿ ಬಾಕಿ ಇವೆ ಎಂದು ಅವರು ಹೇಳಿದ್ದಾರೆ. ಈ ಮಸೂದೆಯು ಬಿಆರ್‌ಎಸ್ ಸರಕಾರ ತಂದಿರುವ 2018ರ ಶಾಸನವನ್ನು ತಿದ್ದುಪಡಿ ಮಾಡುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು.

ಇದಕ್ಕೂ ಮೊದಲು ಶನಿವಾರ ವಿಧಾನಸಭೆ ಸಮಿತಿ ಸಭಾಂಗಣದಲ್ಲಿ ಸಿಎಂ ರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಮೂರು ಗಂಟೆಗಳ ಸಚಿವ ಸಂಪುಟ ಸಭೆಯಲ್ಲಿ, ಮೀಸಲಾತಿ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವ ಸುಗ್ರೀವಾಜ್ಞೆಯನ್ನು ಬದಲಾಯಿಸಲು ವಿಧಾನಸಭೆಯಲ್ಲಿ ಮಸೂದೆಯನ್ನು ಮಂಡಿಸಲು ನಿರ್ಧರಿಸಲಾಯಿತು.

ಮಸೂದೆಯ ಪರಿಣಾಮಗಳ ಜೊತೆಗೆ ರಾಜ್ಯಪಾಲರು ಎರಡನೇ ಬಾರಿಗೆ ಮಸೂದೆಯನ್ನು ಅನುಮೋದಿಸುತ್ತಾರೆಯೇ ಎಂಬುದರ ಬಗ್ಗೆಯೂ ಚರ್ಚೆ ನಡೆಯಿತು. ಸೆಪ್ಟೆಂಬರ್ 30ರೊಳಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸಬೇಕೆಂದು ತೆಲಂಗಾಣ ಹೈಕೋರ್ಟ್ ನಿರ್ದೇಶಿಸಿರು ವುದರಿಂದ, 42% ಮೀಸಲಾತಿಗೆ ಸರಕಾರಿ ಆದೇಶ ಹೊರಡಿಸಲಾಗುವುದು ಎಂದು ಹೇಳಿದ ಅವರು, ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಯಿತು. 2023ರ ವಿಧಾನಸಭಾ ಚುನಾವಣೆಗೆ ಮುನ್ನ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯನ್ನು 23%ರಿಂದ 42%ಕ್ಕೆ ಹೆಚ್ಚಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿತ್ತು.

ಹಿಂದಿನ ಸರಕಾರದ್ದು ಕರಾಳ ಮಸೂದೆ

ಹಿಂದಿನ ಬಿಆರ್‌ಎಸ್ ಆಡಳಿತದ ಅವಧಿಯಲ್ಲಿ (2018) ಅಂಗೀಕರಿಸಲಾದ ಪಂಚಾಯತ್ ರಾಜ್ ಮಸೂದೆಯು ಸ್ಥಳೀಯ ಸಂಸ್ಥೆಗಳಲ್ಲಿ ಎಸ್‌ಸಿ, ಎಸ್.ಟಿ ಮತ್ತು ಬಿ.ಸಿ.ಗಳಿಗೆ ಒಟ್ಟು ಮೀಸಲಾತಿಯನ್ನು 50%ಕ್ಕೆ ಮಿತಿಗೊಳಿಸುವ ಕುಣಿಕೆ ಎಂದು ಕರೆದರು. ಸರಕಾರವು ಈ ಹಿಂದೆ 2018ರ ಕಾಯ್ದೆಯನ್ನು ತಿದ್ದುಪಡಿ ಮಾಡಲು ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಅದನ್ನು ರಾಜ್ಯಪಾಲ ಜಿಷ್ಣು ದೇವ್ ವರ್ಮಾ ಅವರು ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸಿದ್ದರು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಪೊನ್ನಂ ಪ್ರಭಾಕರ್ ಹೇಳಿದ್ದಾರೆ.

ದ್ವಿಪಕ್ಷೀಯ ಮಾತುಕತೆಯ ವೇಳೆ ಭಾರತಕ್ಕೆ ಮತ್ತೊಂದು ರಾಜತಾಂತ್ರಿಕ ಗೆಲುವು

ಉಗ್ರರ ದಮನಕ್ಕೆ ಚೀನಾ ಬೆಂಬಲ

ಏಳು ವರ್ಷಗಳ ಬಳಿಕ ಚೀನಾಕ್ಕೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಚೀನಾದಲ್ಲಿರುವ ಭಾರತೀಯರು ಭಾರೀ ಸಂಖ್ಯೆಯಲ್ಲಿ ನೆರೆದು ಆತ್ಮೀಯ ಸ್ವಾಗತ ನೀಡಿದರು.

ಬೀಜಿಂಗ್: ಗಡಿಯಾಚೆಗೆ ಭಯೋತ್ಪಾದನೆ ತಡೆಯುವ ಭಾರತದ ಹೋರಾಟಕ್ಕೆ ಈಗ ಚೀನಾ ಕೂಡ ಬೆಂಬಲ ನೀಡಿದೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ. ಇದು ಭಯೋತ್ಪಾದನೆ ತಡೆಯುವ ಹೋರಾಟದಲ್ಲಿ ಭಾರತಕ್ಕೆ ಮತ್ತೊಂದು ರಾಜತಾಂತ್ರಿಕ ಯಶಸ್ಸು ಸಿಕ್ಕಂತಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಟಿಯಾಂಜಿನ್‌ನಲ್ಲಿ ನಡೆಯುತ್ತಿರುವ ಶಾಂಘೈ ಸಹಕಾರ ಸಂಸ್ಥೆ ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ಜತೆಗೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಜೊತೆಗೆ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಗಡಿಯಾಚೆಗಿನ ಭಯೋತ್ಪಾದನೆ ಕುರಿತೂ ಮಾತುಕತೆ ನಡೆದಿದ್ದು, ಉಗ್ರವಾದ ದಮನಕ್ಕೆ ಚೀನಾ ಬೆಂಬಲ ಘೋಷಿಸಿದೆ.

ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ ಸುದ್ದಿಗೋಷ್ಠಿ ನಡೆಸಿ ಈ ಸಂಬಂಧ ಮಾಹಿತಿ ನೀಡಿದ್ದಾರೆ. ಗಡಿಯಾಚೆಗಿನ ಭಯೋತ್ಪಾದನೆ ಬಗ್ಗೆ ಪ್ರಸ್ತಾಪಿಸಿದ ಮೋದಿ, ಗಡಿಯಲ್ಲಿ ಶಾಂತಿ, ಸ್ಥಿರತೆ ಅಗತ್ಯ ಎಂದು ಒತ್ತಿ ಹೇಳಿದರು. ಬಳಿಕ ಪರಸ್ಪರ ಅಭಿವೃದ್ಧಿ, ವ್ಯಾಪಾರ ಸಮತೋಲನ, ಭಯೋತ್ಪಾದನೆ ವಿರುದ್ಧದ ಹೋರಾಟ ಹಾಗೂ ಜನರಿಂದ ಜನರ ಸಂಪರ್ಕ ಹೆಚ್ಚಿಸುವ ವಿಷಯಗಳ ಬಗ್ಗೆ ಒಟ್ಟಾಗಿ ಸಾಗುವ ಕುರಿತು ಚರ್ಚೆ ನಡೆಯಿತು ಎಂದು ಮಿಶ್ರಿ ತಿಳಿಸಿದರು.

ಜನಸಿರಿ ಫೌಂಡೇಶನ್ ಆಶ್ರಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನವನ್ನು ಸಮ್ಮೇಳನ ಸರ್ವಾಧ್ಯಕ್ಷರಾದ ಡಾ. ಸಿ ಸೋಮಶೇಖರ್ ಉದ್ಘಾಟಿಸಿದರು. ಈ ವೇಳೆ ಹಾವೇರಿಯ ಶ್ರೀ ಶಾಂತಲಿಂಗ ಮಹಾಸ್ವಾಮಿಗಳು ಮತ್ತು ಹಿರಿಯ ಕನ್ನಡ ಚಿಂತಕ ಹಿರೇಮಗಳೂರು ಕಣ್ಣನ್, ಜಾನಪದ ಪರಿಷತ್ತಿನ ಬಾಲಾಜಿ, ಜನಸಿರಿ ಫೌಂಡೇಶನ್ ಅಧ್ಯಕ್ಷ ನಾಗಲೇಖ ಮತ್ತು ಪಾಲನೇತ್ರ ಇದ್ದರು.

ಅಮೆರಿಕದ ಕಂಪನಿಗಳ ಉತ್ಪನ್ನಗಳಿಗೆ ಬಹಿಷ್ಕಾರ

ದೆಹಲಿ: ಶೇ.50ರಷ್ಟು ಪ್ರತಿಸುಂಕ ಹೇರಿದ ಅಮೆರಿಕದ ವಿರುದ್ಧ ಭಾರತೀಯರು ಈಗ ಸಿಡಿದೆದ್ದಿದ್ದಾರೆ. ಪೆಪ್ಸಿ, ಕೋಕಾಕೋಲಾ, ಮೆಕ್‌ಡೊನಾಲ್ಡ್, ಸಬ್‌ವೇ, ಕೆಂಟಕಿ ಫ್ರೈಡ್ ಚಿಕನ್, ಸೇರಿದಂತೆ ಅಮೆರಿಕದ ಹಲವಾರು ಕಂಪನಿಗಳ ಉತ್ಪನ್ನಗಳನ್ನು ಭಾರತೀ ಯರು ಈಗ ಬಹಿಷ್ಕರಿಸಲಾರಂಭಿಸಿದ್ದಾರೆ. ಭಾರತದಲ್ಲಿರುವ ಅಮೆರಿಕದ ಕಂಪನಿಗಳಿಗೆ ಜನರ ಸಿಟ್ಟಿನ ತಾಪ ತಟ್ಟಲಾರಂಭಿಸಿದೆ.

ಮಿ ಡೊನಾಲ್ಡ್ ಟ್ರಂಪ್, ನೀವು ಭಾರತದ ಆಮದು ಸರಕುಗಳಿಗೆ ಶೇ.50 ದಂಡಶುಲ್ಕ ವಿಧಿಸಿದ್ದೀರಿ. ಅದಕ್ಕೆ ಪ್ರತಿಯಾಗಿ ಭಾರತದ 146 ಕೋಟಿ ಜನರು ಅಮೆರಿಕದ ಕಂಪನಿಗಳ ಉತ್ಪನ್ನಗಳಿಗೆ ಬಹಿಷ್ಕಾರ ಹೇಳಲಿದ್ದಾರೆ. ಆಗ ಏನು ಮಾಡುವಿರಿ. ಬದಲಾಗಿ, ಆದಷ್ಟು ಬೇಗ ನಿಮ್ಮ ಪ್ರತಿಸುಂಕ ರದ್ದುಗೊಳಿಸಿ ಎಂದು ರಾಜ್ಯಸಭೆ ಸದಸ್ಯ ಡಾ.ಅಶೋಕ್ ಮಿತ್ತಲ್ ಬಹಿರಂಗ ಪತ್ರ ಬರೆದಿದ್ದಾರೆ. ಇದಕ್ಕೂ ಮುನ್ನವೇ 'ಅಮೆರಿಕ ಕಂಪನಿಗಳ ಎಲ್ಲಾ ಉತ್ಪನ್ನಗ ಳನ್ನು ಬಹಿಷ್ಕರಿಸಿ' ಎಂದು ಯೋಗ ಗುರು ರಾಮದೇವ್ ಭಾರತೀ ಯರಿಗೆ ಕರೆ ನೀಡಿದ್ದಾರೆ. ಪೆಪ್ಸಿ, ಕೋಕಾ-ಕೋಲಾ, ಸಬ್‌ವೇ, ಕೆಎಫ್‌ಸಿ, ಮೆಕ್ ಡೊನಾಲ್ಡ್ ಕೌಂಟರ್‌ಗಳಲ್ಲಿ ಒಬ್ಬ ಭಾರತೀಯನೂ ಕಾಣಿಸಬಾರದು. ಅಷ್ಟರಮಟ್ಟಿಗೆ ದೊಡ್ಡ ಮಟ್ಟದಲ್ಲಿ ಬಹಿ ಷ್ಕಾರ ಹಾಕಬೇಕು. ಆಗಷ್ಟೇ ಟ್ರಂಪ್‌ಗೆ ಬುದ್ಧಿಬರುತ್ತದೆ ಎಂದು ರಾಮದೇವ್ ಹೇಳಿದ್ದಾರೆ. ಭಾರತದ ಜನರ ಕೌಶಲ ಬಳಸಿ ತಯಾ ರಿಸಿದ, ಭಾರತೀಯರು ಬೆವರು ಸುರಿಸಿ ಸಿದ್ಧಪಡಿಸಿದ ವಸ್ತುಗಳ ನ್ನಷ್ಟೇ ನಾವು ಖರೀದಿಸಲಿದ್ದೇವೆ ಎಂದು ಭಾರತೀಯರು ಶಪಥ ತೊಡಬೇಕು. 'ಸ್ವದೇಶಿ ಮಂತ್ರ' ಜಪಿಸಬೇಕು ಎಂದು ರಾಮದೇವ್ ಉತ್ತೇಜಿಸಿದ್ದಾರೆ.

ಈಗಾಗಲೇ ಫ್ರಾನ್ಸ್, ಬ್ರಿಟನ್, ಕೆನಡಾ ಸೇರಿ ವಿಶ್ವದ ವಿವಿಧೆಡೆ ಅಮೆರಿಕ ಕಂಪನಿಗಳ ಉತ್ಪನ್ನಗಳಿಗೆ ಬಹಿಷ್ಕಾರ ನಡೆದಿದೆ.

ಅಮಿತ್ ಷಾ ವಿರುದ್ಧ ಅವಹೇಳನಕಾರಿ ಹೇಳಿಕೆ | ಬಿಜೆಪಿ ತೀವ್ರ ಆಕ್ಷೇಪ

ಮಹುವಾ ಮೊಯಿತ್ರಾ ವಿರುದ್ಧ ಮೊಕದ್ದಮೆ

ಕೋಲ್ಕತಾ: ಕೇಂದ್ರ ಗೃಹ ಸಚಿವ ಅಮಿತ್ ಷಾ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಪ್ರಕರಣ ದಾಖಲಾಗಿದೆ. ಸ್ವಾತಂತ್ರ್ಯ ದಿನಾಚರಣೆಯಂದು ಸಂಸದೆ ಮಹುವಾಗೆ ಪತ್ರಕರ್ತರು ರಾಜ್ಯದಲ್ಲಿ ಅಕ್ರಮ ಒಳನುಸುಳುವಿಕೆಯ ಬಗ್ಗೆ ಪ್ರಶ್ನೆ ಕೇಳಿದ್ದರು. ಈ ವೇಳೆ ಉತ್ತರಿಸಿದ್ದ ಸಂಸದೆ ಮಹುವಾ, ಗಡಿ ಕಾಯಲು, ನುಸುಳುವಿಕೆ ತಡೆಯಲು ನಮ್ಮ ಗೃಹ ಸಚಿವರು ವಿಫಲರಾಗಿದ್ದಾರೆ ಎಂದು ಲೇವಡಿ ಮಾಡಿದ್ದರು.

ಹೊರಗಿನಿಂದ ಬಂದ ಜನರು ನಮ್ಮ ತಾಯಂದಿರು ಮತ್ತು ಸಹೋದರಿಯರ ಮೇಲೆ ಕಣ್ಣಿಟ್ಟು ನಮ್ಮ ಭೂಮಿಯನ್ನು ಕಸಿದುಕೊಳ್ಳುತ್ತಿದ್ದಾರೆ. ನಾವು ಕೂಡ ಅವರ ಭಯದಲ್ಲಿ ಬದುಕುತ್ತೇವೆ. ಒಂದು ವೇಳೆ ಭಾರತದ ಗಡಿಯನ್ನು ರಕ್ಷಣೆ ಮಾಡಲು ಸಾಧ್ಯವಾಗದಿದ್ದರೆ, ಗೃಹ ಸಚಿವರ ತಲೆ ಕತ್ತರಿಸಿ ಮೇಜಿನ ಮೇಲೆ ಪ್ರದರ್ಶನಕ್ಕಿಡುವುದು ನಿಮ್ಮ ಕರ್ತವ್ಯ ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಛತ್ತೀಸಗಢದ ರಾಯ್‌ಪುರದಲ್ಲಿ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳೀಯ ನಿವಾಸಿಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ, ಮಾನಾ ಪೊಲೀಸ್ ಠಾಣೆಯಲ್ಲಿ ಮೊಯಿತ್ರಾ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 196 (ಧರ್ಮ, ಜನಾಂಗ, ಜನ್ಮಸ್ಥಳ, ವಾಸಸ್ಥಳ, ಭಾಷೆ ಇತ್ಯಾದಿಗಳ ಆಧಾರದ ಮೇಲೆ ವಿವಿಧ ಗುಂಪುಗಳ ನಡುವೆ ದ್ವೇಷ ಉತ್ತೇಜಿಸುವುದು) ಮತ್ತು 197 (ರಾಷ್ಟ್ರೀಯ ಏಕೀಕರಣಕ್ಕೆ ಪೂರ್ವಾಗ್ರಹ ಪೀಡಿತವಾದ ಆರೋಪಗಳು, ಪ್ರತಿಪಾದನೆಗಳು) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಮೊಯಿತ್ರಾ ಹೇಳಿಕೆಗೆ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಟಿಎಂಸಿ ಹೀನಮನಸ್ಥಿತಿಯನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಬಂಗಾಳವನ್ನು ಅಭಿವೃದ್ಧಿಪಡಿಸಲು ಬಿಡುತ್ತಿಲ್ಲ ಎಂಬುದಕ್ಕೆ ಈ ಹೇಳಿಕೆ ಪುರಾವೆ ಎಂದು ತಿರುಗೇಟು ನೀಡಿದ್ದು, ಈ ಹೇಳಿಕೆಗೆ ಸಂಬಂಧಿಸಿದಂತೆ ಬಿಜೆಪಿ, ನಾಡಿಯಾ ಜಿಲ್ಲೆಯ ಕೃಷ್ಣನಗರದ ಕೊಟ್ವಾಲಿ ಪೊಲೀಸ್ ಠಾಣೆಯಲ್ಲಿ ಮಹುವಾ ಮೊಯಿತ್ರಾ ವಿರುದ್ಧ ದೂರು ದಾಖಲಿಸಿದೆ.

ಗ್ಯಾರಂಟಿ ಅನುಷ್ಠಾನಕ್ಕೆ ಮಂಡ್ಯ ಜಿಲ್ಲೆಗೆ 3200 ಕೋಟಿ ಹಣ ಬಿಡುಗಡೆ

ದೇಶದ ಎಲ್ಲಾ ರಾಜ್ಯಗಳಿಗೆ ಗ್ಯಾರಂಟಿ ಮಾದರಿ

ಮಂಡ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಪಕ್ಷದ ಹೈಕಮಾಂಡ್ ಚುನಾವಣೆ ಸಮಯದಲ್ಲಿ ನೀಡಿದ್ದ ಪಂಚಖಾತ್ರಿ ಯೋಜನೆಗಳನ್ನು ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದ್ದೇವೆ. ಕರ್ನಾಟಕದ ಗ್ಯಾರಂಟಿ ಯೋಜನೆಗಳು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಮಾದರಿ ಯೋಜನೆಗಳಾಗಿವೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ಹೇಳಿದರು.

ಮಂಡ್ಯ ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಮಂಡ್ಯ ಜಿಲ್ಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ತಳಸಮುದಾಯವರು ಸೇರಿದಂತೆ ಎಲ್ಲಾ ವರ್ಗದವರಿಗೆ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿ ತಲುಪುತ್ತಿವೆ. ಕರ್ನಾಟಕ ಸರಕಾರದ ಗ್ಯಾರಂಟಿ ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ನಮ್ಮ ಸರಕಾರದ ಈ ಮಹತ್ವಾಕಾಂಕ್ಷೆ ಯೋಜನೆಗಳ ಕುರಿತು ಫಲಾನುಭವಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಮತ್ತಷ್ಟು ಪರಿಣಾಮಕಾರಿಯಾಗಿ ಆಗಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರ ಮಾರ್ಗದರ್ಶನದಲ್ಲಿ ಪಂಚಗ್ಯಾರಂಟಿಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿವೆ. ಶಾಸಕರು ಹಾಗೂ ಜಿಲ್ಲಾ ಸಮಿತಿ ಸದಸ್ಯರು ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದು ನಮ್ಮ ನಡೆ ಫಲಾನುಭವಿಗಳ ಕಡೆಯತ್ತ ಸಾಗುತ್ತಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಮಂಡ್ಯ ಜಿಲ್ಲೆಯೊಂದಕ್ಕೆ 3200 ಕೋಟಿ ರು. ಹಣ ಬಿಡುಗಡೆ ಆಗಿದೆ. ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವ ವಿರೋಧ ಪಕ್ಷದ ನಾಯಕರು, ಕಾರ್ಯಕರ್ತರು ಸಹ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ದೇಶಕ್ಕೆ ಮಾದರಿಯಾಗಿರುವ ಈ ಯೋಜನೆಯ ಬಗ್ಗೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಪ್ರಚಾರ ಕೈಗೊಳ್ಳಬೇಕು ಎಂದು ಹೇಳಿದರು.

ಉತ್ತರಾಖಂಡದಲ್ಲಿ ನಿರಂತರ ಮಳೆಯ ಅಬ್ಬರ | ಹಳ್ಳಿಗಳ ಸಂಪರ್ಕ ಕಡಿತ

ಕೊಚ್ಚಿ ಹೋದ ಸಂಪರ್ಕ ಸೇತುವೆ

ಡೆಹ್ರಾಡೂನ್: ನಿರಂತರ ಮಳೆಯು ಉತ್ತರಾಖಂಡದಲ್ಲಿ ಭಾರಿ ನಾಶ-ನಷ್ಟವನ್ನು ಉಂಟು ಮಾಡುತ್ತಿದೆ. ಭಾರತ ಮತ್ತು ಚೀನಾ ನಡುವಿನ ಸಂಪರ್ಕ ಕೊಂಡಿಯಾದ ಪ್ರಮುಖ ಸೇತುವೆಯೊಂದು ಮಳೆಯ ಕಾರಣದಿಂದಾಗಿ ಕೊಚ್ಚಿ ಹೋಗಿದೆಯಲ್ಲದೆ ಹಲವು ಹೆದ್ದಾರಿಗಳು ಮುಚ್ಚಲ್ಪಟ್ಟಿವೆ.

ಚಮೋಲಿ ಜಿಲ್ಲೆಯ ತಮಕ್ ಬಳಿಯ ಜ್ಯೋತಿರ್ಮಠ-ಮಲಾರಿ ಹೆದ್ದಾರಿಯಲ್ಲಿರುವ ಪ್ರಮುಖ ಸೇತುವೆ ಕೊಚ್ಚಿ ಹೋಗಿದ್ದು, ಇದು ಭಾರತ ಮತ್ತು ಚೀನಾವನ್ನು ನೇರವಾಗಿ ಸಂಪರ್ಕಿಸುವ ಪ್ರಮುಖ ಸೇತುವೆಯಾಗಿದೆ. ಇದರಿಂದಾಗಿ ಹಲವಾರು ಹಳ್ಳಿಗಳಿಗೆ ಸಂಪರ್ಕ ಕಡಿತಗೊಂಡಂತಾಗಿದೆ. ತಮಕ್ ಬಳಿಯ ಜ್ಯೋತಿರ್ಮಠ- ಮಲಾರಿ ಹೆದ್ದಾರಿಯಲ್ಲಿರುವ ಪ್ರಮುಖ ಸೇತುವೆ ಭಾನುವಾರ ಮುಂಜಾನೆ 2 ಗಂಟೆಯ ಸುಮಾರಿಗೆ ತಮಕ್ ಹೊಳೆಯಲ್ಲಿನ ಉಬ್ಬರದಿಂದಾಗಿ ಕೊಚ್ಚಿ ಹೋಗಿದೆ. ಅಲಕಾನಂದದ ಉಪನದಿಯಾದ ಧೌಲಿಗಂಗಾ ದಡದ ಬಳಿ ಈ ಘಟನೆ ಸಂಭವಿಸಿದೆ.

ಯಾವುದೇ ರೀತಿಯ ಸಾವು ನೋವು ವರದಿಯಾಗದೇ ಇದ್ದರೂ ಇದರ ದುರಸ್ತಿಗೆ ಹೆಚ್ಚಿನ ಸಮಯ ತಗಲುವ ಸಾಧ್ಯತೆ ಇದೆ. ನೆರೆಯ ಬಿಆರ್‌ಒ ರಸ್ತೆಯ ಒಂದು ಭಾಗವೂ ಪ್ರವಾಹದಲ್ಲಿ ಕೊಚ್ಚಿಹೋಗಿದೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

ಭೂಕುಸಿತಗಳಿಂದಾಗಿ ಉತ್ತರಾಖಂಡದ ಹಲವಾರು ಪ್ರಮುಖ ಹೆದ್ದಾರಿಗಳು ಸಂಚಾರಕ್ಕೆ ಯೋಗ್ಯವಾಗಿಲ್ಲ. ಚಮೋಲಿ ಮತ್ತು ಜ್ಯೋತಿರ್ಮಠ ನಡುವಿನ ಭನಿರ್ಪಾನಿ ಮತ್ತು ಪಾಗ್ಲಾನಾಲದಲ್ಲಿ ಬದರಿನಾಥ ರಾಷ್ಟ್ರೀಯ ಹೆದ್ದಾರಿಯಲ್ಲಿ ತಡೆ ಉಂಟಾಗಿದ್ದು, ಭಾರಿ ಯಂತ್ರೋಪಕರಣಗಳನ್ನು ಬಳಸಿಕೊಂಡು ತುರ್ತು ತೆರವು ಕಾರ್ಯಾಚರಣೆಗಳನ್ನು ನಡೆಸಲಾಗಿದೆ.

ಕೇದಾರನಾಥವನ್ನು ಚಮೋಲಿಗೆ ಸಂಪರ್ಕಿಸುವ ಕುಂಡ್-ಚಮೋಲಿ ರಾಷ್ಟ್ರೀಯ ಹೆದ್ದಾರಿಯ ಬೈರಾಗನ ಬಳಿ ಭೂಕುಸಿತದ ನಂತರ ರಸ್ತೆಯನ್ನು ಮುಚ್ಚಲಾಗಿದೆ. ಯಮುನೋತ್ರಿ ಧಾಮಕ್ಕೆ ಹೋಗುವ ತೀರ್ಥಯಾತ್ರೆಯ ಮಾರ್ಗವೂ ಅಪಾಯದಲ್ಲಿದೆ. ಉತ್ತರಕಾಶಿಯಲ್ಲಿ, ಯಮುನಾ ನದಿಯ ಏರುತ್ತಿರುವ ನೀರು ಶ್ಯಾನಾ ಚಟ್ಟಿಯಲ್ಲಿರುವ ಸೇತುವೆಯ ಮೇಲೆ ಹರಿಯುತ್ತಿರುವ ಕಾರಣದಿಂದ ವಾಹನ ಸಂಚಾರ ಕಡಿತಗೊಂಡಿದೆ.

ರುದ್ರಪ್ರಯಾಗ ಮತ್ತು ಚಮೋಲಿ ಜಿಲ್ಲೆಯಲ್ಲಿ ಮಳೆಯಿಂದ ಅತೀ ಹೆಚ್ಚು ಹಾನಿಯಾಗಿದೆ. ದೇವಲ್‌ನ ಮೊಪಾಟಾ ಪ್ರದೇಶದಲ್ಲಿ ಉಂಟಾದ ಮೇಘಸ್ಫೋಟದಿಂದ ಇಬ್ಬರು ನಾಪತ್ತೆಯಾಗಿದ್ದಾರೆ. ದನದ ಕೊಟ್ಟಿಗೆಯೊಂದು ನಾಶವಾಗಿದ್ದು, ಅದರಡಿಯಲ್ಲಿ 15-20 ಪ್ರಾಣಿಗಳು ಹೂತು ಹೋಗಿವೆ ಎನ್ನಲಾಗಿದೆ.

ರುದ್ರಪ್ರಯಾಗದಲ್ಲಿ ಅಲಕಾನಂದ ನದಿ ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದ್ದು, ಹಲವು ಮನೆಗಳು ಮುಳುಗಡೆಯಾಗಿವೆ. ಸ್ಥಳೀಯರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಪಟ್ಟಣದ ಪವಿತ್ರ ಹನುಮಾನ್ ದೇವಾಲಯವು ಕೂಡ ನೀರಿನಲ್ಲಿ ಮುಳುಗಡೆಯಾಗಿದೆ. ಉತ್ತರಾಖಂಡ ರಾಜ್ಯದಲ್ಲಿ ಈ ವರೆಗೆ ಮಳೆಯಿಂದಾಗಿ ಐದು ಮಂದಿ ಸಾವನ್ನಪ್ಪಿದ್ದು, 11 ಜನರು ನಾಪತ್ತೆಯಾಗಿದ್ದಾರೆ.

ವಿಶ್ವವಾಣಿ ಪುಸ್ತಕ

ವಿಶ್ವವಾಣಿ ಪುಸ್ತಕ ಪ್ರಕಾಶನದ
ಹೊಸ ಕೃತಿ



~~₹250~~
₹225

10% ಕಡಿತ
QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್‌ನೊಂದಿಗೆ
ನಿಮ್ಮ ವಿಳಾಸವನ್ನು ಕೆಳಗಿನ ನಂಬರ್‌ಗೆ ಕಳುಹಿಸಿ.
ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ.
63623 93966
amazon ನಲ್ಲೂ ಈಗ ಲಭ್ಯ
ಎಲ್ಲ ಪುಸ್ತಕ ಮಳಿಗೆಗಳಲ್ಲಿ ಲಭ್ಯ

ವಿಶೇಷ

ಪುಸ್ತಕ ಸಿರಿ ಬಂದೀತು ನಿಮ್ಮೂರಿಗೆ, ನಿಮ್ಮ ಮನೆಗೆ...

ಕನ್ನಡಿಗರ ಆರೋಗ್ಯಕರ ಹವ್ಯಾಸಗಳಲ್ಲಿ 'ಪುಸ್ತಕ ಪ್ರೀತಿ'ಯೂ ಒಂದು. ಉತ್ತಮ ಹೂರಣವನ್ನು ಹೊಂದಿರುವ ಪುಸ್ತಕಗಳನ್ನು ತೆರೆದಬಾಹುಗಳಿಂದ ಸ್ವಾಗತಿಸಿ ಮಡಿಲು ತುಂಬಿಸಿಕೊಳ್ಳುವ ಸಹೃದಯತೆ ಕನ್ನಡ ಬಂಧುಗಳಲ್ಲಿ ಕೆನೆಗಟ್ಟಿದೆ. 'ವಿಶ್ವವಾಣಿ ಪುಸ್ತಕ' ಪ್ರಕಾಶನದ ವತಿಯಿಂದ ಪ್ರಕಟವಾಗಿರುವ ವೈವಿಧ್ಯಮಯ ಕೃತಿಗಳಿಗೆ ಇದುವರೆಗೂ ದಕ್ಕಿರುವ ಪ್ರೋತ್ಸಾಹವೇ ಇದಕ್ಕೆ ಸಾಕ್ಷಿ. ಈ ಸಲ, ಪ್ರಕಾಶನದ ಮೂರು ಪುಸ್ತಕಗಳ ಕುರಿತು 'ವಿಶ್ವವಾಣಿ' ಸಂಪಾದಕ ವಿಶ್ವೇಶ್ವರ ಭಟ್ಟರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಇಲ್ಲಿ ನೀಡಲಾಗಿದೆ. ಜತೆಗೆ, ಶಿರಸಿಯ 'ವಿಕಿ ಬುಕ್ಸ್' ಪ್ರಕಾಶನವು ಹೊರತಂದಿರುವ ಮತ್ತು 'ವಿಶ್ವವಾಣಿ ಪುಸ್ತಕ' ಪ್ರಕಾಶನದ ವತಿಯಿಂದ ಮಾರಾಟಕ್ಕೆ ಲಭ್ಯವಿರುವ 'ವಿಶ್ವತೋಮುಖ' ಎಂಬ ಕೃತಿಯ ಕುರಿತು ರಮಣಶ್ರೀ ಸಮೂಹ ಸಂಸ್ಥೆಗಳ ಮಾಲೀಕರಾದ ಎಸ್.ಷಡಕ್ಷರಿಯವರು ವ್ಯಕ್ತಪಡಿಸಿರುವ ಮೆಚ್ಚುಗೆಯ ಮಾತುಗಳೂ ಇಲ್ಲಿವೆ. 'ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಬರಲಾಗಲಿಲ್ಲ, ಪುಸ್ತಕ ಮಳಿಗೆಗೆ ತೆರಳಿ ಖರೀದಿಸಲು ಸಮಯವಿಲ್ಲ' ಎನ್ನುವವರೂ ಇಲ್ಲಿ ನಿರಾಶೆಗೊಳ್ಳುವ ಅಗತ್ಯವಿಲ್ಲ. ಇಂಥವರ ಮನೆಬಾಗಿಲಿಗೇ ಪುಸ್ತಕಗಳನ್ನು ಕಳಿಸಲು 'ವಿಶ್ವವಾಣಿ ಪ್ರಕಾಶನ' ಸಿದ್ಧ ಮತ್ತು ಬದ್ಧ...

- ಕೃತಿ: ಸಂಪಾದಕರ ಸದ್ಯಶೋಧನೆ (ಭಾಗ-5)
- ಲೇಖಕರು: ವಿಶ್ವೇಶ್ವರ ಭಟ್

ಬೆಲೆ ₹250



ಇವು ನನ್ನಿಂದ ನಿರಾಯಾಸವಾಗಿ ಬರೆಯಿಸಿಕೊಂಡ ಬರಹಗಳು. ಇವನ್ನು ನಾನು ಒಂದು ಅಂಕಣವೆಂದು ಚೌಕಟ್ಟು ಹಾಕಿಕೊಂಡು ಬರೆದಿಲ್ಲ. ದೈನಂದಿನ ಅಂಕಣ ಬರೆಯುವಾಗ ಕೆಲವೊಮ್ಮೆ ವಿಷಯಕ್ಕಾಗಿ ತಿಣುಕಾಡುವುದುಂಟು. ಆದರೆ 'ಸಂಪಾದಕರ ಸದ್ಯಶೋಧನೆ' ಬರೆಯುವಾಗ ನನಗೆ ಎಂದೂ ಅಂಥ ಅನುಭವ ಆಗಲಿಲ್ಲ. ಯಾವ ವಿಷಯವನ್ನಾದರೂ ಇಟ್ಟು 'ಸದ್ಯಶೋಧನೆ' ತುರುಬು ಕಟ್ಟಬಹುದು. ಇಂಥ ವಿಷಯ ಬೇಡ ಎಂಬುದಿಲ್ಲ. ಇದೊಂಥರ ತಿರುಪತಿ ಹುಂಡಿಯಂತೆ. ಅಷ್ಟೊಂದು ವೈವಿಧ್ಯಮಯ. ಇಲ್ಲಿ ಭಕ್ತಿಯಷ್ಟೇ ಮುಖ್ಯ. 'ಸದ್ಯಶೋಧನೆ' ಯಾವ ಪ್ರಕಾರಕ್ಕೆ ಸೇರುತ್ತದೆ ಅಂತ ಕೇಳಿದರೆ ನನಗೆ ಗೊತ್ತಿಲ್ಲ. ಅದನ್ನು ವಿವರಿಸುವುದೂ ಕಷ್ಟ. ಆದರೆ ಇಲ್ಲಿನ ಬರಹಗಳು ಪಟ್ಟಾಗಿ ಓದಿಸಿಕೊಂಡು ಹೋಗುತ್ತವೆ ಎಂದು ಹೇಳಬಹುದು. ಪ್ರತಿ ಬರಹದಲ್ಲೂ ಆಸಕ್ತಿಯುತ ವಿಷಯ, ಪ್ರಸಂಗ, ವಿಚಾರಗಳು ಸೆಳೆಯದೇ ಹೋಗುವುದಿಲ್ಲ. ಅದೇ ಮುಂದಿನ ಬರಹವನ್ನು ಓದುವಂತೆ ಕರೆದುಕೊಂಡು ಹೋಗುತ್ತದೆ. ಇಲ್ಲಿ ವಿಷಯದ ಹೊರೆಯ ಪ್ರಶ್ನೆಯೇ ಇಲ್ಲ. ಕಾರಣ ಅದರ ಗಾತ್ರ. ಹೀಗಾಗಿ ಈ ಅಂಕಣಸವಾರಿ ನನಗೂ ಸಲೀಸು. ಆದರೆ ಈ ಅಂಕಣಕ್ಕೆ ನಿತ್ಯವೂ ತಂದು ಸುರಿಯುವುದು ಸುಲಭವಲ್ಲ. ನಾಳೆಗೆ ಏನು ಎಂಬ ಪ್ರಶ್ನೆ ಇಂದೇ ಕಾಡುವಂತೆ ಮಾಡುತ್ತದೆ. ಇದು ನನ್ನದೊಂದೇ ಪ್ರಶ್ನೆಯಲ್ಲ. ನಾಳೆಯ 'ಸದ್ಯಶೋಧನೆ' ಏನಿರಬಹುದು ಎಂಬುದು ಓದುಗನ ಪ್ರಶ್ನೆಯೂ ಹೌದು. ನನಗೆ ಬರಿದಾಗುವುದು ಮತ್ತು ಭರ್ತಿಯಾಗುವುದು ಸಾಧ್ಯವಾಗುವುದಾದರೆ ಈ 'ಸದ್ಯಶೋಧನೆ'ಯಲ್ಲಿ!

- ಕೃತಿ: ಸಂಪಾದಕರ ಸದ್ಯಶೋಧನೆ (ಭಾಗ-3)
- ಲೇಖಕರು: ವಿಶ್ವೇಶ್ವರ ಭಟ್

ಬೆಲೆ ₹250

ಪ್ರತಿದಿನ ಅಂಕಣ ಬರೆಯುವುದೆಂದರೆ ಒಂದು ಶಿಸ್ತಿಗೆ ಸಜ್ಜಾಗುವುದು ಮತ್ತು ಅಂಥ ಶಿಸ್ತಿಗೆ ನಮ್ಮನ್ನು ಗುರಿಪಡಿಸಿಕೊಳ್ಳುವುದು. ಹೀಗಾಗಿ ನನ್ನ ಜಗತ್ತು ಎಲ್ಲಿಯೇ ಏಳಲಿ, 'ಸದ್ಯಶೋಧನೆ'ಯಲ್ಲಿಯೇ ಮುಳುಗುತ್ತದೆ. ಆದ್ದರಿಂದ ಅದನ್ನು ಬಿಟ್ಟು ನನ್ನ ದಿನವಿಲ್ಲ. 'ಶೆಟ್ಟಿ ಜತೆಯಲ್ಲಿ ಪಟ್ಟಣ ಕಟ್ಟಿಕೊಂಡು ಹೋದ' ಎನ್ನುವಂತೆ, ನಾನು ಎಲ್ಲಿಯೇ ಹೋಗಲಿ, ಹೋಗುವಲ್ಲೆಲ್ಲ 'ಸದ್ಯಶೋಧನೆ'ಯನ್ನೂ ಕಟ್ಟಿಕೊಂಡೇ ಹೋಗುತ್ತೇನೆ. ಕಳೆದ ನಾಲ್ಕಾರು ವರ್ಷಗಳಿಂದ ಅದನ್ನು ಬಿಟ್ಟು ನಾನಿಲ್ಲ. ಸ್ಕಾಟ್ಲೆಂಡಿನ ತುತ್ತತುದಿಯಿಂದ, ಮಂಗೋಲಿಯಾದ ಗಡಿಯಿಂದ, ಕತಾರ್‌ನ ಫುಟ್‌ಬಾಲ್ ಮೈದಾನದಿಂದ, ಸೌದಿ ಅರೇಬಿಯಾದ ದಟ್ಟ ಮರುಭೂಮಿಯಿಂದ ಈ ಅಂಕಣಕ್ಕೆ ಬರೆದಿದ್ದೇನೆ. ಹೀಗಾಗಿ, 'ಸದ್ಯಶೋಧನೆ' ನನ್ನ ನಿರಂತರ ಸಾಥಿ, ಶೋಧ. ಏನೂ ಬಯಸದ ಓದುಗನಿಗೆ, ಕೊನೆಯಲ್ಲಿ ಹೋಗುವಾಗ, ಏನನ್ನೋ ಕೈಯಲ್ಲಿಟ್ಟು ಪುಟ್ಟ ಅಚ್ಚರಿಯ ಕಚಗುಳಿ ಕೊಡುವ ಸಣ್ಣ ಇರಾದೆ ಬಿಟ್ಟು, ಇಲ್ಲಿನ ಬರಹಗಳಿಗೆ ಬೇರೇನೂ ಇಲ್ಲದ ನಿರಾಭರಣ ಭಾವ! ಹಾಗೆ ಇಲ್ಲಿನ ಬರಹಗಳು ಸದಾ ಬದುಕನ್ನು ಸಡಿಲಿಸಿಕೊಳ್ಳುತ್ತಾ, ಹೊಸ ಪಾತಳಿಯನ್ನು ಕಂಡುಕೊಳ್ಳುತ್ತಾ, ಹಿಗ್ಗಿಸಿಕೊಳ್ಳುತ್ತಾ ಸರಾಗವಾಗಿ ಹರಿಯವ ಅಜ್ಞಾತ ನದಿಯಿದ್ದಂತೆ. 'ಕರಗಿ, ಕರಗಿ ನೀರಾದೆ ನಾನು' ಎಂಬುದಷ್ಟೇ ನನ್ನಲ್ಲಿ ಉಳಿಯುವ ಭಾವ.

- ಕೃತಿ: ಶಿಶಿರಕಾಲ
- ಲೇಖಕರು: ಶಿಶಿರ್ ಹೆಗಡೆ

ಬೆಲೆ ₹250

ಕಳೆದ ಕೆಲವು ವರ್ಷಗಳಿಂದ ಅಮೆರಿಕದ ನೆಲದಲ್ಲಿ ನೆಲೆಸಿ, ಕನ್ನಡ ಅಕ್ಷರ ಲೋಕದೊಳಗೆ ವಿಹರಿಸುತ್ತಿರುವ ಶಿಶಿರ್ ಹೆಗಡೆ, ನಿಸ್ಸಂದೇಹವಾಗಿ ಈ ತಲೆಮಾರಿನ ಗಮನಿಸಬೇಕಾದ ಲೇಖಕರು ಮತ್ತು ಅಂಕಣಕಾರರು. ಅಮೆರಿಕದ ಯಾವುದೋ ವಿಷಯ, ವಿದ್ಯಮಾನ, ವಿಚಾರವನ್ನು ಕನ್ನಡದ ಪರಿಸ್ಥಿತಿಗೆ ಬೆಸೆಯುವ ಅಥವಾ ರಿಲೇಟ್ ಮಾಡುವ, ಆ ಮೂಲಕ ನಮಗೂ ಪ್ರಸ್ತುತವಾಗಿಸುವ 'ಬಹುಆಯಾಮಕರಣ' ಅವರ ಅಂಕಣಗಳ ಮೂಲಧಾತು ಎಂದು ಎಷ್ಟೋ ಸಲ ನನಗೆ ಅನಿಸಿದೆ. ಅದಕ್ಕೆ ಅವರು ಆಯ್ದುಕೊಳ್ಳುವ ವಿಷಯ ವೈವಿಧ್ಯವೇ ನಿದರ್ಶನ. ಮೆಕ್ಸಿಕೋ ಕಾಡಿನಲ್ಲಿ ಪಾತರಗಿತ್ತಿಯೋ, ಜೇನುಹುಳವೋ ಸತ್ತರೆ, ನಮ್ಮ ಮನೆಯ ಅಂಗಳದ ಹೂವು ಹಣ್ಣಾಗದೇ ಬಾಡಿ, ಬಿದ್ದುಹೋಗುವ ಅಂತರ್ಗಾಮಿತನ ಅವರ ಬರಹದ ಸಹಜ ಸೊಗಸುಗಾರಿಕೆ. ವಾರ ವಾರವೂ ಹೊಸ ವಿಷಯಕ್ಕೆ ಅಣಿಯಾಗುತ್ತ, ಓದುಗರನ್ನೂ ಕುತೂಹಲಕ್ಕೆ ಅಣಿಗೊಳಿಸುವ ಅಂಕಣಕಾರನ ಕಸುಬುಗಾರಿಕೆ ಶಿಶಿರ್ ಹೆಗಡೆಯವರಿಗೆ ಬಹುಬೇಗ ಒಲಿದಿರುವುದು ಸ್ಪಷ್ಟ. ಪರಕೀಯ ನೆಲದಲ್ಲಿ ಕುಳಿತು, ತಾಯಿಬೇರಿನ ನೆಲ-ಸಂಸ್ಕೃತಿಯ ಓದುಗರಿಗೆ ಪ್ರಸ್ತುತವಾಗುವುದು ಮತ್ತು ಆ ಪಯಣದಲ್ಲಿ ಓದುಗರನ್ನೂ ತನ್ನ ಜತೆ ಕರೆದುಕೊಂಡು ಹೋಗುವುದು ಅಂಕಣಕಾರನ ಜಾಲಿರೈಡ್! ಈ ಕೆಲಸವನ್ನು ಶಿಶಿರ್ ಹೆಗಡೆ ಶ್ರದ್ಧೆಯಿಂದ ಮಾಡುತ್ತಿದ್ದಾರೆ, ಅನುಭವಿಸುತ್ತಿದ್ದಾರೆ. ಈ ಕೃತಿಯಲ್ಲಿ ಅವರು ಭರಪೂರ ಭರವಸೆಯನ್ನಂತೂ ಮೂಡಿಸಿದ್ದಾರೆ.

- ಕೃತಿ: ವಿಶ್ವತೋಮುಖ
- ಲೇಖಕರು: ಕಿರಣ್ ಉಪಾಧ್ಯಾಯ

ಬೆಲೆ ₹350

ಈ ಪುಸ್ತಕದ ಕುರಿತಾಗಿ, ರಮಣಶ್ರೀ ಸಮೂಹ ಸಂಸ್ಥೆಗಳ ಮುಖ್ಯಸ್ಥರಾದ ಎಸ್.ಷಡಕ್ಷರಿಯವರು ವ್ಯಕ್ತಪಡಿಸಿರುವ ಅಭಿಪ್ರಾಯ ಹೀಗಿದೆ:

ಶಿರಸಿಯ 'ವಿಕಿ ಬುಕ್ಸ್' ಪ್ರಕಾಶನವು ಪ್ರಕಟಿಸಿರುವ 'ವಿಶ್ವತೋಮುಖ' ಬಹಳ ಪ್ರೀತಿಯಿಂದ ಬರೆದ ಅಪರೂಪದ ಕೃತಿ. ಬರಹಗಾರ ಮಿತ್ರ ಕಿರಣ್ ಉಪಾಧ್ಯಾಯ ಈ ಪುಸ್ತಕ ಬರೆದಿರುವುದು, ನನ್ನ ಆತ್ಮೀಯ ಸ್ನೇಹಿತ, ಅಣ್ಣ, ಗುರು, ಅಂಕಣಬ್ರಹ್ಮ ಶ್ರೀ ವಿಶ್ವೇಶ್ವರ ಭಟ್ ಎಂಬ ಸ್ಫೂರ್ತಿಯ ಕುರಿತು. ಇದನ್ನು ಓದುತ್ತಿದ್ದರೆ, ಹೃದಯಾಂತರಾಳದಲ್ಲಿ ಮಥಿಸಿ ಬರೆದಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಕಿರಣ್ ಉಪಾಧ್ಯಾಯ ಈ ಪುಸ್ತಕದಲ್ಲಿ ವಿಶ್ವೇಶ್ವರ ಭಟ್ಟರ ಹುಟ್ಟೂರಾದ ಮೂರೂರಿನಿಂದ ಹಿಡಿದು ಅವರ ಈಗಿನ ಕರ್ಮಭೂಮಿಯಾದ ಬೆಂಗಳೂರಿನವರೆಗಿನ ಭಟ್ಟರ ಸುದೀರ್ಘ ಪಯಣವನ್ನು ದಾಖಲಿಸಿದ್ದಾರೆ. ಭಟ್ಟರ ಕುರಿತು ಬರೆದ ಬರಹಗಳು ಎಷ್ಟು ಚೆನ್ನಾಗಿವೆ ಎಂದರೆ, ನೀವು ಅವುಗಳನ್ನು ಓದಬೇಕಿಲ್ಲ, ಅವೇ ಓದಿಸಿಕೊಂಡು ಹೋಗುತ್ತವೆ. ಈ ಪುಸ್ತಕ ವಿಶ್ವೇಶ್ವರ ಭಟ್ಟರ ಬದುಕಿನ ಸಮಗ್ರ ಪರಿಚಯವನ್ನು ಮಾಡಿಕೊಡುತ್ತದೆ. ನಾನೂ ಭಟ್ಟರನ್ನು ಕಳೆದ ಇಪ್ಪತ್ತೈದು ವರ್ಷಗಳಿಂದ ಬಲ್ಲೆ. ಆದರೆ ಈ ಪುಸ್ತಕ ಓದಿದ ಮೇಲೆ ಅವರ ಪರಿಚಯ ಇನ್ನೂ ಹೆಚ್ಚಾದಂತೆ ಭಾಸವಾಗುತ್ತದೆ. ವಿಶ್ವೇಶ್ವರ ಭಟ್ಟರ ವ್ಯಕ್ತಿತ್ವದ, ಹವ್ಯಾಸದ, ಸಾಧನೆಯ ಸಂಪೂರ್ಣ ಪರಿಚಯ ಆಗುತ್ತದೆ. ಬರಹದ ಜತೆಗೆ ಆಯ್ದ ಭಾವಚಿತ್ರಗಳು, ಅವರ ದಾರಿದೀಪೋಕ್ತಿಗಳು, ವಕ್ರತುಂಡೋಕ್ತಿಗಳು, ಸದ್ಯಶೋಧನೆಯ ಲೇಖನಗಳು ಮತ್ತು ಭಟ್ಟರ್‌ಸ್ಕಾಚ್ ಪ್ರಶ್ನೋತ್ತರಗಳು ಪುಸ್ತಕದ ಮೆರುಗನ್ನು ಹೆಚ್ಚಿಸಿವೆ. ವಿಶ್ವೇಶ್ವರ ಭಟ್ಟರಿಗೂ, ಅವರ ಕುರಿತು ಇಂಥ ಅಪರೂಪದ ಪುಸ್ತಕ ಬರೆದ ಕಿರಣ್ ಉಪಾಧ್ಯಾಯ ಅವರಿಗೂ ಅಭಿನಂದನೆಗಳು.

ನಿಮ್ಮ ಮನೆ ಬಾಗಿಲಿಗೆ ನಮ್ಮ ಖರ್ಚಿನಲ್ಲಿ ಪುಸ್ತಕ ಕಳಿಸುತ್ತೇವೆ

ಪುಸ್ತಕವನ್ನು ಖರೀದಿಸ ಬಯಸುವವರು ಫೋನ್ ಪೇ ಮಾಡಿದ ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರ್‌ಗೆ ಶೇರ್ ಮಾಡಿ.

6362393966

ಕಲಬುರಗಿ ನಗರ ಪಾಲಿಕೆ ನಾರಿಶಕ್ತಿ ದರ್ಬಾರ್

- ಮೇಯರ್ ಆಗಿ ವರ್ಷಾ ಜಾನೆ, ಉಪಮೇಯರ್ ತೃಪ್ತಿ ಅಲ್ಲದ್
- ವಿಪಕ್ಷ ನಾಯಕಿಯಾಗಿ ಶೋಭಾ ಗುರುರಾಜ್ ದೇಸಾಯಿ ಆಯ್ಕೆ
- 'ಮಹಿಳಾ ಶಕ್ತಿ'ಗೆ ಜೈ ಎಂದ ಕಾಂಗ್ರೆಸ್- ಬಿಜೆಪಿ ಉಭಯ ಪಕ್ಷಗಳು
- ಜನರ ಧ್ವನಿಯಾಗಿ ಕೆಲಸ ಮಾಡುವರೇ ಎಂದು ಗರಿಗೆದರಿದ ನಿರೀಕ್ಷೆ

ಜಿಲ್ಲಾ ನೋಟ

ದೇವೇಂದ್ರ ಜಾಡಿ

ಕಲಬುರಗಿ: ಕಲ್ಯಾಣ ಕರ್ನಾಟಕದ ಮಹಾನಗರದ ರಾಜಕೀಯದಲ್ಲಿ ಅಪರೂಪದ ಅಪೂರ್ವ ಸಂಗಮ ಸೃಷ್ಟಿಯಾದಂತಿದೆ. ಇಲ್ಲಿನ ಕಲಬುರಗಿ ಮಹಾನಗರ ಪಾಲಿಕೆಯ ಪ್ರಮುಖ ಸ್ಥಾನಗಳನ್ನೆಲ್ಲ ಮಹಿಳೆಯರು ಅಲಂಕರಿಸಿದ್ದು, ಇದೆ ಮೊದಲ ಬಾರಿಗೆ ಮಹಿಳೆಯೊಬ್ಬರು ವಿರೋಧ ಪಕ್ಷದ ನಾಯಕಿಯಾಗಿ ಆಯ್ಕೆ ಆಗುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ...!

ಒಗ್ಗಟ್ಟಿನ ಮಂತ್ರ ಜಪಿಸಿದ ಬಿಜೆಪಿ ನಾಯಕರು

ಕಲಬುರಗಿ ಮಹಾನಗರ ಪಾಲಿಕೆಯ ಅಭಿವೃದ್ಧಿ ಕುಂಠಿತಗೊಂಡಿರುವುದರ ಬಗ್ಗೆ ಬಿಜೆಪಿ ನಾಯಕರು ಒಗ್ಗಟ್ಟಿನ ಸಂದೇಶ ಸಾರಿದರು. ಮಹಾನಗರ ಘಟಕದ ಅಧ್ಯಕ್ಷ ಚಂದು ಪಾಟೀಲ ಅವರು ಎಲ್ಲ ಪಕ್ಷಗಳಿಗೂ ಸಮಾನ ಅನುದಾನ ನೀಡಿ, ಆಡಳಿತ ಮತ್ತು ವಿರೋಧ ಪಕ್ಷ ಒಟ್ಟಿಗೆ ಸೇರಿ ಕೆಲಸ ಮಾಡೋಣ ಎಂದು ಕರೆ ನೀಡಿದರೆ, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಅವರು ನಗರದ ದುಸ್ಥಿತಿ ಉಲ್ಲೇಖಿಸಿ, ಜನರ ಧ್ವನಿಯಾಗಿ ನಿಲ್ಲುವುದು ನಮ್ಮ ಕರ್ತವ್ಯ ಎಂದು ಹೇಳಿದರು. ಉಭಯ ನಾಯಕರು ಮಹಾ ನಗರದ ಅಭಿವೃದ್ಧಿಗಾಗಿ ಒಗ್ಗಟ್ಟಿನ ಮಂತ್ರ ಜಪಿಸಿದರು.

ಬಿಜೆಪಿ ಪಕ್ಷದ ವಾರ್ಡ್ ನಂ. 52ರ ಸದಸ್ಯೆ ಶೋಭಾ ಗುರುರಾಜ್ ದೇಸಾಯಿ ಅವರು ಕಲಬುರಗಿ ಮಹಾನಗರ ಪಾಲಿಕೆ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಪ್ರತಿಪಕ್ಷದ ನಾಯಕಿ ಸ್ಥಾನ ಅಲಂಕರಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈಗಾಗೇ, ಮೇಯರ್ ಸ್ಥಾನಕ್ಕೆ ವರ್ಷಾ ಜಾನೆ, ಉಪ ಮೇಯರ್ ಸ್ಥಾನಕ್ಕೆ ತೃಪ್ತಿ ಅಲ್ಲದ್ ಆಯ್ಕೆಯಾಗಿದ್ದಾರೆ. ಇದೀಗ ವಿರೋಧ ಪಕ್ಷಕ್ಕೂ ಮಹಿಳೆಯನ್ನೇ ಆಯ್ಕೆ ಮಾಡುವ ಮೂಲಕ ಪಾಲಿಕೆಯಲ್ಲಿ ಮಹಿಳಾ ದರ್ಬಾರ್ ಪ್ರಾರಂಭವಾಗಿದೆ.

ಮಹಿಳಾ ಪ್ರಾತಿನಿಧ್ಯಕ್ಕೆ ಜೈ

ಮಹಾನಗರ ಪಾಲಿಕೆಯ ಇತಿಹಾಸದಲ್ಲೇ ಮೊಟ್ಟ ಮೊದಲ ಬಾರಿಗೆ ವಿರೋಧ ಪಕ್ಷದ ನಾಯಕಿಯಾಗಿ ಮಹಿಳೆ ಆಯ್ಕೆಯಾಗಿರುವುದು ವಿಶೇಷವಾಗಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ರಾಷ್ಟ್ರೀಯ ಪಕ್ಷಗಳು ಮಹಿಳಾ ಪ್ರಾತಿನಿಧ್ಯಕ್ಕೆ ಬೆಂಬಲ ನೀಡಿ ನಗರದಲ್ಲಿ ವಿಭಿನ್ನ ರಾಜಕೀಯ ಸಂದೇಶ ನೀಡಿವೆ. ಮೇಯರ್, ಉಪ ಮೇಯರ್ ಹಾಗೂ ಪ್ರತಿಪಕ್ಷದ ನಾಯಕಿ ಸ್ಥಾನದಲ್ಲಿ ಮಹಿಳೆಯರೇ ಇರುವುದು ಮಹಿಳಾ ಸಬಲೀಕರಣದ ಚಳವಳಿಗೆ ಹೊಸ ಹೆಜ್ಜೆಯಾಗಲಿದೆ ಎನ್ನಲಾಗುತ್ತಿದೆ.

ವಿಪಕ್ಷ ನಾಯಕಿ ಮುಂದೆ ಸವಾಲು

ಪಾಲಿಕೆಯ ಅಧಿಕಾರದ ಚುಕ್ಕಾಣಿ ಮಹಿಳೆಯರ ಕೈಯಲ್ಲಿ ಬಂದಿದ್ದರೂ, ಸಮಸ್ಯೆಗಳು ಮತ್ತು ಸವಾಲುಗಳು ಅಸಂಖ್ಯಾತವಾಗಿವೆ. ನಗರದಲ್ಲಿ ಕುಸಿದ ಮೂಲಸೌಕರ್ಯ, ಕುಡಿಯುವ ನೀರಿನ ಕೊರತೆ, ರಸ್ತೆ-ಒಳಚರಂಡಿ ಸಮಸ್ಯೆಗಳು, ಅನುದಾನದ ಅಸಮಾನ ಹಂಚಿಕೆ ಸೇರಿ ಹಲವಾರು ಜವಾಬ್ದಾರಿ ಆಡಳಿತಕ್ಕಿಂತಲೂ ಹೆಚ್ಚಾಗಿ ಈಗ ವಿರೋಧ ಪಕ್ಷದ ನಾಯಕಿ ಶೋಭಾ ದೇಸಾಯಿ ಅವರ ಮೇಲಿದೆ. ಅವರು ನಗರದ ಜನರ ಧ್ವನಿಯಾಗಿ ಸರಕಾರದ ಎದುರು ಬಲವಾಗಿ ನಿಲ್ಲಬಹುದೇ ಎನ್ನುವುದು ಪ್ರಮುಖ ಪ್ರಶ್ನೆಯಾಗಿದೆ.

ಸಮನ್ವಯದ ಸಮಸ್ಯೆ

ಮಹಿಳಾ ನಾಯಕತ್ವದ ಆಡಳಿತದಲ್ಲಿ ಪರಸ್ಪರ ಸಮನ್ವಯವೇ ಮುಖ್ಯವಾಗಿದೆ. ಈಗ ಆಡಳಿತ ನಡೆಸುವವರು ಮತ್ತು ಆಡಳಿತಕ್ಕೆ ಪ್ರಶ್ನೆ ಮಾಡುವವರೂ ಇಬ್ಬರು ಮಹಿಳೆಯರೇ ಆಗಿದ್ದಾರೆ. ಇದರಿಂದ ಪರಸ್ಪರ ಸಂಘರ್ಷಕ್ಕಿಂತ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಬೇಕಾಗಿದೆ.

ಇತ್ತ, ಪಾಲಿಕೆ ಆಯುಕ್ತರ ಪಾತ್ರವೂ ನಿರ್ಣಾಯಕ ವಾಗಿದ್ದು, ಮಹಿಳಾ ನಾಯಕತ್ವಕ್ಕೆ ಸಮರ್ಥ ಬೆಂಬಲ ನೀಡುವ ಮೂಲಕ ಅವರು ನಗರದ ನಿರ್ವಹಣೆಯಲ್ಲಿ ಸಮತೋಲನ ಸಾಧಿಸಬಹುದೇ ಎನ್ನುವುದು ಗಮನಾರ್ಹ ವಿಷಯ.

ಹೊಸ ಅಧ್ಯಾಯದ ನಿರೀಕ್ಷೆ

ಒಟ್ಟಿನಲ್ಲಿ, ಕಲಬುರಗಿ ಮಹಾನಗರ ಪಾಲಿಕೆಯ ಆಡಳಿತದಲ್ಲಿ ಮಹಿಳೆಯರ ದರ್ಬಾರ್ ಶುರುವಾಗಿದ್ದು, ನಾರಿಶಕ್ತಿಯ ನಾಯಕತ್ವದ ನಿಜವಾದ ಪರೀಕ್ಷೆ ಆರಂಭವಾಗಿದೆ. ಜನಸಾಮಾನ್ಯರ ಮನಸ್ಸಿನಲ್ಲಿ ಈಗ ಸ್ಪಷ್ಟವಾದ ನಿರೀಕ್ಷೆ ಮೂಡಿದೆ. ಮಹಿಳೆಯರು ಬಂದಿದ್ದಾರೆಂದರೆ ಬದಲಾವಣೆ ಆಗಬೇಕು. ರಾಜಕೀಯದ ಅಡ್ಡಿ-ಆತಂಕಗಳನ್ನು ಮೀರಿ, ನೇರ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿಕೊಳ್ಳುವ ನಾಯಕತ್ವ ಬೇಕೆಂದು ಜನತೆ ಬಯಸುತ್ತಿದೆ.

ಮಾದರಿ ಆಡಳಿತ ಸಾಧ್ಯತೆ

ಇಷ್ಟು ವರ್ಷ ಗಂಡಸರ ಕೈಯಲ್ಲಿ ಆಡಳಿತ ಇದ್ದರೂ ಸಾಕಷ್ಟು ಸಮಸ್ಯೆಗಳು ಪರಿಹಾರ ಕಾಣದೇ ಬಾಕಿ ಉಳಿದಿವೆ. ಈಗ ಮಹಿಳೆಯರು ಅಧಿಕಾರಕ್ಕೆ ಬಂದಿದ್ದಾರೆ. ನಾವು ಬದಲಾವಣೆ ನೋಡಬೇಕು ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಾವುದೇ ಕಳಂಕ ಇಲ್ಲದೆ ಶುದ್ಧ ಭ್ರಷ್ಟ ರಹಿತ ಆಡಳಿತ ನಾರಿಮಣಿಯರಿಂದ ಸಾಧ್ಯವಿದೆ ಎನ್ನುತ್ತಾರೆ ಜನಸಾಮಾನ್ಯರು. ಕಲಬುರಗಿ ಪಾಲಿಕೆಯ ಮಟ್ಟಿಗೆ ಹೊಸ ರಾಜಕೀಯ ಪ್ರಯೋಗದಂತೆ ಕಾಣುವ ಈ ಮಹಿಳಾ ದರ್ಬಾರ್ ಯಶಸ್ವಿಯಾದರೆ, ಇದು ರಾಜ್ಯದ ಇತರೆ ನಗರ ಪಾಲಿಕೆಗಳಿಗೆ ಮಾದರಿಯಾಗುವ ಸಾಧ್ಯತೆಗಳಿವೆ ಎನ್ನಲಾಗುತ್ತಿದೆ.

ಸಂದೇಶ್ ನಾಗರಾಜು 80ನೇ ಜನ್ಮದಿನ | ಸಿಎಂ ಸಿದ್ದರಾಮಯ್ಯ, ಸಚಿವರಾದ ಜಮೀರ್, ಭೈರತಿ ಸುರೇಶ್, ಚೆಲುವರಾಯಸ್ವಾಮಿ ಇತರೆ ಗಣ್ಯರ ಉಪಸ್ಥಿತಿ

ಸ್ನೇಹಮಯ ವ್ಯಕ್ತಿತ್ವದ ಸಂದೇಶ್ ಯಶಸ್ವಿ ಉದ್ಯಮಿ

ಮೈಸೂರು: ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಗಣ್ಯಾತಿಗಣ್ಯರ ಸಮ್ಮುಖದಲ್ಲಿ ಭಾನುವಾರ ನಗರದ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಡೆಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂದೇಶ್ ನಾಗರಾಜ್ ಅವರಿಗೆ ಸನ್ಮಾನಿಸುವ ಮೂಲಕ ಹುಟ್ಟುಹಬ್ಬದ ಶುಭ ಕೋರಿದರು. ಬಳಿಕ ಮಾತನಾಡಿದ ಅವರು ನಾಗರಾಜ್ ಅವರು 100 ವರ್ಷಗಳ ಕಾಲ ಬದುಕಿ ಯಶಸ್ವಿಯಾಗಿ ಜೀವನ ನಡೆಸಲಿ ಎಂದು ಹಾರೈಸಿದರು.

30 ಉತ್ತಮ ಸಿನಿಮಾ: ಸಂದೇಶ್ ನಾಗರಾಜ್ ಸ್ನೇಹಮಯಿ ವ್ಯಕ್ತಿತ್ವದವರಾಗಿದ್ದು, ಅವರು ಯಾವುದೇ ಕ್ಷೇತ್ರದಲ್ಲಿ ಕಾರ್ಯನಿರ್ವಹಣೆ ಮಾಡಿದರೂ ಯಶಸ್ಸು ಅವರಿಗೆ ಸಿಗುತ್ತಿದೆ. ಹೋಟೆಲ್ ಉದ್ಯಮ, ಸಿನಿಮಾ ನಿರ್ಮಾಪಕರಾಗಿ, ರಾಜಕೀಯ ಕ್ಷೇತ್ರವನ್ನು ಪ್ರವೇಶ ಮಾಡಿ ಅಲ್ಲೂ ಕೂಡ ಬಹಳ ಎತ್ತರಕ್ಕೆ ಬೆಳೆದಿದ್ದಾರೆ. ಕನ್ನಡ ಸಿನಿಮಾರಂಗಕ್ಕೆ 30ಕ್ಕೂ ಹೆಚ್ಚು ಉತ್ತಮವಾದ ಸಿನಿಮಾಗಳನ್ನು ನೀಡಿದ್ದಾರೆ. ಅವರು ಯಾವುದೇ ಕ್ಷೇತ್ರದಲ್ಲಿ ಇದ್ದರೂ ಅವರದ್ದೇ ಆದ ಛಾಪು ಮೂಡಿಸಲು ಬಯಸುತ್ತಾರೆ.

ರಾಜಕೀಯ ಪಯಣ:

ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ರಾಜಕೀಯವಾಗಿ ಅವರು ಹಾಗೂ ನಾವು ಒಟ್ಟಿಗೆ ಇರಲಿಲ್ಲ. ಅವರನ್ನು ವಿರೋಧ ಮಾಡಿರುವುದೇ ಜಾಸ್ತಿ. ರಾಮಕೃಷ್ಣ ಹೆಗಡೆ ಅವರ ಕಾಲದಲ್ಲಿ ಸಂದೇಶ್ ಅವರು ನಮ್ಮ ಜೊತೆ ಇದ್ದರು. ನಂತರ ಕಾಂಗ್ರೆಸ್ ಸೇರಿದರು. ಬಳಿಕ ಜೆಡಿಎಸ್‌ಗೆ ಹೋದರು. ಈಗ ಮತ್ತೆ ನಮ್ಮ ಜೊತೆಗೆ ಇದ್ದಾರೆ. ರಾಜಕೀಯವಾಗಿ ಇಬ್ಬರೂ ಬೇರೆ ಬೇರೆ ಪಕ್ಷಗಳಲ್ಲಿ ಕೆಲಸ ಮಾಡುತ್ತಿದ್ದರೂ, ಆ ಕಾಲದಿಂದಲೂ ನಮ್ಮ ವೈಯಕ್ತಿಕ ಸ್ನೇಹಕ್ಕೆ ಯಾವತ್ತೂ ಧಕ್ಕೆ ಆಗಿಲ್ಲ . ರಾಜಕೀಯವೇ ಬೇರೆ, ವ್ಯಕ್ತಿತ್ವವೇ ಬೇರೆ ಎನ್ನುವ ಮನಸ್ಥಿತಿ ಉಳ್ಳ ಸಂದೇಶ್ ನಾಗರಾಜು ದೊಡ್ಡದಾಗಿ ಬೆಳೆದಿದ್ದಾರೆ ಎಂದರು.

ಟಿವಿ ಪರದೆಯಲ್ಲಿ ನೋಡಿ: ನಟ ಕಿಚ್ಚ ಸುದೀಪ್ ಮಾತನಾಡಿ, ಸಂದೇಶ ನಾಗರಾಜ ಅವರು ನಮ್ಮನ್ನೆಲ್ಲ ಪ್ರೋತ್ಸಾಹಿಸುತ್ತಾರೆ. ಶೀಘ್ರದಲ್ಲೇ ನನ್ನನ್ನು ಪರದೆ ಮೇಲೆ ನೋಡಬಹುದು. ಸೆ.28ರಿಂದ ಟಿ.ವಿ.ಪರದೆಯಲ್ಲಿ (ಬಿಗ್‌ಬಾಸ್) ನನ್ನನ್ನು ನೋಡಬಹುದು ಎಂದು ಚುಟುಕಾಗಿ ಮಾತನಾಡಿದರು.

ಮತ್ತಷ್ಟು ಸಿನಿಮಾ ಮಾಡಿ: ನಟ ಡಾಲಿ ಧನಂಜಯ ಮಾತನಾಡಿ, ನಮ್ಮನ್ನು ಹಾಕಿಕೊಂಡು ತಾವು ಸಿನಿಮಾ ಮಾಡಬೇಕು. ನಮಗೂ ಸಂಪಾದನೆಗೆ ಅವಕಾಶ ಮಾಡಿಕೊಡಬೇಕು. ತಾವು ಸಂಪಾದನೆ ಮಾಡಿಕೊಳ್ಳಬೇಕು. ಆ ಮೂಲಕ ಮತ್ತಷ್ಟು ಸಿನಿಮಾಗಳನ್ನು ಕನ್ನಡ ಚಿತ್ರೋದ್ಯಮಕ್ಕೆ ನೀಡ ಬೇಕು ಎಂದು ಶುಭ ಹಾರೈಸಿದರು.

ಸಿನಿ ಲೋಕದ ಗಣ್ಯರ ದಂಡು : ದೊಡ್ಮನೆ ಹುಡುಗ ಯುವ ರಾಜಕುಮಾರ, ಚಿತ್ರನಟರಾದ ಸೃಜನ್ ಲೋಕೇಶ್, ಅರವಿಂದ್, ಗಿರಿಜಾ ಲೋಕೇಶ್ ಮಾತನಾಡಿದರು.

ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್, ವಸತಿ ಸಚಿವ ಜಮೀರ್ ಅಹಮ್ಮದ್ ಖಾನ್, ಕೃಷಿ ಸಚಿವ ಕೆ.ಚಲುವರಾಯ ಸ್ವಾಮಿ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ರಾಘವೇಂದ್ರ ಹಿಟ್ನಾಲ್, ಸಂಗೀತ ನಿರ್ದೇಶಕರಾದ ಹಂಸಲೇಖ, ಸಾಧುಕೋಕಿಲ, ನಟ ಅರುಣ್ ಸಾಗರ್, ಚಿತ್ರ ನಿರ್ಮಾಪಕರಾದ ಎಸ್.ಎ. ಚಿನ್ನೇಗೌಡ, ಸಾ.ರಾ. ಗೋವಿಂದು ಮತ್ತಿತರರು ಹಾಜರಿದ್ದರು.

ಮೈಸೂರಿನಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂದೇಶ್ ನಾಗರಾಜ್ ಅವರನ್ನು ಸನ್ಮಾನಿಸಿ ಶುಭ ಕೋರಿದರು.

ದುಬಾರಿ ವಾಚು, ಬೂಟು, ಕೋಟು ತೊಟ್ಟರೂ ಅಂತರಂಗದಲ್ಲಿ ಸರಳರು !

ಮೈಸೂರಿನ ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡರು ಮಾತನಾಡಿ, ಸಂದೇಶ ನಾಗರಾಜು ಅವರು ಬಾಹ್ಯದಲ್ಲಿ ಶ್ರೀಮಂತಿಕೆಯಿಂದ ಕಂಡರೂ ಅಂತರಂಗದಲ್ಲಿ ಮಾತ್ರ ಶ್ರೀಸಾಮಾನ್ಯ ರಂತೆ ಇರುತ್ತಾರೆ. ದುಬಾರಿ ವಾಚು, ಬೂಟು, ಕೋಟು ತೊಟ್ಟು ಐಷಾರಾಮಿ ಕಾರಿನಲ್ಲಿ ತಿರುಗಾ ಡಿದರೂ ಅವರು ಸಾಮಾನ್ಯರೊಂದಿಗೆ ಸಾಮಾನ್ಯ ರಾಗಿ ಬೆರೆತು ಹೋಗುತ್ತಾರೆ. ಅಂತಹದೊಂದು ಸಹಜತೀಸಹಜ ವಲಯವನ್ನು ಅವರು ಸೃಷ್ಟಿಸಿಕೊಂಡು ಬಿಡುತ್ತಾರೆ ಎಂದು ಬಣ್ಣಿಸಿದರು. ರೈತಾಪಿ ಕುಟುಂಬದಿಂದ ಬಂದು, ಎಲ್ಲವನ್ನು ತಮ್ಮ ಪರಿಶ್ರಮದಿಂದ ಗಳಿಸಿಕೊಂಡಿದ್ದರೂ ಸಂದೇಶ್ ಅವರು ತಮ್ಮ ಬಳಿಗೆ ಅಹಂಕಾರ ಎನ್ನು ವುದನ್ನು ಸುಳಿಯು ವುದಕ್ಕೆ ಬಿಡದೇ ಇರುವುದರಿಂದ ಗೌರವಯುತವಾಗಿ ಜೀವನ ಸಾಗಿಸುತ್ತಾರೆ. ಕನ್ನಡದ ವರನಟ ಡಾ. ರಾಜಕುಮಾರ್, ವಿಷ್ಣುವರ್ಧನ್, ಅಂಬರೀಷ್ ಅವರ ಜೊತೆ ಇದ್ದ ಆಪ್ತತೆ ಯನ್ನು ನೋಡಿದರೆ ಅಂತಹ ಮೇರು ನಟರು ಇವರಿಂದ ಎಂತಹ ಪ್ರೀತಿಯನ್ನು ಕಂಡು ಕೊಂಡಿರ ಬೇಕು ಎನ್ನುವುದು ತಿಳಿಯುತ್ತದೆ ಎಂದು ಅಭಿನಂದಿಸಿದರು.



ಮೈಸೂರಿನಲ್ಲಿ ನಡೆದ ಹೋಟೆಲ್ ಉದ್ಯಮಿ, ಚಲನಚಿತ್ರ ನಿರ್ಮಾಪಕ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬದ ಸಮಾರಂಭವನ್ನು ಮುಖ್ಯಮಂತ್ರಿ ಉದ್ಘಾಟಿಸಿದರು. ಸಚಿವರಾದ ಜಮೀರ್ ಅಹಮದ್ ಖಾನ್, ಭೈರತಿ ಸುರೇಶ್, ಚೆಲುವರಾಯಸ್ವಾಮಿ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲಾ, ಸಂಗೀತ ನಿರ್ದೇಶಕ ಹಂಸಲೇಖ, ಇತರರು ಶುಭಾಶಯ ಕೋರಿದರು.

ಸಿಎಂ ಪರ ಸಚಿವ ಲಾಡ್ ಬ್ಯಾಟಿಂಗ್

ಗಾಂಧೀಜಿ ಕೊಂದವರು ಯಾರೆಂದು ವಿಶ್ವಕ್ಕೆ ಗೊತ್ತು

ಮೈಸೂರು: ಗಾಂಧೀಜಿ ಕೊಂದಿದ್ದು ಆರ್ ಎಸ್ ಎಸ್ ಎಂದು ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆ ಸಮರ್ಥಿಸಿಕೊಂಡ ಸಚಿವ ಸಂತೋಷ್ ಲಾಡ್, ಸಿಎಂ ಹೇಳಿರುವುದರಲ್ಲಿ ಏನಾದರೂ ಡೌಟ್ ಇದೆಯಾ? ಸಿದ್ದರಾಮಯ್ಯ ಸುಳ್ಳು ಹೇಳಿದ್ದಾರಾ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗಾಂಧೀಜಿ ಕೊಂದಿದ್ದು ಯಾರು ಅಂತ ಇಡೀ ಜಗತ್ತಿಗೆ ಗೊತ್ತಿದೆ ಎಂದರು. ಬಿಜೆಪಿ-ಜೆಡಿಎಸ್ ನಾಯಕರಿಂದ ಧರ್ಮಸ್ಥಳ ಚಲೋ ವಿಚಾರ ಕುರಿತು ಮಾತನಾಡಿದ ಅವರು, ಮೊದಲು ಎಸ್‌ಐಟಿ ಯಾಕೆ ಸ್ವಾಗತ ಮಾಡಿದರು? ತನಿಖೆ ಸಹ ಪ್ರಾರಂಭ ಮಾಡಿದೆ. ಮೃತ ದೇಹಗಳು ಸಿಗದಿದ್ದಕ್ಕೆ ರಾಜಕೀಯ ಲಾಭ ಪಡೆಯಲು ಮುಂದಾದರು. ಧರ್ಮಸ್ಥಳದ ಮೇಲೆ ಒಂದು ಕಳಂಕ ಇತ್ತು. ಕೆಲವರು ಧರ್ಮಸ್ಥಳದ ಮೇಲೆ ಆರೋಪ ಮಾಡುತ್ತಿದ್ದರು. ಎಸ್‌ಐಟಿ ಮೂಲಕ ರಾಜ್ಯಕ್ಕೆ ಬೆಳಕು ಚೆಲ್ಲಲಾಯಿತು ಎಂದರು.

ಆಗಲೇ ವಿದೇಶಿ ಫಂಡಿಂಗ್ ಬಗ್ಗೆ ಹೇಳಬೇಕಿತ್ತು. ಪಾರ್ಲಿಮೆಂಟ್ ಉದ್ಘಾಟನೆ ಆದಾಗ ದ್ರೌಪದಿ ಮುರ್ಮು ಅವರನ್ನು ಯಾಕೆ ಕರೆಯಲಿಲ್ಲ. ಮೊದಲು ಇದಕ್ಕೆ ಬಿಜೆಪಿ ನಾಯಕರು ಉತ್ತರ ಕೊಡಲಿ. ಮುರ್ಮು ಒಬ್ಬ ವಿಧವೆ ಅಥವಾ ಎಸ್ಟಿ ಸಮುದಾಯ ಅನ್ನೋ ಕಾರಣಕ್ಕೆ ಕರೀಲಿಲ್ವಾ. ಹೆಣ್ಣು ಮಕ್ಕಳನ್ನು ಗೌರವದಿಂದ ಕಾಣದೆ ಇರೋದೇ ಬಿಜೆಪಿ ಐಡಿಯಾಲಜಿ. ಬಿಜೆಪಿ ನಾಯಕರು ಯಾರೂ ಹೆಣ್ಣುಮಕ್ಕಳನ್ನು ಗೌರವಿಸಲ್ಲ ಎಂದು ಟೀಕಿಸಿದರು.

ಚೀನಾಗೆ ಹೋಗಿ ಶೇಕ್‌ಹ್ಯಾಂಡ್ ಮಾಡಿ ಬಂದಿರೋರು ನೀವು.. !

ಪಾಕಿಸ್ತಾನ ಮುಸಲ್ಮಾನ ವಿಚಾರ ಮಾತನಾಡೋದು ಬಿಜೆಪಿ ನಾಯಕರೇ. ಸಿಂಧೂರ್ ಬಗ್ಗೆ ಮಾತನಾಡೋರು ಪಾಕಿಸ್ತಾನ ಜೊತೆ ಈಗ ಮ್ಯಾಚ್ ಆಡ್ತಿದ್ದಾರೆ. ಪಾಕಿಸ್ತಾನಕ್ಕೆ ನೀರು ಕೊಡಲ್ಲ ಅಂತಾರೆ. ಚೀನಾ ವಸ್ತುಗಳ ಬಾಯ್ಕಾಟ್ ಮಾಡ್ತೀವಿ ಅಂತಾರೆ. ಈಗ ಚೀನಾಗೆ ಹೋಗಿ ಶೇಕ್ ಹ್ಯಾಂಡ್ ಮಾಡ್ತಾರೆ. ಭಾರತ ಪಾಕಿಸ್ತಾನ ವಾರ್ ನಲ್ಲಿ ಪಾಕ್ ಗೆ ಚೀನಾನೇ ಸಪೋರ್ಟ್ ಮಾಡಿದ್ದು. ಪಾಕಿಸ್ತಾನ ಚೀನಾ ಜೊತೆಯಾಗಿ ಇಂಡಿಯಾದ ಮೇಲೆ ವಾರ್ ಮಾಡಿದ್ದು. ಈಗ ಅದೇ ಚೀನಾಗೆ ಹೋಗಿ ಶೇಕ್ ಹ್ಯಾಂಡ್ ಮಾಡಿ ಬರ್ತೀರಾ ಎಂದು ಲೇವಡಿ ಮಾಡಿದರು.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 01-09-2025 ಸೋಮವಾರ

ಚಿತ್ತವಿಹಾರ

ಸಾಧನೆಗೆ ಪರಿಶ್ರಮವೇ ಮೆಟ್ಟಿಲು

● ಅಂಜಿನಪ್ಪ ಡಿ. ಕೊಟ್ಟೂರು

ಪ್ರತಿಯೊಬ್ಬರಿಗೂ ಏನನ್ನಾದರೂ ಸಾಧಿಸಬೇಕೆಂಬ ಹಂಬಲ ಇದ್ದೇ ಇರುತ್ತದೆ. ಕೆಲವರು ಬಹುಬೇಗನೆ ಸಾಧಿಸಿದರೆ ಕೆಲವರು ಸಾಧಿಸುವ ಮಾರ್ಗಗಳು ತಿಳಿಯದೆ ವೈಫಲ್ಯಗಳನ್ನು ಅನುಭವಿಸುವುದುಂಟು. ಆ ಸೋಲನ್ನೇ ಗೆಲುವಿನ ಮೆಟ್ಟಿಲಾಗಿ ಮಾಡಿಕೊಂಡು ಕಾರ್ಯಪ್ರವೃತ್ತರಾದಾಗ ಮಾತ್ರ ಜಯ ಸಿಗಲು ಸಾಧ್ಯ.

ಜೀವನದಲ್ಲಿ ಕನಸು ಕಾಣಲು ನಾವೇನು ವೆಚ್ಚ ಮಾಡಬೇಕಾಗಿಲ್ಲ. ಕನಸುಗಳು ಎಂದಿಗೂ ದೊಡ್ಡದಾಗಿರಲಿ. ನಿದ್ದೆಯಲ್ಲಿ ಕನಸು ಕಾಣುವ ಬದಲು ನಿದ್ದೆಯನ್ನು ಕೆಡಿಸುವ ಕನಸು ಕಾಣಬೇಕು. ಆ ಕನಸು ನಮ್ಮ ಬದುಕನ್ನು ಬದಲಾಯಿಸುವಂತಿರಬೇಕು. ಅಬ್ದುಲ್ ಕಲಾಂ ಮೀನುಗಾರರ ಮಗನಾಗಿದ್ದರು. ತನ್ನ ತಂದೆಯ ಜೊತೆ ಮೀನು ಹಿಡಿಯಲು ಹೋದ ಸಂದರ್ಭದಲ್ಲಿ, ಮೇಲೆ ಹಾರಾಡುವ ಹಕ್ಕಿಗಳನ್ನು ಕಂಡು ನಾನೇಕೆ ಹಕ್ಕಿಗಳಂತೆ ಹಾರ ಬಾರದೆಂದು ಕನಸು ಕಂಡಿದ್ದರಂತೆ. ಆ ಕನಸೇ ಮುಂದೆ ಭಾರತಕ್ಕೆ ಕ್ಷಿಪಣಿಗಳನ್ನ ಕಂಡುಹಿಡಿಯಲು ಪ್ರೇರಕವಾಯಿತು. ಅಲ್ಲದೆ ಭಾರತದ ಕ್ಷಿಪಣಿ ಮನುಷ್ಯ ಎಂಬ ಅಭಿದಾನವು ಅವರಿಗೆ ಬಂದಿತು. ಕನಸು ಕಂಡರೆ ಸಾಲದು, ಆ ಕನಸನ್ನ ನನಸು ಮಾಡುವ ಛಲವಿದ್ದಾಗ ಮಾತ್ರ ಆ ಗುರಿಯನ್ನು ತಲುಪಲು ಸಾಧ್ಯ.

ನಮ್ಮ ಮನಸ್ಸಿನಲ್ಲಿ ಎಂದಿಗೂ ದ್ವಂದ್ವನಿಲುವು ಬೇಡ, ಸ್ಪಷ್ಟವಾದ ಮನಸ್ಸು ಸ್ಪಷ್ಟವಾದ ಗುರಿಯನ್ನು ನಿಗದಿಪಡಿಸುತ್ತದೆ. ಕನಸು ಮತ್ತು ಗುರಿಗಳಿದ್ದರೆ ಸಾಲದು ಸಾಧಿಸುವ ಛಲದ ಗುಣ ನಮ್ಮಲ್ಲಿರಬೇಕು. ಸಾಧಿಸಬೇಕೆಂಬ ಇಚ್ಛಾ ಶಕ್ತಿ ಇದ್ದರೆ ಎಂಥ ಸಾಧನೆಯನ್ನಾದರೂ ಮಾಡಬಹುದು. ಥಾಮಸ್ ಅಲ್ವಾ ಎಡಿಸನ್ ಪ್ರತಿ ಬಾರಿ ತನ್ನ ಪ್ರಯೋಗದಲ್ಲಿ ವಿಫಲನಾದಾಗ ಅವನು ಧೃತಿಗೆಡದೆ ಪ್ರಯೋಗ ಮುಂದುವರಿಸಿದ್ದರಿಂದ ಜಗತ್ತಿಗೆ ಬಲ್ಬನ್ನು ಕಂಡು ಹಿಡಿಯಲು ಸಾಧ್ಯವಾಯಿತು. ಅಂಗವಿಕಲ ಮಹಿಳೆ ಎಂದು ಮನಸ್ಸು ಹಿಂಜರಿಕೆಯಿಂದ ಕುಳಿತಿದ್ದರೆ ಪೂರ್ಣಿಮಾ ಸಾಹ ಮೌಂಟ್ ಎವರೆಸ್ಟ್ ಏರುತ್ತಿರಲಿಲ್ಲ. ಜಗತ್ತನ್ನೇ ಗೆಲ್ಲುತ್ತೇನೆ ಎಂದು ಹೊರಟ ನೆಪೋಲಿಯನ್ ಬೋನಾಪಾರ್ಟೆ ಅಸಾಧ್ಯ ಎನ್ನುವ ಪದ ನನ್ನ ಶಬ್ದಕೋಶದಲ್ಲಿ ಇಲ್ಲ ಎಂದು ಹೇಳುತ್ತಿದ್ದ! ಸಾಧಿಸಲು ಬೇಕಾಗಿರುವುದು ಅಚಲವಾದ ಮನಸ್ಸು ಮತ್ತು ದೃಢವಾದ ಛಲ, ಅಸಾಧ್ಯ ಎನ್ನುವುದನ್ನು ಸಾಧ್ಯ ಮಾಡುವುದೇ ಜೀವನದ ಛಲವಾಗಬೇಕು.

ಕವಿ ರಾಘವಾಂಕ ಹೇಳುವಂತೆ, ನಡೆವವರು ಎಡವದೆ ಕುಳಿತವರು ಎಡುವವರೇ? ಎಡವಿ ಬಿದ್ದರೂ ಕೊಡವಿ ಮೇಲೇಳುವ ಗುಣ ನಮ್ಮಲ್ಲಿರಬೇಕು. ಯಾವುದೇ ಕೆಲಸವಿರಲಿ ಸಕಾರಾತ್ಮಕ ಮನಸ್ಸು ಮತ್ತು ಇಚ್ಛಾಶಕ್ತಿಯಿಂದ ಮಾಡಿದರೆ ಜಯ ಸಿಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಕಠಿಣ ಪರಿಶ್ರಮ ಇದ್ದೇ ಇರುತ್ತದೆ. ಕಠಿಣ ಪರಿಶ್ರಮವಿಲ್ಲದೆ ಗುರಿ ಸಾಧಿಸುವುದು ಅಸಾಧ್ಯ.

ಆತ್ಮ ವಿಶ್ವಾಸ ಬಹಳ ಮುಖ್ಯ. ನನ್ನ ಮೇಲೆ ನನಗೆ ನಂಬಿಕೆ ಇಲ್ಲದಿದ್ದರೆ ಸಾಧಿಸಲು ಅಸಾಧ್ಯ. ನಮ್ಮಲ್ಲಿನ ಆತಂಕ, ಭಯ, ಹಿಂಜರಿಕೆಗಳು ನಮ್ಮನ್ನು ಸೋಲಿನ ದವಡೆಗೆ ತಳ್ಳಲು ಪ್ರಯತ್ನಿಸುತ್ತವೆ. ಇದರಿಂದ ಹೊರಬಂದು ಮನಸ್ಸನ್ನು ವಜ್ರದಂತೆ ಗಟ್ಟಿಗೊಳಿಸಿ ಆತ್ಮವಿಶ್ವಾಸವನ್ನು ಇಮ್ಮಡಿ ಗೊಳಿಸಿಕೊಂಡಾಗ ಗೆಲ್ಲುವೆನೆಂಬ ಭರವಸೆ ಮೂಡುತ್ತದೆ.

ಮಂಜೂಷಾ ವಸ್ತುಸಂಗ್ರಹಾಲಯ

ಡಾ. ವೀರೇಂದ್ರ ಹೆಗ್ಗಡೆಯವರು ಸ್ಥಾಪಿಸಿದ ಮಂಜುಷಾ ವಸ್ತುಸಂಗ್ರಹಾಲಯದಲ್ಲಿನ ಪ್ರಾಚೀನ ವಸ್ತುಗಳ ಸಂಗ್ರಹಕ್ಕೆ 2024ರಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಮಾನ್ಯತೆ ದೊರೆತಿದ್ದು ಅತಿದೊಡ್ಡ ಏಕ-ವ್ಯಕ್ತಿ ವೈವಿಧ್ಯಮಯ ಪ್ರಾಚೀನ ವಸ್ತುಗಳ ಸಂಗ್ರಹದ ಸ್ಥಳವೆಂದು ಪ್ರಸಿದ್ಧಿಯನ್ನು ಪಡೆದಿದೆ.

● ಸಂತೋಷ್ ರಾವ್ ಪೆರ್ಮುಡ

ಪುರಾತನ ವಸ್ತುಸಂಗ್ರಹಾಲಯಗಳು ಒಂದು ಪ್ರದೇಶದ ಅಥವಾ ದೇಶದ ಸಾಂಸ್ಕೃತಿಕ, ವೈಜ್ಞಾನಿಕ, ಕಲಾತ್ಮಕ ಅಥವಾ ಚಾರಿತ್ರಿಕ ವಿಚಾರಗಳಿಗೆ ಸಂಬಂಧಿತ ಮಹತ್ವದ ವಸ್ತುಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ಅಧ್ಯಯನ ಮಾಡುವ, ಶೈಕ್ಷಣಿಕ ಉದ್ದೇಶಗಳಿಗೆ ಒದಗಿಸುವ ಮತ್ತು ಮುಂದಿನ ಪೀಳಿಗೆಗೆ ಪ್ರದರ್ಶಿಸುವ ವ್ಯವಸ್ಥೆ. ಬೆಳ್ತಂಗಡಿ ತಾಲೂಕಿನ

ಧರ್ಮಸ್ಥಳದಲ್ಲಿರುವ ಪ್ರಾಚೀನ ವಸ್ತುಗಳ ಸಂಗ್ರಹಾಲಯ 'ಮಂಜೂಷಾ'ವು ತನ್ನ ಅನನ್ಯತೆಯಿಂದ ಗಮನ ಸೆಳೆಯುತ್ತದೆ. ಇಲ್ಲಿ ಪುರಾತನ (ವಿಂಟೇಜ್) ಕಾರುಗಳು, ಪುರಾತನ ದೇವಾಲಯದ ರಥಗಳು ಮತ್ತು ಪ್ರಾಚೀನ ಕಲಾಕೃತಿಗಳನ್ನು ವೀಕ್ಷಣೆಗೆ ಇಡಲಾಗಿದೆ.

'ಮಂಜೂಷಾ' ವಸ್ತುಸಂಗ್ರಹಾಲಯವನ್ನು 1989ರಲ್ಲಿ ಡಾ. ವೀರೇಂದ್ರ ಹೆಗ್ಗಡೆಯವರು ಪ್ರಾರಂಭಿಸಿದರು. ಹದಿನೇಳು ಸಾವಿರಕ್ಕೂ ಮಿಕ್ಕಿದ ಪುರಾತನ ಕಲಾಕೃತಿಗಳು, ಪ್ರಾಚೀನ ವಸ್ತುಗಳು ಮತ್ತು ಅವಶೇಷಗಳ ಅಪರೂಪದ ಬೃಹತ್ ಸಂಗ್ರಹವೇ ಇಲ್ಲಿದೆ. ಇಲ್ಲಿನ ಕೆಲವೊಂದು ಸಂಗ್ರಹಗಳು ಕೆಲವು ಶತಮಾನಗಳಷ್ಟು ಹಳೆಯದಾಗಿದ್ದು, ಇನ್ನೂ ಕೆಲವು ಸಂಗ್ರಹಗಳ ಮೂಲವೇ ತಿಳಿದಿಲ್ಲ ಎನ್ನುವುದು ಅಚ್ಚರಿ.

ವೀರೇಂದ್ರ ಹೆಗ್ಗಡೆಯವರ ಹಿಂದಿನ ಬೀಡಿನ (ಬೀಡು ಎಂದರೆ ಹಲವಾರು ತಲೆಮಾರುಗಳು ವಾಸ್ತವ್ಯವಿದ್ದ ಮನೆ ಅಥವಾ ಹಳೆಯ ಮನೆತನದ ಮನೆ ಎಂಬರ್ಥವಿದೆ) ಸ್ಥಾಪನೆಯ ಸಂದರ್ಭದಲ್ಲಿ ಬೀಡಿನ ಅಟ್ಟದಲ್ಲಿ ಸಂಗ್ರಹಿಸಿಟ್ಟಿದ್ದ ಪ್ರಾಚೀನ ಮತ್ತು ಅಪರೂಪದ ಸಂಗ್ರಹಗಳೇ ವೈಯಕ್ತಿಕ ಸಂಗ್ರಹವಾಗಿ ಪ್ರಾರಂಭವಾಯಿತು. ಒಮ್ಮೆ ವಿದೇಶೀ ಸಂದರ್ಶಕರು ಈ ಸಂಗ್ರಹಗಳನ್ನು ವೀಕ್ಷಿಸುತ್ತಾ ಒಂದಷ್ಟು ವಿಧದ ಪುರಾತನ ವಸ್ತುಗಳನ್ನು ಒಟ್ಟುಗೂಡಿಸಲು ಪಟ್ಟಿಯನ್ನು ಮಾಡಲು ಸೂಚಿಸಿದ್ದರು. ಅದರಂತೆ ಹವ್ಯಾಸವಾಗಿ ಪ್ರಾರಂಭವಾದ ಈ ಪಟ್ಟಿ ಮಾಡುವಿಕೆ ಮತ್ತು ಸಂಗ್ರಹಣೆಯು ಮುಂದಕ್ಕೆ ಒಂದು ವಿಭಿನ್ನ ಮತ್ತು ವಿಶಾಲವಾದ ದೃಷ್ಟಿಕೋನವಾಗಿ ಬದಲಾಯಿತು. ಇದಕ್ಕೆ ಮತ್ತಷ್ಟು ಬೆಂಬಲ ಮತ್ತು ಸಹಕಾರ ನೀಡಿದವರು ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ವಸ್ತುಗಳ ತಜ್ಞ ಪ್ರೊಫೆಸರ್ ತಿಪ್ಪೇಸ್ವಾಮಿ. ಇವರ ಸಹಾಯದಿಂದ ಅಮೂಲ್ಯವಾದ ವೈವಿಧ್ಯಮಯ ವಸ್ತುಗಳನ್ನು ಸಂಗ್ರಹಿಸಿ, ಸಂರಕ್ಷಿಸುವ ಸಂಕಲ್ಪ ಮಾಡಿದರು. ಸಣ್ಣದಾಗಿ ಪ್ರಾರಂಭವಾದ ಸಂಗ್ರಹಣೆಯ ಈ ಹವ್ಯಾಸದಿಂದ ಸಂಗ್ರಹವು ಹೆಚ್ಚಾದಂತೆ ಹಾಗೂ ದೊಡ್ಡ ಗಾತ್ರದ ವಸ್ತುಗಳನ್ನು ನಿರ್ವಹಿಸಲು ಹೆಚ್ಚಿನ ಸ್ಥಳಾವಕಾಶದ ಅಗತ್ಯ ಕಂಡುಬಂದಾಗ ವಸಂತ ಮಹಲ್ ಪಕ್ಕದ ಕಟ್ಟಡಕ್ಕೆ ಸ್ಥಳಾಂತರಿಸಿ ಅದಕ್ಕೆ

'ಮಂಜುಷಾ ಆ್ಯಂಟಿಕ್ ಮ್ಯೂಸಿಯಂ' ಎಂದು ಹೆಸರಿಸಲಾಯಿತು.

ಮಂಜೂಷಾದಲ್ಲಿ ಏನೇನಿವೆ

ಇಲ್ಲಿನ ಸಂಗ್ರಹಾಲಯದಲ್ಲಿ ಪ್ರಾಚೀನ ದೇವಾಲಯಗಳಲ್ಲಿ ಬಳಸಲಾಗುತ್ತಿದ್ದ ತಾಮ್ರ, ಹಿತ್ತಾಳೆ ಮತ್ತು ಕಂಚಿನ' ಹಂಡೆಗಳು, ಶಿಲಾಯುಗ ಕಾಲದ ಕಲ್ಲಿನ ಆಯುಧಗಳು, ಮಣ್ಣಿನ ಪಾತ್ರೆಗಳು, ಹಿಂದಿನ ಕಾಲದಲ್ಲಿ ಶುಭ ಸಮಾರಂಭದಲ್ಲಿ ಬಳಸುತ್ತಿದ್ದ ಶಂಖಗಳು, ಕಂಚಿನ ಗಂಟೆ, ಪೂಜಾ ಸಾಮಾಗ್ರಿಗಳು, ಬೃಹತ್ ಗಾತ್ರದ ತಿಮಿಂಗಿಲದ ಬೆನ್ನುಮೂಳೆ, ನಾಲ್ಕು ದಿಕ್ಕುಗಳಿಗೂ ಮುಖಮಾಡಿರುವ ಶಿವಲಿಂಗ ಕವಚ, ಎತ್ತಿನ ಬಂಡಿ, ರಥ, ಪುರಾತನ ಹಸ್ತಪ್ರತಿಗಳ ಸಂಗ್ರಹ, ಪುರಾತನ ವರ್ಣಚಿತ್ರಗಳ ಸಂಗ್ರಹ, ಪ್ರಾಚೀನ ಬೃಹತ್ ಗಾತ್ರದ ವೀಣೆ, ವೈವಿಧ್ಯಮಯ ಸಂಗೀತ ವಾದ್ಯಗಳು, ಬೃಹತ್ ಗ್ರಾಮಫೋನ್, ಹಳೆಯ ರೇಡಿಯೋ,



ಎಡಿಸನ್ಸ್ ಫೋನೋಗ್ರಾಫ್, ಹಳೆಯ ಕಾಲದ ಟೇಪ್ ರೆಕಾರ್ಡರ್ಸ್ ಮತ್ತು ರೇಡಿಯೋಗಳು, ಹಳೆಯ ಸಿನಿಮಾ ಪ್ರೊಜೆಕ್ಟರ್, ಚಲನಚಿತ್ರ ಚಿತ್ರೀಕರಣದ ಟ್ರಾಕ್ ಸಹಿತ ಕ್ಯಾಮರಾ, ವಿವಿಧ ಕಾಲಘಟ್ಟದ ಫೋಟೋ ಕ್ಯಾಮರಾಗಳು, ದೈವಗಳ ಪ್ರಭಾವಳಿ, ಮುಖವಾಡ, ದೈವಗಳ ಮುಖವರ್ಣಿಕೆಗಳು, ಇಲ್ಲಿ ಕ್ರಿ.ಪೂ 1ನೇ ಶತಮಾನದಷ್ಟು ಹಳೆಯ ಮೌರ್ಯರ ಕಾಲದಿಂದ ಟೆರಾಕೋಟಾ ನಾಣ್ಯಗಳು, 300 ವರ್ಷ ಹಳೆಯ ವೀಣೆ, ವಿಧ್ವಾನ್ ವೀಣೆ ಶೇಷಣ್ಣರ ಸಂಗೀತ ವಾದ್ಯಗಳ ವಿವರಗಳಿರುವ ಪುರಾತನ ಪುಸ್ತಕ, ವಿವಿಧ ತಲೆಮಾರುಗಳ ಆಯುಧಗಳು, ಕತ್ತಿ, ಈಟಿ, ಭರ್ಚಿ, ಯುದ್ಧದಲ್ಲಿ ರಾಜರು ಬಳಸುತ್ತಿದ್ದ ಕಿರುಗತ್ತಿ, ಖಡ್ಗಗಳು, ಬೃಹತ್ ಗಾತ್ರದ ತುಪಾಕಿ (ಬಂದೂಕು)ಗಳು ಇವೆ. ಇಲ್ಲಿ 6,000ಕ್ಕೂ ಹೆಚ್ಚು ತಾಳೆ ಗರಿ ಹಸ್ತಪ್ರತಿಗಳ ಸಂಗ್ರಹವೂ ಇದೆ.

ಇಷ್ಟೇ ಅಲ್ಲದೇ ಹಳೆಯ ಟೈಪ್‌ರೈಟರ್, ದುರ್ಬಿನು, ವಿವಿಧ ಗಾತ್ರಗಳ ದೂರದರ್ಶಕ, ಸಮಯ ಅಳೆಯಲು ಬಳಸುತ್ತಿದ್ದ ಮಾಪಕಗಳು, ಗಡಿಯಾರ, ಹಾರ್ಮೋನಿಯಂ, ವೈವಿಧ್ಯಮಯ ಕೆತ್ತನೆಯ ಬಾಗಿಲುಗಳು, ಬಾಗಿಲಿನ ಫ್ರೇಂ, ಮಂಚಗಳು, ಕರ್ಚಿ, ಪುರಾತನ ರಾಜರ ಕಾಲದ ಕುಸುರಿ ಕೆತ್ತನೆಯ ಬಾಗಿಲು, ಮರದ ಊಟದ ಟೇಬಲ್‌ಗಳು, ಆನೆಯ ದಂತದಿಂದ ಮಾಡಿದ ಕಂಠಹಾರ, ದಂತದ ಕೆತ್ತನೆಗಳು, ದಂತದ ಅಲಂಕಾರಿಕ ವಸ್ತುಗಳು, ಗಾಜಿನ ಅಲಂಕಾರಿಕ ವಸ್ತುಗಳು, ಬರ್ಮಾ ದೇಶದ ಸಾಂಪ್ರದಾಯಿಕ ವಸ್ತುಗಳು, ಪುರಾತನ ಕಾಲದ ಕಲ್ಲಿನ ಕೆತ್ತನೆಗಳು, ಮರದ, ಕಂಚು, ಹಿತ್ತಾಳೆ ಹಾಗೂ ತಾಮ್ರದ ಗೃಹೋಪಯೋಗಿ ವಸ್ತುಗಳು, ಭತ್ತ ಮತ್ತು ಅಕ್ಕಿ ಅಳತೆ ಮಾಡುವ ಕಳಸೆ, ಅನ್ನ ಬಸಿಯುವ ಮರದ ಮರಾಯಿ, ಮರದ ಮತ್ತು ಮಣ್ಣಿನ ಸೌಟು, ಮರದ ಮತ್ತು ಕಲ್ಲಿನ ಕೃಷಿ ಉಪಕರಣಗಳು, ಕಂಬಳದ ಕೋಣಗಳಿಗೆ ಕಟ್ಟುವ ಲಗಾಮು, ಹಳೆಯ ಕಾಲದ ಚೆನ್ನೆ ಆಟದ ಮಣೆ, ಪಗಡೆ ಆಟದ ಮಣೆ ಮತ್ತು ಕಂಚಿನ ಅಲಂಕಾರಿಕ ಮಾದರಿಗಳ ಬೃಹತ್ ಸಂಗ್ರಹವೇ ಇಲ್ಲಿದೆ. ಇವುಗಳನ್ನು ವೀಕ್ಷಿಸಲು ಕನಿಷ್ಠ ಒಂದು ದಿನವಾದರೂ ಬೇಕು.

ಪುರಾತನ ಕಾರುಗಳ ಸಂಗ್ರಹ

ಡಾ.ಹೆಗ್ಗಡೆ ಅವರ ಪುರಾತನ ಕಾರುಗಳ ಸಂಗ್ರಹವು ಮನಸ್ಸಿಗೆ ಮುದ ನೀಡುತ್ತದೆ. ಇಲ್ಲಿ ಪಾಂಟಿಯಾಕ್, ಚೆವ್ರೊಲೆಟ್, ಕ್ಯಾಡಿಲಾಕ್, ಮೋರಿಸ್ ಮತ್ತು ಆಸ್ಟಿನ್ ಇತ್ಯಾದಿ ಹಲವಾರು ಕ್ಲಾಸಿಕ್ ಕಾರುಗಳಿವೆ. ಇಲ್ಲಿ ಇರುವ ಕಾರುಗಳ ಪೈಕಿ ಮೈಸೂರಿನ ಹಿಂದಿನ ರಾಜರಾದ ಜಯಚಾಮರಾಜೇಂದ್ರ ಒಡೆಯರ್‌ಗೆ ಸೇರಿದ್ದ ಮತ್ತು ಯು.ಕೆ ತಯಾರಿಸಿದ ಡೈಮ್ಲರ್ ಡಬಲ್ ಸಿಕ್ಸ್, ಗಾಂಧೀಜಿಯವರು ತಾವು ಕರ್ನಾಟಕ ರಾಜ್ಯ ಪ್ರವಾಸ ಮಾಡಿದ್ದಾಗ ಬಳಸಿದ್ದ ದಂತದ ಬಣ್ಣದ ಸ್ಟೂಡ್ ಬೇಕರ್ 1929 ಕಾರ್‌ಗಳು ಇಲ್ಲಿವೆ. ಪುರಾತನ ಕಾಲದ ಈ

ಎಲ್ಲಾ ಕಾರುಗಳು ಸುಸ್ಥಿತಿಯಲ್ಲಿದ್ದು, ಎಲ್ಲವೂ ರಸ್ತೆಯಲ್ಲಿ ಚಲಿಸುವ ಸ್ಥಿತಿಯಲ್ಲಿವೆ. ಈ ವಿಂಟೇಜ್ ಕಾರ್ ಮ್ಯೂಸಿಯಂನ ಪ್ರವೇಶ ಶುಲ್ಕ ಕೇವಲ ರೂ.3/- ಮಾತ್ರ. ಮ್ಯೂಸಿಯಂ ವೀಕ್ಷಣೆಗೆ ಒಬ್ಬರಿಗೆ ತಲಾ ರೂ.5/- ಪ್ರವೇಶ ಶುಲ್ಕವನ್ನು ವಿಧಿಸಲಾಗಿದ್ದು, ಪುರಾತನ ವಸ್ತುಗಳ ಬೃಹತ್ ಸಂಗ್ರಹ, ಅವುಗಳ ಸಮರ್ಪಕ ಜೋಡಣೆ ಮತ್ತು ಅವುಗಳಿಗೆ ಒದಗಿಸಿರುವ ಮನಸ್ಸಿಗೆ ಮುದ ನೀಡುವ ಬೆಳಕಿನ ಸಂಯೋಜನೆ ವೀಕ್ಷಕರ ಕಣ್ಮನ ಸೆಳೆಯುತ್ತಿದೆ.

ಫೋಟೋ ಕೃಪೆ: ಮಂಜೂಷಾ ವೆಬ್‌ಸೈಟ್

ಕರುಣೆಯಿಂದ ದುಷ್ಟನನ್ನು ಎದುರಿಸಬಹುದು!

ಮರುಕದುಂಬಿದ ಕಣ್ಣನೋಟದೊಳಗಿದ್ದೀತು ।
ಬಿರುನುಡಿಯೊಳಿರದೊಂದು ಕೂರಲಗು, ಸಖನೆ
ಕರವಾಳಕದಿರದಿಹ ದುರಿತಕಾರಿಯ ಹೃದಯ ।
ಕರುಣೆಯಿಂ ಕರಗೀತೊ- ಮಂಕುತಿಮ್ಮ ॥

ಒಬ್ಬ ದುರಿತನನ್ನು (ದುಷ್ಟ) ಕೋಪದಿಂದ ಆಡುವ ಬಿರುನುಡಿಗಳಿಗಿಂತ ಪ್ರೇಮ ಹಾಗೂ ಮರುಕ ತುಂಬಿದ ಕಣ್ಣನೋಟಗಳಿಂದ ಆ ದುರಿತ ವ್ಯಕ್ತಿಯ ಮನಸ್ಸನ್ನು ಪರಿವರ್ತಿಸಬಹುದು. ಕರುಣೆ ವಿಶ್ವಾಸಗಳಿಂದ ಸಾಧಿಸುವುದನ್ನು ಉದ್ರಿಕ್ತ ಮನಸ್ಥಿತಿಯು ಬದಲಾಯಿಸಲಾಗದು. ಕತ್ತಿಯ ಅಲಗನ್ನು ಹಿಡಿದು ದುಷ್ಟನನ್ನು ಬದಲಾಯಿಸಲು ಆಗುವುದಿಲ್ಲ, ಅದು ಒಮ್ಮೊಮ್ಮೆ ನಮಗೇ ತಿರುಗುಬಾಣವಾದರೂ ಆಗಬಹುದು. ಆದರೆ ಆತನಿಗೆ ಕರುಣೆಯನ್ನು ತೋರಿದಾಗ ಆತನ ಮನಸ್ಸು ಕರಗಬಹುದು, ತನ್ನ ದುಷ್ಟತನವನ್ನು ಆತನು ಬಿಡಲೂಬಹುದು ಎಂದು ಮಾನವೀಯ ಅಂಶಗಳನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ಯಾವುದೇ ವ್ಯಕ್ತಿಯು ತಪ್ಪುಗಳನ್ನೇ ಮಾಡಿಲ್ಲ ಎಂದು ಹೇಳಲಾಗುವುದಿಲ್ಲ. ಮನುಷ್ಯನು ತಪ್ಪುಗಳನ್ನು ಮಾಡಿದಾಗ ಆತನಿಗೆ ಆತನು ಮಾಡಿರುವ ತಪ್ಪಿನ ಅರಿವನ್ನು ಮಾಡಿಸುವಾಗ ಆತನಿಗೆ ಕೋಪಗೊಂಡು, ಉದ್ರಿಕ್ತರಾಗಿ, ಶಿಕ್ಷಿಸಿ ಆತನಿಗೆ ಬುದ್ಧಿ ಹೇಳುವುದನ್ನು ಸಹ ಆತ ಒಮ್ಮೊಮ್ಮೆ ಧಿಕ್ಕರಿಸಬಹುದು ಅಥವಾ ಕೇಳದೇ ಇರಬಹುದು. ಕೋಪದಿಂದ ಬಿರುನುಡಿಗಳನ್ನಾಡಿ ಆತನ ಮನ ಪರಿವರ್ತನೆ ಮಾಡಲು ಕಷ್ಟವೂ ಆಗಬಹುದು. ಆದರೆ ಬಿರುನುಡಿಗಳನ್ನಾಡಿ, ಕೋಪೋದ್ರಿಕ್ತರಾಗಿ ಆತನಿಗೆ ಬುದ್ಧಿ ಹೇಳುವುದಕ್ಕಿಂತ ಮರುಕ ತುಂಬಿದ, ವಿಶ್ವಾಸದಿಂದ ಕೂಡಿದ, ಪ್ರೇಮದಿಂದ ಹೇಳುವ ಮಾತುಗಳು ಆತನಿಗೆ ಹಿತವೆನಿಸಿ, ತನ್ನ ಮನ ಪರಿವರ್ತನೆಯನ್ನು ಮಾಡಿಕೊಳ್ಳಬಹುದು. ಕೆಲವೊಮ್ಮೆ ಬಿರುನುಡಿಗಳಿಂದಾಗದ ಕಾರ್ಯವನ್ನು ಮರುಕ ತುಂಬಿದ ಕಣ್ಣೋಟ ಮಾಡಬಹುದು. ಈ ಜಗತ್ತಿನಲ್ಲಿ ಕೋಪ, ಹಿಂಸೆ, ದ್ವೇಷ, ಉದ್ರಿಕ್ತತೆಗಳಿಂದಾಗದ ಕೆಲಸ ಕಾರ್ಯಗಳನ್ನು ಪ್ರೇಮ, ಪ್ರೀತಿ, ಮರುಕ, ಕ್ಷಮೆ, ಅಹಿಂಸೆಯ ಶಾಂತಿ ಮಂತ್ರಗಳು ಮಾಡುತ್ತವೆ. ಈ ಜಗತ್ತಿನಲ್ಲಿ ಅದೆಷ್ಟೇ ಹಿಂದಿನ ದೃಷ್ಟಾಂತಗಳನ್ನು ನಾವು ಉದಾಹರಣೆಗೆ ತಗೆದುಕೊಂಡರೂ ಈ ಜಗತ್ತಿನಲ್ಲಿ ಗೆದ್ದಿರುವುದು ಪ್ರೀತಿ, ಪ್ರೇಮ, ಕರುಣೆ, ಮರುಕ, ಅಹಿಂಸೆಗಳೇ ಆಗಿವೆ. ಆದುದರಿಂದ 'ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನದ ಕೋಪ ತನ್ನ ಅರಿವಿನ ಕೇಡು' ಎಂಬುದು ಸತ್ಯವೇ ಆಗಿರುತ್ತದೆ. ದುಷ್ಟತನದಿಂದ ಕೂಡಿದ ಒಬ್ಬ ವ್ಯಕ್ತಿಯನ್ನು ಕತ್ತಿಯ ಅಲಗನ್ನು (ಕರವಾಲ) ಆತನ ಕುತ್ತಿಗೆಗೆ ಹಿಡಿದು ಆತನಲ್ಲಿಯ ದುಷ್ಟತನವನ್ನು ಹೋಗಲಾಡಿಸುವೆನೆಂದರೆ ಅದು ಅಸಾಧ್ಯವಾದ ಮಾತು. ಒಮ್ಮೊಮ್ಮೆ ಈ ಮನಸ್ಥಿತಿಯು ನಮಗೇ ತಿರುಗುಬಾಣವಾಗಬಹುದು. ಆದರೆ ನಾವು ಆ ದುಷ್ಟ ವ್ಯಕ್ತಿ ಎಂಬಾತನಿಗೆ ತೋರುವ ಕರುಣೆ, ಮರುಕ, ವಾತ್ಸಲ್ಯ, ಪ್ರೀತಿ, ಪ್ರೇಮಗಳು ಆ ದುಷ್ಟ ವ್ಯಕ್ತಿಯ ಮನಸ್ಸನ್ನು ಬದಲಾಯಿಸಲೂ ಬಹುದು. ಕತ್ತಿಯ ಅಲಗಿಗಿಂತ ಕರುಣೆ ತುಂಬಿದ ಕಣ್ಣೋಟವೇ ಬಲು ತೀಕ್ಷ್ಣವಾಗಿ ಆ ದುಷ್ಟ ವ್ಯಕ್ತಿಯ ಮನಸ್ಸನ್ನು ಪರಿವರ್ತಿಸುತ್ತದೆ. ಆದುದರಿಂದ ಈ ಜಗತ್ತನ್ನಾಗಲಿ, ಸಮಾಜವನ್ನಾಗಲಿ, ವ್ಯಕ್ತಿಯನ್ನಾಗಲಿ ಬದಲಾಯಿಸಬೇಕೆಂದರೆ ಕತ್ತಿಯ ಅಲಗಿಗಿಂತ ತೀಕ್ಷ್ಣವಾದ ಕರುಣೆ, ಪ್ರೀತಿ, ವಾತ್ಸಲ್ಯ, ಮರುಕ, ಕ್ಷಮೆಗಳು ಎಂಥಹ ಕಾಠಿಣ್ಯ ಮನಸ್ಸು ಹೊಂದಿರುವ ವ್ಯಕ್ತಿಯನ್ನೂ ಬದಲಾಯಿಸುವ ಶಕ್ತಿ ಇದೆ ಎಂದು ಈ ಪದ್ಯದಲ್ಲಿ ಡಿವಿಜಿಯವರು ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ



ಕಲೆ : ತೇಜಸ್ ಯುವಿಸ್
4ನೆಯ ತರಗತಿ
ರಾಜೇಶ್ವರಿ ವಿದ್ಯಾಶಾಲಾ ಬೆಂಗಳೂರು

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಟಿ



ಎಡದಿಂದ ಬಲಕ್ಕೆ

1. ಮರುಕ ಅಥವಾ ಕರುಣೆ (4)
3. ದುಂಬಿಯು ಹೀರುವ ಹೂವಿನ ರಸ (4)
5. ಹಳೆಯದಾಗಿರುವ ತುತ್ತೂರಿಯಂತಹ ವಾದ್ಯ (3)
6. ರಾಕ್ಷಸರ ಶಿಲ್ಪಿ (2)
8. ನರ್ತಿಸುತ್ತಿರುವ ಶಿವನೇ (4)
10. ಜಗಳಕ್ಕೆ ಮತ್ತೊಂದು ಹೆಸರು (3)
12. ತಾಣ ನೋಡಲು ಬಂದಿರುವ ಯುವಕ (3)
14. ವಿರಳವಾಗಿ ಬಂದಿರುವ ಹೋಮ (3)
16. ಇದು ಬರಿಯ ಹೆದರಿಕೆ (3)
18. ಕೊನೆಗೆ ದೀರ್ಘವಾಗಿ ಬಂದಿರುವ ಗೌರವಧನ (4)
20. ಗೆಲುವು ಅಥವಾ ಕೀರ್ತಿ (2)
22. ಬೀಸುವ ಗಾಳಿ (3)
23. ಸ್ವಾದ ತಿಳಿಸುವ ನಾಲಗೆ (3)
24. ಮಾಲೆಯೊಂದಿಗೆ ಮುಖ್ಯ ಅಧಿಕಾರಿ (4)

ಮೇಲಿಂದ ಕೆಳಕ್ಕೆ

1. ಹಸುವಿನೊಂದಿಗೆ ಬಂದಿರುವ ಸಮರ (3)
2. ಅಗಸ ಅಸ್ತವ್ಯಸ್ತವಾಗಿ ಬಂದಿದ್ದಾನೆ (3)
3. ವರ್ಷಧಾರೆಯಾಗುವ ಕಾಲ (4)
4. ತಿರುಗಿ ಬಂದಿರುವ ತನಯ (2)
7. ಮನೆಯ ಮುಖ್ಯಸ್ಥನಿವನು (4)
9. ಗಂಡು ಕುರಿ (3)
10. ಕುರಿ ಬಿದ್ದ ಪ್ರಪಾತ (3)
11. ಕುದುರೆ (2)
12. ಆ ಬಳಿಕ (4)
13. ಎಣ್ಣೆ ತೆಗೆಯುವ ಯಂತ್ರ, ತಿರುಗಿ ಬಂದಿದೆ (2)
15. ಅಸ್ತವ್ಯಸ್ತವಾಗಿ ಬಂದಿರುವ ರಭಸ (3)
17. ಬಹುವಾಗಿ ಬಂದಿರುವ ಪಾರಿತೋಷಕ (4)
18. ಮನಸ್ಸಿಗಾದ ಖುಷಿ (3)
19. ಸೂರ್ಯ (3)
21. ಬಿಲ್ಲಿಗೆ ಹೂಡಿದ ಬಾಣ (2)

ಪದಬಂಧ ಉತ್ತರ

ಎಡದಿಂದ ಬಲಕ್ಕೆ

ಮೇಲಿಂದ ಕೆಳಕ್ಕೆ

ಲಲಿತಾ ಸಹಸ್ರನಾಮದ ಮಹತ್ವ

ಶ್ರೀ ಲಲಿತಾ ಸಹಸ್ರನಾಮದ ಪಠಣವನ್ನ ನಾವು ಕೇಳಿರುತ್ತೇವೆ. ಹಲವಾರು ಹಿರಿಯರು ದಿನವೂ ಕೂಡ ಭಜನಾ ಮಂಡಳಿಗಳಲ್ಲಿ ಕುಳಿತು ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ, ಹನುಮಾನ್ ಚಾಲೀಸಾ ಇವುಗಳನ್ನು ಹೇಳಿಕೊಳ್ಳುವುದನ್ನೂ ನೋಡಿದ್ದೇವೆ. ಇವೆಲ್ಲ ವಯಸ್ಸಾದ ಮೇಲೆ ಮಾಡುವಂತಹ ಸ್ತೋತ್ರಗಳು ಎಂದು ಇಂದಿನ ಜನರಿಗೆ ಒಂದು ರೀತಿಯ ಧೋರಣೆ ಬಂದುಬಿಟ್ಟಿದೆ. ಆದರೆ ಈ ಮಂತ್ರಗಳ ಬಗ್ಗೆ ನಾವು ತಿಳಿದುಕೊಳ್ಳಬೇಕಾದದ್ದು ಬಹಳಷ್ಟು ಇದೆ. ಇದು ಎಲ್ಲಾ ವಯಸ್ಸಿನವರು ಕಲಿತು ಮಾಡಬಹುದಾದ ಪಾರಾಯಣ. ಇದಕ್ಕೆ ಯಾವುದೇ ವಯೋಮಿತಿ ಇಲ್ಲ.

ಶ್ರೀಲಲಿತಾದೇವಿ ಸ್ತೋತ್ರವನ್ನು ಪಾರಾಯಣ ಮಾಡಿದರೆ ಸಾಕು ಇಡೀ ಕುಟುಂಬಕ್ಕೆ ದೀರ್ಘಾಯುಸ್ಸು ಪ್ರಾಪ್ತಿಯಾಗುವುದರ ಜೊತೆ ನಿಮ್ಮ ಎಲ್ಲ ಕಷ್ಟಗಳು ಪರಿಹಾರವಾಗುತ್ತಾ ಹೋಗುತ್ತದೆ ಎಂದು ಹೇಳುತ್ತವೆ ಶಾಸ್ತ್ರಗಳು. ಈ ಸೃಷ್ಟಿಗೆ ಮೂಲ ದೇವರು ಎಂದು ಎಲ್ಲರಿಗೂ ತಿಳಿದಿರುವ ಸಂಗತಿ. ಆ ದೇವರನ್ನು ಸಹ ಸೃಷ್ಟಿಸಿರುವುದು ಶ್ರೀ ಲಲಿತಾದೇವಿ ಎಂದು ಬ್ರಹ್ಮಾಂಡ ಪುರಾಣ ಹೇಳುತ್ತದೆ. ಆದ್ದರಿಂದಲೇ ಈ ಸೃಷ್ಟಿಗೆ ಮಾತೃ ಸ್ವರೂಪವಾಗಿ ಸಹ ಲಲಿತಾ ದೇವಿಯನ್ನು ಭಾವಿಸುತ್ತೇವೆ. ಆ ದೇವಿಯ ಮಹಾತ್ಮೆಯನ್ನು ತಿಳಿದುಕೊಳ್ಳಲು ಪ್ರಸನ್ನ ಮಾಡಿಕೊಳ್ಳಲು ಲಲಿತ ಸಹಸ್ರನಾಮ ಒಂದು ದೊಡ್ಡ ಸಾಧನೆಯ ಹಾಗೆ ಉಪಯೋಗವಾಗುತ್ತದೆ.

ಲಲಿತಾ ದೇವಿಯನ್ನು ಲಲಿತಾ ತ್ರಿಪುರ ಸುಂದರಿ ಎಂದು ಸಹ ಹೇಳುತ್ತಾರೆ. ತ್ರಿಪುರ ಸುಂದರಿ ಎಂದರೆ ಮೂರು ಲೋಕಗಳಲ್ಲಿ ಅತ್ಯಂತ ಸುಂದರವಾದವಳು ಎಂದರ್ಥ. ತ್ರಿಪುರ ಅಂದರೆ ಮೂರು ಕಾಲಗಳಿಗೆ, ಮೂರು ಸ್ಥಿತಿಗಳಿಗೆ ಮತ್ತು ಮೂರು ಶಕ್ತಿಗಳಿಗೆ ಪ್ರತೀಕವಾದದ್ದು ಎಂದು ಬ್ರಹ್ಮಾಂಡ ಪುರಾಣ ಹೇಳುತ್ತದೆ. ಲಲಿತಾ ಸಹಸ್ರನಾಮವನ್ನು ಪಠನ ಮಾಡಲು ಧ್ಯಾನ, ಅಂಗನ್ಯಾಸ , ಕರನ್ಯಾಸ , ಪಂಚ ಪೂಜಾ ಉತ್ತರ ಭಾಗವನ್ನು ಸಹ ಪಠಿಸಬೇಕು ಎನ್ನುವ ನಿಯಮವನ್ನು ಹಿರಿಯರು ಹೇಳುತ್ತಾರೆ. ಇನ್ನು ಇಷ್ಟೆಲ್ಲಾ ಪಾರಾಯಣ ಮಾಡಲು ಸಮಯವಿಲ್ಲದ 'ವರು ಕನಿಷ್ಠ ಪಕ್ಷ ಲಲಿತಾಸಹಸ್ರನಾಮವನ್ನಾದರೂ ಪಾರಾಯಣ ಮಾಡಿದರೆ ಒಳ್ಳೆಯದು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಲಲಿತಾ ದೇವಿಯನ್ನು ಪ್ರಸನ್ನ ಗೊಳಿಸಲು ಸಾಕ್ಷಾತ್ ದೇವಾನುದೇವತೆಗಳೇ ಈ ಸಹಸ್ರನಾಮವನ್ನು ಪಠಿಸುತ್ತಿದ್ದರಂತೆ. ಶ್ರೀ ಲಲಿತಾ ಸಹಸ್ರನಾಮವನ್ನು ಹಯಗ್ರೀವರು ಅಗಸ್ತ್ಯ ಮುನಿಗೆ ಬೋಧಿಸಿದ್ದಾರಂತೆ . ಇದನ್ನು ವ್ಯಾಸರು ಬ್ರಹ್ಮಾಂಡ ಪುರಾಣದ ಉತ್ತರಖಂಡದಲ್ಲಿ ರಚಿಸಿದ್ದಾರೆ.

ಲಲಿತಾಸಹಸ್ರನಾಮದಲ್ಲಿ ದೇವಿಯ ಬೀಜಾಕ್ಷರಗಳು ಸೃಷ್ಟಿ ರಹಸ್ಯಗಳು, ಅಷ್ಟ ಕಾರ್ಯ ಗಳು, ದಶ ಮಹಾವಿದ್ಯೆಗಳಿಗೆ ಸಂಬಂಧಿಸಿದ ಜ್ಞಾನ ಅಡಕವಾಗಿದೆ.

ಲಲಿತಾಸಹಸ್ರನಾಮಕ್ಕೆ ಸಮಾನವಾದ ಸ್ತೋತ್ರವು ಮತ್ತೊಂದಿಲ್ಲ. ಇದನ್ನು ಪಠಿಸುವುದರಿಂದ ಅಪಮೃತ್ಯು, ಕಾಲ ಮೃತ್ಯು ನಿವಾರಣೆಯಾಗಿ ದೀರ್ಘಾಯುಷ್ಯವನ್ನು ಹೊಂದಬಹುದು ಎಂದು ಕೂಡ ಜ್ಞಾನಿಗಳು ಹೇಳುತ್ತಾರೆ. ಲಲಿತಾ ಸಹಸ್ರನಾಮವನ್ನು ಪ್ರತಿನಿತ್ಯವೂ ಪಠಿಸಬೇಕು. ಒಂದು ವೇಳೆ ನಿತ್ಯ ಪಠಿಸಲು ಸಾಧ್ಯವಾಗದೆ ಇದ್ದಲ್ಲಿ, ಜನ್ಮ ನಕ್ಷತ್ರಗಳಲ್ಲಿ, ನವಮಿಯ ತಿಥಿಗಳಲ್ಲಿ, ಶುಕ್ಲ ಪಕ್ಷದ ಚತುರ್ದಶಿಯ ದಿನ, ಶುಕ್ರವಾರದ ದಿನ, ಹುಣ್ಣಿಮೆಯ ದಿನಗಳಲ್ಲಿ ವಿಶೇಷವಾಗಿ ಪಾರಾಯಣ ಮಾಡಬಹುದು. ಲಲಿತಾ ಸಹಸ್ರನಾಮವನ್ನು ಸತತವಾಗಿ ಆರು ತಿಂಗಳುಗಳ ಕಾಲ ಭಕ್ತಿ-ಶ್ರದ್ಧೆಯಿಂದ ಪಠಿಸುತ್ತಾರೋ ,ಅಂಥವರ ಮನೆಯಲ್ಲಿ ಲಕ್ಷ್ಮೀ ದೇವಿಯು ಸ್ಥಿರವಾಗಿ ನೆಲೆಸಿರುತ್ತಾಳೆ ಎನ್ನುವ ನಂಬಿಕೆ ಇದೆ .ಲಲಿತಾ ಸಹಸ್ರನಾಮವನ್ನು ಪ್ರತಿನಿತ್ಯ ದಿನಕ್ಕೆ ಮೂರು ಬಾರಿಯಂತೆ ಒಂದು ತಿಂಗಳ ಕಾಲ ಯಾರು ಪಠಿಸುವರೋ, ಅಂತವರ ನಾಲಿಗೆಯಲ್ಲಿ ಸರಸ್ವತಿಯು ಯಾವಾಗಲೂ ನೆಲೆಸಿರುತ್ತಾಳೆ ಎಂದು ಕೂಡ ಹೇಳುತ್ತಾರೆ.

ಇದರ ಮಹತ್ವವನ್ನು ತಿಳಿದಾಗ ನಾವು ಇವೆಲ್ಲ ವಾಹನ ಪ್ರಸ್ತಾಶ್ರಮಕ್ಕೆ , ಎಂದು ತಳ್ಳಿ ಬಿಡುವ ಮೊದಲು ನಮ್ಮ ಈ ಸನಾತನ ಧರ್ಮದ ಈ ಜ್ಞಾನದ ವರವನ್ನು ಸೂಕ್ತವಾಗಿ ಬಳಸಿಕೊಂಡು ಬದುಕನ್ನು ಮತ್ತಷ್ಟು ಹಸನಾಗಿಸಿಕೊಳ್ಳಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಈ ಬೀಜ ಮಂತ್ರಗಳ ಪಠಣದಿಂದ ಮನೆಯಲ್ಲಿ ನೆಲೆಸುವ ದೈವಿಕ ಕಂಪನೆಗಳು ಮನೆಯವರೆಲ್ಲ ನಕಾರಾತ್ಮಕ ವಿಚಾರಗಳಿಂದ ಕಾಪಾಡುತ್ತದೆ. ಪಠಿಸುವವರ ಮನಸ್ಸಿಗೆ ನೆಮ್ಮದಿ , ಶಾಂತಿ, ಸಮಾಧಾನ ಎಲ್ಲ ನೀಡುತ್ತಾ ಬದುಕಿನಲ್ಲಿ ಏಳ್ಗೆ ನೀಡುವ ಇಂತಹ ಸದಾಚರಣೆಗಳನ್ನು ಇನ್ನಾದರೂ ನಾವೆಲ್ಲರೂ ಕೈಲಾದಷ್ಟು ಮಾಡಬೇಕು. ನಮ್ಮ ಮಕ್ಕಳನ್ನು ಇದರಲ್ಲಿ ತೊಡಗಿಸಿಕೊಳ್ಳಬೇಕು.

ಯುವ ಸಂಗೀತಗಾರರ ಮೋಡಿ

● ಕೆ. ರಾಮಮೂರ್ತಿರಾವ್ ಮೈಸೂರು

ಮೈಸೂರಿನ ಜೆ. ಎಸ್.ಎಸ್ ಸಂಗೀತ ಸಭೆಯು ನಾಡಿನ ಒಂದು ಪ್ರತಿಷ್ಠಿತ ಸಂಗೀತ ಸಂಸ್ಥೆಯಾಗಿದ್ದು ಕಳೆದ ನಾಲ್ಕು ದಶಕಗಳಿಂದಲೂ ಸಂಗೀತ ಕ್ಷೇತ್ರದಲ್ಲಿ ಸಾರ್ಥಕ ಸೇವೆ ಸಲ್ಲಿಸುತ್ತಿದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕಲಾವಿದರ ಸಂಗೀತ ಕಛೇರಿಗಳನ್ನು ಏರ್ಪಡಿಸುವುದು ಮಾತ್ರವೇ ಅಲ್ಲದೆ ಕಳೆದ 29 ವರ್ಷಗಳಿಂದಲೂ ತಪ್ಪದಂತೆ ಐದು ದಿನಗಳ ರಾಷ್ಟ್ರೀಯ ಸಂಗೀತ ಸಮ್ಮೇಳನವನ್ನೂ ನಡೆಸಿಕೊಂಡು ಬರುತ್ತಿದೆ. ಯುವ ಉದಯೋನ್ಮುಖ ಕಲಾವಿದರನ್ನು ಹುಡುಕಿ ಗುರುತಿಸಿ ಅವರಿಗೆ ವೇದಿಕೆಯನ್ನು ಕಲ್ಪಿಸುವ ಉದ್ದೇಶದೊಂದಿಗೆ ಆಗಸ್ಟ್ 13 ಮತ್ತು 14 ರಂದು ಎರಡು ದಿನಗಳ ಯುವ ಸಂಗೀತೋತ್ಸವವನ್ನು ಸರಸ್ವತಿಪುರಂನಲ್ಲಿರುವ ಮಂತ್ರಮಹರ್ಷಿ ಸಭಾಭವನ ದಲ್ಲಿ ಸಂಗೀತ ಸಭೆಯು ಏರ್ಪಡಿಸಿತ್ತು.

ಮೊದಲನೆಯ ದಿನ ಗಾಯನ ಕಾರ್ಯಕ್ರಮ ನಡೆಸಿಕೊಟ್ಟ ವಿದುಷಿ ಪಾವನಿ ಭಾರದ್ವಾಜ್‌ರವರು ಸಂಗೀತದ ಕೌಟುಂಬಿಕ ಹಿನ್ನೆಲೆ ಉಳ್ಳವರು. ಪಾವನಿ ಅವರ ಅಂದಿನ ಗಾಯನದಲ್ಲಿ ಮಾಧುರ್ಯತೆ, ಭಾವತೀವ್ರತೆಯ ಜತೆಗೆ ಅಮಿತ ಉತ್ಸಾಹವೂ ಇದ್ದು ಶ್ರೋತೃಗಳ ಮನ ಸೆಳೆಯಿತು. ಯೋಜನಾಬದ್ಧವಾಗಿ ಕಛೇರಿಯನ್ನು ನಿರ್ವಹಿಸಿದ ಪಾವನಿಯವರು ಮೊದಲ ಭಾಗದಲ್ಲಿ ನಾಟ ರಾಗದ ಕೃತಿಯೊಂದರಿಂದ ಕಾರ್ಯಕ್ರಮವನ್ನು ಪ್ರಾರಂಭಿಸಿ ಮುಂದೆ ಮುತ್ತಯ್ಯ ಭಾಗವತರ ಸಾರಂಗ ರಾಗದ ಕೃತಿ 'ಅರುಣಾಚಲನಾಥಂ' ಮತ್ತು ಮೈಸೂರು ವಾಸು ದೇವಾಚಾರ್ಯರ ಜನಪ್ರಿಯ ಕೃತಿ 'ಬ್ರೋಚೇ ವಾ'ವನ್ನು ಸೊಗಸಾಗಿ ಸಾದರಪಡಿಸಿದರು. ಇವರ ಈ ಕಛೇರಿಗೆ ವಿದುಷಿ ಸಿ. ವಿ. ಶ್ರುತಿ ಅವರ ಹದವರಿತ ವಯೋಲಿನ್ ಸಾಥಿ, ಮಾಲೋಲ ಸಿಂಹ ಅವರ ಮೃದು ಮಧುರ ಮೃದಂಗ, ಧೀಮಂತ ಭಟ್ ಅವರ ಘಟಂ ಶೋಭೆ ನೀಡಿತ್ತು. ಎರಡನೆಯ ದಿನ ಯುವ ಮಾಂಡೋಲಿನ್ ವಾದಕ ರಕ್ಷಿತ್ ಪ್ರಸಾದ್ ಹಾಗೂ ರೂಪನಗುಡಿ ರತ್ನ ತೇಜ ಇವರ ವಯೋಲಿನ್ ಜುಗಲ್ ಬಂದಿ ಏರ್ಪಾ ಡಾಗಿತ್ತು. ಇವರ ಕಾರ್ಯಕ್ರಮಕ್ಕೆ ಸುನಾದ ಕೃಷ್ಣ ಅಮ್ಮಾಯ್ ಅವರ ವಿದ್ವತ್ಪೂರ್ಣ ಮೃದಂಗ ವಾದನ ಹಾಗೂ ಎಂ. ಆರ್. ಮೋಹನ್ ಅವರ ಮೋರ್ಸಿಂಗ್ ಸಾಥಿ ಕಛೇರಿಯ ಪ್ರಭಾವಳಿಯನ್ನು ಹೆಚ್ಚಿಸಿತ್ತು.

ಅಂದು ಎರಡನೆಯ ಕಛೇರಿ ಉದಯೋನ್ಮುಖ ವೇಣುವಾದಕರಾದ ಮೈಸೂರಿನ ಸಿ. ಎಸ್. ಕೇಶವ ಚಂದ್ರ ಅವರದ್ದಾಗಿತ್ತು. ಅವರ ತಂದೆ ಡಾ. ಸಿ. ಎ. ಶ್ರೀಧರ್ ಮೈಸೂರಿನ ಲಲಿತಕಲಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರು ಹಾಗೂ ನಾಡಿನ ಹಿರಿಯ ವೇಣು ವಾದನ ವಿದ್ವಾಂಸರು. ಇವರ ಕಾರ್ಯಕ್ರಮಕ್ಕೆ ವಿದು ಷಿ ಪೃಥ್ವೀ ಬಾಸ್ಕರ್ ಅವರ ಪ್ರೌಢ ವಯೋಲಿನ್ ಅನುಸರಣೆ ಪುಷ್ಟಿ ತುಂಬಿತು. ಹೀಗೆ ಯುವ ಕಲಾವಿದರಿಗೆ ಒಳ್ಳೆಯ ವೇದಿಕೆಯನ್ನು ದೊರಕಿಸಿ ಕೊಡುತ್ತಿರುವ ಜೆ. ಎಸ್.ಎಸ್ ಸಂಗೀತ ಸಭಾ ಟ್ರಸ್ಟ್‌ನ ಕಾರ್ಯ ಪ್ರಶಂಸಾರ್ಹ.

ನೀವೂ ಬರೆಯಬಹುದು | ನಮ್ಮ ವಿಳಾಸ | ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಅಲೆಕ್ಸ್ ಹೇಲ್ಸ್ ದಾಖಲೆ

ಸೇಂಟ್ ಲೂಸಿಯಾ: ಕೆರಿಬಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕೈರನ್ ಪೊಲಾರ್ಡ್ ಟಿ20 ಕ್ರಿಕೆಟ್‌ನಲ್ಲಿ 14000 ರನ್‌ಗಳನ್ನು ಪೂರ್ಣಗೊಳಿಸಿದ ಒಂದು ದಿನದ ನಂತರ, ಇಂಗ್ಲೆಂಡ್‌ನ ಅಲೆಕ್ಸ್ ಹೇಲ್ಸ್ ಕೂಡ ಟಿ20ಯಲ್ಲಿ 14 ಸಾವಿರ ರನ್‌ಗಳನ್ನು ಗಳಿಸಿದ್ದಾರೆ. ಅವರು ಈ ಸಾಧನೆ ಮಾಡಿದ ವಿಶ್ವದ ಮೂರನೇ ಬ್ಯಾಟ್ಸ್‌ಮನ್ ಮತ್ತು ಇಂಗ್ಲೆಂಡ್‌ನ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಹೇಲ್ಸ್ ಮತ್ತು ಪೊಲಾರ್ಡ್‌ಗೂ ಮುನ್ನ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಈ ಸ್ವರೂಪದಲ್ಲಿ 14000 ರನ್‌ಗಳನ್ನು ಗಳಿಸಿದ್ದರು. 36 ವರ್ಷದ ಹೇಲ್ಸ್ 2009ರಲ್ಲಿ ತಮ್ಮ ಟಿ20 ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಇಲ್ಲಿಯವರೆಗೆ ಅವರು 505 ಇನ್ನಿಂಗ್ಸ್‌ಗಳಲ್ಲಿ 30ರ ಸರಾಸರಿಯಲ್ಲಿ 14024 ರನ್ ಗಳಿಸಿದ್ದಾರೆ.

ಜಿಂಬಾಬ್ವೆ ವಿರುದ್ಧ ಲಂಕಾಗೆ ಗೆಲುವು

ಹರಾರೆ: ಜಿಂಬಾಬ್ವೆ ವಿರುದ್ಧ ಮೊದಲನೇ ಏಕದಿನ ಪಂದ್ಯದಲ್ಲಿ ವೇಗದ ಬೌಲರ್ ದಿಲ್ಷಾನ್ ಮಧುಶನಕ ಅವರ ಹ್ಯಾಟ್ರಿಕ್ ಸಾಧನೆಯ ನೆರವಿನಿಂದ ಶ್ರೀಲಂಕಾ ತಂಡ 7 ರನ್‌ಗಳಿಂದ ಗೆಲುವು ಪಡೆಯಿತು. ಇಲ್ಲಿನ ಹರಾರೆ ಸ್ಪೋರ್ಟ್ಸ್ ಕ್ರೀಡಾಂಗಣದಲ್ಲಿ ಲಂಕಾ ನೀಡಿದ್ದ 299 ರನ್‌ಗಳನ್ನು ಗುರಿಯನ್ನು ಹಿಂಬಾಲಿಸಿದ ಜಿಂಬಾಬ್ವೆ ತಂಡದ ಪರ ಬೆನ್ ಕರನ್ (70 ರನ್), ಸೀನ್ ವಿಲಿಯಮ್ಸನ್ (57 ರನ್) ಹಾಗೂ ಸಿಕಂದರ್ ರಾಜಾ (92 ರನ್) ಅರ್ಧಶತಕಗಳನ್ನು ಸಿಡಿಸಿ ದರು. ಆದರೂ ದಿಲ್ಷಾನ್ ಮಧುಶನಕ ಅವರ ವೇಗದ ಬೌಲಿಂಗ್ ದಾಳಿಗೆ ಸಿಲುಕಿ ಕೇವಲ 7 ರನ್ ಅಂತರದಲ್ಲಿ ಸೋಲು ಒಪ್ಪಿಕೊಂಡಿತು. ದಿಲ್ಷಾನ್ ತನ್ನ ತಂಡದ ಪರ 4 ವಿಕೆಟ್ ಪಡೆದು ಮಿಂಚಿದರು. ಹಾಗಾಗಿ ಜಿಂಬಾಬ್ವೆ ತಂಡದ ಮೊತ್ತ 50 ಓವರ್‌ಗಳಿಗೆ 8 ವಿಕೆಟ್‌ಗಳ ನಷ್ಟಕ್ಕೆ 291 ರನ್‌ಗಳಿಗೆ ಸೀಮಿತವಾಯಿತು.ಲಂಕಾ ತಂಡ ಮೊದಲು ಬ್ಯಾಟ್ ಮಾಡಿತು. ಪಥುಮ್ ನಿಸಾಂಕ (76 ರನ್), ಜನಿತ್ ಲಿಯಾನಗೆ (70 ಅಜೇ ಯ) ಹಾಗೂ ಕಮಿಂದು ಮೆಂಡಿಸ್ (57 ಅಜೇಯ) ಅವರ ಅರ್ಧಶತಕಗಳ ಬಲದಿಂದ ಲಂಕಾ ತಂಡ 50 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 298 ರನ್‌ಗಳನ್ನು ಕಲೆ ಹಾಕಿತು.

ಏಷ್ಯಾ ಕಪ್ ಹಾಕಿ

ಸೂಪರ್ 4ರ ಸುತ್ತಿಗೆ ಭಾರತ

ಹರ್ಮನ್‌ಪ್ರೀತ್ ಭರ್ಜರಿ ಪ್ರದರ್ಶನ
ಜಪಾನ್ ವಿರುದ್ಧ 3-2 ಅಂತರದ ಗೆಲುವು

ರಾಜ್‌ಗೀರ್ (ಬಿಹಾರ): ಏಷ್ಯಾಕಪ್ ಹಾಕಿ ಟೂರ್ನಿಯಲ್ಲಿ ಆತಿಥೇಯ ಭಾರತ ತಂಡ ಭರ್ಜರಿ ಪ್ರದರ್ಶನವನ್ನು ಮುಂದುವರಿಸಿದೆ. ಭಾನುವಾರ ದಂದು ನಡೆದ ತನ್ನ ಎರಡನೇ ಪಂದ್ಯದಲ್ಲಿ ಜಪಾನ್ ತಂಡವನ್ನು 3-2 ಅಂತರದಿಂದ ಸೋಲಿಸುವ ಮೂಲಕ ಟೂರ್ನಿಯಲ್ಲಿ ಸತತ ಎರಡನೇ ಗೆಲುವನ್ನು ಕಂಡಿದೆ.

ಪಂದ್ಯದ ಮೊದಲ ಕ್ವಾರ್ಟರ್‌ನಿಂದಲೇ ಭಾರತ ತಂಡವು ಜಪಾನ್ ವಿರುದ್ಧ ಪ್ರಾಬಲ್ಯ ಸಾಧಿಸಿತು. ಮೂರನೇ ಕ್ವಾರ್ಟರ್‌ನ ವರೆಗೆ ಭಾರತದ ಸ್ಕೋರ್ 3-1 ಆಗಿತ್ತು, ಆದರೆ ಕೊನೆಯ ಕ್ವಾರ್ಟರ್‌ನಲ್ಲಿ ಜಪಾನ್ ಮತ್ತೆ ಚೇತರಿಸಿಕೊಂಡು ಎರಡನೇ ಗೋಲು ಗಳಿಸುವ ಮೂಲಕ ತನ್ನ ಸ್ಕೋರ್ ಅನ್ನು ಸುಧಾರಿಸಿತಾದರೂ, ಭಾರತ ತಂಡ ಗೆಲ್ಲುವುದನ್ನು ತಡೆಯಲು ಅದರಿಂದ ಸಾಧ್ಯವಾಗಲಿಲ್ಲ.

ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಭಾರತವು ಸರ್ವಾಂಗೀಣ ಪ್ರದರ್ಶನ ತೋರಿಸಿತು. ತಂಡವು ಆಕ್ರಮಣಕಾರಿಯಾಗಿ ಆರಂಭವನ್ನು ಪಡೆಯಿತು. ಮಂದೀಪ್ ಸಿಂಗ್ ಮತ್ತು ತಂಡದ ನಾಯಕ ಹರ್ಮನ್ ಪ್ರೀತ್ ಸಿಂಗ್ ಅವರ ಗೋಲುಗಳ ನೆರವಿನಿಂದ 2-0 ಅಂತರದ ಮುನ್ನಡೆ ಸಾಧಿಸಿತು. ಆದರೆ ಎರಡನೇ ಮತ್ತು ಮೂರನೇ ಕ್ವಾರ್ಟರ್‌ಗಳಲ್ಲಿ ಜಪಾನ್ ತಂಡವು ಚೇತರಿಸಿಕೊಳ್ಳಲು ಪ್ರಯತ್ನಿಸಿತು. ಕವಾಬೆ ಕೊಸ್ಸೆ ಅವರ ಗೋಲಿನೊಂದಿಗೆ ಸ್ಕೋರ್ ಅನ್ನು 2-1 ಅಂತರದಲ್ಲಿ ಕಾಯ್ದುಕೊಂಡಿತು.

ಭಾರತಕ್ಕೆ ಒಟ್ಟು 6 ಅಂಕ

ಎರಡು ಸತತ ಗೆಲುವುಗಳು ದೊರೆತಿರುವುದರಿಂದ ಪೂಲ್-ಎ ನಲ್ಲಿ 6 ಅಂಕಗಳೊಂದಿಗೆ ಭಾರತ ತಂಡ ಮೊದಲ ಸ್ಥಾನದಲ್ಲಿದೆ. ಮತ್ತೊಂದೆಡೆ, ಭಾನುವಾರದ ಪಂದ್ಯದ ಸೋಲಿನಿಂದಾಗಿ ಜಪಾನ್ ತಂಡವು ಕಜಕಸ್ತಾನದ ವಿರುದ್ಧ ಗಳಿಸಿದ ಒಂದೇ ಒಂದು ಗೆಲುವಿನಿಂದಾಗಿ ಮೂರು ಅಂಕ ಕಲೆ ಹಾಕಿ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಜಾರಿದೆ. ಉಳಿದಂತೆ ಪೂಲ್-ಎ ನಲ್ಲಿ ಚೀನಾ ತಂಡ ಮೂರು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ನಾಲ್ಕನೇ ಕ್ವಾರ್ಟರ್‌ನಲ್ಲಿ ಮತ್ತೊಂದು ಅದ್ಭುತ ಗೋಲು ಗಳಿಸಿ ಭಾರತದ ಗೆಲುವನ್ನು ಖಚಿತಪಡಿಸಿದರು. ಆದರೆ ಕೊನೆಯ ಕ್ಷಣಗಳಲ್ಲಿ ಜಪಾನ್ ಮತ್ತೊಂದು ಗೋಲು ಗಳಿಸಿತು, ಆಗಲೇ ಇನ್ನೇನು ಪಂದ್ಯ ಮುಗಿಯುವ ಹೊತ್ತಾಗಿತ್ತು. ಈ ಎರಡನೇ ಗೆಲುವಿನೊಂದಿಗೆ ಭಾರತ ತಂಡವು ಸೂಪರ್-4ರಲ್ಲಿ ತನ್ನ ಸ್ಥಾನವನ್ನು ಬಹುತೇಕ ಖಚಿತಪಡಿಸಿಕೊಂಡಿದೆ. ಸೋಮವಾರ ಕಜಕಸ್ತಾನವನ್ನು ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಭಾರತವು ಎದುರಿಸಲಿದೆ.

ಎರಡೂ ಕ್ವಾ. ಫೈನಲ್ ಡ್ರಾದಲ್ಲೇ ಅಂತ್ಯ
ಮೊದಲ ಇನ್ನಿಂಗ್ಸ್ ಮುನ್ನಡೆಯ ಆಧಾರ

ಉತ್ತರ, ಕೇಂದ್ರ ವಲಯ ಸೆಮೀಸ್‌ಗೆ

ಬೆಂಗಳೂರು: ಇಲ್ಲಿ ಭಾನುವಾರ ಮುಗಿದ ದುಲೀಪ್ ಟ್ರೋಫಿ ಮೊದಲ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪೂರ್ವ ವಲಯದ ವಿರುದ್ಧ ಇನ್ನಿಂಗ್ಸ್ ಮುನ್ನಡೆ ಪಡೆದಿದ್ದ ಉತ್ತರ ವಲಯ ತಂಡ ಹಾಗೂ ಇನ್ನೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಈಶಾನ್ಯ ವಲಯದ ವಿರುದ್ಧ ಪಡೆದ ಇನ್ನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಕೇಂದ್ರ ವಲಯ ತಂಡವು ಸೆಮಿ ಫೈನಲ್‌ಗೆ ಅರ್ಹತೆಯನ್ನು ಪಡೆದುಕೊಂಡವು.

ಪಂದ್ಯದ ಐದನೇ ದಿನವಾದ ಭಾನುವಾರ ಬೆಳಿಗ್ಗೆ 2 ವಿಕೆಟ್ ನಷ್ಟಕ್ಕೆ 388 ರನ್‌ಗಳಿಂದ ಆಟವನ್ನು ಮುಂದುವರಿಸಿದ ಉತ್ತರ ವಲಯ ಆಯುಷ್ ಬಡೋನಿಯ ದ್ವಿಶತಕದ ನೆರವಿನಿಂದ ಭಾರೀ ರನ್ ಕಲೆ ಹಾಕಿತು. ಬಡೋನಿ 204 ರನ್ ಗಳಿಸಿ ಅಜೇಯರಾಗಿಯೇ ಉಳಿದರು. ಶನಿವಾರ ಅಜೇಯರಾಗಿ 168 ರನ್ ಗಳಿಸಿದ್ದ ಅಂಕಿತ್ ಕುಮಾರ್, ಆ ಮೊತ್ತಕ್ಕೆ 30 ರನ್ ಸೇರಿಸಿ 198 ರನ್ ಗಳಿಸಿ ತನ್ನ ವಿಕೆಟ್ ಕಳೆದುಕೊಂಡು ದ್ವಿಶತಕದಿಂದ ವಂಚಿತರಾದರು.

ಆ ಬಳಿಕ ಬಂದ ನಿಶಾಂತ್ ಸಾಧು ಅವರು ಬಡೋನಿ ಜತೆ ಸೇರಿ 157 ರನ್‌ಗಳ ಜತೆಯಾಟದ ಪ್ರದರ್ಶನ ನೀಡಿದರು. ಆ ಬಳಿಕ ಆಯುಷ್ ಬಡೋನಿ ದ್ವಿಶತಕ ಪೂರೈಸುತ್ತಿದ್ದಂತೆ ಪಂದ್ಯವನ್ನು ಡ್ರಾ ಮಾಡಿಕೊಳ್ಳಲಾಯಿತು. ಮೊದಲ ಇನ್ನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಉತ್ತರ ವಲಯವು ಸೆಮಿ ಫೈನಲ್‌ಗೆ ತನ್ನ ಅರ್ಹತೆ ಪಡೆಯಿತು.

ಕೇಂದ್ರ ವಲಯ ಸೆ. ಫೈನಲ್‌ಗೆ: ಭಾನುವಾರ ಮುಗಿದ ಇನ್ನೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೇಂದ್ರ ವಲಯವು ತನ್ನ ಮೊದಲ ಇನ್ನಿಂಗ್ಸ್‌ನ ಮುನ್ನಡೆಯ ಆಧಾರದಲ್ಲಿ ಈಶಾನ್ಯ ವಲಯದ ವಿರುದ್ಧ ಸೆಮಿ ಫೈನಲ್ ಪ್ರವೇಶಿಸಿತು. ಶನಿವಾರದ ದಿನದಾಂತ್ಯಕ್ಕೆ ಕೇಂದ್ರ ವಲಯವು 7 ವಿಕೆಟ್‌ಗೆ 331 ರನ್‌ಗಳಿಗೆ ತನ್ನ ಇನ್ನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತ್ತು. 506 ರನ್‌ಗಳ ಗೆಲುವಿನ ಗುರಿ ಪಡೆದಿದ್ದ ಈಶಾನ್ಯ ವಲಯವು ತನ್ನ ಎರಡನೇ ಇನ್ನಿಂಗ್ಸ್ ಆರಂಭಿಸಿ, ರಾಂಗ್‌ಸೆನ್ ಜೊನಾತನ್ ಮತ್ತು ಜೆವೂ ಆ್ಯಂಡರ್‌ಸನ್ ಅವರ ಅರ್ಧ ಶತಕದ ನೆರವಿನಿಂದ ಭಾನುವಾರದ ದಿನದಾಂತ್ಯಕ್ಕೆ 6 ವಿಕೆಟ್‌ಗೆ 200 ರನ್‌ಗಳನ್ನಷ್ಟೇ ಗಳಿಸಲು ಶಕ್ತವಾಯಿತು.

ಸೆ. 4ರಿಂದ ಸೆಮಿ ಫೈನಲ್: ಇದೇ ಗುರುವಾರದಿಂದ ಈ ಬಾರಿಯ ದುಲೀಪ್ ಟ್ರೋಫಿ ಪಂದ್ಯಾವಳಿಯ ಸೆಮಿ ಫೈನಲ್ ಪಂದ್ಯಗಳು ನಡೆಯಲಿವೆ. ದಕ್ಷಿಣ ವಲಯವು ಉತ್ತರ ವಲಯವನ್ನು ಹಾಗೂ ಪಶ್ಚಿಮ ವಲಯವು ಕೇಂದ್ರ ವಲಯವನ್ನೂ ಎದುರಿಸಲಿದೆ.

ಉತ್ತರ ವಲಯ
- ಮೊದಲ ಇನ್ನಿಂಗ್ಸ್: 405 ರನ್
- ದ್ವಿ. ಇನ್ನಿಂಗ್ಸ್: 4 ವಿಕೆಟ್‌ಗೆ 658 ರನ್ ಡಿಕ್ಲೇರ್ಡ್

ಈಶಾನ್ಯ ವಲಯ
- 230 ರನ್

ಕೇಂದ್ರ ವಲಯ
- ಮೊದಲ ಇನ್ನಿಂಗ್ಸ್: 4 ವಿಕೆಟ್‌ಗೆ 532 ರನ್ ಡಿಕ್ಲೇರ್ಡ್,
- ಎರಡನೇ ಇನ್ನಿಂಗ್ಸ್: 7 ವಿಕೆಟ್‌ಗೆ 331 ರನ್ ಡಿಕ್ಲೇರ್ಡ್.

ಈಶಾನ್ಯ ವಲಯ
- ಮೊದಲ ಇನ್ನಿಂಗ್ಸ್: 185 ರನ್
- ದ್ವಿತೀಯ ಇನ್ನಿಂಗ್ಸ್: 6 ವಿಕೆಟ್‌ಗೆ 200 ರನ್

ಕಂಚು ಗೆದ್ದ ಸಾತ್ವಿಕ್-ಚಿರಾಗ್ ಜೋಡಿ

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ | ಸೆಮಿ ಫೈನಲ್ ಪಂದ್ಯದಲ್ಲಿ ಸೋಲು

ಪ್ಯಾರಿಸ್: ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಪುರುಷರ ಸಿಂಗಲ್ಸ್ ಕಂಚಿನ ಪದಕ ಪಡೆದರು.

ಸೆಮಿಫೈನಲ್‌ನಲ್ಲಿ ಭಾರತದ ಜೋಡಿಯು 19-21, 21-18, 12-21ರಿಂದ ಚೀನಾದ 11ನೇ ಶ್ರೇಯಾಂಕದ ಚೆನ್ ಬೊ ಯಾಂಗ್ ಮತ್ತು ಲೀ ಯಿ ಅವರ ಎದುರು ಮಣಿಯಿತು. 67 ನಿಮಿಷಗಳ ವರೆಗೆ ನಡೆದ ಪಂದ್ಯದಲ್ಲಿ ಮೊದಲ ಗೇಮ್‌ನಲ್ಲಿ ನಿಕಟ ಪೈಪೋಟಿ ಕಂಡುಬಂದಿತು. ಅದರಲ್ಲಿ ಚೀನಾದ ಜೋಡಿಯು ಪ್ರಯಾಸದ ಜಯ ಸಾಧಿಸಿತು.

ಆದರೆ ಎರಡನೇ ಗೇಮ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ತಿರುಗೇಟು ನೀಡಿತು. ಕೇವಲ ಮೂರು ಅಂಕಗಳ ಅಂತರದಿಂದ ಗೇಮ್ ನಲ್ಲಿ ಭಾರತದ ಆಟಗಾರರು ರೋಚಕ ಜಯ ಸಾಧಿಸಿದರು. ಚೀನಾ ಆಟಗಾರರು ಮೂರನೇ ಮತ್ತು ನಿರ್ಣಾಯಕ ಗೇಮ್ಸ್‌ನಲ್ಲಿ ತೋರಿದ ಚಾಕಚಕ್ಯತೆ ಮತ್ತು ಪರಸ್ಪರ ಹೊಂದಾಣಿಕೆಯ ಆಟಕ್ಕೆ ಮೇಲುಗೈ ಲಭಿಸಿತು. ಇದರಿಂದಾಗಿ ಭಾರತದ ಜೋಡಿಯು ಸೋಲಿಗೆ ಶರಣಾಗಬೇಕಾಯಿತು.

ಚಿರಾಗ್-ಸಾತ್ವಿಕ್ ಜೋಡಿಯು ಈ ಪಂದ್ಯದಲ್ಲಿ ಜಯಿಸಿದ್ದರೆ ವಿಶ್ವ ಚಾಂಪಿಯನ್‌ಶಿಪ್ ಫೈನಲ್ ತಲುಪಿದ ಭಾರತದ ಮೊದಲ ಡಬಲ್ಸ್ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತಿತ್ತು. ಈ ಜೋಡಿಗೆ ಚಾಂಪಿಯನ್ ಶಿಪ್ ಇತಿಹಾಸದಲ್ಲಿ ಎರಡನೇ ಕಂಚಿನ ಪದಕ ಇದಾಗಿದೆ. 2022ರಲ್ಲಿ ಟೋಕಿಯೊದಲ್ಲಿ ನಡೆದಿದ್ದ ವಿಶ್ವ ಟೂರ್ನಿಯಲ್ಲಿ ಸಾತ್ವಿಕ್-ಚಿರಾಗ್ ಜೋಡಿ ಕಂಚು ಪಡೆದಿತ್ತು.

ವಿಟಾಕೀಸ್

ಏಳುಮಲೆಯಲಿ ನವಿರಾದ ಲವ್ ಸ್ಟೋರಿ

ಕರ್ನಾಟಕ - ತಮಿಳುನಾಡು ಗಡಿಭಾಗದ ಪ್ರೇಮಕಥೆ ಏಳುಮಲೆ ಸಿನಿಮಾದ ಟ್ರೇಲರ್ ರಿಲೀಸ್ ಆಗಿದೆ. ಡಾಲಿ ಧನಂಜಯ್, ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಏಳುಮಲೆ ಆಕ್ಷನ್, ಎಮೋಷನ್, ಒಂದೊಳ್ಳೆ ಲವ್ ಸ್ಟೋರಿ ಜತೆಗೆ ಥ್ರಿಲ್ಲಿಂಗ್ ಅಂಶಗಳನ್ನು ಬ್ಲೆಂಡ್ ಮಾಡಿ ಟ್ರೇಲರ್ ಕಟ್ ಮಾಡಲಾಗಿದೆ. ಒಂದೊಳ್ಳೆ ಕಥೆಯನ್ನು ಚಿತ್ರತಂಡ ಪ್ರೇಕ್ಷಕರಿಗೆ ಉಣಬಡಿಸುವ ಕಾತರದಲ್ಲಿದೆ. ಈ ಚಿತ್ರದ ರಿಯಲ್ ಹೀರೋ ತರುಣ್. ಅವರು ಒಂದು ಸಿನಿಮಾದ ಆಯ್ಕೆ ಹೇಗಿದೆ ಅನ್ನೋದಕ್ಕೆ ನನ್ನ ಜರ್ನಿ ಸಾಕ್ಷಿ. ಅವರು ನನ್ನ ಸಿನಿಮಾಗಳ ಕಥೆ ಆಯ್ಕೆ ಮಾಡುತ್ತಾರೆ. ಏಳುಮಲೆ ಟ್ರೇಲರ್ ನೋಡಿದರೆ ಸಿನಿಮಾ ನೋಡಲೇಬೇಕು ಎನಿಸುತ್ತದೆ. ಇದು ಕಂಟೆಂಟ್ ಸಿನಿಮಾ. ಈ ಚಿತ್ರ ದೊಡ್ಡ ಹಿಟ್ ಆಗಲಿದೆ ಎಂಬ ನಂಬಿಕೆ ಇದೆ ಎಂದು ಶರಣ್ ಹೇಳಿದರು.

ಏಳುಮಲೆ ಟೀಸರ್ ನೋಡಿದಾಗಿನಿಂದಲೂ ಬಹಳ ಖುಷಿ ಇದೆ. ಸಿನಿಮಾವನ್ನು ತುಂಬಾ ಪ್ರೀತಿಯಿಂದ ಮಾಡಿದ ಯಾವ ಪ್ರಯತ್ನ ಕೂಡ ಇಲ್ಲಿವರೆಗೂ ಸೋತಿಲ್ಲ. ಈ ತಂಡದಲ್ಲಿ ಪ್ರಾಮಾಣಿಕತೆ ಎದ್ದು ಕಾಣಿಸುತ್ತಿದೆ. ಆ ಪ್ರಾಮಾಣಿಕತೆಯೇ ಈ ಸಿನಿಮಾ ಗೆಲ್ಲಿಸುತ್ತದೆ ಎಂಬ ನಂಬಿಕೆ ಇದೆ ಎಂದು ಡಾಲಿ ಧನಂಜಯ ಹೇಳಿದರು.

ಏಳುಮಲೆ ಚಿತ್ರವನ್ನು ಪುನೀತ್ ರಂಗಸ್ವಾಮಿ ನಿರ್ದೇಶನ ಮಾಡಿದ್ದಾರೆ. ರಾಣಾ ನಾಯಕನಾಗಿ ನಟಿಸಿದ್ದು, ಪ್ರಿಯಾಂಕಾ ಆಚಾರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಉಳಿದಂತೆ ಜಗಪತಿ ಬಾಬು, ನಾಗಾಭರಣ, ಕಿಶೋರ್ ಕುಮಾರ್, ಸರ್ದಾರ್ ಸತ್ಯ, ಜಗಪ್ಪ ಸಿನಿಮಾದ ತಾರಾಬಳಗದಲ್ಲಿದ್ದಾರೆ.

ಕರ್ನಾಟಕ-ತಮಿಳುನಾಡು ನಡುವಿನ ಗಡಿಭಾಗದ ಪ್ರೇಮಕಥೆಯನ್ನು ಹೊಂದಿರುವ ಈ ಚಿತ್ರಕ್ಕೆ ತರುಣ್ ಕಿಶೋರ್ ಸುಧೀರ್ ಅವರು ಬಂಡವಾಳ ಹೂಡಿದ್ದಾರೆ. ಅಟ್ಲಾಂಟಾ ನಾಗೇಂದ್ರ ಅವರು ಸಹ ನಿರ್ಮಾಪಕರಾಗಿ ಜತೆಯಾಗಿದ್ದಾರೆ. ಅದ್ವೈತ ಗುರುಮೂರ್ತಿ ಛಾಯಾಗ್ರಹಣ, ಕೆ. ಎಂ.ಪ್ರಕಾಶ್ ಸಂಕಲನ, ನಾಗಾರ್ಜುನ ಶರ್ಮಾ ಸಾಹಿತ್ಯ ಹಾಗೂ ಪುನೀತ್ ರಂಗಸ್ವಾಮಿ ಸಂಭಾಷಣೆ, ಡಿ.ಇಮ್ಮಾನ್ ಸಂಗೀತ ಈ ಸಿನಿಮಾಗಿದೆ.

ತುಂಬಾ ಶ್ರಮ ಹಾಕಿ ಸಿನಿಮಾ ಮಾಡಿದ್ದೇವೆ. ಎಲ್ಲರೂ ಪ್ರೀತಿಯಿಂದ ಈ ಚಿತ್ರ ಮಾಡಿದ್ದಾರೆ. ಇದು ಪುನೀತ್ ಸಿನಿಮಾ. ಏಳುಮಲೆ ಪ್ರೀತಿಯ ಪರಮ ಶ್ರೇಷ್ಠ ಎಂದು ಹೇಳುತ್ತದೆ. ಇದನ್ನು ನಾವು ಥ್ರಿಲ್ಲರ್ ಮೂಲಕ ಹೇಳುತ್ತಿದ್ದೇವೆ. ಇದು ನಿಮ್ಮನ್ನು ನಿರಾಶೆ ಮಾಡುವುದಿಲ್ಲ.

- ತರುಣ್ ಸುಧೀರ್ ನಿರ್ಮಾಪಕ

ಎಲ್ಲರ ಮನಗೆಲ್ಲಲಿದೆ

ಪ್ರಶಾಂತ್ ಟಿ.ಆರ್

ನಾನು ಮತ್ತು ಗುಂಡ ಭರ್ಜರಿ ಹಿಟ್ ಆಯಿತು. ಈ ಯಶಸ್ಸಿನ ಖುಷಿಯಲ್ಲಿಯೇ ನಾನು ಮತ್ತು ಗುಂಡ 2 ತೆರೆಗೆ ಬರುತ್ತಿದೆ. ಈ ಹಿಂದೆ ಸಿನಿಮಾ ನಿರ್ಮಾಣ ಮಾಡಿದ್ದ ರಘು ಹಾಸನ್ ಈ ಸಿನಿಮಾಗೆ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ತಮ್ಮ ಸಿನಿಮಾದ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

● ನಾನು ಮತ್ತ ಗುಂಡ 2 ಈ ಹಿಂದೆಯೇ ನಿರ್ಧಾರವಾಗಿತ್ತೆ?
ರಘು ಹಾಸನ್ : ನಾನು ಮತ್ತು ಗುಂಡ ಮೊದಲ ಭಾಗದಲ್ಲಿ ಶಂಕರ ಅಸುನೀಗಿದಾಗ ಆತನ ಸಮಾಧಿಯ ಬಳಿ ಗುಂಡ ಮಾತ್ರ ಇದ್ದ ಸನ್ನಿವೇಶ ಪ್ರೇಕ್ಷಕರ ಮನಸೂರೆಗೊಂಡಿತು. ಮನುಷ್ಯನಿಗಿಂತ ಪ್ರಾಣಿಗಳಿಗೆ ಹೆಚ್ಚಿನ ನಿಯತ್ತಿರುತ್ತದೆ ಎಂಬುದು ಈ ಸನ್ನಿವೇಶದಿಂದ ಮನದಟ್ಟಾಯಿತು. ಹಾಗಾಗಿ ಎರಡನೇ ಭಾಗಕ್ಕೆ ಕಥೆ ಚಿತ್ರಕಥೆ ಬರೆದು ನಾನೇ ನಿರ್ದೇಶನ ಮಾಡಿದೆ.

● ಇಲ್ಲಿ ಫ್ಯಾಂಟಸಿ ಅಂಶಗಳು ಬೆರೆತಿವೆಯೆ?
ರಘು: ಇಲ್ಲಿ ಸನ್ನಿವೇಶಗಳಿಗೆ ತಕ್ಕಂತೆ ಫ್ಯಾಂಟಸಿ ಅಂಶಗಳನ್ನು ಬಳಸಿಕೊಳ್ಳಲಾಗಿದೆ. ಉಳಿದಂತೆ ನೈಜ ಸನ್ನಿವೇಶಗಳು ಸಿನಿಮಾದಲ್ಲಿ ಗಮನಸೆಳೆಯಲಿವೆ. ನೈಜತೆಗೆ ಹತ್ತಿರವಾದ ಸನ್ನಿವೇಶಗಳೂ ಪ್ರೇಕ್ಷಕರ ಮನಸೂರೆಗೊಳ್ಳಲಿವೆ.

● ರಾಕೇಶ್ ಅಡಿಗ ಅವರನ್ನೇ ಆಯ್ದುಕೊಳ್ಳಲು ಕಾರಣ ?
ರಘು: ಶಿವರಾಜ್ ಅವರನ್ನೇ ಮತ್ತೆ ಆಯ್ದುಕೊಳ್ಳಲು ಪಾತ್ರ ಒಪ್ಪಲಿಲ್ಲ, ಹಾಗಾಗಿ ರಾಕೇಶ್ ಅವರನ್ನೇ ಆಯ್ದುಕೊಂಡೆವು. ರಾಕೇಶ್ ಒಳ್ಳೆಯ ನಟ. ಅದರಲ್ಲಿಯೂ ಹೆಚ್ಚಾಗಿ ಶ್ವಾನ ಪ್ರೇಮಿ ಹಾಗಾಗಿ ಅವರನ್ನೇ ನಾಯಕನಾಗಿ ಆಯ್ದುಕೊಂಡೆವು. ಈ ಸಿನಿಮಾ ರಾಕೇಶ್‌ಗೆ ಬಿಗ್ ಬ್ರೇಕ್ ನೀಡುವುದು ಖಚಿತವಾಗಿದೆ. ಯಾಕೆಂದರೆ ರಾಕೇಶ್ ಅದ್ಭುತವಾಗಿ ನಟಿಸಿದ್ದಾರೆ.

● ರಂಚನಾ ಗಯ್ಯಾಳಿ ಪಾತ್ರದಲ್ಲಿ ಕಾಣಿಸಿಕೊಂಡಿದಾರಾ?
ರಘು: ರಚನಾ ಅವರದ್ದು ಇಡೀ ಚಿತ್ರದ ಕಥೆಗೆ ತಿರುವು ನೀಡುವ ಪಾತ್ರವಾಗಿದೆ. ಇಂದೂ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಚನಾ ಗಯ್ಯಾಳಿ ಪಾತ್ರ ಅನ್ನುವುದಕ್ಕಿಂತ ಹುಡುಕಾಟದ ಹುಡುಗಿಯ ಪಾತ್ರ ಅನ್ನಬಹುದು. ಈ ಪಾತ್ರಕ್ಕೆ ಹುಡಕಾಟ ನಡೆಸುತ್ತಿರುವಾಗ ಅದಕ್ಕೆ ರಚನಾ ಸರಿಯಾಗಿ ಹೊಂದಿಕೊಳ್ಳುತ್ತಾರೆ ಅನ್ನಿಸಿತು. ಹಾಗಾಗಿ ಅವರನ್ನೇ ಆಯ್ದುಕೊಂಡೆವು. ರಚನಾಗೂ ಕೂಡ ಈ ಸಿನಿಮಾ ಹೊಸ ತಿರುವು ನೀಡಲಿದೆ.

● ಮುಂದೆ ನಾನು ಮತ್ತು ಗುಂಡ 3 ಬರಲಿದೆಯೆ
ರಘು: ಈ ಸಿನಿಮಾಗೆ ಸಿಗುವ ಸ್ಪಂದನೆ ನೋಡಿಕೊಂಡು ಮುಂದಿನ ಭಾಗದ ಬಗ್ಗೆ ಯೋಚನೆ ಮಾಡುತ್ತೇವೆ. ನಾನು ಮತ್ತು ಗುಂಡ ಕನ್ನಡ ಸೇರಿದಂತೆ ತೆಲುಗು, ಹಿಂದಿಯಲ್ಲಿ ಭರ್ಜರಿ ರೆಸ್ಪಾನ್ಸ್ ಪಡೆದುಕೊಂಡಿತ್ತು. ಈಗ ನಾನು ಮತ್ತು ಗುಂಡ 2 ಚಿತ್ರವನ್ನು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಮಾಡುತ್ತಿದ್ದೇವೆ. ಸಿನಿಮಾ ಬಿಡುಗಡೆಗೂ ಮುನ್ನವೇ ಎಲ್ಲಾ ಕಡೆಯಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ.

ಸೂಪರ್ ಯೋಧನಾದ ತೇಜ

ಹನುಮಾನ್ ಚಿತ್ರದ ಮೂಲಕ ಬಾಕ್ಸ್ ಆಫೀಸ್ ಶೇಕ್ ಮಾಡಿದ್ದ ತೇಜ ಸಜ್ಜಾ ಈಗ ಸೂಪರ್ ಯೋಧನಾಗಿ ಮತ್ತೆ ಎಂಟ್ರಿ ಕೊಟ್ಟಿದ್ದಾರೆ. ಬಹು ನಿರೀಕ್ಷಿತ ಮಿರಾಯ್ ಸಿನಿಮಾದ ಟ್ರೇಲರ್ ರಿಲೀಸ್ ಆಗಿದೆ. ನಿರ್ದೇಶಕ ಕಾರ್ತಿಕ್ ಘಟ್ಟಮನೇನಿ ಪ್ರೇಕ್ಷಕರಿಗೆ ಭರ್ಜರಿ ವಿಷ್ಯುವಲ್ ಟ್ರೀಟ್ ನೀಡಿದ್ದಾರೆ. ಸೂಪರ್ ಯೋಧನಾಗಿ ಜನರನ್ನು ರಕ್ಷಿಸಲು ತೇಜ ಸಜ್ಜಾ ಹೋರಾಟ ಮಾಡುತ್ತಾರೆ. ಅವರ ವಿರುದ್ಧ ಮಂಚು ಮನೋಜ್ ಖಳನಾಯಕನಾಗಿ ಅಬ್ಬರಿಸಿದ್ದಾರೆ. ಭರ್ಜರಿ ಆ್ಯಕ್ಷನ್ ಜತೆಗೆ ಪುರಾಣದ ಕಥೆಯನ್ನು ಸೊಗಸಾಗಿ ಟ್ರೇಲರ್‌ನಲ್ಲಿ ಕಟ್ಟಿಕೊಡಲಾಗಿದೆ. ಧರ್ಮ ರಕ್ಷಕನಾಗಿ ತೇಜ ಸಜ್ಜಾ ಹೋರಾಟ ನಡೆಸುತ್ತಾರೆ. ಟ್ರೇಲರ್ ಕೊನೆಯಲ್ಲಿ ಬರುವ ಭಗವಾನ್ ಶ್ರೀರಾಮ ಝುಲಕ್ ಪ್ರೇಕ್ಷಕರಿಗೆ ರೋಮಾಂಚನ ನೀಡಲಿದೆ.

ದಕ್ಷಿಣ ಭಾರತದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಮೀಡಿಯಾ ಫ್ಯಾಕ್ಟರಿಯಲ್ಲಿ ಟಿ.ಜಿ.ವಿಶ್ವಪ್ರಸಾದ್ ಚಿತ್ರ ನಿರ್ಮಾಣ ಮಾಡಿದ್ದಾರೆ. ರಿತಿಕಾ ನಾಯಕ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕ

ಕಾರ್ತಿಕ್ ಘಟ್ಟಮನೇನಿ ಮಿರಾಯ್ಗೆ ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಮಣಿಬಾಬು ಕರಣಂ ಸಂಭಾಷಣೆ ಬರೆದಿದ್ದಾರೆ. ಶ್ರೀನಾಗೇಂದ್ರ ತಂಗಳ ಕಲಾ ನಿರ್ದೇಶನ ಚಿತ್ರಕ್ಕಿದ್ದು, ವಿವೇಕ್ ಕೂಚಿಭೋಟ್ಲ ಸಹ ನಿರ್ಮಾಪಕರು. ಪ್ರಸಾದ್ ಕ್ರಿಯೇಟಿವ್ ನಿರ್ಮಾಪಕರಾಗಿದ್ದು, ಸುಜಿತ್ ಕುಮಾರ್ ಕೊಲ್ಲಿ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ. ಸೆಪ್ಟೆಂಬರ್ 12ರಂದು ಮಿರಾಯ್ ಸಿನಿಮಾ 2D ಮತ್ತು 3D ಫಾರ್ಮಾಟ್ನಲ್ಲಿ ಏಳು ಭಾಷೆಯಲ್ಲಿ ರಿಲೀಸ್ ಆಗಲಿದೆ. ಕನ್ನಡದಲ್ಲಿ ಈ ಚಿತ್ರವನ್ನು ವಿಕೆ ಫಿಲಂಸ್ ಬ್ಯಾನರ್‌ನಲ್ಲಿ ಹೊಂಬಾಳೆ ಫಿಲಂಸ್ ರಿಲೀಸ್ ಮಾಡುತ್ತಿದೆ.

ಹಸಿರು ಕಂಕಣ ತೊಟ್ಟ ಕಿಚ್ಚ

ಸೆಪ್ಟೆಂಬರ್ 2 ರಂದು ಕಿಚ್ಚ ಸುದೀಪ್ ಅವರ ಹುಟ್ಟುಹಬ್ಬದ ಸಂಭ್ರಮ. ಇತ್ತ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬವನ್ನು ಆಚರಿಸಲು ಸಿದ್ಧತೆ ನಡೆಸಿದ್ದಾರೆ. ಸುದೀಪ್ ಸೆಪ್ಟೆಂಬರ್ 1 ರ ರಾತ್ರಿಯೇ ಅಭಿಮಾನಿಗಳ ಸಮ್ಮುಖದಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳಲಿದ್ದಾರೆ. ಇತ್ತ ಸುದೀಪ್ ಹೊಸ ಸಂಕಲ್ಪ ತೊಟ್ಟಿದ್ದಾರೆ. ಸುದೀಪ್ ಅವರು ಅಮ್ಮನ ಹುಟ್ಟು ಹಬ್ಬದ ನೆನಪಿಗಾಗಿ ಅಮ್ಮನ ಹೆಜ್ಜೆಗೆ ಹಸಿರು ಹೆಜ್ಜೆ ಎಂಬ ಸಾಲಿನೊಂದಿಗೆ ಹಸಿರು ಕ್ರಾಂತಿಯ ಕಂಕಣ ತೊಟ್ಟಿದ್ದಾರೆ. ಅದರಂತೆ ಗಿಡಗಳನ್ನು ನೆಡುತ್ತಿದ್ದಾರೆ. ಪ್ರತಿ ಮರಕ್ಕೂ ಒಂದು ಕಥೆ ಇದೆ. ಈ ಮರವು ನನ್ನ ಅಮ್ಮನ ಕಥೆ ಹೇಳಲಿ ಎಂದು ಸುದೀಪ್ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ.